ಗುರುವಾರ, ಮಾರ್ಚ್ 20, 2025 | ₹ 7.00

ಪ್ರಜಾ ವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಿಬಿಎಂಪಿ ವಿಭಜನೆಗೆ ವಿರೋಧ

ಕೆಲವೆಡೆ ಕನ್ನಡಿಗರ ಹಿತಕ್ಕೆ ಧಕ್ಕೆ: ರಾಜ್ಯಪಾಲರಿಗೆ ಮನವಿ ಸಲ್ಲಿಸಿದ ಬಿಜೆಪಿ ನಿಯೋಗ

ಪ್ರಜಾವಾಣಿ ವಾರ್ತೆ

ಬಿಜೆಪಿ ನಿಯೋಗವು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿತು

ಬೆಂಗಳೂರು: 'ಬಿಬಿಎಂಪಿಯನ್ನು ಏಳು ವಿಭಾಗಗಳಾಗಿ ವಿಂಗಡಿಸುವ ಮಸೂದೆಯು ಸಂವಿಧಾನಬಾಹಿರ. ಸರ್ಕಾರದ ಈ ನಡೆಯಿಂದ ಬೆಂಗಳೂರಿಗೆ ಅಪಾಯವಿದ್ದು, ಅದನ್ನು ತಡೆಯಬೇಕು' ಎಂದು ಬಿಜೆಪಿ ನಿಯೋಗವು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿದೆ.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಭಾರತಿ ಶೆಟ್ಟಿ, ಎಸ್.ಆರ್. ವಿಶ್ವನಾಥ್, ಸಿ.ಎನ್. ಅಶ್ವತ್ಥನಾರಾಯಣ ಇದ್ದ ನಿಯೋಗವು ಬುಧವಾರ ರಾಜಭವನದಲ್ಲಿ ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

'ಬಿಬಿಎಂಪಿಯನ್ನು ವಿಭಜಿಸುವುದರಿಂದ ಆಡಳಿತ ವೆಚ್ಚ ಮತ್ತು ಆಡಳಿತದ ಹೊರೆ ಹೆಚ್ಚುತ್ತದೆ. ಬೆಂಗಳೂರಿನ ಕೆಲ ಭಾಗದಲ್ಲಿ ಕನ್ನಡಿಗರ ಸಂಖ್ಯೆ ಕ್ಷೀಣಿಸಿದೆ. ವಿಭಜನೆ ಮಾಡಿದರೆ, ಕೆಲವು ಪ್ರದೇಶಗಳಲ್ಲಿ ಕನ್ನಡಿಗರ ಹಿಡಿತ ತಪ್ಪಲಿದೆ. ಜತೆಗೆ ನಗರದ ಸಂಸ್ಕೃತಿಗೂ ಧಕ್ಕೆಯಾಗಲಿದೆ. ಇದನ್ನು ತಪ್ಪಿಸಬೇಕು' ಎಂದು ಕೋರಿತು.

'ದೆಹಲಿ ಮತ್ತು ಕೋಲ್ಕತ್ತ ಮಹಾನಗರ ಪಾಲಿಕೆಗಳನ್ನು ವಿಭಜಿಸಲಾಗಿದೆ. ಆದರೆ ಆ ರೀತಿಯ ಅಧಿಕಾರ ವಿಕೇಂದ್ರೀಕರಣ ವಿಫಲವಾಗಿದೆ. ಜತೆಗೆ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರ ಮೊಟಕುಗೊಳಿಸುವ ರೀತಿಯಲ್ಲಿ ಮಸೂದೆ ಸಿದ್ಧಪಡಿಸಲಾಗಿದೆ. ಅದರ ಸಾಂವಿಧಾನಿಕ ಸಿಂಧುತ್ವವನ್ನು ಪರಿಶೀಲಿಸಿ, ಕ್ರಮ ತೆಗೆದುಕೊಳ್ಳ ಬೇಕು' ಎಂದು ಮನವಿ ಮಾಡಿತು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಮನವಿ ಪತ್ರಕ್ಕೆ ಸಹಿ ಮಾಡಿದ್ದಾರೆ.

ರಾಮನಗರ ಜಿಲ್ಲೆ ಹೆಸರು ಬದಲಾವಣೆಗೆ ಕೇಂದ್ರ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಮನಗರ ಜಿಲ್ಲೆಯ ಹೆಸರನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡುವ ಕರ್ನಾಟಕ ಕಾಂಗ್ರೆಸ್ ಸರ್ಕಾರದ ನಿರ್ಧಾರಕ್ಕೆ ಕೇಂದ್ರ ಸರ್ಕಾರ ತಡೆ ಒಡ್ಡಿದೆ. ಸದ್ಯ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸೂಚನೆ ನೀಡಿದೆ.

ಈ ಸಂಬಂಧ ಕೇಂದ್ರ ಗೃಹ ಸಚಿವಾಲಯವು ಕಂದಾಯ ಇಲಾಖೆಗೆ ಎರಡು ತಿಂಗಳ ಹಿಂದೆಯೇ ಪತ್ರ ಬರೆದು ಈ ಪ್ರಸ್ತಾವನೆಯನ್ನು ಮುಂದುವರಿಸದಂತೆ ಸೂಚಿಸಿದೆ. ರಾಮನಗರ ಜಿಲ್ಲೆಯ ಹೆಸರು ಬದಲಾವಣೆಗೆ ಕರ್ನಾಟಕ ಸಚಿವ ಸಂಪುಟ 2024ರ ಜುಲೈನಲ್ಲಿ ತೀರ್ಮಾನ ತೆಗೆದುಕೊಂಡಿತ್ತು.

'ಸಚಿವ ಸಂಪುಟದ ನಿರ್ಧಾರದ ನಂತರ ನಾವು ಪ್ರಸ್ತಾವನೆಯನ್ನು ಕೇಂದ್ರದ ಅನುಮೋದನೆಗಾಗಿ ಕಳುಹಿಸಿದ್ದೆವು. ಕೇಂದ್ರದಿಂದ ಬಂದಿರುವ ಉತ್ತರ ಸಕಾರಾತ್ಮಕವಾಗಿಲ್ಲ. ನಮ್ಮ ಪ್ರಸ್ತಾವ ತಿರಸ್ಕರಿಸಲು ನಿರ್ದಿಷ್ಟ ಕಾರಣಗಳನ್ನು ತಿಳಿಸಿಲ್ಲ. ಮರುನಾಮಕರಣ ಪ್ರಕ್ರಿಯೆಯನ್ನು ಮುಂದುವರಿಸುವ ಅಗತ್ಯವಿಲ್ಲ ಎಂದು ಗೃಹ ಸಚಿವಾಲಯ ತಿಳಿಸಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಈಗ ಕೇಂದ್ರ ಭಾರಿ ಕೈಗಾರಿಕೆ ಸಚಿವರಾಗಿರುವ ಎಚ್.ಡಿ. ಕುಮಾರಸ್ವಾಮಿ ಅವರು ಮೊದಲ ಬಾರಿ ಮುಖ್ಯಮಂತ್ರಿ ಯಾಗಿದ್ದ ಅವಧಿಯಲ್ಲಿ ತಾವು ಪ್ರತಿನಿಧಿಸುತ್ತಿದ್ದ ರಾಮನಗರ ಕ್ಷೇತ್ರವನ್ನು ಕೇಂದ್ರ ಸ್ಥಾನವಾಗಿಟ್ಟು ಪ್ರತ್ಯೇಕ ಜಿಲ್ಲೆಯನ್ನು ಘೋಷಿಸಿದ್ದರು.

ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈ ಹಿಂದೆ ಪ್ರಕಟಿಸಿದ್ದರು. ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದ ಕುಮಾರಸ್ವಾಮಿ ಅವರು, 'ರಾಜ್ಯದಲ್ಲಿ ಮತ್ತೆ ತಮ್ಮ ಸರ್ಕಾರ ಬರಲಿದ್ದು, ದಕ್ಷಿಣ ಜಿಲ್ಲೆ ಹೆಸರನ್ನು ಕಿತ್ತೆಸೆದು ರಾಮನಗರ ಎಂದು ಮರು ನಾಮಕರಣ ಮಾಡಿಯೇ ಸಿದ್ಧ' ಎಂದು ಅಬ್ಬರಿಸಿದ್ದರು.

ಜನರ ಮೇಲೆ ಗದಾಪ್ರಹಾರ: ಡಿಕೆಶಿ

'ಜಿಲ್ಲೆಗಳ ಹೆಸರು ಬದಲಾವಣೆ ರಾಜ್ಯದ ವಿಷಯ. ಅದರಲ್ಲಿ ಕೇಂದ್ರ ಹಸ್ತಕ್ಷೇಪ ಮಾಡುವಂತಿಲ್ಲ. ಇದಕ್ಕೆ ಕೇಂದ್ರದ ಎಲ್ಲ ಇಲಾಖೆಗಳು ಒಪ್ಪಿಗೆ ನೀಡಿದ್ದವು. ಆದರೆ, ಕೇಂದ್ರದಲ್ಲಿ ಸಚಿವರಾಗಿರುವ ರಾಜ್ಯದ ಕೆಲವರು (ಎಚ್.ಡಿ.ಕುಮಾರಸ್ವಾಮಿ) ಗೃಹ ಇಲಾಖೆಯ ಮೇಲೆ ಒತ್ತಡ ತಂದು ಪತ್ರ ಬರೆಸಿದ್ದಾರೆ. ಜಿಲ್ಲೆಯ ಹೆಸರು ಬದಲಾಯಿಸಿಯೇ ತೀರುತ್ತೇವೆ. ಅವರು ದ್ವೇಷದ ರಾಜಕಾರಣ ಮಾಡಿದ್ದಾರೆ. ರಾಮನಗರದ ಜನರ ಮೇಲೆ ಗದಾಪ್ರಹಾರ ಮಾಡಿದ್ದಾರೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಿಡಿಕಾರಿದರು.

22ರಿಂದ ನಾಲ್ಕು ದಿನ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಇದೇ 22ರಿಂದ ನಾಲ್ಕು ದಿನಗಳು ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಮತ್ತು ಮಂಡ್ಯ ಜಿಲ್ಲೆಯ ಪ್ರತ್ಯೇಕ ಸ್ಥಳಗಳಲ್ಲಿ 22ರಂದು ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. 23, 24 ಮತ್ತು 25 ರಂದು ಕೂಡ ರಾಜ್ಯದ ವಿವಿಧೆಡೆ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ರಾಜ್ಯದ ವಿವಿಧೆಡೆ ಗರಿಷ್ಠ ಉಷ್ಣಾಂಶದಲ್ಲಿ ಏರಿಕೆ ಕಂಡಿದ್ದು, ಬುಧವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ (40.6 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ. ಬಾಗಲಕೋಟೆ (40.5 ಡಿಗ್ರಿ ಸೆಲ್ಸಿಯಸ್) ಹಾಗೂ ಬೀದರ್‌ನಲ್ಲಿಯೂ (40.2 ಡಿಗ್ರಿ ಸೆಲ್ಸಿಯಸ್) ಅಧಿಕ ಉಷ್ಣಾಂಶ ವರದಿಯಾಗಿದೆ.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಕೆ.ಎಸ್‌. ಆನಂದ್ ಅಸಮಾಧಾನ

ಹೊಸ ಶಾಸಕರ ಕ್ಷೇತ್ರಗಳ ಕಡೆಗಣನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುದಾನ, ಸರ್ಕಾರಿ ಸಂಸ್ಥೆಗಳು ಎಲ್ಲವನ್ನೂ ಮುಖ್ಯಮಂತ್ರಿ, ಸಚಿವರು ಪ್ರಭಾವ ಬಳಸಿಕೊಂಡು ತಮ್ಮ ಕ್ಷೇತ್ರಗಳಿಗೆ ಕೊಂಡೊಯ್ಯುತ್ತಿದ್ದಾರೆ. ಹೊಸ ಶಾಸಕರ ಕ್ಷೇತ್ರಗಳನ್ನು ಕಡೆಗಣಿಸಲಾಗುತ್ತಿದೆ ಎಂದು ಕಾಂಗ್ರೆಸ್‌ನ ಕೆ.ಎಸ್‌. ಆನಂದ್ ಅವರು ವಿಧಾನಸಭೆಯಲ್ಲಿ ಬುಧವಾರ ಅಸಮಾಧಾನ ವ್ಯಕ್ತಪಡಿಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ಉನ್ನತ ಶಿಕ್ಷಣ ಸಚಿವರ ಕ್ಷೇತ್ರಕ್ಕೆ ಎಂಜಿನಿಯರಿಂಗ್ ಕಾಲೇಜು ಮತ್ತು ಕೃಷಿ ಸಚಿವರ ಕ್ಷೇತ್ರಕ್ಕೆ ಕೃಷಿ ವಿಜ್ಞಾನಗಳ ಕಾಲೇಜನ್ನು ಮಂಜೂರು ಮಾಡಲಾಗಿದೆ. ಎಲ್ಲವೂ ಪ್ರಭಾವ ಉಳ್ಳವರ ಕ್ಷೇತ್ರಗಳ ಪಾಲಾಗುತ್ತಿವೆ. ಹೊಸ ಶಾಸಕರ ಕ್ಷೇತ್ರಗಳಿಗೆ ಏನೂ ಸಿಗುತ್ತಿಲ್ಲ. ಹೀಗಾದರೆ ರಾಜ್ಯದ ಸಮಗ್ರ ಅಭಿವೃದ್ಧಿ ಸಾಧ್ಯವೆ’ ಎಂದು ಕೇಳಿದರು.

ಪ್ರಭಾವ ಇರುವವರ ಕ್ಷೇತ್ರಗಳಿಗೆ ಸೌಲಭ್ಯ ನೀಡಿದಂತೆ ಪ್ರಭಾವ ಇಲ್ಲದವರ ಕ್ಷೇತ್ರಗಳಿಗೂ ಒದಗಿಸಬೇಕು ಎಂದು ಆಗ್ರಹಿಸಿದರು.

ಮೆಣಸಿನಕಾಯಿ ಮಾರುಕಟ್ಟೆ ಸ್ಥಾಪಿಸಿ: ಕಾಂಗ್ರೆಸ್‌ನ ಜೆ.ಎನ್‌. ಗಣೇಶ್ ಮಾತನಾಡಿ, ‘ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮೆಣಸಿನಕಾಯಿ ಬೆಳೆಯಲಾಗುತ್ತಿದೆ. ಆದರೆ, ವ್ಯವಸ್ಥಿತವಾದ ಮಾರುಕಟ್ಟೆ ಸೌಲಭ್ಯ ಇಲ್ಲ. ಬಳ್ಳಾರಿಯಲ್ಲಿ ಮೆಣಸಿನಕಾಯಿ ಮಾರುಕಟ್ಟೆ ಸ್ಥಾಪಿಸಬೇಕು’ ಎಂದು ಒತ್ತಾಯಿಸಿದರು.

ವಿಶೇಷ ಪ್ಯಾಕೇಜ್‌ಗೆ ಆಗ್ರಹ: ‘ಗ್ಯಾರಂಟಿ ಯೋಜನೆಗಳ ಮಾದರಿಯಲ್ಲೇ ರೈತರಿಗೆ ವಿಶೇಷ ಪ್ಯಾಕೇಜ್ ಘೋಷಿಸಬೇಕು. ಕಲ್ಯಾಣ ಕರ್ನಾಟಕದ ಭಾಗದಲ್ಲಿ ತೊಗರಿ ಬೆಳೆಗೆ ನೆಟೆ ರೋಗ ತಗುಲಿ ರೈತರು ಸಂಕಷ್ಟದಲ್ಲಿದ್ದಾರೆ. ಪ್ರತಿ ಎಕರೆ ಬೆಳೆ ಹಾನಿಗೆ ಕನಿಷ್ಠ ₹ 50,000 ಪರಿಹಾರ ನೀಡಬೇಕು’ ಎಂದು ಬಿಜೆಪಿಯ ಬಸವರಾಜ ಮತ್ತಿಮಡು ಆಗ್ರಹಿಸಿದರು.

ಬಿಜೆಪಿಯ ಡಾ. ಶೈಲೇಂದ್ರ ಬೆಲ್ದಾಳೆ ಮಾತನಾಡಿ, ‘ಕಲ್ಯಾಣ ಪಥ ಯೋಜನೆಯಲ್ಲಿ ಕಾಂಗ್ರೆಸ್ ಶಾಸಕರಿಗೆ ತಲಾ ₹34 ಕೋಟಿ ಅನುದಾನ ನೀಡಿದ್ದರೆ, ಬಿಜೆಪಿ, ಜೆಡಿಎಸ್ ಶಾಸಕರಿಗೆ ತಲಾ ₹11 ಕೋಟಿ ನೀಡಲಾಗಿದೆ. ಈ ತಾರತಮ್ಯ ಏಕೆ’ ಎಂದು ಪ್ರಶ್ನಿಸಿದರು.

‘ಕೊಪ್ಪಳ ವಿ.ವಿಗೆ ಸೌಲಭ್ಯ ಕೊಡಿ’: ‘ಕೊಪ್ಪಳ ವಿಶ್ವವಿದ್ಯಾಲಯ ಸೌಲಭ್ಯಗಳ ಕೊರತೆಯಿಂದ ಮುಚ್ಚುವ ಸ್ಥಿತಿಗೆ ತಲುಪಿದೆ. ಅದನ್ನು ಉಳಿಸಿಕೊಳ್ಳಲು ಸೌಲಭ್ಯಗಳನ್ನು ಒದಗಿಸಿ’ ಎಂದು ಬಿಜೆಪಿಯ ಜಿ. ಜನಾರ್ದನ ರೆಡ್ಡಿ ಆಗ್ರಹಿಸಿದರು.

‘ಸಿದ್ದರಾಮಯ್ಯ ಇನ್ನೂ 3 ಬಜೆಟ್ ಮಂಡಿಸಲಿ’

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇನ್ನೂ ಮೂರು ಬಜೆಟ್‌ಗಳನ್ನು ಮಂಡಿಸಲಿ. ಆಗ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ಘೋಷಿಸಲಿ’ ಎಂದು ಜೆಡಿಎಸ್‌ನ ಶರಣಗೌಡ ಕಂದಕೂರ ಹೇಳಿದರು.

‘ನನ್ನ ಕ್ಷೇತ್ರದಲ್ಲಿ ಕಾರ್ಖಾನೆಯೊಂದರಿಂದ ಹೊರ ಬರುತ್ತಿರುವ ವಿಷಾನಿಲದಿಂದ ಜನರ ಜೀವಕ್ಕೆ ಅಪಾಯ ಎದುರಾಗಿದೆ. ತಕ್ಷಣ ಆ ಕಾರ್ಖಾನೆ ಮುಚ್ಚಿಸಲು ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

‘ಕೃಷಿ ಕಾಯ್ದೆ ಹಿಂಪಡೆಯಲು ಆಗ್ರಹ’

‘ಕೃಷಿ ಸಂಬಂಧಿ ಮೂರು ಕಾಯ್ದೆಗಳಿಗೆ ಕೇಂದ್ರ ಸರ್ಕಾರ ತಂದಿದ್ದ ತಿದ್ದುಪಡಿಗಳನ್ನು ರಾಜ್ಯದಲ್ಲಿ ಈವರೆಗೂ ವಾಪಸ್ ಪಡೆದಿಲ್ಲ. ತಕ್ಷಣವೇ ತಿದ್ದುಪಡಿ ಹಿಂಪಡೆಯಬೇಕು. ರಾಷ್ಟ್ರೀಯ ಕೃಷಿ ಚೌಕಟ್ಟನ್ನು ತಿರಸ್ಕರಿಸಬೇಕು’ ಎಂದು ಸರ್ವೋದಯ ಕರ್ನಾಟಕ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ಆಗ್ರಹಿಸಿದರು.

‘ಅರಣ್ಯವಾಸಿಗಳನ್ನು ಹಿಂಸಿಸಬೇಡಿ’

‘ಹೆಗ್ಗಡದೇವನಕೋಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಜಲಾಶಯಗಳ ನಿರ್ಮಾಣಕ್ಕೆ ಜಮೀನು ನೀಡಿ, ಅರಣ್ಯ ಪ್ರದೇಶಗಳಿಗೆ ಸ್ಥಳಾಂತರ ಹೊಂದಿದವರನ್ನು ಹಿಂಸಿಸುವುದನ್ನು ನಿಲ್ಲಿಸಬೇಕು’ ಎಂದು ಕಾಂಗ್ರೆಸ್‌ನ ಅನಿಲ್ ಚಿಕ್ಕಮಾದು ಒತ್ತಾಯಿಸಿದರು.

₹13,823 ಕೋಟಿ ಪೂರಕ ಅಂದಾಜು ಮಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆ ಯೋಜನೆಯಡಿ ವಿವಿಧ ಎಸ್ಕಾಂಗಳಿಗೆ ₹4,000 ಕೋಟಿ ಸಬ್ಸಿಡಿ, ರಾಜ್ಯ ಮತ್ತು ಜಿಲ್ಲಾ ಹೆದ್ದಾರಿಗಳ ಬಿಲ್ಲುಗಳ ಪಾವತಿಗೆ ₹1000 ಕೋಟಿ, ಕೆಪಿಎಸ್‌ಸಿ ಪರೀಕ್ಷಾ ವೆಚ್ಚಕ್ಕೆ ಹೆಚ್ಚುವರಿಯಾಗಿ ₹43 ಕೋಟಿ ಸೇರಿ ವಿವಿಧ ಬೇಡಿಕೆಗಳಿಗೆ ₹13,823.47 ಕೋಟಿ ಮೊತ್ತದ ಮೂರನೇ ಮತ್ತು ಅಂತಿಮ ಕಂತಿನ ಪೂರಕ ಅಂದಾಜನ್ನು ಬುಧವಾರ ವಿಧಾನಸಭೆಯಲ್ಲಿ ಮಂಡಿಸಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಪೂರಕ ಅಂದಾಜು ಮಂಡಿಸಿದರು.

ಮುಖ್ಯಾಂಶಗಳು

- ವಾಣಿಜ್ಯ ತೆರಿಗೆ, ಅಬಕಾರಿ ಮತ್ತು ಖಜಾನೆ ಇಲಾಖೆಗಳ ವಾಹನ ಖರೀದಿಗೆ ₹34 ಕೋಟಿ
- ಕೆಪಿಎಸ್‌ಸಿ ರಹಸ್ಯ ಸೇವಾ ವೆಚ್ಚಕ್ಕೆ ಹೆಚ್ಚುವರಿ ₹20 ಕೋಟಿ, ಸಾಮಾನ್ಯ ವೆಚ್ಚಕ್ಕಾಗಿ ₹2 ಕೋಟಿ, ಅಧ್ಯಕ್ಷರು ಮತ್ತು ಸದಸ್ಯರ ವೇತನ ಪಾವತಿಗೆ ಹೆಚ್ಚುವರಿ ₹27 ಲಕ್ಷ. ಗುತ್ತಿಗೆ ಮತ್ತು ಹೊರಗುತ್ತಿಗೆ ಸಿಬ್ಬಂದಿ ವೇತನಕ್ಕಾಗಿ ಹೆಚ್ಚುವರಿ ₹50 ಲಕ್ಷ.
- ರಾಜ್ಯಪಾಲರು ಮತ್ತು ಮುಖ್ಯಮಂತ್ರಿಯವರ ಹೆಲಿಕಾಪ್ಟರ್ ಪ್ರವಾಸಗಳಿಗಾಗಿ ಹೆಚ್ಚುವರಿ ವೆಚ್ಚ ₹2 ಕೋಟಿ
- ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದಲ್ಲಿ ಮಾಧ್ಯಮ ಕೋಶ ಸ್ಥಾಪನೆಗಾಗಿ ಹೆಚ್ಚುವರಿ ₹15 ಲಕ್ಷ
- 2023–24 ನೇ ಸಾಲಿನಲ್ಲಿ ನಿವೃತ್ತಿ ಹೊಂದಿರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಗ್ರಾಚ್ಯುಟಿ ಪಾವತಿಗಾಗಿ ₹39.81 ಕೋಟಿ
- 2024–25 ಸಾಲಿನಲ್ಲಿ ಜಾಹೀರಾತು ವೆಚ್ಚ, ಗೃಹಲಕ್ಷ್ಮಿ ಯೋಜನೆಯ ಪ್ರಚಾರಕ್ಕೆ ಸೇರಿ ಹೆಚ್ಚುವರಿ ₹105.55 ಕೋಟಿ
- ಕರ್ನಾಟಕ ಇಂಟರ್‌ನ್ಯಾಷನಲ್ ಟ್ರಾವೆಲ್ ಎಕ್ಸ್‌ಪೊ ಸಮಾವೇಶಕ್ಕೆ ₹ 6 ಕೋಟಿ ಮತ್ತು ಹಂಪಿ ಉತ್ಸವಕ್ಕೆ ₹7 ಕೋಟಿ ಸೇರಿ ಹೆಚ್ಚುವರಿ ₹13 ಕೋಟಿ
- ಬಸವಕಲ್ಯಾಣದ ಅನುಭವ ಮಂಟಪ ಕಾಮಗಾರಿ ಬಿಲ್ ಪಾವತಿಗೆ ಹೆಚ್ಚುವರಿ ₹25 ಕೋಟಿ
- ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಇಂದಿರಾ ಕ್ಯಾಂಟೀನ್‌ಗಳಿಗೆ ಆಹಾರ ಸರಬರಾಜಿನ ಬಾಕಿ ಬಿಲ್ ಪಾವತಿಸಲು ಹೆಚ್ಚುವರಿ ₹20 ಕೋಟಿ
- ವಿವಿಧ ನೀರಾವರಿ ನಿಗಮಗಳ ಕಾಮಗಾರಿ ಮತ್ತು ಬಂಡವಾಳ ವೆಚ್ಚಕ್ಕಾಗಿ ಹೆಚ್ಚುವರಿ ₹1,803 ಕೋಟಿ

ಏಪ್ರಿಲ್‌ನಲ್ಲಿ ‘ಉದ್ಯಮ ಮಂಥನ’

ಬೆಂಗಳೂರು: ರಾಜ್ಯವನ್ನು ಜಾಗತಿಕ ಮಟ್ಟದ ಉತ್ಪಾದನಾ ಕೇಂದ್ರ ಸ್ಥಾನವನ್ನಾಗಿ ರೂಪಿಸುವ ಉದ್ದೇಶದಿಂದ ಏಪ್ರಿಲ್ ಕೊನೆ ವಾರದಲ್ಲಿ ಎರಡು ದಿನಗಳ ‘ಉದ್ಯಮ ಮಂಥನ’ ಕಾರ್ಯಕ್ರಮ ನಡೆಸಲಾಗುತ್ತದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಎಂ.ಬಿ.ಪಾಟೀಲ

ಇಲಾಖೆಯ ಹಿರಿಯ ಅಧಿಕಾರಿಗಳ ಜತೆ ಬುಧವಾರ ಪೂರ್ವಭಾವಿ ಸಭೆ ನಡೆಸಿದ ಅವರು, ಉತ್ಪಾದನಾ ವಲಯದ ಮುಂಚೂಣಿ ಉದ್ದಿಮೆಗಳ ಮುಖ್ಯಸ್ಥರನ್ನು ಕರೆದು, ವಿಸ್ತೃತ ಚರ್ಚೆ ನಡೆಸಲಾಗುವುದು ಎಂದರು.

‘ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗಕ್ಕೆ ಸಂವಹನ, ಸರ್ಕಾರದ ನೀತಿಗಳು, ಸಾಮಾಜಿಕ ಮಾಧ್ಯಮಗಳು, ಏಕಗವಾಕ್ಷಿ ವ್ಯವಸ್ಥೆ ಕುರಿತಂತೆ ತರಬೇತಿ ನೀಡಲು ಸೂಚಿಸಲಾಗಿದೆ’ ಎಂದು ಹೇಳಿದರು.

ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಸಚಿವರ ತಾಂತ್ರಿಕ ಸಲಹೆಗಾರ ಅರವಿಂದ ಗಲಗಲಿ, ತಾಂತ್ರಿಕ ನಿರ್ದೇಶಕ ರಮೇಶ ಉಪಸ್ಥಿತರಿದ್ದರು.

ಸರ್ಕಾರಿ ಶಾಲೆ ಅಭಿವೃದ್ಧಿ ಹೊಣೆ ಯಾರದ್ದು...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳ ಅಭಿವೃದ್ಧಿ ಮಾಡುವ ಹೊಣೆ ಸರ್ಕಾರದ್ದು ಮಾತ್ರವೇ? ಈ ಪ್ರಶ್ನೆ ಮುಂದಿಟ್ಟು ವಿಧಾನಪರಿಷತ್ತಿನಲ್ಲಿ ಬುಧವಾರ ಸ್ವಾರಸ್ಯಕರ ಚರ್ಚೆ ನಡೆಯಿತು.

ಬಜೆಟ್ ಮೇಲಿನ ಚರ್ಚೆ ಆರಂಭಿಸಿದ ಜೆಡಿಎಸ್ ಸದಸ್ಯ ಎಸ್‌.ಎಲ್ ಬೋಜೇಗೌಡ, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಮಂಡನೆ ವೇಳೆ ಶಿಕ್ಷಣಕ್ಕಾಗಿ ಭರಪೂರ ಕಾರ್ಯಕ್ರಮಗಳನ್ನು ಘೋಷಿಸಿದ್ದಾರೆ. ಅದು ಸ್ವಾಗತಾರ್ಹವೇ. ಆದರೆ, ಅವು ಅನುಷ್ಠಾನಕ್ಕೆ ಬರುವುದಿಲ್ಲ. ಏಕೆಂದರೆ ಅಗತ್ಯ ಅನುದಾನವನ್ನೇ ತೆಗೆದಿರಿಸಿಲ್ಲ’ ಎಂದರು.

‘ಸರ್ಕಾರಿ ಶಾಲಾ–ಕಾಲೇಜು ವಿಶ್ವವಿದ್ಯಾಲಯಗಳಿಗೆ ಸರಿಯಾದ ಕಟ್ಟಡಗಳಿಲ್ಲ. ಬಹುತೇಕ ಕಡೆ ಶೇ50ಕ್ಕೂ ಹೆಚ್ಚಿನ ಬೋಧಕ ಸಿಬ್ಬಂದಿಯ ಕೊರತೆ ಇದೆ. ಸರ್ಕಾರ ರಸ್ತೆ ಕಾಮಗಾರಿಗಳನ್ನು ಐದು ವರ್ಷ ನಿಲ್ಲಿಸಲಿ. ಆದರೆ ಶಾಲೆಗಳನ್ನು ಅಭಿವೃದ್ಧಿಪಡಿಸಲಿ’ ಎಂದರು.

ಅವರ ಮಾತನ್ನು ತಡೆದ ಉಪಸಭಾಧ್ಯಕ್ಷ ಎಂ.ಕೆ.ಪ್ರಾಣೇಶ್, ‘ಬೋಜೇಗೌಡರೇ, ನಿಮ್ಮ ಅನುದಾನವನ್ನು ಬಳಸಿಕೊಂಡು ನಿಮ್ಮ ಕ್ಷೇತ್ರದ ಯಾವುದಾದರೂ ಸರ್ಕಾರಿ ಶಾಲೆಯನ್ನು ಹೈಟೆಕ್ ಮಾಡಬಹುದಲ್ಲವೇ. ಎಲ್ಲವನ್ನೂ ಸರ್ಕಾರದ ಮೇಲೆಯೇ ಹೊರಿಸಿದರೆ, ಚುನಾಯಿತ ಜನಪ್ರತಿನಿಧಿಗಳ ಜವಾಬ್ದಾರಿಯೇನು’ ಎಂದರು.

ವಿರೋಧ ಪಕ್ಷಗಳ ಸಾಲಿನಲ್ಲಿ ಹಲವು ಸದಸ್ಯರು ಎದ್ದು, ‘ತಮ್ಮ ತಮ್ಮ ಸ್ವಂತ ಖಾಸಗಿ ಶಾಲೆಗಳನ್ನು ಹೊಂದಿರುವವರು, ಸರ್ಕಾರಿ ಶಾಲೆಗಳನ್ನು ಏಕೆ ಅಭಿವೃದ್ಧಿಪಡಿಸುತ್ತಾರೆ’ ಎಂದರು.

ಬೋಜೇಗೌಡ, ‘ಇದೆಲ್ಲವನ್ನೂ ಸರ್ಕಾರವೇ ಮಾಡಲು ಅವಕಾಶವಿರುವ ಕಾರಣಕ್ಕೆ ವಿಷಯ ಪ್ರಸ್ತಾಪಿಸುತ್ತಿದ್ದೇನೆ’ ಎಂದರು.

ಉಪಸಭಾಧ್ಯಕ್ಷರು, ‘ಎಸ್‌. ರವಿಕುಮಾರ್ ಅವರು ಮತ್ತು ನಾನು ನಮ್ಮ ಕ್ಷೇತ್ರಗಳಲ್ಲಿ ಸರ್ಕಾರಿ ಶಾಲೆ ಅಭಿವೃದ್ಧಿಪಡಿಸಿದ್ದೇವೆ. ಅಂತಹ ಒಂದು ನೈತಿಕತೆಯನ್ನು ಚುನಾಯಿತ ಪ್ರತಿನಿಧಿಗಳೂ ಉಳಿಸಿಕೊಳ್ಳಬೇಕು’ ಎಂದರು.

‘ವಿದ್ಯಾರ್ಥಿಗಳಿಗೆ ತಲಾ ₹57 ಸಾವಿರ ಖರ್ಚು!’

ಬೆಂಗಳೂರು: ರಾಜ್ಯದಲ್ಲಿ ಶಿಕ್ಷಣ ಇಲಾಖೆ ಸರ್ಕಾರಿ ಶಾಲಾ ವಿದ್ಯಾರ್ಥಿಯ ಮೇಲೆ ವರ್ಷಕ್ಕೆ ₹57 ಸಾವಿರ ಖರ್ಚು ಮಾಡಿದರೆ, ಕೇಂದ್ರ ಸರ್ಕಾರದ ಕೇಂದ್ರೀಯ ವಿದ್ಯಾಲಯ ಪ್ರತಿ ವಿದ್ಯಾರ್ಥಿ ಮೇಲೆ ₹25 ಸಾವಿರ ಖರ್ಚು ಮಾಡುತ್ತದೆ. ಆದರೆ, ಶಿಕ್ಷಣದ ಗುಣಮಟ್ಟದಲ್ಲಿ ಅಜಗಜಾಂತರವಿದೆ ಎಂದು ಬಿಜೆಪಿಯ ಧೀರಜ್ ಮುನಿರಾಜು ವಿಧಾನಸಭೆಯಲ್ಲಿ ಹೇಳಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರೌಢಶಾಲೆ ಮತ್ತು ಪಿಯುಸಿ ಸೇರಿ ಶಾಲಾ ಶಿಕ್ಷಣಕ್ಕೆ ₹33,000 ಕೋಟಿ ನಿಗದಿ ಮಾಡಲಾಗಿದೆ. ಶಿಕ್ಷಕರ ಮತ್ತು ಸಿಬ್ಬಂದಿ ವೇತನ, ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿವಿಧ ಯೋಜನೆಗಳ ವೆಚ್ಚ ಮತ್ತು ಇತರ ಖರ್ಚು ಇದರಲ್ಲಿ ಒಳಗೊಂಡಿದೆ. ಇದನ್ನು ಭಾಗಿಸಿದಾಗ ಪ್ರತಿ ವಿದ್ಯಾರ್ಥಿ ಮೇಲೆ ₹57 ಸಾವಿರ ಖರ್ಚು ಮಾಡಿದಂತಾಗುತ್ತಿದೆ ಎಂದರು. ಇಷ್ಟೆಲ್ಲಾ ಖರ್ಚು ಮಾಡಿದರೂ, ಸರ್ಕಾರಿ ಶಾಲೆಗಳಲ್ಲಿ ವರ್ಷದಿಂದ ವರ್ಷಕ್ಕೆ ತೇರ್ಗಡೆ ಹೊಂದುವವರ ಸಂಖ್ಯೆ ಕಡಿಮೆ ಆಗುತ್ತಿದ್ದು, ಈಗ ಶೇ 58ಕ್ಕೂ ಕಡಿಮೆ ಇದೆ. ವಿದ್ಯಾರ್ಥಿಗಳ ಗುಣಮಟ್ಟವೂ ಅಷ್ಟಕಷ್ಟೆ ಎಂದರು.

ಪಾಠ ಮಾಡಬೇಕಾದ ಶಿಕ್ಷಕರನ್ನು ಮೊಟ್ಟೆ ಖರೀದಿಸಲು, ಬಿಸಿಯೂಟ ತಯಾರಿಸಲು, ಶೌಚಾಲಯ ತೊಳೆಯುವ ಕೆಲಸಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಶಾಲೆಗಳಲ್ಲಿ ಶೌಚಾಲಯ ತೊಳೆಯಲು ಪ್ರತ್ಯೇಕ ಸಿಬ್ಬಂದಿ ನೇಮಿಸಿಲ್ಲ. ಹೀಗಾಗಿ ಶಾಲಾ ಶಿಕ್ಷಣದ ಗುಣಮಟ್ಟ ಕುಸಿದಿದೆ ಎಂದು ಅಭಿಪ್ರಾಯಪಟ್ಟರು.

‘ಎಂಎಸ್‌ಪಿ ಅಡಿ ಪ್ರತಿ ರೈತರಿಂದ 20 ಕ್ವಿಂಟಾಲ್ ರಾಗಿ ಖರೀದಿಸಲಾಗುತ್ತಿದೆ. ಅತಿ ಹೆಚ್ಚು ರಾಗಿ ಬೆಳೆಯುವ ಪ್ರದೇಶ ನಮ್ಮದು. ಆದ್ದರಿಂದ, ಹೆಚ್ಚು ರಾಗಿ ಖರೀದಿಸಬೇಕು ಎಂದು ಧೀರಜ್ ಮನವಿ ಮಾಡಿದರು. ಅದಕ್ಕೆ ಪ್ರತಿಕ್ರಿಯಿಸಿದ ಆಹಾರ ಸಚಿವ ಕೆ.ಎಚ್‌.ಮುನಿಯಪ್ಪ, ಕೇಂದ್ರಕ್ಕೆ ಈ ಸಂಬಂಧ ಮನವಿ ಮಾಡಿದ್ದು, ಆ ಪ್ರಮಾಣವನ್ನು 50 ಕ್ವಿಂಟಾಲ್‌ಗೆ ಹೆಚ್ಚಿಸಲಾಗಿದೆ’ ಎಂದರು.

ರಾಜ್ಯದ ವಿವಿಧ ಜಿಲ್ಲೆಗಳ ಅಂಗನವಾಡಿ ಕಾರ್ಯಕರ್ತೆಯರು ಭಾಗಿ

ಗೌರವಧನ ಹೆಚ್ಚಳಕ್ಕೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಕೇವಲ ₹1 ಸಾವಿರ ಹಾಗೂ ಸಹಾಯಕಿಯರಿಗೆ ₹750 ಗೌರವಧನ ಹೆಚ್ಚಳ ಮಾಡಿರುವ ಸರ್ಕಾರದ ತೀರ್ಮಾನಕ್ಕೆ ಅಸಮಾಧಾನ ವ್ಯಕ್ತಪಡಿಸಿ, ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘಟನೆಗಳ ಸಂಯುಕ್ತ ಸಂಘರ್ಷ ಸಮಿತಿಯ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಅಂಗನವಾಡಿ ಕಾರ್ಯಕರ್ತೆಯರು ಗೌರವಧನ ಹೆಚ್ಚಿಸುವಂತೆ ಆಗ್ರಹಿಸಿ, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

‘ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನವನ್ನು ಒಂದು ತಿಂಗಳಿಗೆ ₹15 ಸಾವಿರ, ಸಹಾಯಕಿಯರಿಗೆ ₹10 ಸಾವಿರ ಹೆಚ್ಚಿಸುವುದಾಗಿ ಭರವಸೆ ನೀಡಲಾಗಿತ್ತು. ಆದರೆ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷಗಳಾದರೂ ಈಡೇರಿಸಿಲ್ಲ’ ಎಂದು ಪ್ರತಿಭಟನಕಾರರು ಆರೋಪಿಸಿದರು.

ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘಟನೆಗಳ ಸಂಯುಕ್ತ ಸಂಘರ್ಷ ಸಮಿತಿಯ ಸದಸ್ಯರು ಬಿಸಿಲಿನಿಂದ ರಕ್ಷಿಸಿಕೊಳ್ಳಲು ಕೊಡೆಗಳ ಮೊರೆ ಹೋಗಿದ್ದರು. ಪ್ರಜಾವಾಣಿ ಚಿತ್ರ

‘ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಜೀವನ ನಿರ್ವಹಣೆ ಕಷ್ಟವಾಗುತ್ತಿದೆ. ಆದರೆ, ಸರ್ಕಾರ ನಮಗೆ ಕನಿಷ್ಠ ವೇತನದ ವ್ಯಾಪ್ತಿಗೆ ಒಳಪಡಿಸಿ ಸಂಭಾವನೆ ನೀಡದೆ ಅನ್ಯಾಯ ಮಾಡುತ್ತಿದೆ. 2011–12ನೇ ಸಾಲಿನಿಂದ ನಿವೃತ್ತರಾದ ಎಲ್ಲ ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಗ್ರಾಚ್ಯುಯಿಟಿ ಸೌಲಭ್ಯ ನೀಡಬೇಕು’ ಎಂದು ಆಗ್ರಹಿಸಿದರು.

‘ಎಲ್ಲ ಅಂಗನವಾಡಿ ಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಸಮಸ್ಯೆಗಳಿಗೆ ಪರಿಹಾರ ನೀಡಬೇಕು. ಇತ್ತೀಚೆಗೆ ಇಲಾಖೆಯ ಸಚಿವರು ಹಾಗೂ ಅಧಿಕಾರಿಗಳು ತಮಗೆ ಬೇಕಾದ ಸಂಘಟನೆಗಳೊಂದಿಗೆ ಚರ್ಚಿಸುತ್ತಿರುವುದು ಖಂಡನೀಯ’ ಎಂದು ಹೇಳಿದರು.

ಸಮಿತಿಯ ಸದಸ್ಯರಾದ ಜಿ.ಆರ್‌. ಶಿವಶಂಕರ್, ಬಿ. ನಾಗರತ್ನಮ್ಮ, ಬಿ. ಅಮ್ಜದ್, ಎಂ. ಜಯಮ್ಮ, ಕೆ. ಸೋಮಶೇಖರ್ ಯಾದಗಿರಿ, ಎಂ. ಉಮಾದೇವಿ ಉಪಸ್ಥಿತರಿದ್ದರು.

‘ಸಚಿವರಿಂದ ಭರವಸೆ’

ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಸಮಸ್ಯೆಗಳನ್ನು ಪರಿಹರಿಸಿ, ಅವರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಬದ್ಧವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಭರವಸೆ ನೀಡಿದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಅವರು, ‘2011ರಿಂದ ನಿವೃತ್ತರಾದ ಎಲ್ಲರಿಗೂ ಗ್ರಾಚ್ಯುಟಿ ಸೌಲಭ್ಯ ನೀಡುವ ಕುರಿತು ಮಾರ್ಚ್ 20ರಂದು (ಗುರುವಾರ) ಅಂಗನವಾಡಿ ಸಂಘಟನೆಗಳ ಮುಖಂಡರೊಂದಿಗೆ ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

ಗುರುವಾರ, ಮಾರ್ಚ್ 20, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 79 | ಪುಟ 16

● www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ–ಅಗಲ: ಜಗಮೆಚ್ಚಿದ ಗಗನಯಾತ್ರಿ

ಸರ್ಕಾರಿ, ಖಾಸಗಿ ಸ್ವತ್ತುಗಳಿಗೆ ಡಿಜಿಟಲ್ ರಕ್ಷಣೆ 10

ಟೋಲ್ ಸಂಗ್ರಹಕ್ಕೆ ಶೀಘ್ರವೇ ಹೊಸ ನೀತಿ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
75,449	22,907	₹93,100 (ಬೆಂಗಳೂರು)	₹1.06 ಲಕ್ಷ (ಬೆಂಗಳೂರು)	86.37

"THE LEADER IN RURAL EDUCATION EXCELLENCE"
ನಮ್ಮ ಎಕ್ಸೆಲ್ ಅಕಾಡೆಮಿಕ್ಸ್® ಬೆಂಗಳೂರು
IIT-Main & Advanced | NEET | BITS | AIIMS | JIPMER | CET | COMED-K
ಆಡಳಿತಾತ್ಮಕ ಕಚೇರಿ : ಎಕ್ಸೆಲ್ ಅಕಾಡೆಮಿಕ್ಸ್,
ನಂ.326, ಪೀಪಲ್ ಟೀ ಹಾಸ್ಪಿಟಲ್ ಮುಂಭಾಗ, ಶೇಷಾದ್ರಿಪುರಂ ಕಾಲೇಜ್ ರಸ್ತೆ,
ಯಲಹಂಕ ನ್ಯೂ ಟೌನ್ - 560 064, ಬೆಂಗಳೂರು
7676-91-7777, 9513657041, 9535656277
REG. OPEN FOR REGULAR / ONLINE
NEET, K-CET, IIT-JEE
CRASH COURSE
2ND PUC/12TH, +2 STUDYING / PASSED STUDENTS
POSTAL COACHING
1ST PUC & 2ND PUC, 11TH & 12, +1 & +2 STUDYING STUDENTS
BATCH FROM 19TH MAR, 2025

CELEBRATING 15 SUCCESSFUL YEARS with Hardwork & Dedication
EXCEL ACADAMICS
ವಿಶೇಷ ಸೂಚನೆ : ಅತ್ಯುತ್ತಮ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಾಗೂ ಶುಲ್ಕದಲ್ಲಿ 100% ರಿಯಾಯಿತಿ ನೀಡಲಾಗುವುದು
ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕ ವಸತಿ ಸೌಲಭ್ಯವಿರುತ್ತದೆ

ಕಲಿಕಾ ಭಾಷೆ ನಿರ್ಧಾರ ರಾಜ್ಯಗಳದ್ದು: ಕೇಂದ್ರ

ನವದೆಹಲಿ (ಪಿಟಿಐ): 'ತ್ರಿಭಾಷಾ ಸೂತ್ರದಡಿ ಇಂಥದ್ದೆ ಭಾಷೆ ಕಲಿಸಬೇಕು ಎಂದು ರಾಜ್ಯಗಳ ಮೇಲೆ ಹೇರುವುದಿಲ್ಲ. ರಾಷ್ಟ್ರೀಯ ಶಿಕ್ಷಣ ನೀತಿಯಡಿ (ಎನ್ಇಪಿ) ಯಾವ ಭಾಷೆ ಕಲಿಸಬೇಕು ಎಂಬುದನ್ನು ಆಯಾ ರಾಜ್ಯಗಳು ಮತ್ತು ವಿದ್ಯಾರ್ಥಿಗಳು ನಿರ್ಧರಿಸುತ್ತಾರೆ' ಎಂದು ಶಿಕ್ಷಣ ಖಾತೆ ರಾಜ್ಯ ಸಚಿವ ಸುಕಾಂತ್ ಮಜುಂದಾರ್ ಅವರು ಸಂಸತ್ತಿಗೆ ಬುಧವಾರ ಲಿಖಿತ ಉತ್ತರದಲ್ಲಿ ತಿಳಿಸಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕೆಪಿಟಿಸಿಎಲ್, ಎಸ್ಕಾಂಗಳ ಭಾರ ಬಳಕೆದಾರರ ಜೇಬಿಗೆ ● ಕೃಷಿ ಪಂಪ್‌ಸೆಟ್‌ಗೂ ಅನ್ವಯ

ಪಿಂಚಣಿ ಹೊರೆ: ಗ್ರಾಹಕರಿಗೆ ಬರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಪ್ರಸರಣ ಮತ್ತು ಸರಬರಾಜು ಸಂಸ್ಥೆಗಳ ಸಿಬ್ಬಂದಿಯ ಪಿಂಚಣಿ, ಗ್ರಾಚ್ಯುಟಿಗೆ ಸರ್ಕಾರ ನೀಡಬೇಕಾದ ಪಾಲಿನ ಮೊತ್ತವನ್ನು ಗ್ರಾಹಕರಿಂದಲೇ ವಸೂಲಿ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ವಿದ್ಯುತ್ ಬಳಕೆದಾರರಿಗೆ ಏಪ್ರಿಲ್ 1ರಿಂದಲೇ ಹೊಸ 'ಬರೆ'ಯ ಶಾಕ ತಟ್ಟಲಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್) ಮತ್ತು ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳ (ಎಸ್ಕಾಂ) ಸಿಬ್ಬಂದಿಯ ಪಿಂಚಣಿ ಹಾಗೂ ಗ್ರಾಚ್ಯುಟಿಯ ಮೊತ್ತವನ್ನು ರಾಜ್ಯ ಸರ್ಕಾರ ಪಾವತಿಸಬೇಕಿತ್ತು. ಈ ವಿಷಯದ ಬಗ್ಗೆ ವ್ಯಾಜ್ಯ ಇತ್ಯರ್ಥವಾಗಿದೆ. ಸರ್ಕಾರದ ಪಾಲನ್ನು ವಿದ್ಯುತ್ ಬಳಕೆದಾರರಿಂದಲೇ ವಸೂಲಿ ಮಾಡಲು ಅವಕಾಶ ಕಲ್ಪಿಸಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಆದೇಶ ಹೊರಡಿಸಿದೆ.

ಗ್ರಾಹಕರು ಬಳಸುವ ಪ್ರತಿ ಯೂನಿಟ್ ವಿದ್ಯುತ್ ಮೇಲೆ 2025–26ರಲ್ಲಿ ತಲಾ 36 ಪೈಸೆ, 2026–27ರಲ್ಲಿ ತಲಾ 35 ಪೈಸೆ ಮತ್ತು 2027–28ರಲ್ಲಿ ತಲಾ 34 ಪೈಸೆಯನ್ನು ಹೆಚ್ಚುವರಿಯಾಗಿ ವಿಧಿಸಲು ಆಯೋಗ ಒಪ್ಪಿಗೆ ನೀಡಿದೆ.

ಪಿಂಚಣಿ ಹಾಗೂ ಗ್ರಾಚ್ಯುಟಿ ಬಾಬ್ತು 2021–22ರಿಂದ 2024–25ನೇ ಆರ್ಥಿಕ ವರ್ಷಗಳವರೆಗಿನ ಹಿಂಬಾಕಿ ಮತ್ತು 2025–26ನೇ ಆರ್ಥಿಕ ವರ್ಷದಿಂದ ಆಗುವ ವೆಚ್ಚವನ್ನು ಗ್ರಾಹಕರಿಗೆ ವರ್ಗಾಯಿಸಲು ಕೋರಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್) ಹಾಗೂ ಎಸ್ಕಾಂಗಳು ಸಲ್ಲಿಸಿದ್ದ ಅರ್ಜಿಗಳನ್ನು ಕೆಇಆರ್‌ಸಿ ಪುರಸ್ಕರಿಸಿದೆ.

ಮುಖ್ಯಾಂಶಗಳು

- ಮುಂದಿನ ಮೂರು ವರ್ಷಗಳಲ್ಲಿ ₹8,519.55 ಕೋಟಿ ವಸೂಲಿಗೆ ಆದೇಶ
- ಹಿಂಬಾಕಿ ಮೊತ್ತವೇ ₹4,659.34 ಕೋಟಿಯಷ್ಟಿದೆ

ಪಿಂಚಣಿ ಮತ್ತು ಗ್ರಾಚ್ಯುಟಿ ಹೊರೆ



ಕರ್ನಾಟಕ ವಿದ್ಯುತ್ ಸುಧಾರಣಾ ನಿಯಮಗಳಿಗೆ 2022ರಲ್ಲಿ ತಿದ್ದುಪಡಿ ತರಲಾಗಿತ್ತು. 'ಕೆಪಿಟಿಸಿಎಲ್ ಮತ್ತು ಎಸ್ಕಾಂಗಳ ಸಿಬ್ಬಂದಿಯ ಪಿಂಚಣಿ, ಗ್ರಾಚ್ಯುಟಿಯಲ್ಲಿ ರಾಜ್ಯ ಸರ್ಕಾರದ ಪಾಲನ್ನು ಗ್ರಾಹಕರಿಗೆ ವರ್ಗಾಯಿಸಲು ಬಯಸಿದರೆ ಕೆಇಆರ್‌ಸಿ ಮುಂದೆ ಅರ್ಜಿ ಸಲ್ಲಿಸಬಹುದು' ಎಂದು ತಿದ್ದುಪಡಿಯಲ್ಲಿ ಹೇಳಲಾಗಿತ್ತು. ಈ ತಿದ್ದುಪಡಿಯ ಆಧಾರದಲ್ಲೇ ಸರ್ಕಾರದ ಪಾಲನ್ನು ವಿದ್ಯುತ್ ಬಳಕೆದಾರರಿಗೆ ವರ್ಗಾಯಿಸುವ ಆದೇಶ ಹೊರಡಿಸಲಾಗಿದೆ.

₹4,659 ಕೋಟಿ ಹಿಂಬಾಕಿ: ಪಿಂಚಣಿ ಮತ್ತು ಗ್ರಾಚ್ಯುಟಿಯ ರಾಜ್ಯ ಸರ್ಕಾರದ ಪಾಲನ್ನು ಭರಿಸಲು ಮುಂದಿನ ಮೂರು ಆರ್ಥಿಕ ವರ್ಷಗಳಲ್ಲಿ ವಿದ್ಯುತ್ ಬಳಕೆದಾರರಿಂದ ₹8,519.55 ಕೋಟಿ ಮೊತ್ತವನ್ನು ವಸೂಲಿ ಮಾಡಲು ಕೆಇಆರ್‌ಸಿ ಸಮ್ಮತಿಸಿದೆ. ಈ ಪೈಕಿ 2021–22ರಿಂದ 2024–25ನೇ ಆರ್ಥಿಕ ವರ್ಷಗಳವರೆಗಿನ ಹಿಂಬಾಕಿ ಮೊತ್ತವೇ ₹4,659.34 ಕೋಟಿಯಷ್ಟಿದೆ. ಹಿಂಬಾಕಿ ಮೊತ್ತವನ್ನು 2025–26ರಿಂದ 2030–31ನೇ ಆರ್ಥಿಕ ವರ್ಷದವರೆಗೆ ಆರು ವಾರ್ಷಿಕ ಕಂತುಗಳಲ್ಲಿ ತಲಾ ₹776.56 ಕೋಟಿಯಷ್ಟನ್ನು ಗ್ರಾಹಕರಿಂದ ವಸೂಲಿ ಮಾಡಲಾಗುತ್ತದೆ.

11ನೇ ಪುಟ ನೋಡಿ

ಅನಧಿಕೃತ ಲೋಡ್ ಶೆಡ್ಡಿಂಗ್?

ರಾಜ್ಯದಲ್ಲಿ ವಿದ್ಯುತ್ ಲೋಡ್ ಶೆಡ್ಡಿಂಗ್ ಕುರಿತು ಅಧಿಕೃತ ಪ್ರಕಟಣೆ ಇಲ್ಲದಿದ್ದರೂ, ವಿವಿಧ ಜಿಲ್ಲೆಗಳಲ್ಲಿ ಅನಿಯಮಿತವಾಗಿ ವಿದ್ಯುತ್ ಕಡಿತ ಮಾಡಲಾಗುತ್ತಿದೆ ಎಂಬ ದೂರುಗಳು ವ್ಯಾಪಕವಾಗಿವೆ.

ಬೇಸಿಗೆ ಧಗೆ ಹೆಚ್ಚುತ್ತಿರುವ ಹೊತ್ತಿನಲ್ಲಿಯೇ ಅನಿಯಮಿತವಾಗಿ ವಿದ್ಯುತ್ ಪೂರೈಕೆ ಕಡಿತ ಮಾಡುತ್ತಿರುವುದರಿಂದ ಜನಜೀವನದ ಮೇಲೆ ಸಮಸ್ಯೆಯಾಗಿದೆ. ಗೃಹ, ವಾಣಿಜ್ಯ ಸಂಪರ್ಕಗಳ ಜೊತೆಗೆ ಕೃಷಿ ಚಟುವಟಿಕೆಗೆ ವಿದ್ಯುತ್ ಪೂರೈಕೆಯಲ್ಲೂ ವ್ಯತ್ಯಯ ಆಗುತ್ತಿದೆ.

ಜಿಲ್ಲಾವಾರು ಮಾಹಿತಿ ಪ್ರಕಾರ, 'ಹಗಲು ಹೊತ್ತಿನ ಜೊತೆಗೆ ರಾತ್ರಿಯ ಹೊತ್ತೂ, ಒಟ್ಟಾರೆ 4–5 ಗಂಟೆ ಅನಿಯಮಿತವಾಗಿ ವಿದ್ಯುತ್ ಕಡಿತ ಆಗುತ್ತಿದೆ. ವಿದ್ಯುತ್ ಸರಬರಾಜು ಹೊಣೆ ಹೊತ್ತಿರುವ ಎಲ್ಲ ವಿಭಾಗಗಳ ವ್ಯಾಪ್ತಿಯಲ್ಲಿ ಈ ಸಮಸ್ಯೆ ಏಕರೂಪವಾಗಿದೆ.

ಕೃಷಿ ಚಟುವಟಿಕೆಗೆ ನಿತ್ಯ 7 ಗಂಟೆ ವಿದ್ಯುತ್ ನೀಡಲಾಗುತ್ತಿದೆ ಎನ್ನುತ್ತಾರೆ ಅಧಿಕಾರಿಗಳು. ಆದರೆ, ವಿವಿಧ ಜಿಲ್ಲೆಗಳ ಕೃಷಿಕರ ಪ್ರಕಾರ, 'ಐದು ಗಂಟೆ ಕೂಡಾ ಗುಣಮಟ್ಟದ ವಿದ್ಯುತ್ ಪೂರೈಕೆ ಆಗುತ್ತಿಲ್ಲ. ಅನೇಕ ಬಾರಿ ಟ್ರಿಪ್ ಆಗಿ ಏಕಾಏಕಿ ಸ್ಥಗಿತವಾಗುವುದು ಇದೆ' ಎನ್ನುತ್ತಾರೆ. 'ವಿದ್ಯುತ್ ಲೋಡ್ ಶೆಡ್ಡಿಂಗ್ ಇಲ್ಲ. ಆದರೆ, ದುರಸ್ತಿ ಹಾಗೂ ನಿರ್ವಹಣೆ ಕಾರಣಕ್ಕಾಗಿ ವಿದ್ಯುತ್ ಕಡಿತ ಮಾಡಲಾಗುತ್ತಿದೆ' ಎಂದು ವಿದ್ಯುತ್ ವ್ಯತ್ಯಯ ಸಮಸ್ಯೆ ಕುರಿತು ಪ್ರತ್ಯೇಕವಾಗಿ ಮಾತನಾಡಿರುವ ಜೆಸ್ಕಾಂ, ಮೆಸ್ಕಾಂ, ಸೆಸ್ಕ್ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಇನ್ನೊಂದು ಸುದ್ದಿ 11

ಮರಕ್ಕೆ ಕಟ್ಟಿ ಮಹಿಳೆಗೆ ಥಳಿತ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಉಡುಪಿ: ಮಹಿಳೆಯೊಬ್ಬರನ್ನು ಮೀನು ಕದ್ದ ಆರೋಪದಲ್ಲಿ ಮರಕ್ಕೆ ಕಟ್ಟಿ ಮಲ್ಪೆ ಬಂದರಿನಲ್ಲಿ ಥಳಿಸಲಾಗಿದೆ.

ಈ ಸಂಬಂಧ ಸ್ಥಳೀಯರಾದ ಲಕ್ಷ್ಮಿ, ಸುಂದರ್, ಶಿಲ್ಪಾ ಎಂಬುವವರನ್ನು ಬಂಧಿಸಲಾಗಿದೆ. ಇನ್ನೊಬ್ಬ ಶಂಕಿತನನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ.

'ವಿಡಿಯೊ ದೃಶ್ಯಾವಳಿ ನೋಡಿ ಮಹಿಳೆ ಮೇಲೆ ಹಲ್ಲೆ ನಡೆಸಿದವರನ್ನು ಪತ್ತೆ ಹಚ್ಚಲಾಗಿದೆ. ಬೇರೆ ಯಾರಾದರೂ ಶಾಮೀಲಾಗಿದ್ದಾರೆಯೇ ಎಂಬುದರ ಕುರಿತು ತನಿಖೆ ನಡೆಯುತ್ತಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ. ತಿಳಿಸಿದ್ದಾರೆ.

ವಿಜಯನಗರ ಜಿಲ್ಲೆಯ ಹೂವಿನಹಡಗಲಿಯ ನಿವಾಸಿ ಮಹಿಳೆಯನ್ನು ಮಾ. 18ರಂದು ಮರಕ್ಕೆ ಕಟ್ಟಿಹಾಕಿ ಥಳಿಸಿದ್ದು, ಈ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಬಳಿಕ ಮಲ್ಪೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ಮಹಿಳೆಯನ್ನು ಮರಕ್ಕೆ ಕಟ್ಟಿ ಥಳಿಸಿದರು

6ನೇ ಪುಟ ನೋಡಿ

'ಕಾನೂನು ಕೈಗೆತ್ತಿಕೊಂಡರೆ ಸಹಿಸಲಾಗದು'

'ಮಹಿಳೆಯೊಬ್ಬರಿಗೆ ಥಳಿಸಿದ ವೀಡಿಯೊ ಕಂಡು ದಿಗ್ಭ್ರಮೆಯಾಯಿತು. ಮಹಿಳೆಯನ್ನು ಈ ರೀತಿ ಕೈಕಾಲು ಕಟ್ಟಿ ಹಲ್ಲೆ ಮಾಡುವುದು ಅಮಾನವೀಯ ಮಾತ್ರವಲ್ಲ, ಗಂಭೀರ ಅಪರಾಧವೂ ಹೌದು. ದೂರು ದಾಖಲಿಸಿದರೆ ಪೊಲೀಸರು ತನಿಖೆ ನಡೆಸಿ, ಶಿಕ್ಷಿಸಲು ಸಮರ್ಥರಿರುವಾಗ ಹೀಗೆ ಸಾರ್ವಜನಿಕರು ಕಾನೂನು ಕೈಗೆತ್ತಿಕೊಳ್ಳುವುದನ್ನು ಸರ್ಕಾರ ಸಹಿಸುವುದಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಕ್ಸ್ ವೇದಿಕೆಯಲ್ಲಿ ಹೇಳಿದ್ದಾರೆ.

ಭೂಮಿಗೆ ಮರಳಿದ ಸುನಿತಾ, ವಿಲ್ಮೋರ್

ಗಗನಯಾನಿಗಳನ್ನು ಹೊತ್ತಿದ್ದ ಬಾಹ್ಯಾಕಾಶ ಕೋಶವು ಜಲಸ್ಪರ್ಶ ಮಾಡಿದ ಕ್ಷಣ –ಪಿಟಿಐ ಚಿತ್ರಗಳು

> ಸುನಿತಾ, ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಹೆಚ್ಚುವರಿ ಅವಧಿಗೆ ಉಳಿದಿದ್ದ ನೀವು ಸುರಕ್ಷಿತವಾಗಿ ಮರಳಿರುವುದು ಗಮನಾರ್ಹವಾದ ಸಾಧನೆ
> **ವಿ. ನಾರಾಯಣನ್,** ಇಸ್ರೊ ಅಧ್ಯಕ್ಷ

ಸುನಿತಾ ವಿಲಿಯಮ್ಸ್

ಕೇಪ್ ಕನಾವರಲ್/ನ್ಯೂಯಾರ್ಕ್ (ಎಪಿ, ನ್ಯೂಯಾರ್ಕ್ ಟೈಮ್ಸ್): ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ (ಐಎಸ್‌ಎಸ್) ಒಂಬತ್ತು ತಿಂಗಳು ಕಳೆದ ನಾಸಾದ ಗಗನಯಾನಿಗಳಾದ ಭಾರತ ಮೂಲದ ಸುನಿತಾ ವಿಲಿಯಮ್ಸ್ ಮತ್ತು ಅಮೆರಿಕದ ಬುಚ್ ವಿಲ್ಮೋರ್ ಅವರು ಭೂಮಿಗೆ ಮರಳಿದ್ದಾರೆ. ಇದರೊಂದಿಗೆ ಈ ಇಬ್ಬರ 286 ದಿನಗಳ ಗಗನ ಪಯಣದ ಸಾಹಸಗಾಥೆಯು ಸುಖಾಂತ್ಯಗೊಂಡಿದೆ. ಅಮೆರಿಕ ಮತ್ತು ಭಾರತದಲ್ಲಿ ಮನೆ ಮಾಡಿದ್ದ ಕಳವಳವು ಮರೆಯಾಗಿದೆ.

ಕಳೆದ ಜೂನ್‌ನಲ್ಲಿ ಐಎಸ್‌ಎಸ್‌ಗೆ ತೆರಳಿದ್ದ ಸುನಿತಾ ಮತ್ತು ಬುಚ್ ಅವರನ್ನು ಹೊತ್ತ ಸ್ಪೇಸ್ ಎಕ್ಸ್ ಕೋಶವು ಫ್ಲಾರಿಡಾ ಪ್ಯಾನ್‌ಹ್ಯಾಂಡಲ್ ಕಡಲಿನ ನೀರಿನ ಮೇಲೆ ಬುಧವಾರ ಮುಂಜಾನೆ 3.27ಕ್ಕೆ (ಭಾರತೀಯ ಕಾಲಮಾನ) ನಿಧಾನವಾಗಿ ಇಳಿಯಿತು.

ಬೋಯಿಂಗ್ ಸಂಸ್ಥೆಯ ಸ್ಟಾರ್‌ಲೈನರ್ ಎಂಬ ಗಗನನೌಕೆಯಲ್ಲಿ ಈ ಇಬ್ಬರು ಐಎಸ್‌ಎಸ್‌ಗೆ ಹೋಗಿದ್ದರು. ಆದರೆ, ಸ್ಟಾರ್‌ಲೈನರ್‌ನ ಪ್ರೊಪಲ್ಶನ್ ವ್ಯವಸ್ಥೆಯಲ್ಲಿ (ಮುಂದಕ್ಕೆ ನೂಕುವ ವ್ಯವಸ್ಥೆ) ಸಮಸ್ಯೆ ಕಾಣಿಸಿಕೊಂಡಿತ್ತು. ಹಾಗಾಗಿ, ಗಗನಯಾನಿಗಳನ್ನು ನಿಗದಿತ ಎಂಟು ದಿನಗಳಲ್ಲಿ ವಾಪಸ್ ಕರೆಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಈಗ, ಸ್ಪೇಸ್ ಎಕ್ಸ್‌ನ 'ಡ್ರ್ಯಾಗನ್' ಬಾಹ್ಯಾಕಾಶ ಕೋಶದಲ್ಲಿ ಸುನಿತಾ ಮತ್ತು ಬುಚ್ ಅವರನ್ನು ಭೂಮಿಗೆ ಕರೆತರಲಾಗಿದೆ.

ಇನ್ನೊಂದು ಸುದ್ದಿ 12

ವೇತನ, ಭತ್ಯೆ ಹೆಚ್ಚಳಕ್ಕೆ ತಿದ್ದುಪಡಿ ಮಸೂದೆ ಸಿದ್ಧ

ಸಚಿವರು, ಶಾಸಕರ ವೇತನ ಇಮ್ಮಡಿ

● ರಾಜೇಶ್ ರೈ ಚಟ್ಲ

ಬೆಂಗಳೂರು: ಮುಖ್ಯಮಂತ್ರಿ, ಸಚಿವರು, ಶಾಸಕರು ಈಗ ಪಡೆಯುತ್ತಿರುವ ವೇತನ ಮತ್ತು ಭತ್ಯೆಯನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಲು ಸರ್ಕಾರ ಮುಂದಾಗಿದೆ.

ಶಾಸಕರ ವೇತನ ₹40 ಸಾವಿರದಿಂದ ₹80 ಸಾವಿರ, ವಿಧಾನಸಭಾಧ್ಯಕ್ಷರ ಮತ್ತು ವಿಧಾನ ಪರಿಷತ್ ಸಭಾಪತಿ ವೇತನ ₹75 ಸಾವಿರದಿಂದ ₹1.25 ಲಕ್ಷ, ಸಚಿವರ ವೇತನ ₹60 ಸಾವಿರದಿಂದ ₹1.25 ಲಕ್ಷ, ಮುಖ್ಯಮಂತ್ರಿಯ ವೇತನ ₹75 ಸಾವಿರದಿಂದ ₹1.50 ಲಕ್ಷಕ್ಕೆ ಹೆಚ್ಚಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಆ ಮೂಲಕ, ಸಿಎಂ, ಸಚಿವರು, ಶಾಸಕರ ವೇತನ ಇಮ್ಮಡಿಯಷ್ಟು ಹೆಚ್ಚಳ ಆಗಲಿದೆ.

ಶಾಸಕರು, ವಿಧಾನ ಪರಿಷತ್ ಸದಸ್ಯರು, ವಿಧಾನ ಸಭಾಧ್ಯಕ್ಷರು, ಸಭಾಪತಿ, ವಿರೋಧ ಪಕ್ಷದ ನಾಯಕರು, ಮುಖ್ಯ ಸಚೇತಕರ ವೇತನ, ಭತ್ಯೆ ಹೆಚ್ಚಳದಿಂದ ₹50 ಕೋಟಿ, ಮುಖ್ಯಮಂತ್ರಿ, ಸಚಿವರುಗಳ ವೇತನ ಭತ್ಯೆ ಹೆಚ್ಚಳದಿಂದ ₹10 ಕೋಟಿ ಸೇರಿ ರಾಜ್ಯದ ಬೊಕ್ಕಸಕ್ಕೆ ವಾರ್ಷಿಕ ₹62 ಕೋಟಿ ಹೆಚ್ಚುವರಿ ಹೊರೆ ಅಂದಾಜಿಸಲಾಗಿದೆ.

ವೇತನ ಮತ್ತು ವಿವಿಧ ಭತ್ಯೆಗಳನ್ನು ಹೆಚ್ಚಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ಮಸೂದೆ 2025' ಮತ್ತು 'ಕರ್ನಾಟಕ ವಿಧಾನಮಂಡಲದವರ ಸಂಬಳಗಳು, ಪಿಂಚಣಿಗಳು ಮತ್ತು ಭತ್ಯೆಗಳ (ತಿದ್ದುಪಡಿ) ಮಸೂದೆ 2025' ಸಿದ್ಧವಾಗಿದ್ದು, ಈ ಅಧಿವೇಶನದಲ್ಲಿಯೇ ಮಂಡಿಸಲು ಸರ್ಕಾರ ತಯಾರಿ ನಡೆಸಿದೆ.

2015ರಲ್ಲಿ ಶಾಸಕರ ವೇತನ ಮತ್ತು ಭತ್ಯೆಗಳ ಪರಿಷ್ಕರಿಸಿದ ಬಳಿಕ ಬಿಜೆಪಿ ಸರ್ಕಾರದ ಅವಧಿಯಲ್ಲಿ (2022) ಮತ್ತೆ ಪರಿಷ್ಕರಿಸಲಾಗಿತ್ತು.

ಯಾರಿಗೆ ಎಷ್ಟು ಹೆಚ್ಚಳ

ವಿಷಯ	ಪ್ರಸ್ತುತ (₹ಗಳಲ್ಲಿ)	ಪ್ರಸ್ತಾವಿತ (₹ಗಳಲ್ಲಿ)
ಸಭಾಧ್ಯಕ್ಷ, ಸಭಾಪತಿ ವೇತನ	75 ಸಾವಿರ	1.25 ಲಕ್ಷ
ಸಭಾಧ್ಯಕ್ಷ, ಸಭಾಪತಿ ಆತಿಥ್ಯ ಭತ್ಯೆ	4 ಲಕ್ಷ	5 ಲಕ್ಷ
ಸಭಾಧ್ಯಕ್ಷ, ಸಭಾಪತಿ, ಉಪ ಸಭಾಧ್ಯಕ್ಷ, ಉಪ ಸಭಾಪತಿ, ವಿಪಕ್ಷದ ನಾಯಕ, ಸರ್ಕಾರದ ಮುಖ್ಯ ಸಚೇತಕ, ವಿಪಕ್ಷ ಮುಖ್ಯ ಸಚೇತಕರ ಮನೆ ಬಾಡಿಗೆ	1.60 ಲಕ್ಷ	2.50 ಲಕ್ಷ
ಉಪ ಸಭಾಧ್ಯಕ್ಷ, ಉಪ ಸಭಾಪತಿ ವೇತನ	60 ಸಾವಿರ	80 ಸಾವಿರ
ಉಪ ಸಭಾಧ್ಯಕ್ಷ, ಉಪ ಸಭಾಪತಿ ಆತಿಥ್ಯ ಭತ್ಯೆ	2.50 ಲಕ್ಷ	3 ಲಕ್ಷ
ವಿಪಕ್ಷ ನಾಯಕರ ವೇತನ	60 ಸಾವಿರ	80 ಸಾವಿರ
ವಿಪಕ್ಷ ನಾಯಕರ ಆತಿಥ್ಯ ಭತ್ಯೆ	2.50 ಲಕ್ಷ	3 ಲಕ್ಷ
ಮುಖ್ಯ ಸಚೇತಕರ ವೇತನ	50 ಸಾವಿರ	70 ಸಾವಿರ
ಮುಖ್ಯ ಸಚೇತಕರ ಆತಿಥ್ಯ ಭತ್ಯೆ	2.50 ಲಕ್ಷ	3 ಲಕ್ಷ
ವಿಪಕ್ಷ ಮುಖ್ಯ ಸಚೇತಕರ ಆತಿಥ್ಯ ಭತ್ಯೆ	2.50 ಲಕ್ಷ	3 ಲಕ್ಷ
ಶಾಸಕರ ವೇತನ	40 ಸಾವಿರ	80 ಸಾವಿರ
ಶಾಸಕರಿಗೆ ಪಿಂಚಣಿ	50 ಸಾವಿರ	75 ಸಾವಿರ
ಹೆಚ್ಚುವರಿ ಪಿಂಚಣಿ	5 ಸಾವಿರ	20 ಸಾವಿರ
ಮಾಜಿ ಶಾಸಕರ ವೈದ್ಯಕೀಯ ಭತ್ಯೆ	5 ಸಾವಿರ	20 ಸಾವಿರ
ಕ್ಷೇತ್ರ ಪ್ರವಾಸಕ್ಕೆ ಭತ್ಯೆ	60 ಸಾವಿರ	80 ಸಾವಿರ
ರೈಲು, ವಿಮಾನ ಟಿಕೆಟ್ (ವಾರ್ಷಿಕ)	2.50 ಲಕ್ಷ	3.50 ಲಕ್ಷ
ಮುಖ್ಯಮಂತ್ರಿ ವೇತನ	75 ಸಾವಿರ	1.50 ಲಕ್ಷ
ಸಚಿವರ ವೇತನ	60 ಸಾವಿರ	1.25 ಲಕ್ಷ
ಮುಖ್ಯಮಂತ್ರಿ, ಸಚಿವರಿಗೆ ಆತಿಥ್ಯ ಭತ್ಯೆ	4.50 ಲಕ್ಷ	5 ಲಕ್ಷ
ಸಚಿವರಿಗೆ ಮನೆ ಬಾಡಿಗೆ ಭತ್ಯೆ	1.20 ಲಕ್ಷ	2.50 ಲಕ್ಷ
ರಾಜ್ಯ ಸಚಿವರ ವೇತನ	50 ಸಾವಿರ	75 ಸಾವಿರ
ರಾಜ್ಯ ಸಚಿವರಿಗೆ ಮನೆ ಬಾಡಿಗೆ ಭತ್ಯೆ	1.20ಲಕ್ಷ	2ಲಕ್ಷ

₹50* ಪ್ರತಿ ಗ್ರಾಂಗೆ ಕಡಿಮೆ
ಚಿನ್ನಾಭರಣವನ್ನು ಖರೀದಿಸುವಾಗ
₹75* ಪ್ರತಿ ಗ್ರಾಂಗೆ ಅಧಿಕ
ಹಳೆಯ ಚಿನ್ನವನ್ನು ಎಕ್ಸ್‌ಚೇಂಜ್ ಮಾಡುವಾಗ
10% ರಿಯಾಯಿತಿ*
ವಜ್ರ ಮತ್ತು ಅನ್‌ಕಟ್ ವಜ್ರದ ಮೌಲ್ಯದ ಮೇಲೆ
(ಸಾಲಿಟೈರ್‌ಗಳನ್ನು ಹೊರತುಪಡಿಸಿ)
25% ರಿಯಾಯಿತಿ*
ಬೆಳ್ಳಿ ಸಾಮಾಗ್ರಿಗಳ ಮಜೂರಿಯ ಮೇಲೆ
10% ರಿಯಾಯಿತಿ*
ಬೆಳ್ಳಿ ಆಭರಣಗಳ MRPಯ ಮೇಲೆ
*ಈ ಆಫರ್ ನಾಣ್ಯಗಳು ಮತ್ತು ಬಾರ್‌ಗಳಿಗೆ ಅನ್ವಯಿಸುವುದಿಲ್ಲ. ಈ ಆಫರ್ ಬೇರೆ ಯಾವುದೇ ಆಫರ್‌ಗಳ ಜೊತೆ ಸೇರಿಸಲಾಗುವುದಿಲ್ಲ. ಸೀಮಿತ ಅವಧಿಯ ಆಫರ್. ಷರತ್ತುಗಳು ಅನ್ವಯಿಸುತ್ತವೆ.
Karnataka I Andhra Pradesh I Telangana I Tamil Nadu I Puducherry II Singapore
STORE LOCATOR
Shop online at: www.grtjewels.com | GRT LIVE VIDEO SHOPPING Shop from the comfort of your home

ಕಂದಾಯ ಭವನ: 'ಡಿಸಿ ಕ್ಯಾಂಟಿನ್'ಗೆ ಬೀಗ

ಬೆಂಗಳೂರು:ಕಂದಾಯ ಭವನದಲ್ಲಿ ಹತ್ತಾರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದ 'ಡಿಸಿ ಕ್ಯಾಂಟಿನ್'ಗೆ ಕಂದಾಯ ಇಲಾಖೆ ಅಧಿಕಾರಿಗಳು ಬುಧವಾರ ಬೀಗ ಹಾಕಿದರು.

ನಗರ ಜಿಲ್ಲಾಧಿಕಾರಿ ಜಗದೀಶ ಅವರ ಆದೇಶದ ಮೇರೆಗೆ ಉತ್ತರ ತಾಲ್ಲೂಕು ತಹಶೀಲ್ದಾರ್ ಮತ್ತು ಸಿಬ್ಬಂದಿ ಬುಧವಾರ ಮುಂಜಾನೆ ಕ್ಯಾಂಟಿನ್ ಮುಚ್ಚಿಸಿ, ಮೊಹರು ಹಾಕಿದರು. ಪರಿಷ್ಕೃತ ಬಾಡಿಗೆ ನೀಡುವ ಕುರಿತು ಬಾಡಿಗೆದಾರರು ಮತ್ತು ಜಿಲ್ಲಾಡಳಿತದ ನಡುವೆ ಮಾತುಕತೆ ಮುರಿದು ಬಿದ್ದಿತ್ತು.

ಕ್ಯಾಂಟಿನ್ ಗುತ್ತಿಗೆ ಅವಧಿ ಮುಗಿದಿದ್ದರಿಂದ, ಗುತ್ತಿಗೆದಾರರು ನವೀಕರಣ ಕುರಿತು ನಗರದ ಸಿಟಿ ಸಿವಿಲ್ ಕೋರ್ಟ್ ಮೊರೆ ಹೋಕ್ಕಿದ್ದರು. ನ್ಯಾಯಾಲಯ, ಜಿಲ್ಲಾಧಿಕಾರಿ ಕಚೇರಿ ಪರ ಆದೇಶ ಹೊರಡಿಸಿತ್ತು. ಅದರಂತೆ ಜಿಲ್ಲಾಡಳಿತ ಕ್ಯಾಂಟಿನ್ ಮಾಲೀಕರಿಗೆ ತೆರವುಗೊಳಿಸಲು ಸೂಚಿಸಿದ್ದರು.

· 10 am to 8 pm · Open All Days · Master / Visa Card Accepted

INNERWEAR · LEISUREWEAR · ACTIVEWEAR · KIDSWEAR · SOCKS

Venues In Bangalore

Kundalahalli Gate: S K R Convention hall, Thubarahalli, Varthur Main Road.
Infantry Road: Safina Plaza, No.84/85.
Jayanagar: Srinivasa Sagar Kalyan Mahal, 2nd block, (Near Ashoka Pillar).
Banshankari: Sri Hari Kalyana Mantap, 30th Main,B.S.K. 3rd Stage, Near K.I.M.S. Hospital.
HSR Layout 6th Sector: White Housse, #4(B) P1 & P2, 14th Main Road, Next to BDA Complex, Bengaluru (This venue starts from tomorrow 21.03.2025 (Friday)
Bannerghatta Road: Billava Bhavana, Next to Royal Meenakshi Mall, Opp. Meenakshi Temple.
R.R. Nagar: Vasavi Mahal Kalyana Mantapa, Next To Reliance Digital, Ideal Homes I Phase.
Vijay Nagar: Five O Gallery 17th Cross, M.C. Road, Near Vijay Nagar Bus Stop.
Rajajinagar: Raja Rajeshwari Kalyan Mantap, Ground Floor, Dr. Rajkumar Road, 2nd Block, Next to Blue Hyundai Showroom.
Malleswaram: The Canara Union, No.42, 8th Main, Canara Union Road.
Nanjappa Circle: Sri Dwaraka Convention Hall, Vidyaranyapura Main Road.
Koramangala: Apoorva International, #35A,Raheja Arcade, Opp Star Box, Bangalore -95
Basavanagudi: Amolak Apparels, #104, Bull Temple Road, Near Ramakrishna Ashram, Bangalore-37

Org. by: Surya Agency Pvt. Ltd.

'ಒಳ ಮೀಸಲಾತಿ: ವಿಳಂಬ ನೀತಿ ಬೇಡ'

ವಿವಿಧ ಬೇಡಿಕೆ ಈಡೇರಿಕೆಗಾಗಿ ಮಾದಿಗ ಸಮುದಾಯಗಳ ಸ್ವಾಭಿಮಾನದ ಒಕ್ಕೂಟದ ನೇತೃತ್ವದಲ್ಲಿ ಪ್ರತಿಭಟನೆ

ಪ್ರತಿಭಟನಾ ಸಮಾವೇಶದಲ್ಲಿ (ಎಡದಿಂದ) ದಲಿತ ಸಂಘರ್ಷ ಸಮಿತಿ ಅಧ್ಯಕ್ಷ ಎನ್.ಮೂರ್ತಿ, ಬಹುಜನ ಸಮಾಜ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ, ಕರ್ನಾಟಕ ಅಹಿಂದ ಸಂಘಟನೆ ರಾಜ್ಯ ಘಟಕದ ಅಧ್ಯಕ್ಷ ಮುತ್ತುರಾಜ್, ವಿಶ್ವ ಆದಿಜಾಂಬವ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಭೀಮರಾಜ್ ಅವರು ಡಾ.ಬಿ.ಆರ್.ಅಂಬೇಡ್ಕರ್, ಬಾಬು ಜಗಜೀವನರಾಮ್, ಕಾನ್ಶಿರಾಮ್ ಹಾಗೂ ಬಿ.ಕೃಷ್ಣಪ್ಪ ಅವರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಳಂಬ ನೀತಿ ಅನುಸರಿಸದೇ ಒಳ ಮೀಸಲಾತಿ ಜಾರಿಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಒಳ ಮೀಸಲಾತಿ ಜಾರಿಗಾಗಿ ಮಾದಿಗ ಸಮುದಾಯಗಳ ಸ್ವಾಭಿಮಾನದ ಒಕ್ಕೂಟದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಪ್ರತಿಭಟನಕಾರರು ಸುಪ್ರೀಂ ಕೋರ್ಟ್ ಆದೇಶದಂತೆ ಸರ್ಕಾರದ ಬಳಿ ಇರುವ ದತ್ತಾಂಶ ಗಳನ್ನು ಪರಿಗಣಿಸಿ, ವಿಳಂಬ ನೀತಿ ಅನುಸರಿಸದೇ ಒಳ ಮೀಸಲಾತಿ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು. ಒಳ ಮೀಸಲಾತಿ ಜಾರಿ ಮಾಡಿ, ಇಲ್ಲವೇ ಖುರ್ಚಿ ಖಾಲಿ ಮಾಡಿ ಎಂಬ ಘೋಷಣೆಗಳನ್ನು ಕೂಗಿದರು.

ಆಲ್ ಇಂಡಿಯಾ ಬಹುಜನ ಸಮಾಜ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಮಾತನಾಡಿ, 'ಮಾದಿಗ ಸಂಬಂಧಿತ ಜಾತಿಗಳು 30 ವರ್ಷಗಳಿಂದ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳ ನೇತೃತ್ವದ ಸರ್ಕಾರಗಳ ಬಾಗಿಲು ತಟ್ಟುತ್ತಿವೆ. ಈಗ ಆ ಬಾಗಿಲುಗಳನ್ನು ಮುರಿಯುವ ಸಮಯ ಬಂದಿದೆ.13 ಜಿಲ್ಲೆಗಳಲ್ಲಿರುವ ಪರಿಶಿಷ್ಟ ಜಾತಿಗಳಾದ ಆದಿಕರ್ನಾಟಕ, ಆದಿದ್ರಾವಿಡ ಮತ್ತು ಆದಿ ಆಂಧ್ರ ಜಾತಿಗಳ ಸಮೀಕ್ಷೆಗೆ ಸರ್ಕಾರ ಕೂಡಲೇ ದಿನಾಂಕ ನಿಗದಪಡಿಸಬೇಕು. ನಿಖರವಾದ ದತ್ತಾಂಶಗಳನ್ನು ಸಂಗ್ರಹಿಸಿ ಒಳಮೀಸಲಾತಿ ಪ್ರಕ್ರಿಯೆಗೆ ಚಾಲನೆ ನೀಡಬೇಕು. ಕಾಂತರಾಜ ಆಯೋಗದ ಜಾತಿವಾರು ಜನಸಂಖ್ಯೆ ವರದಿಯನ್ನು ಜಾರಿಗೊಳಿಸಬೇಕು' ಎಂದು ಒತ್ತಾಯಿಸಿದರು.

'ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಮತ್ತು ಒಳ ಮೀಸಲಾತಿ ವರ್ಗೀಕರಣದ ಶಿಫಾರಸುಗಳನ್ನು ಸಚಿವ ಸಂಪುಟದಲ್ಲಿ ಅಧಿಕೃತಗೊಳಿಸಬೇಕು. ಪರಿಶಿಷ್ಟ ಜಾತಿಗಳ ಮೀಸಲಾತಿ ಪ್ರಮಾಣವನ್ನು ಶೇಕಡ 17ರಷ್ಟು ಹೆಚ್ಚಿಸಿರುವುದರಿಂದ ಜನಸಂಖ್ಯೆಗೆ ಅನುಗುಣವಾಗಿ ಮಾದಿಗ ಮತ್ತು ಸಂಬಂಧಿತ ಜಾತಿಗಳಿಗೆ ಶೇ 7ರಷ್ಟು ಮೀಸಲಾತಿ ನಿಗದಿಪಡಿಸಬೇಕು' ಎಂದು ಒತ್ತಾಯಿಸಿದರು. 'ಬಜೆಟ್‌ನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಟಿಎಸ್‌ಪಿ) ಅನುದಾನವನ್ನು ಜನಸಂಖ್ಯಾವಾರು ಹಂಚಿಕೆ ಮಾಡಬೇಕು' ಎಂದು ಆಗ್ರಹಿಸಿದರು.

22ರಂದು ಮುಖ್ಯಮಂತ್ರಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿಗೆ ಸರ್ಕಾರ ಬದ್ಧವಾಗಿದೆ. ಮಾರ್ಚ್ 22ರಂದು ಈ ಬಗ್ಗೆ ನ್ಯಾಯಮೂರ್ತಿ ನಾಗಮೋಹನದಾಸ್ ಅವರ ಜೊತೆಗೆ ಚರ್ಚಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.



ತಮ್ಮನ್ನು ಬುಧವಾರ ಭೇಟಿ ಮಾಡಿದ ಒಳಮೀಸಲಾತಿ ಹೋರಾಟ ಸಮಿತಿಯ ನಿಯೋಗಕ್ಕೆ ಅವರು ಈ ಆಶ್ವಾಸನೆ ನೀಡಿದರು.

ಎಲ್ಲ ಮಾಹಿತಿ ಪಡೆದ ಬಳಿಕ ಶೀಘ್ರವೇ ಶಾಸಕರು, ಸಚಿವರು, ಮತ್ತು ದಲಿತ ಮುಖಂಡರೊಂದಿಗೆ ಸಭೆ ನಡೆಸಿ ಮಾತುಕತೆ ನಡೆಸುವುದಾಗಿಯೂ ಹೇಳಿದರು.

ಒಳಮೀಸಲಾತಿ ಜಾರಿಗೆ ಮಾದಿಗ ಸಮುದಾಯಗಳ ಸ್ವಾಭಿಮಾನ ಒಕ್ಕೂಟದ ವತಿಯಿಂದ ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಅಲ್ಲಿಗೆ ಬಂದ ಸಚಿವ ಆರ್.ಬಿ. ತಿಮ್ಮಾಪೂರ ಮನವಿಯನ್ನು ಸ್ವೀಕರಿಸಿದ್ದರು. ಮುಖ್ಯಮಂತ್ರಿಯವರೊಂದಿಗೆ ಚರ್ಚೆಗೆ ಹೋರಾಟಗಾರರನ್ನು ಆಹ್ವಾನಿಸಿದ್ದರು. ಅದರಂತೆ ಹೋರಾಟಗಾರರ ನಿಯೋಗ ವಿಧಾನಸೌಧಕ್ಕೆ ತೆರಳಿತ್ತು.

ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, ಅಬಕಾರಿ ಸಚಿವ ಆರ್.ಬಿ. ತಿಮ್ಮಾಪೂರ ಸಭೆಯಲ್ಲಿದ್ದರು.

ನಿಯೋಗದಲ್ಲಿ ಮುಖಂಡರಾದ ಮಾರಸಂದ್ರ ಮುನಿಯಪ್ಪ, ಆರ್. ಮುನಿಯಪ್ಪ, ಎನ್.ಮೂರ್ತಿ, ಗುರುಮೂರ್ತಿ, ಶಿವರಾಯ ಅಕ್ಕರಕಿ, ಕೇಶವಮೂರ್ತಿ, ವೈ.ಸಿ. ಕಾಂಬಳೆ, ಸತೀಶ್ ಚಕ್ರವರ್ತಿ, ಹನುಮಂತಪ್ಪ, ಶ್ರೀನಿವಾಸ್, ಕೆ.ವಿ. ರಾಜು, ಶಾಂತರಾಜು, ಮುತ್ತುರಾಜು ಭಾಗವಹಿಸಿದ್ದರು.

'ಆರ್ಥಿಕ ಸ್ಥಿತಿಗತಿ ಆಧಾರ ವರ್ಗೀಕರಿಸಿ'

ಬೆಂಗಳೂರು: 'ಒಳ ಮೀಸಲಾತಿಗೆ ಸಂಬಂಧಿಸಿದಂತೆ ಜಾತಿಯ ನೆಲೆಗಟ್ಟಿನಲ್ಲಿ ವರ್ಗೀಕರಣ ಮಾಡದೆ, ಕುಟುಂಬಗಳ ಆರ್ಥಿಕ ಸ್ಥಿತಿಗತಿಯ ಆಧಾರದಲ್ಲಿ ವರ್ಗೀಕರಿಸಬೇಕು' ಎಂದು ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಸಂಘ–ಸಂಸ್ಥೆಗಳ ಮಹಾ ಒಕ್ಕೂಟ ಸರ್ಕಾರಕ್ಕೆ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಲೋಲಾಕ್ಷ, 'ನಮ್ಮ ರಾಜ್ಯದಲ್ಲಿ 101 ಪರಿಶಿಷ್ಟ ಜಾತಿಗಳಿವೆ. ಇವರನ್ನು ಜಾತಿಯ ನೆಲೆಯಲ್ಲಿ ಒಡೆಯದೆ, ಕುಟುಂಬದ ಆರ್ಥಿಕ ಸ್ಥಿತಿಗತಿಯ ಆಧಾರದಲ್ಲಿ ಅತ್ಯಂತ ದುರ್ಬಲರು, ದುರ್ಬಲರು ಹಾಗೂ ಸಾಮಾನ್ಯರೆಂದು ವರ್ಗೀಕರಿಸಬೇಕು. ಅತ್ಯಂತ ದುರ್ಬಲ ವರ್ಗದಲ್ಲಿ ಪೌರ ಕಾರ್ಮಿಕರು, ಕೊಳೆಗೇರಿ ನಿವಾಸಿಗಳು, ರೈತರು, ಕುಶಲ ಕರ್ಮಿಗಳು, ಶಿಕ್ಷಕರು, ಕಾರ್ಮಿಕರು, ಸರ್ಕಾರದ 'ಡಿ' ಮತ್ತು 'ಸಿ' ದರ್ಜೆ ನೌಕರರು ಸೇರಿ ₹ 8 ಲಕ್ಷಕ್ಕಿಂತ ಕಡಿಮೆ ವಾರ್ಷಿಕ ವರಮಾನ ಇರುವ ಕುಟುಂಬ ಸೇರಿಸಬೇಕು. ದುರ್ಬಲ ವರ್ಗದಲ್ಲಿ ದೊಡ್ಡ ರೈತರು, ತೋಟಗಳ ಮಾಲೀಕರು, ವೃತ್ತಿಪರರು, ಕಾಲೇಜು ಉಪನ್ಯಾಸಕರು, ಕೈಗಾರಿಕೆಗಳ ಮಾಲೀಕರು ಸೇರಿ ವಾರ್ಷಿಕ ವರಮಾನ ₹ 15 ಲಕ್ಷದೊಳಗಿರುವ ಕುಟುಂಬಗಳನ್ನು ಸೇರಿಸಬೇಕು' ಎಂದು ಆಗ್ರಹಿಸಿದರು.

'ಸಾಮಾನ್ಯ ವರ್ಗದಲ್ಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಅಧಿಕಾರಿಗಳು, ವ್ಯಾಪಾರಸ್ಥರು ಸೇರಿ ಆದಾಯದ ಮಿತಿ ಇಲ್ಲದ ಎಲ್ಲರನ್ನೂ ಸೇರ್ಪಡೆ ಮಾಡಬೇಕು. ಪರಿಶಿಷ್ಟ ಜಾತಿಗಳಿಗೆ ಮೀಸಲಿಟ್ಟಿರುವ ಶೇ 17ರಷ್ಟು ಮೀಸಲಾತಿಯಲ್ಲಿ ಅತ್ಯಂತ ದುರ್ಬಲರಿಗೆ ಶೇ 9 ರಷ್ಟು ಹಾಗೂ ಉಳಿದ ವರ್ಗಗಳಿಗೆ ತಲಾ ಶೇ 4ರಷ್ಟು ಮೀಸಲಾತಿ ಒದಗಿಸಬೇಕು' ಎಂದು ಹೇಳಿದರು.

'ಪರಿಶಿಷ್ಟ ಜಾತಿಗಳನ್ನು ಜಾತಿಯ ನೆಲೆಯಲ್ಲಿಯೇ ಸಣ್ಣಪುಟ್ಟ ಗುಂಪುಗಳನ್ನಾಗಿ ಒಡೆದು, ಶೋಷಿತ ಸಮುದಾಯವನ್ನು ಎಲ್ಲ ಕ್ಷೇತ್ರಗಳಲ್ಲಿ ಇನ್ನಷ್ಟು ದುರ್ಬಲಗೊಳಿಸುವ ಷಡ್ಯಂತ್ರ ಅರ್ಥ ಮಾಡಿಕೊಳ್ಳಬೇಕು. ಆರ್ಥಿಕ ಸ್ಥಿತಿಗತಿಗೆ ಅನುಗುಣವಾಗಿ ವರ್ಗೀಕರಣಕ್ಕೆ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗಕ್ಕೂ ಮನವಿ ಮಾಡಲಾಗಿದೆ' ಎಂದರು.

ಸುಂಕ ವಸೂಲಿ: ಗೋಣಿ ಚೀಲ ಧರಿಸಿ ನಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಗೆ ಒಳಪಡುವ ಕೆ.ಆರ್.ಪುರ ಮಾರುಕಟ್ಟೆಯಲ್ಲಿ ಗುತ್ತಿಗೆದಾರರು ತಮ್ಮ ವ್ಯಾಪ್ತಿ ಮೀರಿ ಸುಂಕ ವಸೂಲಿ ಮಾಡುತ್ತಿದ್ದಾರೆ. ಇದನ್ನು ಖಂಡಿಸಿ ಇದೇ 20ರಿಂದ 27ರವರೆಗೆ ಗೋಣಿ ಚೀಲ ಧರಿಸಿ ನಡಿಗೆ ಹಮ್ಮಿಕೊಳ್ಳಲಾಗಿದೆ' ಎಂದು ಅಖಿಲ ಕರ್ನಾಟಕ ರೈತ ಮತ್ತು ವ್ಯಾಪಾರಿಗಳ ಒಕ್ಕೂಟದ ಅಧ್ಯಕ್ಷ ಎಲೆ ಶ್ರೀನಿವಾಸ್ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಮಾರುಕಟ್ಟೆ ಒಟ್ಟು 5 ಎಕರೆ 20 ಗುಂಟೆ ವಿಸ್ತೀರ್ಣ ಹೊಂದಿದೆ. 2024ರ ಆಗಸ್ಟ್‌ನಲ್ಲಿ ಮಾರುಕಟ್ಟೆಯ 1 ಎಕರೆ 14 ಗುಂಟೆಗೆ ಮಾತ್ರ ಇ-ಟೆಂಡರ್ ಆಗಿದೆ. ಗುತ್ತಿಗೆದಾರರು ನಿಗದಿತ ಪ್ರದೇಶದ ಜತೆಗೆ ಸಂತೆ ಮೈದಾನದಿಂದ ಬಿಬಿಎಂಪಿ ಕಚೇರಿವರೆಗೆ ಅಕ್ರಮವಾಗಿ ಸುಂಕ ವಸೂಲಿ ಮಾಡುತ್ತಿದ್ದಾರೆ. ಬಿಬಿಎಂಪಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಆದ್ದರಿಂದ ಸರಣಿ ಹೋರಾಟಕ್ಕೆ ಮುಂದಾಗಿದ್ದೇವೆ' ಎಂದರು.

'ಕೆ.ಆರ್. ಪುರ ಮಾರುಕಟ್ಟೆಯಿಂದ ಗೋಣಿ ಚೀಲ ಧರಿಸಿ ವಿವಿಧ ಕಚೇರಿಗಳಿಗೆ ಭೇಟಿ ನೀಡಿ ಮನವಿ ಸಲ್ಲಿಸಲಾಗುತ್ತದೆ. 20ರಂದು ಬಿಬಿಎಂಪಿ ಮಹದೇವಪುರ ವಲಯ ಆಯುಕ್ತರಿಗೆ, 21ರಂದು ಬಿಬಿಎಂಪಿ ಪ್ರಧಾನ ಆಯುಕ್ತರಿಗೆ, 24ರಂದು ಪೊಲೀಸ್ ಕಮಿಷನರ್ ಅವರಿಗೆ, 25ರಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ, 26ರಂದು ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ಹಾಗೂ 27ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಪತ್ರ ನೀಡಲಾಗುವುದು' ಎಂದು ಅವರು ಹೇಳಿದರು.

'ಬಿಬಿಎಂಪಿ ಅಧಿಕಾರಿಗಳು ಗುತ್ತಿಗೆದಾರರೊಂದಿಗೆ ಶಾಮೀಲಾಗಿದ್ದಾರೆ. ಇದೇ 10ರಂದು 2 ಎಕರೆ 20 ಗುಂಟೆಗೆ ಟೆಂಡರ್ ಕರೆಯಲಾಗಿದ್ದು, ಪ್ರತಿ ಚದರ ಅಡಿಗೆ ₹ 25.64 ನಿಗದಿಪಡಿಸಲಾಗಿದೆ. ಕಳೆದ ವರ್ಷ ಪ್ರತಿ ಚದರ ಅಡಿಗೆ ₹ 11 ನಿಗದಿಪಡಿಸಿ, ಪ್ರಕ್ರಿಯೆ ನಡೆಸಲಾಗಿತ್ತು. ಈಗ ಅಧಿಕ ಹಣ ಗೊತ್ತುಪಡಿಸಿರುವುದರಿಂದ ಟೆಂಡರ್‌ಗೆ ಯಾರೂ ಆಸಕ್ತಿ ತೋರುತ್ತಿಲ್ಲ' ಎಂದು ದೂರಿದರು.

ರಾಜ್ಯ ಸರ್ಕಾರದಿಂದ ಭೂಮಿ ಹಸ್ತಾಂತರ ವಿಳಂಬ: ವೈಷ್ಣವ್

ಪ್ರಜಾವಾಣಿ ವಾರ್ತೆ

ಅಶ್ವಿನಿ ವೈಷ್ಣವ್

ನವದೆಹಲಿ: ಬೆಂಗಳೂರು ಉಪನಗರ ರೈಲು ಯೋಜನೆ ಕಾಮಗಾರಿಯ ವಿಳಂಬಕ್ಕೆ ರಾಜ್ಯ ಸರ್ಕಾರವನ್ನು ದೂಷಿಸಿರುವ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, 'ರಾಜ್ಯ ಸರ್ಕಾರದಿಂದ ಭೂಮಿ ಹಸ್ತಾಂತರ ವಿಳಂಬವಾಗಿದೆ. ಜತೆಗೆ, ಕೆ–ರೈಡ್‌ಗೆ ಪೂರ್ಣಾವಧಿ ವ್ಯವಸ್ಥಾಪಕ ನಿರ್ದೇಶಕರನ್ನೂ ನೇಮಿಸಿಲ್ಲ' ಎಂದು ಕಿಡಿಕಾರಿದರು.

ಲೋಕಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಅವಧಿಯಲ್ಲಿ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಪ್ರಶ್ನೆಗೆ ಉತ್ತರ ನೀಡಿರುವ ಅವರು, 'ರೈಲ್ವೆ ಇಲಾಖೆಯು ಕೆ–ರೈಡ್‌ಗೆ ಭೂಮಿ ಹಸ್ತಾಂತರ ಮಾಡಿದೆ. ಆದರೆ, ರಾಜ್ಯ ಸರ್ಕಾರದಿಂದ ಭೂಮಿ ಹಸ್ತಾಂತರ ಭಾರಿ ವಿಳಂಬವಾಗಿದೆ' ಎಂದರು.

'ಪ್ರಸ್ತುತ ಕೆ-ರೈಡ್‌ನಲ್ಲಿ ಕರ್ನಾಟಕ ಸರ್ಕಾರದಿಂದ ನೇಮಿಸಲ್ಪಟ್ಟ ಅರೆಕಾಲಿಕ ವ್ಯವಸ್ಥಾಪಕ ನಿರ್ದೇಶಕರು ಯೋಜನೆಯ ಕೆಲಸವನ್ನು ನೋಡಿಕೊಳ್ಳುತ್ತಿದ್ದಾರೆ. ರೈಲ್ವೆ ತಂತ್ರಜ್ಞಾನದ ಬಗ್ಗೆ ಪರಿಣತಿ ಹೊಂದಿರುವ ಪೂರ್ಣಾವಧಿ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಿಸುವ ಅವಶ್ಯಕತೆ ಇದೆ' ಎಂದರು.

'ಬೈಯಪ್ಪನಹಳ್ಳಿ ಮತ್ತು ಚಿಕ್ಕಬಾಣಾವರ ನಡುವಿನ ಕಾರಿಡಾರ್‌ನ 25.01 ಕಿ.ಮೀ ಮತ್ತು ಹೀಲಳಿಗೆ-ರಾಜಾನುಕುಂಟೆ ನಡುವಿನ ಕಾರಿಡಾರ್‌ನ 46.25 ಕಿ.ಮೀ. ಕೆಲಸ ಪ್ರಗತಿಯಲ್ಲಿದೆ. ಕೆಎಸ್‌ಆರ್– ದೇವನಹಳ್ಳಿ ನಡುವಿನ ಕಾರಿಡಾರ್‌ನ 41.4 ಕಿ.ಮೀ. ಮತ್ತು ಕೆಂಗೇರಿ–ವೈಟ್‌ಫೀಲ್ಡ್ ನಡುವಿನ ಕಾರಿಡಾರ್‌ನ 35.52 ಕಿ.ಮೀ ಕಾಮಗಾರಿಗಾಗಿ ಪ್ರಾಥಮಿಕ ಕೆಲಸಗಳು ಪ್ರಾರಂಭವಾಗಿವೆ' ಎಂದು ಹೇಳಿದರು.

ಕಸದ ಘಟಕಕ್ಕೆ ನ್ಯಾಯಾಧೀಶರ ಭೇಟಿ

ದೊಡ್ಡಬೆಳವಂಗಲ (ದೊಡ್ಡಬಳ್ಳಾಪುರ): ತಾಲ್ಲೂಕಿನ ಚಿಗರೇನಹಳ್ಳಿ ಎಂಎಸ್‌ಜಿಪಿ ಕಸ ವಿಲೇವಾರಿ ಘಟಕದ ವಾಸ್ತವ ಸ್ಥಿತಿ ವೀಕ್ಷಿಸಿ ಹೈಕೋರ್ಟ್‌ಗೆ ವರದಿ ನೀಡಲು ಬುಧವಾರ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಭೋಲಾ ಪಂಡಿತ್ ಭೇಟಿ ನೀಡಿ ಪರಿಶೀಲಿಸಿದರು.

ಬಿಬಿಎಂಪಿ ಕಸ ವಿಲೇವಾರಿ ಘಟಕದ ಕಸ ವಿಂಗಡಣೆ, ಬಯಲಿನಲ್ಲಿ ಕಸದ ರಾಶಿ ಹಾಕಿರುವ ಸ್ಥಳ, ಕಸದ ರಾಶಿಯಿಂದ ಹೊರಬರುವ ತ್ಯಾಜ್ಯ ನೀರು ಸಂಗ್ರಹ ಆಗುವ ಕುಂಟೆ, ಗೊಬ್ಬರವಾಗಿ ಪರಿವರ್ತಿಸುವ ಯಂತ್ರಗಳ ಕಾರ್ಯಾಚರಣೆ ಹಾಗೂ ತ್ಯಾಜ್ಯ ನೀರನ್ನು ಸಂಸ್ಕರಿಸುವ ಸ್ಥಳಕ್ಕೂ ಭೇಟಿ ನೀಡಿ ಮಾಹಿತಿ ಪಡೆದರು.

ಗ್ರಾಮಕ್ಕೆ ಭೇಟಿ: ಕಸದ ರಾಶಿಯಿಂದ ಹೆಚ್ಚು ತೊಂದರೆಗೆ ಸಿಲುಕಿರುವ ತಣ್ಣೀರನಹಳ್ಳಿ, ಮೂಡ್ಲಕಾಳೇನಹಳ್ಳಿಗೆ ಭೇಟಿ ನೀಡಿದ ನ್ಯಾಯಾಧೀಶರು, ಗ್ರಾಮದ ಮಹಿಳೆಯರಿಂದ ಮಾಹಿತಿ ಪಡೆದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

Notice is hereby given to the general public that my client is intending to purchase all that immovable property described in the Schedule hereunder from its present owner Mr. **B. RAJASHEKAR, aged about 68 years, son of Mr. H. Kamalanath, presently residing at No. A-1801, "VAISHNAVI TERRACE", J. P. Nagar, Bangalore- 560 078,** who is representing that he is the sole and absolute owner of the Schedule property, he having acquired the same under a Absolute Sale deed dated 06.10.2004 executed by Bangalore Development Authority, **registered as No.BDA-1-08434/2004-05, in Book I, stored in CD No.BDAD60, in the office of the Additional District registrar, Bangalore Urban District, Bangalore** and other than himself no other person/s have any right, title, interest or charge over the Schedule property. Any person/s having any claims, right, title, interest by way of inheritance, sale, mortgage, transfer, lease, tenancy, lien, charge, maintenance, easement, gift, exchange, possession or encumbrances, objection or otherwise in whatsoever manner may intimate/lodge his/her/ their/ objection/s with relevant documentary proof to the undersigned at the address given below within **TEN DAYS** from the date of publication of this notice, failing which any claims from any party/s shall be waived of for all legal purposes and will be presumed that no other person/s has got any claim, right, title, interest or charge over the Schedule property and my client will proceed to complete the Sale transaction.

SCHEDULE:

All that piece and parcel of immovable property being **Vacant site bearing No.261, Property ID No. PID: 3320110268,** formed by the Bangalore Development Authority, situated at 6th Stage, 11th Block, Banashankari, Bangalore **and bounded on the:**
East by : Road;
West by: Site bearing No.265 and 266;
North by : Site bearing No.260;
South by: Site bearing No.262;
measuring East to West 24.00 meters; North to South 15.00 meters, in all measuring a total extent of 360.00 square meters or 4000 square feet.
Dated : 19.03.2025
Bangalore

A. NAGARAJA, Advocate, No. 6, KHB Buildings, II Block, 13th Cross, Indiranagar II Stage, Bangalore - 560 038. Ph:9448067511.

ಕ್ಲಾಸಿಫೈಡ್ಸ್

ADMISSION CORNER

ST. JOHN'S HIGH SCHOOL

132, St. John's Church Road, Bangalore – 560 005
(MANAGED BY CHURCH OF SOUTH INDIA - KARNATAKA CENTRAL DIOCESE)

NURSERY & L.K.G.ADMISSION NOTICE 2025-2026

Nursery & L.K.G Application Forms for the Academic Year 2025-2026 will be available online at the school website: www.johnshighedu.com, Ph: 9739116007

Applications must be submitted online through the website mentioned above.

NURSERY Minimum age : 3 years, Maximum age: 4 years } as on 1st June 2025

L.K.G Minimum age : 4 years, Maximum age: 5 years } as on 1st June 2025

PRINCIPAL

PERSONAL

Change of Name

CHANGE OF NAME
I, **Vikram Singh,** residing at A-103, Kot Byrathi, Byrathi Village, Bidarahalli Hobli, Shivaramkaranatha Nagar Post, Bengaluru-560077, have changed my name to **VIKRAM SINGH CHOUHAN** vide affidavit dated 19-03-2025, sworn before Notary S.I. Balaguru, Bengaluru. Henceforth I shall be called **VIKRAM SINGH CHOUHAN** only

I, MAMATHAMANI RAMESH W/o Ramesh.L, R/at No. 2/427, 17th Cross, 6th main, Aggrahara Dasara Halli, Basaveshwaranagara Bangalore- 560079 have changed my name to MAMATHA MANI T.C vide affidavit dated: 19/03/2025 Before Notary Ravi Bangalore.

I, LAKKAPPA RAMESHA S/o Lakkappa.Y.L, Aged about 60 years, R/at No. 2/427, 17th Cross, 6th main, Aggrahara Dasara Halli, Basaveshwaranagara Bangalore- 560079 have changed my name to RAMESH.L vide affidavit dated: 19/03/2025 Before Notary Ravi Bangalore.

I MOHANA Krishnan W/O, Singaravelan Nallasellan R/o Villa No 166, Trifecta Verde En Resplandor, Jothipura, Mundur Po, Bangalore 560049, Karnataka, India have changed my name to Mohana Singaravelan.

Lost

LOST
I, **B.N. Ramadas,** Residing at No.120/B, 26th Main, 38th B Cross, 9th Block, Jayanagar, Bangalore-69, have lost Original Home allotment letter and possession certificate alloted to my late father S.N. Nagaraj S/o Nagappa by Karnataka Housing Board, Bangalore **Identification / Document No. 1126 of the year 1967-68 dated : 17-07-1967** Finders please contact **9741109478.** or near by police station.

BUILDERS ESSENTIAL

Water Proofing

LEAKAGE...
LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PROPERTY CORNER

ಬಾಡಿಗೆಗೆ ವಾಣಿಜ್ಯ ಕಟ್ಟಡ ಲಭ್ಯ
ಕಚೇರಿ / ಗೋದಾಮು / ವೇರ್‌ಹೌಸ್‌ಗಾಗಿ ಸೂಕ್ತ
ನಂ. 183, 3ನೇ ಕ್ರಾಸ್, ಕೆಂಪೇಗೌಡನಗರ, ಮಾಗಡಿ ರಸ್ತೆ, ಬೆಂಗಳೂರು - 560091 ನಲ್ಲಿ
4 ಮಹಡಿಗಳ 7,200 ಚದರ ಅಡಿ ವಿಸ್ತೀರ್ಣದ ವಾಣಿಜ್ಯ ಕಟ್ಟಡ ಬಾಡಿಗೆಗೆ ಲಭ್ಯವಿದೆ.
ಲಿಫ್ಟ್, ವಿದ್ಯುತ್ ಮತ್ತು ನೀರಿನ ಸೌಲಭ್ಯ ಹೊಂದಿದ್ದು, ಕಚೇರಿ, ಗೋದಾಮು ಅಥವಾ ವೇರ್‌ಹೌಸ್‌ಗೆ ಅನುಕೂಲಕರವಾಗಿದೆ.
ತಕ್ಷಣದ ಪ್ರವೇಶಕ್ಕೆ ಸಿದ್ಧ!.
ಮಾಲೀಕರ ಸಂಪರ್ಕ ಸಂಖ್ಯೆ: 97391 37079

REAL ESTATE SELLING

Residential/ Commercial

Mysore

SENIOR CITIZEN'S homes project near Mysore required Builders for construction of 100 nos Row houses on 2 Acres of converted land on express highway. Contact 9741019028

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂಖ್ಯೆ : ಸಿಎಚ/ಸಿಎನ್/ ಬಿಎನ್‌ಸಿ/95/2025 ದಿನಾಂಕ 17.03.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಸಾಮಗ್ರಿಗಳನ್ನು ಇಳಿಸುವಿಕೆ ಮತ್ತು ಬೆಂಗಳೂರು ನಗರದ ಪಿ.ವೇ ಸ್ಟೋರ್ಸ್ ಡಿಪೋ/ನಿರ್ಮಾಣದಲ್ಲಿ ಸಾಮಗ್ರಿಗಳನ್ನು ಇಳಿಸುವುದು ಸೇರಿದಂತೆ ಇತರ ಕೆಲಸಗಳಾದ ಪಿ.ವೇ ಮತ್ತು ಟಿ & ಪಿ ಸಾಮಗ್ರಿಗಳನ್ನು ಮರು ಪೇರಿಸುವಿಕೆ, ಮಳಿಗೆಗಳ ಆವರಣವನ್ನು ಸ್ವಚ್ಛಗೊಳಿಸುವುದು, ಭದ್ರತಾ ವ್ಯವಸ್ಥೆಯನ್ನು ಒದಗಿಸುವುದು, ಮತ್ತಿತರ ಕೆಲಸಗಳು (ಟೆಂಡರ್ ಉಲ್ಲೇಖ ಸಂಖ್ಯೆ: ಬಿಎನ್‌ಸಿ-198ಆರ್-ಪಿ ವೇ-ಮೆಟೀರಿಯಲ್ಸ್)	ರೂ. 52,95,533/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09-04-2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ ಲಾಗಿನ್ ಮಾಡಿ www.ireps.gov.in

ಉಪ ಮುಖ್ಯ ಅಭಿಯಂತರರು/ನಿರ್ಮಾಣ/ಕಾಮಗಾರಿ, ಬೆಂಗಳೂರು ದಂಡು

ಪಿಯುಬಿ/858/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2024-25

South Western Railway - SWR SWRRLY SWRRLY

PUBLIC NOTICE FOR LOST DOCUMENTS

The General Public is her by informed that my client intends to enter into a Joint Development Agreement with **Mr. Julius Felix Sequeira ("Owner")** aged about 72 years s/o late L.M.E. Sequeira residing at #21 Palmlands, Doddagubbi Main Road, Bengaluru – 560077, in respect of sites which are more fully described hereunder measuring East to West: 255 ft & North to South:49.5 ft, in all measuring **12,622.5 sq.ft.**, all situated at Byrathi Village, Bidarahalli Hobli, Bangalore East Taluk and bounded on the East by: Hennur main road, West by: Private property, North by: C.S.I. Church and South by: Babu Reddy's property.
The Owner has represented to our client that he has **lost/misplaced the following original documents** and the same are not traceable till date:

Property No.	Measurement	Particulars and Date	Document No.	Sub-Registrar's Office
For 7 Sites	12,622.5 sq.ft.	Gift Deed dated 26.10.2017	03367/ 2017-18	Bidarahalli, Bengaluru.
House List No.116, Katha No.38/170	3000 sq.ft.	Release Deed dated 06.08.2004	12933/ 2004-05	K.R. Puram, Bengaluru.
House List No.171/1	2400 sq.ft.	Release Deed dated 06.08.2004	12935/ 2004-05	K.R. Puram, Bengaluru.
House List No.116, Katha No.38/170	3000 sq.ft.	Sale Deed dated 04.02.1999	7765/ 1998-99	K.R. Puram, Bengaluru.
House List No.171/1	2400 sq.ft.	Sale Deed dated 04.02.1999	7766/ 1998-99	K.R. Puram, Bengaluru.
103, Katha No.280/103	1200 sq.ft.	Sale Deed dated 07.03.2012	11367/ 2011-12	Shivajinagar (Banaswadi), Bengaluru.
Katha No.436	1200 sq.ft.	Sale Deed dated 23.09.2004	17542/ 2004-05	K.R. Puram, Bengaluru.
No.359/1361-38/170	1200 sq.ft.	Sale Deed dated 05.02.2014	15164/ 2013-14	Shivajinagar (Banaswadi), Bengaluru.
No.358/430/1-38/170	1200 sq.ft.	Sale Deed dated 05.02.2014	15167/ 2013-14	Shivajinagar (Banaswadi), Bengaluru.
Property No.103/1, Katha No.714/103/1	2204 sq.ft.	Sale Deed dated 05.02.2014	15193/ 2013-14	Shivajinagar (Banaswadi), Bengaluru.
House List No.118, Katha No.38/172	2052 sq.ft.	Sale Deed dated 06.08.2004	12930/ 2004-05	
GPA related to the Release Deed executed by Kenneth & others in favour of Margaret Correya				

A lost article report has been filed with the Karnataka State Police and the acknowledgement bearing Nos.1490516/2025 dated 22.02.2025, No.1490550/2025 dated 22.02.2025, No.1490583/2025 dated 22.02.2025 and No.1490596/2025 dated 22.02.2025 has been issued by the Bengaluru Rural Police, Bengaluru- 560077

Any person in possession of the above referred original documents may kindly hand over the same to the undersigned. Except Mr. Julius Felix Sequeira, no other person/s has/have any share, right, title, interest and ownership over the aforesaid immovable property. Any person or persons dealing with the aforesaid property other than Mr. Julius Felix Sequeira, shall be doing so at their own risk, cost and consequence.

Place: Bengaluru
Date: 19/03/2025

VIVEK ANAND ANTHONY BRITTO
VIR ANTHONY BRITTO
Advocates
No. 633, Daisville, 5th Main, Indiranagar II Stage, Bengaluru - 560038.

IN THE COURT OF XXXV ADDL. CITY CIVIL AND SESSIONS JUDGE, BANGALORE
O.S. No.8103/2024 (CCH-36)

PLAINTIFF: 1. SMT. B.SHANTHA, W/o. M. Munindra, **2. Mr. M. SANJAY,** S/o. M. Munindra, Both are Residing at #49, Rajiv Gandhi Layout, Marenahalli Layout, Vijaya Nagara, Bengaluru-560040. **-V/s-**
DEFENDANT: Sri. Muniyappa, S/o Subbanna

NOTICE/SUMMONS TO DEFENDANTS

To, **Mr. Muniyappa,** S/o Subbanna, No.43, 2nd Main, Marenahalli Kempapura Agrahara, Bangalore 560 040 ... **DEFENDANT**

NOTICE

WHEREAS, the Plaintiff's have instituted a suit against you, a Plaint under Order VII Rule 1 read with Section 26 of the Code of Civil Procedure for declaration that the Plaintiffs are the owners of the suit schedule property and directing the defendant to register the plaintiffs as khatedars and issue khata in respect of the suit schedule property.

You are hereby summoned to appear in this court on **05-04-2025** at 11.00 A.M in person or through advocate/pleader to answer the questions to the same, failing which the suit will be heard and disposed as Ex-parte.

SCHEDULE

House Property Situated survey No.359/2 House No. 49, BBMP old ward No. 32 and New ward No. 132, Kempapura Agrahara, Marenahalli, Rajiv Gandhi Layout, Bangalore North Taluk, Bangalore. **East:** Present Government Road, **West:** Road, **North:** Site With No.47, **South:** Others Property

Given under my hand and seal of the court on 18-03-2025

By order of the court, Senior Sheristedar, City Civil Court at Bangalore.

Advocate For Plaintiffs: **Mr. C.R. RAJAGOPAL** L/80, 4th Main, 10th Cross, Lakshminarayanapura, Bangalore 560 021. Mob. No.9448603061

ಕರವೇ ಸಹಿತ ವಿವಿಧ ಸಂಘಟನೆಗಳ ನಿರಾಕರಣೆ ● ಕೆಲ ಸಂಘಟನೆಗಳ ಸಹಕಾರ

22ರ 'ಕರ್ನಾಟಕ ಬಂದ್'ಗೆ ಸಿಗದ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್ ನಿರ್ವಾಹಕರಿಗೆ ಮಸಿ ಬಳಿದು ಹಲ್ಲೆ ಮಾಡಿರುವುದನ್ನು ಖಂಡಿಸಿ ವಾಟಾಳ್ ನಾಗರಾಜ್ ನೇತೃತ್ವದ ಗುಂಪು ಮಾರ್ಚ್ 22ರಂದು ನಡೆಸಲು ಕರೆಕೊಟ್ಟಿರುವ ಕರ್ನಾಟಕ ಬಂದ್‌ಗೆ ಪ್ರಮುಖ ಸಂಘಟನೆಗಳು ಬೆಂಬಲ ನೀಡಿಲ್ಲ. ಮುಗಿದು ಹೋದ ಪ್ರಕರಣ ಇಟ್ಟುಕೊಂಡು ಬಂದ್ ಮಾಡುತ್ತಿರುವುದು ಸರಿಯಲ್ಲ ಎಂದು ಕರ್ನಾಟಕ ರಕ್ಷಣಾ ವೇದಿಕೆ ತಿಳಿಸಿದೆ.

ಬಸ್ ನಿರ್ವಾಹಕನ ಮೇಲೆ ಹಲ್ಲೆ ನಡೆದಾಗ ಬೆಳಗಾವಿಗೆ ಹೋಗಿ ದೊಡ್ಡ ಸ್ವರೂಪದ ಚಳವಳಿ ನಡೆಸಲಾಗಿತ್ತು. ಸುಳ್ಳು ಪೋಕ್ಸೊ ದೂರನ್ನು ವಾಪಸ್ ಪಡೆಯುವಂತೆ ಮಾಡಲಾಗಿತ್ತು. ಮೊಕದ್ದಮ ದಾಖಲಿಸಿಕೊಂಡಿದ್ದ ಇನ್‌ಸ್ಪೆಕ್ಟರ್ ಅವರನ್ನು ವರ್ಗಾವಣೆ ಮಾಡಿದ್ದಾರೆ. ಕನ್ನಡಿಗರ ಮೇಲೆ ದೌರ್ಜನ್ಯ ನಡೆಯದಂತೆ ನೋಡಿಕೊಳ್ಳುವುದಾಗಿ ಪೊಲೀಸ್ ಕಮಿಷನರ್ ಭರವಸೆ ನೀಡಿದ್ದಾರೆ. ಹೀಗಿರುವಾಗ ಬಂದ್ ಮಾಡುವ ಅಗತ್ಯ ಇರುವುದಿಲ್ಲ ಎಂದು ಕರವೇ ಅಧ್ಯಕ್ಷ ಟಿ.ಎ. ನಾರಾಯಣ ಗೌಡ, ಪ್ರಧಾನ ಕಾರ್ಯದರ್ಶಿ ಬಿ. ಸಣ್ಣೀರಪ್ಪ ತಿಳಿಸಿದ್ದಾರೆ.

ಮಹಾರಾಷ್ಟ್ರದಲ್ಲಿ ಕರ್ನಾಟಕದ ಬಸ್‌ಗಳ ಮೇಲೆ, ನೌಕರರ ಮೇಲೆ ದಾಳಿ ನಡೆದರೆ ಉತ್ತರ ನೀಡಲು ಚಳವಳಿ ಸಿದ್ಧವಿದೆ. ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ 'ಕರ್ನಾಟಕ ಬಂದ್' ಕರೆಗಳಿಗೆ ಕರವೇ ಕೈಜೋಡಿಸಿಲ್ಲ. ಹೋರಾಟಗಾರರ ಕೊನೆಯ ಅಸ್ತ್ರ ಬಂದ್ ಆಗಬೇಕೇ ಹೊರತು ಎಲ್ಲದಕ್ಕೂ ಬಂದ್ ಪರಿಹಾರವಲ್ಲ. ಮಕ್ಕಳಿಗೆ ಪರೀಕ್ಷೆ ನಡೆಯುತ್ತಿದೆ. ದುಡಿದು ತಿನ್ನುವವರಿಗೆ ಬಂದ್‌ನಿಂದ ತೊಂದರೆಯಾಗುತ್ತದೆ. ಕೆಪಿಎಸ್‌ಸಿ ಪರೀಕ್ಷೆ ಬರೆದಿರುವ ಕನ್ನಡ ಮಾಧ್ಯಮದ 70 ಸಾವಿರ ಅಭ್ಯರ್ಥಿಗಳು ತೊಂದರೆಯಲ್ಲಿದ್ದಾರೆ. ಈ ಬಗ್ಗೆ ಚಳವಳಿ ರೂಪಿಸಲಾಗುತ್ತಿದೆ. ವಾಟಾಳ್ ಅವರ ಬಗ್ಗೆ ಗೌರವ ಇಟ್ಟುಕೊಂಡೇ ಬಂದ್‌ನಿಂದ ದೂರ ಉಳಿಯುತ್ತೇವೆ' ಎಂದು ಸ್ಪಷ್ಟಪಡಿಸಿದ್ದಾರೆ.

'ಮೇಕೆದಾಟು ಯೋಜನೆಗಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಮೊದಲು ಪಾದಯಾತ್ರೆ ಮಾಡಿತ್ತು. ಈಗ ಅದರ ಬಗ್ಗೆ ಮಾತನಾಡುತ್ತಿಲ್ಲ. ಕೇಂದ್ರ ಸರ್ಕಾರ ಕೂಡ ಅನುಮತಿ ನೀಡುತ್ತಿಲ್ಲ. ಇದರ ವಿರುದ್ಧ ಮಾರ್ಚ್ 21ರಿಂದ ಪಾದಯಾತ್ರೆ ಮಾಡುತ್ತಿದ್ದೇವೆ. ಕರ್ನಾಟಕ ಬಂದ್‌ಗೆ ಬೆಂಬಲಿಸುವ ಬಗ್ಗೆ ಸದ್ಯ ತೀರ್ಮಾನ ಕೈಗೊಂಡಿಲ್ಲ' ಎಂದು ಕರವೇ ಪ್ರವೀಣ್ ಶೆಟ್ಟಿ ಬಣದ ಅಧ್ಯಕ್ಷ ಪ್ರವೀಣ್ ಶೆಟ್ಟಿ ತಿಳಿಸಿದ್ದಾರೆ.

ನೈತಿಕ ಬೆಂಬಲ: ಹೋಟೆಲ್ ಬಂದ್ ಮಾಡುವುದಿಲ್ಲ. ಕಪ್ಪು ಪಟ್ಟಿ ಧರಿಸಿ ಕಾರ್ಮಿಕರು ಕೆಲಸ ಮಾಡಲಿದ್ದಾರೆ ಎಂದು ಹೋಟೆಲ್ ಮಾಲೀಕರ ಅಸೋಸಿಯೇಶನ್ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದ್ದಾರೆ.

ಬಸ್ ಸಂಚಾರ ಬಂದ್ ಮಾಡುವ ಬಗ್ಗೆ ತೀರ್ಮಾನ ಕೈಗೊಂಡಿಲ್ಲ. ನೈತಿಕ ಬೆಂಬಲವಿದೆ ಎಂದು ರಾಜ್ಯ ಬಸ್ ಮಾಲೀಕರ ಸಂಘದ ಅಧ್ಯಕ್ಷ ಎಸ್. ನಟರಾಜ ಶರ್ಮ ತಿಳಿಸಿದ್ದಾರೆ.

ವರ್ಷಪೂರ್ತಿ ಓದಿ ಈಗ ಅಂತಿಮ ಪರೀಕ್ಷೆ ಬರೆಯುವ ಹಂತದಲ್ಲಿ ವಿದ್ಯಾರ್ಥಿಗಳಿದ್ದಾರೆ. ಅವರಿಗೆ ತೊಂದರೆಯಾಗದಂತೆ ನೈತಿಕ ಬೆಂಬಲ ನೀಡಲಾಗುವುದು ಎಂದು ಖಾಸಗಿ ಶಾಲಾ ವಾಹನಗಳ ಚಾಲಕರ ಯೂನಿಯನ್ ಅಧ್ಯಕ್ಷ ಜಿ. ರವಿಕುಮಾರ್ ಹೇಳಿದ್ದಾರೆ.

ಬಂದ್‌ಗೆ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದು ಓಲಾ ಉಬರ್ ಡ್ರೈವರ್ಸ್ ಅಂಡ್ ಓನರ್ಸ್ ಅಸೋಸಿಯೇಷನ್ ಉಪಾಧ್ಯಕ್ಷ ಅಶೋಕ್, ಸಾರಥಿ ಆಟೊ ಚಾಲಕರ ಸಂಘದ ಅಧ್ಯಕ್ಷ ರಾಮೇಗೌಡ ತಿಳಿಸಿದ್ದಾರೆ.

ಮಾರಕಾಸ್ತ್ರ ಝಳಪಿಸಿ ವ್ಹೀಲಿ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರಕಾಸ್ತ್ರ ಝಳಪಿಸಿಕೊಂಡು ದ್ವಿಚಕ್ರ ವಾಹನದಲ್ಲಿ ವ್ಹೀಲಿ ಮಾಡಿದ್ದ ಇಬ್ಬರು ಆರೋಪಿಗಳನ್ನು ನಗರದ ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಹೇಶ್ (19) ಹಾಗೂ ಮಂಜುನಾಥ್ (19) ಬಂಧಿತರು. ಮಾರ್ಚ್ 15ರಂದು ಹೊರ ವರ್ತುಲ ರಸ್ತೆಯ ಚೌಡೇಶ್ವರಿನಗರ ಬಸ್ ನಿಲ್ದಾಣದ ಬಳಿ ಮಾರಕಾಸ್ತ್ರವನ್ನು ರಸ್ತೆಗೆ ಉಜ್ಜುತ್ತಾ, ಸ್ಕೂಟರ್‌ನಲ್ಲಿ ವ್ಹೀಲಿ ಮಾಡುತ್ತ ಸಾಗಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಇಬ್ಬರೂ ಆರೋಪಿಗಳನ್ನು ಪತ್ತೆ ಹಚ್ಚಿ ಬಂಧಿಸಿದ್ದಾರೆ. ಆರೋಪಿಗಳು ತಮ್ಮ ಬಡಾವಣೆಯಲ್ಲಿ ಭಯ ಸೃಷ್ಟಿಸುವ ಉದ್ದೇಶದಿಂದ ಕೃತ್ಯ ಎಸಗಿರುವುದು ಪ್ರಾಥಮಿಕ ವಿಚಾರಣೆಯಲ್ಲಿ ತಿಳಿದು ಬಂದಿದೆ. ಶಸ್ತ್ರಾಸ್ತ್ರಕಾಯ್ದೆಗಳಡಿ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತ್ಯೇಕ ಪ್ರಕರಣವೊಂದರಲ್ಲಿ, ರಾಜಾನುಕುಂಟೆ-ಕಾಕೋಳು ರಸ್ತೆಯಲ್ಲಿ ಬೈಕ್ ವ್ಹೀಲಿ ಮಾಡಿದವರ ವಿರುದ್ಧ ರಾಜಾನುಕುಂಟೆ ಪೊಲೀಸರು ಪ್ರಕರಣ ದಾಖಲಿಸಿ, ಎರಡು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿ, ನಾಲ್ವರನ್ನು ಬಂಧಿಸಿದ್ದರು.

ಅಪರಾಧ ಸುದ್ದಿ

ಬೈಕ್‌ನಿಂದ ಬಿದ್ದು ಬಾಲಕ ಸಾವು

ಬೆಂಗಳೂರು: ಬಿನ್ನಿ ಮಿಲ್ ರಸ್ತೆಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಬೈಕ್‌ನಿಂದ ಬಿದ್ದು ಚರಣ್ (14) ಮೃತಪಟ್ಟಿದ್ದು, ಹಿಂಬದಿ ಸವಾರ ಅಖಿಲ್ ಗಾಯಗೊಂಡಿದ್ದಾರೆ.

ಬಿನ್ನಿ ಮಿಲ್ ರಸ್ತೆಯಲ್ಲಿ ಮಂಗಳವಾರ ಮಧ್ಯಾಹ್ನ ಈ ಘಟನೆ ನಡೆದಿದೆ. ಸ್ನೇಹಿತರ ಬೈಕ್ ಪಡೆದು ಓಡಿಸುತ್ತಿದ್ದ ವೇಳೆ ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದ್ದಾರೆ. ಘಟನೆಯಲ್ಲಿ ಗಾಯಗೊಂಡ ಇಬ್ಬರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆಗೆ ಸ್ಪಂದಿಸದೆ ಚರಣ್ ಮೃತಪಟ್ಟರು. ಅಖಿಲ್ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಬ್ಬರು ಹೆಲ್ಮೆಟ್ ಧರಿಸಿರಲಿಲ್ಲ ಎಂದು ಪೊಲೀಸರು ತಿಳಿಸಿದರು.

ಚಾಮರಾಜಪೇಟೆ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಇಬ್ಬರು ಸುಲಿಗೆಕೋರರ ಬಂಧನ

ಬೆಂಗಳೂರು: ವಾಹನ ಚಾಲಕನಿಂದ ಹಣ ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಮಾದನಾಯಕನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶಿವಾನಂದ ಮತ್ತು ನಿಖಿಲ್ ಬಂಧಿತ ಆರೋಪಿಗಳು. ಮಾರ್ಚ್ 14 ರಂದು ರಾಮು ಅವರು ನಂದಿನಿ ಬೂತ್‌ಗಳಿಗೆ ಹಾಲು, ಮೊಸರು ಕೊಡಲು ಹೋಗುತ್ತಿದ್ದಾಗ ಅವರ ಬೈಕ್ ತಡೆದು, ₹1.28 ಲಕ್ಷ ಹಣ ಸುಲಿಗೆ ಮಾಡಿದ್ದರು. ಬೂತ್‌ಗಳಿಂದ ಸಂಗ್ರಹಿಸಿದ್ದ ಹಣವನ್ನು ತೆಗೆದುಕೊಂಡು ಚಿಕ್ಕಬಿದರಕಲ್ಲು ಕಡೆಯಿಂದ ತುಮಕೂರಿಗೆ ಹೊರಟಿದ್ದರು ಎಂದು ಪೊಲೀಸರು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಟಿಕೆಟ್ ರಹಿತ ಪ್ರಯಾಣ 2,820 ಮಂದಿಗೆ ದಂಡ

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಮಾರ್ಚ್ ತಿಂಗಳಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸಿದ 2,820 ಪ್ರಯಾಣಿಕರಿಗೆ ದಂಡ ವಿಧಿಸಲಾಗಿದೆ.

ಮಾರ್ಚ್ ತಿಂಗಳಲ್ಲಿ 18,051 ಟ್ರಿಪ್‌ಗಳನ್ನು ತಪಾಸಣೆ ನಡೆಸಲಾಗಿತ್ತು. ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದವರನ್ನು ಪತ್ತೆ ಹಚ್ಚಿ, ಅವರಿಂದ ₹6,40,035 ದಂಡ ವಸೂಲಿ ಮಾಡಲಾಯಿತು. ಕರ್ತವ್ಯ ಲೋಪವೆಸಗಿದ ಕಾರಣಕ್ಕಾಗಿ ಸಂಸ್ಥೆಯ 1,613 ನಿರ್ವಾಹಕರ ವಿರುದ್ಧ ಪ್ರಕರಣಗಳು ದಾಖಲಾಗಿವೆ. ಮಹಿಳಾ ಪ್ರಯಾಣಿಕರಿಗೆಂದೇ ಮೀಸಲಾಗಿರುವ ಆಸನಗಳಲ್ಲಿ ಕುಳಿತು ಪ್ರಯಾಣಿಸಿದ 310 ಪುರುಷ ಪ್ರಯಾಣಿಕರಿಗೆ ₹5,31,000 ದಂಡ ವಿಧಿಸಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಲೇಸರ್ ಮೆಡಿಸಿನ್, ಶಸ್ತ್ರಚಿಕಿತ್ಸೆ ಸಮಾವೇಶ ಇಂದಿನಿಂದ

ಬೆಂಗಳೂರು: ಕ್ಯೂಟಿಸ್ ಆಸ್ಪತ್ರೆಯು ಇದೇ 20ರಿಂದ 23ರವರೆಗೆ ನಗರದ ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ಲೇಸರ್ ಮೆಡಿಸಿನ್ ಮತ್ತು ಶಸ್ತ್ರಚಿಕಿತ್ಸೆ ಬಗ್ಗೆ ಅಂತರರಾಷ್ಟ್ರೀಯ ಸಮಾವೇಶ ಹಮ್ಮಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಾವೇಶದ ಪ್ರಧಾನ ಕಾರ್ಯದರ್ಶಿ ಡಾ.ಬಿ.ಎಸ್. ಚಂದ್ರಶೇಖರ್, 'ಈ ಸಮಾವೇಶವನ್ನು ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಉದ್ಘಾಟಿಸುತ್ತಾರೆ. ದೇಶ–ವಿದೇಶಗಳ 1,100 ವೈದ್ಯ ಪ್ರತಿನಿಧಿಗಳು ಪಾಲ್ಗೊಂಡು, ಚರ್ಮದ ಸಮಸ್ಯೆಗಳಿಗೆ ಲಭ್ಯವಿರುವ ಆಧುನಿಕ ತಂತ್ರಜ್ಞಾನ ಆಧಾರಿತ ಚಿಕಿತ್ಸೆ ಕುರಿತು ಮಾಹಿತಿ ವಿನಿಮಯ ಮಾಡಿಕೊಳ್ಳಲಿದ್ದಾರೆ. ಭಾರತ ಮತ್ತು ಪ್ರಪಂಚದಾದ್ಯಂತ ನೆಲೆಸಿರುವ ಚರ್ಮರೋಗ ತಜ್ಞರು ನೀಡುವ ಲೇಸರ್ ಮತ್ತು ಉನ್ನತ ಮಟ್ಟದ ಚಿಕಿತ್ಸೆಯನ್ನು ಪರಿಚಯಿಸಲು ಈ ಸಮಾವೇಶ ಆಯೋಜಿಸಲಾಗಿದೆ' ಎಂದರು.

ಮೂರು ದಿನ ಯೋಗ ಶಿಬಿರ

ಬೆಂಗಳೂರು: ಬನಶಂಕರಿ ಆತ್ಮ ದರ್ಶನ ಯೋಗಾಶ್ರಮ ವತಿಯಿಂದ ಮಾರ್ಚ್ 21 ರಿಂದ 23ರ ವರೆಗೆ ಉಚಿತ ಯೋಗ ಶಿಬಿರವನ್ನು ಜಯನಗರದಲ್ಲಿರುವ ಶಾಲಿನಿ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 6:30 ರಿಂದ 8:30, ಸಂಜೆ 5:30ರಿಂದ 7:30ರ ವರೆಗೆ ನಡೆಯುವ ಈ ಕಾರ್ಯಕ್ರಮ ಮುಂಗೇರ್ ಗಂಗಾದರ್ಶನ ವಿಶ್ವಯೋಗ ಪೀಠದ ಸ್ವಾಮಿ ನಿರಂಜನಾನಂದ ಸರಸ್ವತಿ ಅವರ ಮಾರ್ಗದರ್ಶನದಲ್ಲಿ ನಡೆಯಲಿದೆ. ಮಾಹಿತಿಗೆ 9611585054, 9611404770 ಸಂಪರ್ಕಿಸಬಹುದು.

ಕಾರು ಡಿಕ್ಕಿ: ಮಗು ಸಾವು, ಚಾಲಕ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ದಾಟುತ್ತಿದ್ದ ವೇಳೆ ಕಾರು ಡಿಕ್ಕಿ ಹೊಡೆದ ಪರಿಣಾಮ ನಾಲ್ಕು ವರ್ಷದ ಮಗು ಸ್ಥಳದಲ್ಲೇ ಮೃತಪಟ್ಟ ಘಟನೆ ಪುಲಕೇಶಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಂಗಳವಾರ ನಡೆದಿದೆ.

ಪ್ರಕರಣ ಸಂಬಂಧ ಪೊಲೀಸರು, ಚಾಲಕನನ್ನು ಬಂಧಿಸಿ, ಕಾರು ವಶಕ್ಕೆ ಪಡೆದಿದ್ದಾರೆ.

'ಲಾಜರ್ ರಸ್ತೆ ಪಕ್ಕದಲ್ಲೇ ಮನೆಯಿದ್ದು, ಪೋಷಕರು ತಮ್ಮ ಕೆಲಸದಲ್ಲಿ ನಿರತರಾಗಿದ್ದರು. ಆಟವಾಡುತ್ತಿದ್ದ ಮಗು ಶ್ರೀನಿವಾಸ್, ಮತ್ತೊಂದು ಬದಿಗೆ ಹೋಗಲು ಏಕಾಏಕಿ ರಸ್ತೆಗೆ ಬಂದಾಗ ಈ ಮಾರ್ಗದಲ್ಲಿ ಬಂದ ಕಾರು ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡು ಮಗು ಸ್ಥಳದಲ್ಲೇ ಮೃತಪಟ್ಟಿತು' ಎಂದು ಪೊಲೀಸರು ತಿಳಿಸಿದ್ದಾರೆ.

ಪಾಕ್ ಪರ ಗೋಡೆಬರಹ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಸಾದಿಕ್ ಸಾಬ್

ಹೈಮದ್ ಹುಸೇನ್

ಬಿಡದಿ (ರಾಮನಗರ): ಇಲ್ಲಿನ ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಂಪನಿಯೊಂದರ ಶೌಚಾಲಯದಲ್ಲಿ ಪಾಕಿಸ್ತಾನ ಪರ ಘೋಷಣೆ ಹಾಗೂ ಕನ್ನಡಿಗರನ್ನು ನಿಂದಿಸಿದ್ದ ಗೋಡೆ ಬರಹ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಡದಿ ಠಾಣೆ ಪೊಲೀಸರು ಬುಧವಾರ ಕಂಪನಿಯ ಇಬ್ಬರು ಹೊರಗುತ್ತಿಗೆ ಉದ್ಯೋಗಿಗಳನ್ನು ಬಂಧಿಸಿದ್ದಾರೆ.

ಕಲಬುರಗಿ ಜಿಲ್ಲೆ ಆಳಂದ ತಾಲ್ಲೂಕಿನ ನಿಂಬರಗ ಗ್ರಾಮದ ಸಾದಿಕ್ ಸಾಬ್ (20) ಮತ್ತು ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ಖಾನಾಪುರ ಎಸ್.ಕೆ ಗ್ರಾಮದ ಹೈಮದ್ ಹುಸೇನ್ (24) ಬಂಧಿತರು. ಇಬ್ಬರೂ ಕೆಂಗೇರಿ ಉಪನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು.

ಛೇಡಿಸಿದ್ದಕ್ಕೆ ಕೃತ್ಯ: ಈಚೆಗೆ ನಡೆದಿದ್ದ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್‌ನಲ್ಲಿ ಭಾರತ ತಂಡ ಫೆ.23ರಂದು ಪಾಕಿಸ್ತಾನವನ್ನು ಸೋಲಿಸಿತ್ತು. ಇದೇ ವಿಷಯಕ್ಕೆ ಕೆಲ ಸಹೋದ್ಯೋಗಿಗಳು ಆರೋಪಿಗಳನ್ನು ಆಗಾಗ ಛೇಡಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದರು.

ಇದೇ ವಿಷಯಕ್ಕೆ ಆರೋಪಿಗಳು ಮತ್ತು ಅವರ ಮಧ್ಯೆ ಬಿಸಿ ಬಿಸಿ ಚರ್ಚೆಯೂ ನಡೆದಿತ್ತು. ಆಗ ಎದುರಾಳಿಗಳು ಇವರಿಬ್ಬರ ಬಾಯಿ ಮುಚ್ಚಿಸಿದ್ದರು. ಅದನ್ನೇ ಮನಸ್ಸಿನಲ್ಲಿಟ್ಟುಕೊಂಡಿದ್ದ ಆರೋಪಿಗಳಿಬ್ಬರು ತಮ್ಮನ್ನು ಛೇಡಿಸಿದವರಿಗೆ ತಿರುಗೇಟು ನೀಡುವುದಕ್ಕಾಗಿ ಮಾರ್ಚ್ 14ರಂದು ಬೆಳಗ್ಗೆ ಶೌಚಾಲಯಕ್ಕೆ ಹೋಗಿದ್ದಾಗ ಗೋಡೆ ಮೇಲೆ, 'ಪಾಕಿಸ್ತಾನಕ್ಕೆ ಜೈ, ಪಾಕಿಸ್ತಾನಕ್ಕೆ ಜಯವಾಗಲಿ' ಎಂಬ ಘೋಷಣೆಗಳ ಜೊತೆಗೆ, ಕನ್ನಡಿಗರನ್ನು ಕೆಟ್ಟದಾಗಿ ನಿಂದಿಸಿ ಬರೆದಿದ್ದರು.

ಬಹಿರಂಗವಾಗುತ್ತಿದ್ದಂತೆ ದೂರು: ಪಾಕ್ ಪರ ಗೋಡೆ ಬರಹ ವಿಷಯ ಸಾರ್ವಜನಿಕವಾಗುತ್ತಿದ್ದಂತೆ ಎಚ್ಚೆತ್ತುಕೊಂಡ ಆಡಳಿತ ಮಂಡಳಿಯು, ಕೃತ್ಯ ಎಸಗಿದವರನ್ನು ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳುವಂತೆ ಠಾಣೆಗೆ ದೂರು ನೀಡಿತ್ತು.

ಹಣಕ್ಕಾಗಿ ಹಿಂಸೆ: ಪತ್ನಿ ವಿರುದ್ಧ ದೂರು

ಬೆಂಗಳೂರು: ಹಣಕ್ಕಾಗಿ ಪತ್ನಿ ಮತ್ತು ಆಕೆಯ ಕುಟುಂಬಸ್ಥರು ಮಾನಸಿಕ, ದೈಹಿಕ ಹಿಂಸೆ ನೀಡುತ್ತಿದ್ದಾರೆ ಎಂದು ಆರೋಪಿಸಿ, ಸಾಫ್ಟ್‌ವೇರ್ ಉದ್ಯೋಗಿ ಶ್ರೀಕಾಂತ್ ಅವರು ವೈಯಾಲಿಕಾವಲ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪೊಲೀಸರು ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಿದ್ದಾರೆ.

'2022ರಲ್ಲಿ ಮೈಸೂರಿನ ಯುವತಿಯನ್ನು ಮದುವೆಯಾಗಿದ್ದು, ನಿತ್ಯ ಕಿರುಕುಳ ನೀಡುತ್ತಿದ್ದಾಳೆ. ನಾನು ದುಡಿದ ಹಣವೆಲ್ಲವನ್ನು ಖರ್ಚು ಮಾಡಿದ್ದಾಳೆ. ಈ ಬಗ್ಗೆ ಪ್ರಶ್ನಿಸಿದರೆ ಮರಣ ಪತ್ರ ಬರೆದು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕಿದ್ದಾಳೆ. ಅಲ್ಲದೇ ವಿಚ್ಛೇದನ ನೀಡಲು ₹ 45 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದಾಳೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ. ಪ್ರಕರಣವನ್ನು ಸಂಪಿಗೆಹಳ್ಳಿ ಪೊಲೀಸ್ ಠಾಣೆಗೆ ವರ್ಗಾಯಿಸಿದ್ದಾರೆ.

ಪತಿ ಆರೋಪ ನಿರಾಕರಿಸಿರುವ ಪತ್ನಿ ಬಿಂದು, 'ಪತಿ ನನ್ನ ಮೇಲೆ ಹಲ್ಲೆ ನಡೆಸಿ, ವರದಕ್ಷಿಣೆ ವಿಚಾರಕ್ಕೆ ಕಿರುಕುಳ ನೀಡಿದ್ದರು. ಈ ಬಗ್ಗೆ ಹಿಂದೆಯೇ ಠಾಣೆಗೆ ದೂರು ಕೊಟ್ಟಿದ್ದೆ. ಸರಿಯಾಗಿ ಊಟ ಕೊಡುತ್ತಿರಲಿಲ್ಲ. ಅವರ ಕುಟುಂಬದವರು ಕಿರುಕುಳ ನೀಡಿದ್ದಾರೆ. ನನ್ನ ವಿರುದ್ಧ ಮಾಡಿರುವ ಆರೋಪ ಸುಳ್ಳು' ಎಂದು ತಿಳಿಸಿದ್ದಾರೆ.

ಭಾರತೀಯ ತಂತ್ರಜ್ಞಾನ ಸಂಸ್ಥೆ ಮದ್ರಾಸ್
ಚೆನ್ನೈ – 600 036

ಎಂ.ಟೆಕ್ ಪ್ರೋಗ್ರಾಮ್ 2025–26ಕ್ಕೆ ಪ್ರವೇಶಾತಿ

ಕೆಳಗಿನ ವಿವರಗಳನ್ವಯ ಜುಲೈ 2025 ರಿಂದ ಆರಂಭಗೊಳ್ಳುವ ಶೈಕ್ಷಣಿಕ ವರ್ಷ 2025–26ನೇ ಸಾಲಿನ ಎಂ.ಟೆಕ್ ಪ್ರೋಗ್ರಾಮ್ ಪ್ರವೇಶಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಪ್ರೋಗ್ರಾಂ	ಅರ್ಜಿ ಸಲ್ಲಿಸುವ ವಿಧಾನ	ಎಂ.ಟೆಕ್ ಪ್ರವೇಶಾತಿ ಪೋರ್ಟಲ್ ಆರಂಭಿಕ ದಿನಾಂಕ	ಕೊನೆಯ ದಿನಾಂಕದಂದು ಪೋರ್ಟಲ್ ಸ್ಥಗಿತಗೊಳ್ಳುತ್ತದೆ	ವೆಬ್‌ಸೈಟ್
ಎಂ.ಟೆಕ್ (ರೆಗ್ಯೂಲಾರ್)	ಆನ್‌ಲೈನ್	27ನೇ ಮಾರ್ಚ್ 2025	25ನೇ ಏಪ್ರಿಲ್ 2025 (23:59 ಗಂಟೆಗೆ)	http://mtechadm.iitm.ac.in
ಎಂ.ಟೆಕ್ (ಸ್ಪಾನ್ಸರ್ಡ್)				

ಭಾರತ ಸರ್ಕಾರದ ನಿಯಮಗಳ ಪ್ರಕಾರ ಎಸ್‌ಸಿ/ಎಸ್‌ಟಿ/ಒಬಿಸಿ(ಕೆನೆ ಪದರ ರಹಿತ)/ ಪಿಡಬ್ಲ್ಯುಡಿ/ ಇಡಬ್ಲ್ಯುಎಸ್ (ಆರ್ಥಿಕ ದುರ್ಬಲ ವರ್ಗ) ಪ್ರವರ್ಗಗಳಿಗೆ ಸೀಟ್‌ಗಳು ಮೀಸಲಾಗಿರುತ್ತದೆ. ಆನ್‌ಲೈನ್ ಅರ್ಜಿಗಳು, ಮಾಹಿತಿ ಕೈಪಿಡಿ ಮತ್ತು ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಮೇಲ್ಕಂಡ ವೆಬ್‌ಸೈಟ್‌ಗೆ ಭೇಟಿ ಕೊಡಿ.

ಸಹಿ/–
ಡೆಪ್ಯೂಟಿ ರಿಜಿಸ್ಟ್ರಾರ್ (ಕೋರ್ಸ್‌ಸ್)
ದಿನಾಂಕ: 20.03.2025

ನಗರದಲ್ಲಿ ಇಂದು

ಸ್ವಯಂಪ್ರೇರಿತ ಬೃಹತ್ ರಕ್ತದಾನ ಮೇಳ: ಉದ್ಘಾಟನೆ: ಡಿ.ಆರ್. ಪಾಟೀಲ, ಮುಖ್ಯ ಅತಿಥಿ: ಎಸ್.ಬಿ. ಅರುಣ್ ಕುಮಾರ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿಗಳು: ಅಶ್ವಿನಿ ಎಸ್. ಶೆಟ್ಟಿ, ಪ್ರತಾಪ್ ಲಿಂಗಯ್ಯ, ರಾಜು ಚಂದ್ರಶೇಖರ್, ಪಳನಿ ಲೋಗನಾಥನ್, ಆಯೋಜನೆ: ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳು, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 9

ಜೈನ್ ವಿಶ್ವವಿದ್ಯಾಲಯ ಕಿರು ಚಲನಚಿತ್ರೋತ್ಸವ: ಅತಿಥಿಗಳು: ಟಿ.ಆರ್. ಚಂದ್ರಶೇಖರ್, ದಿನೇಶ್ ನೀಲಕಂಠ, ಸುಕೃತಾ ವಾಗ್ಲೆ, ತೀರ್ಪುಗಾರರು: ಕೆಂಪರಾಜು, ನವೀನ್ ದ್ವಾರಕನಾಥ್, ಆಯೋಜನೆ: ಜೈನ್ ಡೀಮ್ಡ್ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಂವಹನ ಮಾಧ್ಯಮ ವಿಭಾಗ, ಸ್ಥಳ: ಸುಚಿತ್ರಾ ಸಿನಿಮಾ ಮತ್ತು ಕಲ್ಚರಲ್ ಅಕಾಡೆಮಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 9

ಜಾನಪದ ಉತ್ಸವ–2025: ಉದ್ಘಾಟನೆ: ಗೊಲ್ಲಹಳ್ಳಿ ಶಿವಪ್ರಸಾದ್, ಕೆ. ರಾಮಕೃಷ್ಣ ರೆಡ್ಡಿ, ಅತಿಥಿಗಳು: ಮಾವಳ್ಳಿ ಶಂಕರ್, ಟಿ.ಎಂ. ಧರ್ಮೇಂದ್ರ, ಶಿವಕುಮಾರ್ ಎಚ್.ಎನ್., ಅಧ್ಯಕ್ಷತೆ: ವೆಂಕಟೇಶ್, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಡಿಯೂರು, ಜಯನಗರ, ಬೆಳಿಗ್ಗೆ 9.30

ವಿದ್ಯಾರ್ಥಿ ಸಾಹಿತ್ಯ ಸಂಭ್ರಮ: ಉದ್ಘಾಟನೆ: ಪ್ರಕಾಶ್ ಬೆಳವಾಡಿ, ಪ್ರಣೀತಾ ಸುಭಾಷ್, ಅಪೂರ್ವ ಕುಮಾರ್ ಮಿಶ್ರಾ, ಟಿ.ವಿ. ರಾಜು, ಸಂದೀಪ್ ನಾಯರ್, 'ಡಿಜಿಟಲ್ ಯುಗದಲ್ಲಿ ಧರ್ಮ' ಸಂವಾದ: ಅಕ್ಷತ್ ಗುಪ್ತಾ, ಸಾಯಿ ಸ್ವರೂಪ್ ಅಯ್ಯರ್, ಆಯೋಜನೆ: ಯುವಕ ಸಂಘ, ಸ್ಥಳ: ಯುವಪಥ, ಜಯನಗರ, ಬೆಳಿಗ್ಗೆ 10.30ರಿಂದ

ಪ್ರಣೀತಾ

ಮಹಿಳಾ ದಿನಾಚರಣೆ ಹಾಗೂ ಬೆಳವಾಡಿ ಮಲ್ಲಮ್ಮ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ರಾಣಿ ಸತೀಶ್, ಅಧ್ಯಕ್ಷತೆ: ಎಸ್.ಜಿ. ಸುಶೀಲಮ್ಮ, ಅತಿಥಿಗಳು: ಭಾವನಾ ರಾಮಣ್ಣ, ಭವ್ಯ ಗೌಡ, ಮೇರಿ ಶೈಲಜಾ, ಉಪಸ್ಥಿತಿ: ಗಂಗರಾಜಮ್ಮ ಕೆ., ಎಚ್.ಎನ್. ದೀಪಕ್, ಆಯೋಜನೆ: ಕರುನಾಡ ವಿಜಯಸೇನೆ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಕರ್ನಾಟಕ ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 11.30

ಭಾವನಾ ರಾಮಣ್ಣ

'ಶೋಷಿತರ ಸಂಘರ್ಷ ದಿನಾಚರಣೆ': ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಅತಿಥಿಗಳು: ಸುಬ್ಬು ಹೊಲೆಯಾರ್, ಇಂದಿರಾ ಕೃಷ್ಣಪ್ಪ, ಬಿ.ಪಿ. ತಿಪ್ಪೇಸ್ವಾಮಿ, ಕಾರಳ್ಳಿ ಶ್ರೀನಿವಾಸ್, ಉಪಸ್ಥಿತಿ: ಶ್ರೀಪಾದ್ ಭಟ್, ರವಿಕುಮಾರ್ ಬಾಗಿ, ಬಿ. ರಾಜಶೇಖರ್ ಮೂರ್ತಿ, ಟಿ.ಆರ್. ಸ್ವಾಮಿ, ರಾಧಾಕೃಷ್ಣ, ಗಂಗಾಧರ್, ರವಿ ಈಚಲಮರ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

'ಅಂಗಳದಲ್ಲಿ ತಿಂಗಳ ಪುಸ್ತಕ' ಮಾಲಿಕೆ 4: ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಧರಣೀದೇವಿ ಮಾಲಗತ್ತಿ ಅವರ 'ಇಳಾಭಾರತಂ' ಕಾವ್ಯಾವಲೋಕನ, ಮುಖ್ಯ ಅತಿಥಿ: ವಿನಯಾ ಒಕ್ಕುಂದ, ಉಪಸ್ಥಿತಿ: ಪ್ರೊ. ಉಷಾದೇವಿ ಸಿ., ಅಧ್ಯಕ್ಷತೆ: ಮಾನಸ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ಮಹಾರಾಣಿ ವಿಜ್ಞಾನ ಕಾಲೇಜಿನ ಸಮ್ಮೇಳನ ಸಭಾಂಗಣ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಅರಮನೆ ರಸ್ತೆ, ಬೆಳಿಗ್ಗೆ 11

ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರದ ಸಂಸ್ಥಾಪನಾ ದಿನಾಚರಣೆ: ಉದ್ಘಾಟನೆ: ಸಚ್ಚಿದಾನಂದ ಜೋಶಿ, ಅತಿಥಿಗಳು: ಶತಾವಧಾನಿ ಆರ್. ಗಣೇಶ್, ಚೂಡಾಮಣಿ ನಂದಗೋಪಾಲ್, ಟಿ.ಎಸ್. ಸತ್ಯವತಿ, ಆಯೋಜನೆ ಮತ್ತು ಸ್ಥಳ: ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರದ ಪ್ರಾದೇಶಿಕ ಕೇಂದ್ರ, ಮಲ್ಲತ್ತಹಳ್ಳಿ, ಸಂಜೆ 4

ಹರಿದಾಸ ಮಂಜರಿ: ಗಾಯನ: ವೈಷ್ಣವಿ ಕೊಪ್ಪ, ತಬಲಾ: ಮಧುಸೂದನ್ ಕೊಪ್ಪ, ಹಾರ್ಮೋನಿಯಂ: ಭರತ್, ಕೊಳಲು: ಹನುಮೇಶ್ ಆಚಾರ್, ತಾಳ: ವಿನೀತ್ ಜೋಶಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ, ಜಯನಗರ, ಸಂಜೆ 5.30

'ಪಟ್ಟಾಭಿಷೇಕ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಭಾಗವತರು: ಚಿತ್ಕಲಾ ಕೆ. ತುಂಗ, ಮದ್ದಳೆ: ಸಂಪತ್ ಆಚಾರ್ಯ, ಚಂಡೆ: ಪನ್ನಗ ಮಯ್ಯ, ನಿರ್ದೇಶನ: ಕೃಷ್ಣಮೂರ್ತಿ ತುಂಗ, ಆಯೋಜನೆ: ಯಕ್ಷಕಲಾ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

'ಡಿ.ವಿ.ಜಿ–ಬರೆದಂತೆಯೇ ಬದುಕಿದವರು' ಉಪನ್ಯಾಸ: ಸತ್ಯೇಶ್ ಬೆಳ್ಳೂರ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಮೂರು ದಿನಗಳ ಅನೇಕಾ ನಾಟಕೋತ್ಸವ: 'ಹನ್ನೆರಡು ಮೈನಸ್ ಒಂದು' ನಾಟಕ ಪ್ರದರ್ಶನ: ನಿರ್ದೇಶನ: ಶ್ರೀನಿಧಿ, ಪ್ರಸ್ತುತಿ: ಅನೇಕಾ ರಂಗತಂಡ, ಆಯೋಜನೆ: ಅನೇಕಾ ರಂಗತಂಡ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ಹರಿನಾಮ ಸಂಕೀರ್ತನೆ: ಗಾಯನ: ಧನ್ಯಶ್ರೀ ಕಾಂಚನ, ಪಿಟೀಲು: ಅರ್ಜುನ್ ದಿನಕರ್, ಮೃದಂಗ: ನರಸಿಂಹನ್ ರಾಮಸ್ವಾಮಿ ಅಯ್ಯಂಗಾರ್, ಆಯೋಜನೆ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ ಬನಶಂಕರಿ, ಸಂಜೆ 7

ವಿದ್ಯಾರ್ಥಿಗಳ ಮಾಹಿತಿ ಸಂಗ್ರಹ ಆರೋಪ: ಎಫ್‌ಐಆರ್ ದಾಖಲು

ಬೆಂಗಳೂರು: ಸ್ವಿಗ್ಗಿ ಮಿನೀಸ್‌ನ ಹೆಸರಿನಲ್ಲಿ ವಿಶ್ವವಿದ್ಯಾಲಯಗಳಿಂದ ವಿದ್ಯಾರ್ಥಿಗಳ ಮಾಹಿತಿ ಸಂಗ್ರಹಿಸಲು ಯತ್ನಿಸಿದ ವ್ಯಕ್ತಿಯ ವಿರುದ್ಧ ವೈಟ್‌ಫೀಲ್ಡ್ ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ವಿಗ್ಗಿ ಕಂಪನಿಯ ವ್ಯವಸ್ಥಾಪಕ ಎನ್.ಹರ್ಷಿತ್ ಅವರ ದೂರು ಆಧರಿಸಿ, ವಿಕ್ರಮ್ ಕುಮಾರ್ ಸಿಂಗ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

'ಸ್ವಿಗ್ಗಿ ಕಂಪನಿಯ ಅಧೀನದಲ್ಲಿರುವ ಸ್ವಿಗ್ಗಿ ಮಿನೀಸ್‌ನ ಹೆಸರಿನಲ್ಲಿ ನಕಲಿ ವೆಬ್‌ಸೈಟ್ ಸೃಷ್ಟಿಸಿದ್ದ ವಿಕ್ರಮ್ ಕುಮಾರ್ ಸಿಂಗ್, ಕಂಪನಿಯಲ್ಲಿ ಕೆಲಸ ಮಾಡಲು ಇಚ್ಛಿಸುವ ವಿದ್ಯಾರ್ಥಿಗಳ ಮಾಹಿತಿ ನೀಡುವಂತೆ ಹಾಗೂ ವಾಟ್ಸ್‌ಆ್ಯಪ್ ಗ್ರೂಪ್ ಮಾಡುವಂತೆ ನಗರದ 17 ವಿಶ್ವವಿದ್ಯಾಲಯಗಳಿಗೆ ಇ ಮೇಲ್ ಕಳುಹಿಸಿದ್ದಾನೆ. ವಿಶ್ವವಿದ್ಯಾಲಯದ ಪ್ರತಿನಿಧಿಗಳು ಮೇಲ್‌ನ ನೈಜತೆಯ ಕುರಿತು ಪರಿಶೀಲಿಸಲು ಸ್ವಿಗ್ಗಿ ಕಂಪನಿ ಸಂಪರ್ಕಿಸಿದಾಗ ಸುಳ್ಳು ಎಂಬುದು ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

ಆರೋಪಿ ಬಂಧನದ ಬಳಿಕ ಯಾವ ಕಾರಣಕ್ಕೆ ವಿದ್ಯಾರ್ಥಿಗಳ ಮಾಹಿತಿ ಸಂಗ್ರಹಿಸುತ್ತಿದ್ದ ಎಂಬುದು ಗೊತ್ತಾಗಲಿದೆ ಎಂದು ಹೇಳಿದ್ದಾರೆ.

ಸುಟ್ಟ ಸ್ಥಿತಿಯಲ್ಲಿ ಮಹಿಳೆ ಶವ ಪತ್ತೆ

ಬೆಂಗಳೂರು: ಯಶವಂತಪುರ ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್ 1ರ ಬಳಿಯ ಕಾಂಪೌಂಡ್ ಪಕ್ಕದಲ್ಲಿ ಸುಟ್ಟ ಸ್ಥಿತಿಯಲ್ಲಿ ಸುಮಾರು 35 ವರ್ಷ ವಯಸ್ಸಿನ ಮಹಿಳೆಯ ಮೃತದೇಹ ಪತ್ತೆಯಾಗಿದೆ.

ಮೃತದೇಹವನ್ನು ಗಮನಿಸಿದ ಸ್ಥಳೀಯರು ಪೊಲೀಸರಿಗೆ ತಿಳಿಸಿದ್ದಾರೆ. ರೈಲ್ವೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. 'ಬೇರೆ ಕಡೆಯಿಂದ ಮೃತದೇಹ ತಂದಿರುವ ಬಗ್ಗೆ ಪ್ರಾಥಮಿಕ ತನಿಖೆಯಲ್ಲಿ ಕುರುಹುಗಳಿಲ್ಲ. ಮುಖಕ್ಕೆ ಪ್ಲಾಸ್ಟಿಕ್ ಕವರ್ ಸುತ್ತಿ ಕೊಲೆ ಮಾಡಿ ಬಳಿಕ ಬೆಂಕಿ ಹಚ್ಚಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ' ಎಂದು ರೈಲ್ವೆ ಎಸ್‌ಪಿ ಎಸ್.ಕೆ. ಸೌಮ್ಯಲತಾ ತಿಳಿಸಿದ್ದಾರೆ.

ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗ
ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವಾಲಯ, ಭಾರತ ಸರ್ಕಾರ
ಗ್ರಾಮೋದಯ, 3, ಇರ್ಲಾ ರಸ್ತೆ, ವಿಲೆ ಪರ್ಲೆ (ಪ), ಮುಂಬೈ–400056
ಫೋನ್: 022-26713538, ಇ–ಮೇಲ್: legaltrademark.kvic@gov.in
ವೆಬ್‌ಸೈಟ್: www.kvic.gov.in

ಎಚ್ಚರಿಕೆ ಪ್ರಕಟಣೆ

ಪಾರ್ಲಿಮೆಂಟ್ ಕಾಯ್ದೆಯ, 'ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗ ಕಾಯ್ದೆ, 1956'ರ ಮೇರೆಗೆ ಭಾರತ ಸರ್ಕಾರದ ಎಂಎಸ್‌ಎಂಇ ಸಚಿವಾಲಯದ ಅಡಿಯಲ್ಲಿ ಸ್ಥಾಪನೆಗೊಂಡಿರುವ, **"ಗ್ರಾಮೋದ್ಯೋಗ"**, 3, ಇರ್ಲಾ ರಸ್ತೆ, ವಿಲೆ ಪರ್ಲೆ (ಪಶ್ಚಿಮ), ಮುಂಬೈ, ಮಹಾರಾಷ್ಟ್ರ–400056 ವಿಳಾಸದಲ್ಲಿ ಸ್ಥಿತಗೊಂಡಿರುವ, ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗ (ಕೆವಿಐಸಿ) ಎಂಬ ಶಾಸನಬದ್ಧ ಅಂಗಸಂಸ್ಥೆಯು, ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರ ಗಮನಕ್ಕೆ ತರಬಯಸುವುದು ಏನೆಂದರೆ, ಎಲ್ಲಾ ಸರಕುಗಳು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ, ಇಲ್ಲಿ ಕೆಳಗೆ ನೀಡಲಾಗಿರುವ ಟ್ರೇಡ್‌ಮಾರ್ಕ್‌ಗಳ ಮಾಲೀಕತ್ವ ಹಾಗೂ ಅಧಿಕಾರಗಳು ಕೆವಿಐಸಿ ಸಂಸ್ಥೆಗೆ ಸೇರಿರುತ್ತವೆ:

Khadi India | Khadi INDIA | ಖಾದಿ (ಶಬ್ದ ಚಿಹ್ನೆ) | Khadi India Prakritik Paint (INDIA'S FIRST COW DUNG PAINT)

ಈ ಮೇಲಿನ ಟ್ರೇಡ್‌ಮಾರ್ಕ್‌ಗಳು ಭಾರತದಲ್ಲಿ ಮತ್ತು ವಿಶ್ವದಾದ್ಯಂತ ವಿವಿಧ ದೇಶಗಳಲ್ಲಿ, ನೋಂದಣಿ ಆಗಿರುತ್ತವೆ ಮತ್ತು ಸಂರಕ್ಷಣೆಗೆ ಒಳಪಟ್ಟಿರುತ್ತವೆ ಹಾಗೂ ಇವುಗಳನ್ನು ಕೆವಿಐಸಿ ಸಂಸ್ಥೆಯು ಜಗತ್ತಿನಾದ್ಯಂತ ವ್ಯಾಪಕವಾಗಿ ಮತ್ತು ನಿರಂತರವಾಗಿ ಬಳಸಿಕೊಳ್ಳುತ್ತ ಬಂದಿರುತ್ತದೆ. ಆದ್ದರಿಂದ, ಕೆವಿಐಸಿ ಸಂಸ್ಥೆಯು ತನ್ನ ಕಾನೂನುಬದ್ಧ ಹಕ್ಕುಗಳ ಸಂರಕ್ಷಣೆಗಾಗಿ, ಈ ಮೇಲೆ ತಿಳಿಸಲಾಗಿರುವ ಕೆವಿಐಸಿ ಸಂಸ್ಥೆಯ ಖಾದಿ ಟ್ರೇಡ್‌ಮಾರ್ಕ್‌ಗಳನ್ನು ಯಾರಾದರೂ ತಮ್ಮ ಟ್ರೇಡ್‌ಮಾರ್ಕ್‌ಗಳ ಹಿಂಭಾಗದಲ್ಲಿ ಅಥವಾ ಮುಂಭಾಗದಲ್ಲಿ ಸೇರಿಸಿಕೊಂಡು, ಟ್ರೇಡ್‌ಮಾರ್ಕ್ ಅಥವಾ ಟ್ರೇಡ್‌ನೇಮ್ ಮತ್ತು/ಅಥವಾ ಡೊಮೈನ್ ಹೆಸರು ರಚಿಸಿಕೊಳ್ಳುವುದು ಸೇರಿದಂತೆ, ಮೇಲ್ಕಂಡ ಕೆವಿಐಸಿ ಸಂಸ್ಥೆಯ ಟ್ರೇಡ್‌ಮಾರ್ಕ್‌ಗಳನ್ನು ಅನಧಿಕೃತವಾಗಿ ಬಳಸಿಕೊಳ್ಳುವಂತಹ ಯಾವುದೇ ಕೃತ್ಯಗಳಲ್ಲಿ ತೊಡಗಿರುವವರ ಮತ್ತು ಅಂತಹ ಕೃತ್ಯಗಳಿಗೆ ಹೊಣೆಯಾಗಿರುವ ಸಮಸ್ತರ ವಿರುದ್ಧ ನ್ಯಾಯಾಲಯದಲ್ಲಿ ಸೂಕ್ತ ಶಾಸನಬದ್ಧ ಕ್ರಮ ಕೈಗೊಳ್ಳಲಾಗುತ್ತದೆ. ಆದ್ದರಿಂದ, ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗದ ಯಾವುದೇ ಅಧಿಕೃತ ಸಂಸ್ಥೆಗಳು / ವ್ಯಕ್ತಿಗಳನ್ನು ಹೊರತುಪಡಿಸಿ, ಇನ್ನಿತರೆ ಯಾರಿಂದಲಾದರೂ ಮೇಲ್ಕಂಡ ಟ್ರೇಡ್‌ಮಾರ್ಕ್‌ಗಳನ್ನು ಅನಧಿಕೃತವಾಗಿ ಬಳಸಿಕೊಳ್ಳುತ್ತಿರುವ ಬಗ್ಗೆ ಸಾಮಾನ್ಯ ಸಾರ್ವಜನಿಕರಿಗೆ ತಿಳಿದು ಬಂದಲ್ಲಿ, ದಯವಿಟ್ಟು ಅಂತಹ ವಿಚಾರವನ್ನು ಕೆವಿಐಸಿ ಸಂಸ್ಥೆಯ legalaffairs.kvic@gov.in ಇಮೇಲ್ ವಿಳಾಸಕ್ಕೆ ಮಾಹಿತಿ ನೀಡಬೇಕೆಂದು ವಿನಂತಿ.

–ಸಹಾಯಕ ಮುಖ್ಯ ಕಾರ್ಯಕಾರಿ ಅಧಿಕಾರಿ (ಕಾನೂನು ವ್ಯವಹಾರಗಳು)

CBC 25103/15/0003/2425

Over 60 Years of Excellence 1962-2022 Margadarsi | RAMOJI GROUP

ನನ್ನ ಶಾಂತಿಯುತ ನಿವೃತ್ತಿ ಈಗ ಸುಖಕರವಾಗಿರಲು

ಸಲಹೆ ನೀಡಿದಕ್ಕಾಗಿ ಮಾರ್ಗದರ್ಶಿ ಗೆ ಧನ್ಯವಾದಗಳು

ನನ್ನ ನಿವೃತ್ತಿ ಜೀವನಕ್ಕೆ ಇಷ್ಟೊಂದು ಭದ್ರತೆ ಸಿಗಬಹುದೆಂದು ನಾನು ಊಹಿಸಿರಲಿಲ್ಲ, ಮಾರ್ಗದರ್ಶಿ ಅದನ್ನು ಸಾಕಾರಗೊಳಿಸಿದೆ. ನನ್ನ ವಿಶ್ವಾಸಾರ್ಹ ಮಾರ್ಗದರ್ಶಿ, ನನಗೆ ಹಣವನ್ನು ಉಳಿಸಲು, ಲಾಭಾಂಶಗಳನ್ನು ಗಳಿಸಲು ಸಹಾಯ ಮಾಡಿದೆ ಮತ್ತು ಈ ವಿಶೇಷ ಸಂದರ್ಭಕ್ಕಾಗಿ ನನಗೆ ಅಗತ್ಯವಿರುವಾಗ ಒಂದು ದೊಡ್ಡ ಮೊತ್ತವನ್ನು ಹಿಂಪಡೆಯಲು ನನಗೆ ನಮ್ಯತೆಯನ್ನು ಒದಗಿಸಿದೆ.

ಮಾರ್ಗದರ್ಶಿಯನ್ನು ನಿಮ್ಮ ಜೀವನದ ಒಂದು ಭಾಗವಾಗಿಸಿ. ಮಾರ್ಗದರ್ಶಿ ನಿಮ್ಮ ಎಲ್ಲಾ ಗುರಿಗಳನ್ನು ಪೂರೈಸುವ ಮಾರ್ಗದಲ್ಲಿ ನಿಮಗೆ ಮಾರ್ಗದರ್ಶನ ನೀಡುವುದರಲ್ಲಿ ಅನುಭವಶಾಲಿಯಾಗಿದೆ.

1962ರಲ್ಲಿ ಸ್ಥಾಪಿತವಾಗಿದೆ
60 ಲಕ್ಷಕ್ಕಿಂತ ಹೆಚ್ಚಿನ ಚಂದಾದಾರರಿಗೆ ಸೇವೆ ಸಲ್ಲಿಸಿದ್ದೇವೆ
₹11,500 ಕೋಟಿ ಬಿಜಿನೆಸ್ ಟರ್ನ್‌ಓವರ್
ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ್ ಮತ್ತು ತಮಿಳುನಾಡುಗಳಲ್ಲಿ 122 ಶಾಖೆಗಳು

ಮಾರ್ಗದರ್ಶಿ
ಚಿಟ್ಸ್ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್
ಮಾರ್ಗದರ್ಶಿಯೊಂದಿಗೆ ನೀವು ಯೋಜಿಸಿದಾಗ ಜೀವನ ಸರಳ
www.margadarsi.com

ರಿಜಿಸ್ಟರ್ಡ್ ಆಫೀಸ್: ನಂ.ಎಸ್-801-802, ಮಣಿಪಾಲ್ ಸೆಂಟರ್, ನಂ.47, ಡಿಕೆನ್ಸನ್ ರೋಡ್, ಬೆಂಗಳೂರು - 560 042
ಫೋನ್ : 080-25322939 | ಕರೆಮಾಡಿ 1800 425 7373 (ದರ ರಹಿತ) | ಅಥವಾ 56263ಗೆ <MARG>ಎಸ್‌ಎಂಎಸ್ ಮಾಡಿ
For more details scan this QR-Code

ಬೆಂಗಳೂರು: ಆರ್.ಓ. ಬೆಂಗಳೂರು: 080-25322939 / 25322938 / 7618795559 | ಗಾಂಧಿ ನಗರ: 080-22384676 / 85 / 7618795562 | ಜಯನಗರ: 080-22457994 / 22457374 / 7618795565 | ಇಂದಿರಾ ನಗರ: 080-25203738 / 25211048 / 7618795569 | ಬಸವೇಶ್ವರ ನಗರ: 080-23118228 / 7618795572 | ಬಿಟಿಎಂ ಲೇಔಟ್: 080-26687374 / 26687375 / 7618795573 | ಆರ್ ಟಿ ನಗರ: 080-23534949 / 22744685 / 7618795574 | ಮಾರತಹಳ್ಳಿ: 080-25401305 / 7618795575 | ಬನಶಂಕರಿ: 080-26796804 / 26790682 / 7618795576 | ಪೀಣ್ಯ: 080-28392044 / 7618795578 | ಹೆಚ್ ಎಸ್ ಆರ್ ಲೇಔಟ್: 080-25723636 / 7618795580 | ಕೆಂಗೇರಿ: 080-29904055/ 7618794468 | ಬಳ್ಳಾರಿ: 08392-268990 / 267990 / 7618795560 | ಹೊಸಪೇಟೆ: 08394-222552 / 53 / 7618795561 | ರಾಯಚೂರು: 08532-229516 / 7618795564 | ಮೈಸೂರು: 0821-2524223 / 7618795563 | ದಾವಣಗೆರೆ: 08192-251461 / 237700 / 7618795566 | ಹುಬ್ಬಳ್ಳಿ: 0836-2356211 / 2354149 / 7618795568 | ಶಿವಮೊಗ್ಗ: 08182-224644 / 228233 / 7618795567 | ಮಂಗಳೂರು: 0824-2442142 / 2447742 / 7618795570 | ಹಾಸನ: 08172-233576 / 233252 / 7618795571 | ತುಮಕೂರು: 0816-2255103 / 104 / 7618795577 | ಬೆಳಗಾವಿ: 0831-2431687 / 780 / 7618795579 | ಕೋಲಾರ: 08152-200566 / 7618795581 | ಹಾವೇರಿ: 08375-200543 / 7618795556 | ಚಿಕ್ಕಬಳ್ಳಾಪುರ: 08156-299911 / 7618794467 | ಚಿತ್ರದುರ್ಗ: 08194-231205 / 7618794469

ಸ್ಪರ್ಧಾ ವಾಣಿ

'ಇಂಡಿಯಾ-AI' ಮಿಷನ್ ಅಡಿ 10,000 GPU ಸಂಗ್ರಹ ಆರಂಭ

- ಇತ್ತೀಚೆಗೆ, ಭಾರತ ಸರ್ಕಾರ ಇಂಡಿಯಾ-AI ಮಿಷನ್ ಅಡಿಯಲ್ಲಿ 10,000 ಗ್ರಾಫಿಕ್ಸ್ ಸಂಸ್ಕರಣಾ ಘಟಕಗಳ (GPU) ಖರೀದಿಗೆ ಬಿಡ್ಡಿಂಗ್ ಪ್ರಕ್ರಿಯೆಯನ್ನು ಪ್ರಾರಂಭಿಸಿತು.
- ಈ ಮಿಷನ್‌ನಡಿ, ದೇಶದಲ್ಲಿ ಕೃತಕ ಬುದ್ಧಿಮತ್ತೆ ಅಭಿವೃದ್ಧಿ ಹಾಗೂ ಬಳಕೆಯನ್ನು ಹೆಚ್ಚಿಸುವ ಗುರಿಯನ್ನು ಸರ್ಕಾರ ಹೊಂದಿದ್ದು, ಮುಂಬರುವ 5 ವರ್ಷಗಳಲ್ಲಿ ₹10,372 ಕೋಟಿ ಬಜೆಟ್ ವ್ಯಯಿಸಲು ಯೋಜಿಸಿದೆ.
- ವಿವಿಧ ಕ್ಷೇತ್ರಗಳಲ್ಲಿ ಕಂಪ್ಯೂಟಿಂಗ್ ಸಾಮರ್ಥ್ಯಗಳನ್ನು ಹೆಚ್ಚಿಸಲು ಮತ್ತು AI ಪರಿಸರ ವ್ಯವಸ್ಥೆಯನ್ನು ರಚಿಸುವಲ್ಲಿ ವಿವಿಧ ಪಾಲುದಾರರನ್ನು ಬೆಂಬಲಿಸಲು GPU ಸಂಗ್ರಹಣೆ ನಿರ್ಣಾಯಕ ಹೆಜ್ಜೆಯಾಗಿದೆ.
- ಖರೀದಿ ಪ್ರಕ್ರಿಯೆಯಲ್ಲಿ ಜಿಯೋ ಪ್ಲಾಟ್‌ಫಾರ್ಮ್‌ಗಳು ಮತ್ತು ಟಾಟಾ ಕಮ್ಯುನಿಕೇಷನ್ಸ್ ಸೇರಿದಂತೆ ಹತ್ತು ಆಯ್ದ ಕಂಪನಿಗಳು GPUಗಳ ಪೂರೈಕೆಗಾಗಿ ಆಸಕ್ತಿ ವ್ಯಕ್ತಪಡಿಸಿವೆ.
- ಮಿಷನ್‌ನ ಸುಮಾರು ಶೇ 44 ರಷ್ಟು (₹4,563.36 ಕೋಟಿ) ಹಣವನ್ನು GPU ಸಂಗ್ರಹಣೆಗೆ ಈಗಾಗಲೇ ಹಂಚಿಕೆ ಮಾಡಲಾಗಿದೆ.
- AI ಮಾದರಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು GPUಗಳು ಅಗತ್ಯ. ಅವು ಏಕಕಾಲದಲ್ಲಿ ಅಪಾರ ಪ್ರಮಾಣದ ಡೇಟಾ ಪ್ರಕ್ರಿಯೆಗೊಳಿಸಬಲ್ಲವು, ಸಾಂಪ್ರದಾಯಿಕ CPUಗಳಿಗಿಂತ ಅವುಗಳ ವೇಗ ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಾಗಿರುತ್ತದೆ.
- GPUಗಳಿಗೆ ತಾಗುವ ಹೆಚ್ಚಿನ ವೆಚ್ಚ, ಸೀಮಿತ ಲಭ್ಯತೆ ಮತ್ತು ಕೌಶಲಪೂರ್ಣ AI ವೃತ್ತಿಪರರ ಕೊರತೆ ಈ ಯೋಜನೆಯ ಪ್ರಗತಿಗೆ ಅಡ್ಡಿಯಾಗಬಹುದು. ಇದಲ್ಲದೆ, ಭಾರತದಲ್ಲಿ ಕಂಪ್ಯೂಟಿಂಗ್ ಮೂಲಸೌಕರ್ಯವು ಕಡಿಮೆ ಪ್ರಮಾಣದಲ್ಲಿದ್ದು, ಜಾಗತಿಕ ಸಾಮರ್ಥ್ಯದ ಶೇ 2ಕ್ಕಿಂತ ಕಡಿಮೆ ಪ್ರಮಾಣದಲ್ಲಿದೆ.
- ಭಾರತದಲ್ಲಿ AI ನ ಪ್ರಸ್ತುತ ಸ್ಥಿತಿ: ಭಾರತದಾದ್ಯಂತ ವಿವಿಧ ಕ್ಷೇತ್ರಗಳಲ್ಲಿ AI ಅಳವಡಿಕೆ ಹೆಚ್ಚುತ್ತಿದೆ. ಡಿಜಿಟಲ್ ಇಂಡಿಯಾ ಮತ್ತು ರಾಷ್ಟ್ರೀಯ AI ಉಪಕ್ರಮಗಳು ಈ ಪ್ರವೃತ್ತಿಯನ್ನು ಮುನ್ನಡೆಸುತ್ತಿವೆ. ಬೆಂಗಳೂರು ಮತ್ತು ಹೈದರಾಬಾದ್‌ನಂಥ ಪ್ರಮುಖ ನಗರಗಳು AI ಕೇಂದ್ರಗಳಾಗಿ ಹೊರಹೊಮ್ಮುತ್ತಿವೆ, ಇವುಗಳಿಗೆ ಸಂಶೋಧನಾ ಸಂಸ್ಥೆಗಳು ಮತ್ತು ನವೋದ್ಯಮಗಳು ಬೆಂಬಲ ನೀಡುತ್ತಿವೆ.
- 'ಇಂಡಿಯಾ-AI ಮಿಷನ್' ಉನ್ನತ ಮಟ್ಟದ AI ಕಂಪ್ಯೂಟಿಂಗ್ ಪರಿಸರ ವ್ಯವಸ್ಥೆಯನ್ನು ರಚಿಸುವ ನಿಟ್ಟಿನಲ್ಲಿ ಇಂಡಿಯಾ-AI ಇನ್ನೋವೇಶನ್ ಸೆಂಟರ್ ಮತ್ತು ಡೇಟಾಸೆಟ್‌ಗಳ ವೇದಿಕೆಯ ಸ್ಥಾಪನೆ, AI ಶಿಕ್ಷಣವನ್ನು ಉತ್ತೇಜಿಸುವುದು ಮತ್ತು ನವೋದ್ಯಮಗಳಿಗೆ ಹಣಕಾಸು ನೆರವು ಒದಗಿಸುವುದು, ನೈತಿಕ AI ಅಭ್ಯಾಸಗಳನ್ನು ಖಚಿತಪಡಿಸಿಕೊಳ್ಳುವುದು ಮತ್ತು ಪರಿಸರ ಕಾಳಜಿಗಳನ್ನು ಅಳವಡಿಸಿಕೊಳ್ಳುವ ಗುರಿಯನ್ನು ಹೊಂದಿದೆ.



ರಾಷ್ಟ್ರೀಯ ವಿದ್ಯಮಾನ



ಪರಮಾಣು ಹೊಣೆಗಾರಿಕೆ ಕಾನೂನುಗಳಿಗೆ ತಿದ್ದುಪಡಿ

- ಭಾರತ ಸರ್ಕಾರವು 2010ರ ಪರಮಾಣು ಹಾನಿಗಳಿಗೆ ನಾಗರಿಕ ಹೊಣೆಗಾರಿಕೆ ಕಾಯ್ದೆ (CLNDA) ಮತ್ತು 1962ರ ಪರಮಾಣು ಶಕ್ತಿ ಕಾಯ್ದೆಗೆ ತಿದ್ದುಪಡಿ ಘೋಷಿಸಿದೆ.
- ಈ ತಿದ್ದುಪಡಿಗಳು ವಿದೇಶಿ ಪರಮಾಣು ಹೂಡಿಕೆಗಳನ್ನು, ವಿಶೇಷವಾಗಿ 15 ವರ್ಷಗಳಿಗೂ ಹೆಚ್ಚು ಕಾಲ ಕಾನೂನು ಅಡೆತಡೆ ಎದುರಿಸುತ್ತಿರುವ ಅಮೆರಿಕನ್ ಮತ್ತು ಫ್ರೆಂಚ್ ಕಂಪನಿಗಳಿಂದ ಸುಗಮಗೊಳಿಸುವ ಗುರಿ ಹೊಂದಿವೆ.
- ಈ ತಿದ್ದುಪಡಿಗಳು ಜೈತಾಪುರದಲ್ಲಿ ಆರು ರಿಯಾಕ್ಟರ್‌ಗಳನ್ನು ನಿರ್ಮಿಸಲು ಎಲೆಕ್ಟ್ರಿಸಿಟ್ ಡಿ ಫ್ರಾನ್ಸ್‌ನ (EDF) ಒಪ್ಪಂದ ಮತ್ತು ಕೊವ್ವಾಡದಲ್ಲಿ ಆರು ರಿಯಾಕ್ಟರ್‌ಗಳಿಗಾಗಿ ವೆಸ್ಟಿಂಗ್‌ಹೌಸ್ ಎಲೆಕ್ಟ್ರಿಕ್ ಕಂಪನಿಯ (WEC) ಯೋಜನೆಗಳಂಥ ಸ್ಥಗಿತ ಯೋಜನೆಗಳನ್ನು ಪುನರುಜ್ಜೀವನಗೊಳಿಸಲು ಅನುವು ಮಾಡಿಕೊಡುತ್ತವೆ.
- ನಾಗರಿಕ ಪರಮಾಣು ಹೊಣೆಗಾರಿಕೆಯ ಬಗ್ಗೆಯೂ ಈ ತಿದ್ದುಪಡಿಗಳು ಪ್ರಸ್ತಾಪಿಸಿವೆ. ಪರಮಾಣು ಅವಘಡಗಳ ಸಂತ್ರಸ್ತರಿಗೆ ಪರಿಹಾರವನ್ನು ಖಚಿತಪಡಿಸುವುದು ಮತ್ತು ಹಾನಿಗೆ ಜವಾಬ್ದಾರ ಆದವರನ್ನು ಗುರುತಿಸುವುದು, ಕನಿಷ್ಠ ಪರಿಹಾರ ಮೊತ್ತವನ್ನು ಖಚಿತಪಡಿಸುವ ನಿಯಮಾವಳಿಗಳು ಈ ಕಾಯ್ದೆಯಲ್ಲಿ ಅಡಕವಾಗಿವೆ.
- ಪರಮಾಣು ಸ್ಥಾವರ ನಿರ್ವಾಹಕರು ಕಟ್ಟುನಿಟ್ಟಾಗಿ ಹಾನಿಗೆ ಹೊಣೆಗಾರರು, ಅವರು ತಪ್ಪಿಲ್ಲದಿದ್ದರೂ ಪರಿಹಾರ ಪಾವತಿಸಬೇಕು. ನಿರ್ವಾಹಕರಿಗೆ ಪರಿಹಾರ ಮಿತಿ ₹1,500 ಕೋಟಿ ಆಗಿದ್ದು, ಇದನ್ನು ವಿಮೆ ಅಥವಾ ಇತರ ಆರ್ಥಿಕ ಭದ್ರತೆಯ ಮೂಲಕ ಭರಿಸಬೇಕು.
- ಪರಿಹಾರದ ಪಾವತಿಗಳು ₹1,500 ಕೋಟಿ ಮೀರಿದರೆ, ಸರ್ಕಾರ ಮಧ್ಯಪ್ರವೇಶಿಸಿ ಹೆಚ್ಚುವರಿ 300 ಮಿಲಿಯನ್ ಹಣ ಪಾವತಿಸಬೇಕು.

ಭಾರತದಲ್ಲಿ ಪ್ರಸ್ತುತ ಪರಮಾಣು ಶಕ್ತಿ ಸ್ಥಿತಿ

- ಭಾರತದ ಪ್ರಸ್ತುತ ಪರಮಾಣು ವಿದ್ಯುತ್ ಸಾಮರ್ಥ್ಯ 6,780 MV ಆಗಿದ್ದು, ಇದನ್ನು 22 ರಿಯಾಕ್ಟರ್‌ಗಳಿಂದ ಪಡೆಯಲಾಗುತ್ತಿದೆ.
- ಪ್ರಸ್ತುತ ಭಾರತದಲ್ಲಿ ಬಳಸುತ್ತಿರುವ ಏಕೈಕ ವಿದೇಶಿ ಆಪರೇಟರ್ ರಷ್ಯಾದ ರೊಸಾಟಮ್ ಆಗಿದೆ.
- 2033 ರ ವೇಳೆಗೆ ಐದು SMRಗಳನ್ನು ಅಭಿವೃದ್ಧಿಪಡಿಸಲು ₹20,000 ಕೋಟಿ ಹೂಡಿಕೆಯೊಂದಿಗೆ, 2047ರ ವೇಳೆಗೆ ಕನಿಷ್ಠ 100 GV ಪರಮಾಣು ಶಕ್ತಿ ಪಡೆಯುವ ಗುರಿ ಇದೆ.

ಉನ್ನತ ಶಿಕ್ಷಣದ ಗುಣಮಟ್ಟ ಹೆಚ್ಚಳಕ್ಕೆ ನೀತಿ ಆಯೋಗ ವರದಿ

- ನೀತಿ ಆಯೋಗ 'ರಾಜ್ಯಗಳು ಮತ್ತು ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯಗಳ ಮೂಲಕ ಗುಣಮಟ್ಟದ ಉನ್ನತ ಶಿಕ್ಷಣವಿಸ್ತರಿಸುವುದು' ಎಂಬ ವರದಿ ಬಿಡುಗಡೆ ಮಾಡಿದೆ.
- ಈ ವರದಿಯು ಭಾರತದ ಶೇ 80 ರಷ್ಟು ಕಾಲೇಜು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯಗಳ (SPU) ಗುಣಮಟ್ಟದ ಮೇಲೆ ಕೇಂದ್ರೀಕರಿಸುತ್ತದೆ.
- ಇದು ರಾಷ್ಟ್ರೀಯ ಶಿಕ್ಷಣ ನೀತಿ (NEP) 2020 ರೊಂದಿಗೆ ಹೊಂದಿಕೆ ಆಗುತ್ತದೆ. 2047 ರ ವೇಳೆಗೆ ಭಾರತವು ಅಭಿವೃದ್ಧಿ ಹೊಂದಿದ ದೇಶವಾಗುವ ಗುರಿ ಹೊಂದಿದೆ.
- ಜಿಡಿಪಿಯ ಶೇಕಡಾವಾರು ಪ್ರಮಾಣದಲ್ಲಿ ಜಮ್ಮು ಮತ್ತು ಕಾಶ್ಮೀರ ಶಿಕ್ಷಣ ವೆಚ್ಚದಲ್ಲಿ ಮುಂಚೂಣಿಯಲ್ಲಿದೆ. ದೆಹಲಿ ಮತ್ತು ತೆಲಂಗಾಣ ರಾಜ್ಯಗಳು ಕಡಿಮೆ ಹಂಚಿಕೆ ಮಾಡಿವೆ. ರಾಜ್ಯಗಳಾಲ್ಲಿ ನಿಧಿಯ ಅಸಮಾನತೆ ಆತಂಕಕಾರಿ ಆಗಿದೆ. ಕೆಲ ರಾಜ್ಯಗಳು ಉನ್ನತ ಶಿಕ್ಷಣ ವೆಚ್ಚದಲ್ಲಿ ನಕಾರಾತ್ಮಕ ಬೆಳವಣಿಗೆ ದರ ದಾಖಲಿಸಿವೆ.
- ಉನ್ನತ ಶಿಕ್ಷಣದ ಮೇಲಿನ ಒಟ್ಟು ಖರ್ಚು ಜಿಡಿಪಿಯ ಕೇವಲ ಶೇ 0.62 ರಷ್ಟಿದೆ ಎಂದು ವರದಿ ಬಹಿರಂಗಪಡಿಸಿದೆ. ಮೂಲಸೌಕರ್ಯ ಅಭಿವೃದ್ಧಿ ಬೆಂಬಲಿಸಲು ಮತ್ತು ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಈ ಹಂಚಿಕೆ ಹೆಚ್ಚಿಸುವ ಅಗತ್ಯವಿದೆ ಎಂದು ಅದು ಒತ್ತಿಹೇಳಿದೆ. ಉನ್ನತ ಶಿಕ್ಷಣ ನಿಧಿಯಲ್ಲಿ ಮಹಾರಾಷ್ಟ್ರ ಮುಂಚೂಣಿಯಲ್ಲಿದೆ, ಆದರೆ ಕೆಲ ಸಣ್ಣ ರಾಜ್ಯಗಳು ಹಿಂದುಳಿದಿವೆ ಎಂದು ವರದಿ ಉಲ್ಲೇಖಿಸಿದೆ.
- ದಾಖಲಾತಿ ದರಗಳಲ್ಲಿ ಲಿಂಗ ಅಸಮಾನತೆಗಳನ್ನು ವರದಿ ಗುರುತಿಸಿದೆ. ಕೇರಳ ಪುರುಷರಿಗಿಂತ ಹೆಚ್ಚಿನ ಮಹಿಳಾ ದಾಖಲಾತಿ ದರವನ್ನು ಹೊಂದಿದೆ. ಭೌಗೋಳಿಕವಾಗಿ ಸಣ್ಣ ರಾಜ್ಯಗಳು ಹೆಚ್ಚು ಸಮತೋಲಿತ ದಾಖಲಾತಿ ಅನುಪಾತವನ್ನು ಪ್ರದರ್ಶಿಸಿವೆ.
- **ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯಗಳು:** ಜನವರಿ 2025ರ ಹೊತ್ತಿಗೆ ಭಾರತದಲ್ಲಿ ಒಟ್ಟು 495 ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯಗಳು (SPU: State Public Universities) ಗಳು ಅಸ್ತಿತ್ವದಲ್ಲಿ ಇವೆ. ಕರ್ನಾಟಕ ಅತಿ ಹೆಚ್ಚು (43), ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶ (ತಲಾ 38) ಸಾರ್ವಜನಿಕ ವಿವಿ ಹೊಂದಿವೆ.
- ಕಳೆದ 14 ವರ್ಷಗಳಲ್ಲಿ, SPU ಗಳ ಸಂಖ್ಯೆ ಶೇ 50ರಷ್ಟು ಹೆಚ್ಚಾಗಿದೆ ಮತ್ತು ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಶೇ 38 ರಷ್ಟು ಹೆಚ್ಚಾಗಿದ್ದು, ಒಟ್ಟು 3.24 ಕೋಟಿ ವಿದ್ಯಾರ್ಥಿಗಳನ್ನು ತಲುಪಿದೆ.
- ಈ ನಿಟ್ಟಿನಲ್ಲಿ ವರದಿಯು ಶಿಕ್ಷಣ ಹಾಗೂ ಸಂಶೋಧನಾ ಗುಣಮಟ್ಟ, ಹಣಕಾಸು, ಆಡಳಿತ ಹಾಗೂ ಉದ್ಯೋಗಾರ್ಹತೆ ಈ ನಾಲ್ಕು ಪ್ರಮುಖ ಕ್ಷೇತ್ರಗಳಲ್ಲಿ 80 ನೀತಿ ಶಿಫಾರಸುಗಳನ್ನು ಸೂಚಿಸಿದೆ ಅವುಗಳಲ್ಲಿ ಪ್ರಮುಖವಾದವುಗಳೆಂದರೆ:
- **ಶಿಕ್ಷಣ ಹಾಗೂ ಸಂಶೋಧನಾ ಗುಣಮಟ್ಟದ ಸುಧಾರಣೆ:** ಸಂಶೋಧನಾ ಗುಣಮಟ್ಟವನ್ನು ಸುಧಾರಿಸಲು ರಾಷ್ಟ್ರೀಯ ಸಂಶೋಧನಾ ನೀತಿಯನ್ನು ಪರಿಚಯಿಸುವುದು.
- ಸ್ಥಳೀಯ ಸಮಸ್ಯೆಗಳ ಪರಿಹರಿಸಲು ಶ್ರೇಷ್ಠತಾ ಕೇಂದ್ರಗಳನ್ನು ರಚಿಸುವುದು. ಬಹುಶಿಸ್ತೀಯ ಶಿಕ್ಷಣ ಮತ್ತು ಸಂಶೋಧನಾ ವಿಶ್ವವಿದ್ಯಾಲಯಗಳನ್ನು (MERU) ಸ್ಥಾಪಿಸುವುದು.
- ಮಾನವಿಕ ಸಂಶೋಧನೆ ಮತ್ತು ನಾವೀನ್ಯತೆಯನ್ನು ಪ್ರೋತ್ಸಾಹಿಸುವುದು. ಬೋಧನಾ ವಿಧಾನಗಳು ಮತ್ತು ಡಿಜಿಟಲ್ ಕಲಿಕಾ ವೇದಿಕೆಗಳನ್ನು ಸುಧಾರಿಸುವುದು.
- ಜಾಗತಿಕ ಮಾನ್ಯತೆಗಾಗಿ ವಿದೇಶಿ ವಿ. ವಿ. ಗಳೊಂದಿಗೆ ಪಾಲುದಾರಿಕೆ ಹೊಂದುವುದು.
- **ಹಣಕಾಸು ಸುಧಾರಣೆ:** SPU ಗಳಿಗೆ ಆರ್ಥಿಕ ಸ್ವಾಯತ್ತತೆಯನ್ನು ಹೆಚ್ಚಿಸುವುದು. ರಾಜ್ಯ ಮಟ್ಟದ ಮೂಲಸೌಕರ್ಯ ಹಣಕಾಸು ಸಂಸ್ಥೆಗಳನ್ನು ಸ್ಥಾಪಿಸುವುದು.
- ಹೆಚ್ಚಿನ ಹಣವನ್ನು ಆಕರ್ಷಿಸಲು SPUಗಳಿಗೆ ತೆರಿಗೆ ವಿನಾಯಿತಿಗಳನ್ನು ಅನುಮತಿಸುವುದು. ಮೂಲಸೌಕರ್ಯವನ್ನು ಸುಧಾರಿಸಲು CSR ಕೊಡುಗೆಗಳನ್ನು ಬಳಸಿಕೊಳ್ಳುವುದು.
- SPU ಗಳಿಗೆ ಒದಗಿಸುವ ವಿದ್ಯುತ್ ಮತ್ತು ನೀರಿನ ದರಗಳನ್ನು ಕಡಿಮೆ ಮಾಡುವುದು.
- **ಆಡಳಿತ ಸುಧಾರಣೆಗಳು:** 2047 ಕ್ಕೆ ರಾಜ್ಯಮಟ್ಟದ ಉನ್ನತ ಶಿಕ್ಷಣ ಮುನ್ನೋಟವನ್ನು ರೂಪಿಸುವುದು.
- ಯುಜಿಸಿಯಂತೆ ಕಾರ್ಯನಿರ್ವಹಿಸಲು ರಾಜ್ಯ ಉನ್ನತ ಶಿಕ್ಷಣ ಮಂಡಳಿಗಳನ್ನು ಬಲಪಡಿಸುವುದು.
- ನಿರ್ಧಾರ ತೆಗೆದುಕೊಳ್ಳುವಲ್ಲಿ SPUಗಳಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡುವುದು. ಉತ್ತಮ ಬೋಧನಾ ಗುಣಮಟ್ಟಕ್ಕಾಗಿ ಅಧ್ಯಾಪಕರ ನೇಮಕಾತಿ ಪ್ರಕ್ರಿಯೆಯನ್ನು ಸುಧಾರಿಸುವುದು.
- **ಉದ್ಯೋಗಾರ್ಹತೆ ಸುಧಾರಣೆ:** ವಿಶ್ವವಿದ್ಯಾಲಯ-ಉದ್ಯಮ ಪಾಲುದಾರಿಕೆಯನ್ನು ಬಲಪಡಿಸುವುದು.
- ವಿದ್ಯಾರ್ಥಿಗಳಿಗೆ ಇಂಟರ್ನ್‌ಷಿಪ್ ಮತ್ತು ಅಪ್ರೆಂಟಿಸ್‌ಷಿಪ್‌ಗಳನ್ನು ಹೆಚ್ಚಿಸುವುದು.
- ಉದ್ಯೋಗ ಸೃಷ್ಟಿಯನ್ನು ಉತ್ತೇಜಿಸಲು ಉದ್ಯಮಶೀಲತಾ ಕಾರ್ಯಕ್ರಮಗಳನ್ನು ಉತ್ತೇಜಿಸುವುದು. ಕೌಶಲ ಅಭಿವೃದ್ಧಿ ಮತ್ತು ನೈಜ ಜಗತ್ತಿನ ಅನ್ವಯಿಕೆಗಳತ್ತ ಗಮನಹರಿಸುವುದು. ಚಿಪ್‌ಸೆಟ್‌ಗಳು ಮತ್ತು ಸಿಸ್ಟಮ್ ಆನ್ ಚಿಪ್ಸ್ (SoC ಗಳು) ಉತ್ಪಾದನೆಗೂ ಆರ್ಥಿಕ ಬೆಂಬಲವನ್ನು ಒದಗಿಸಲಾಗುತ್ತಿದೆ. ❖

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಈ ಹೇಳಿಕೆಗಳನ್ನು ಪರಿಗಣಿಸಿ.
ಎ. ಇ-ಕಚೇರಿ ಭಾರತ ಸರ್ಕಾರದ ರಾಷ್ಟ್ರೀಯ ಇ-ಆಡಳಿತ ಕಾರ್ಯಕ್ರಮದ ಮಿಷನ್ ಮೋಡ್ ಯೋಜನೆಯಾಗಿದೆ
ಬಿ. ಇ-ಕಚೇರಿ ತಂತ್ರಾಂಶವನ್ನು ನ್ಯಾಷನಲ್ ಇನ್ಫಾರ್ಮ್ಯಾಟಿಕ್ಸ್ ಸೆಂಟರ್ ಅಭಿವೃದ್ಧಿಪಡಿಸಿದೆ
ಸರಿಯಾದ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ
ಉತ್ತರ: ಡಿ

2. ಈ ಹೇಳಿಕೆಗಳನ್ನು ಪರಿಗಣಿಸಿ.
ಎ. ಇ-ಕನ್ನಡ ಯೋಜನೆಯು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾಗಿದೆ.
ಬಿ. ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಎಲ್ಲ ಕ್ಷೇತ್ರಗಳಲ್ಲಿ ಕನ್ನಡ ಭಾಷೆಯನ್ನು ಪರಿಣಾಮಕಾರಿ ಅಳವಡಿಕೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ.
ಸರಿಯಾದ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ
ಉತ್ತರ: ಡಿ

3. ಈ ಹೇಳಿಕೆಗಳನ್ನು ಪರಿಗಣಿಸಿ.
1. ಪಾಕ್ ಆಕ್ರಮಿತ ಪ್ರದೇಶವನ್ನು ತನ್ನ ಭೂಪ್ರದೇಶವೆಂದು ಪಾಕಿಸ್ತಾನ ತನ್ನ ಔಪಚಾರಿಕ ನಕ್ಷೆಯಲ್ಲಿ ತೋರಿಸಿದೆ
2. ಪಾಕ್ ಆಕ್ರಮಿತ ಪ್ರದೇಶವನ್ನು ಪಾಕಿಸ್ತಾನ ತನ್ನ ಔಪಚಾರಿಕ ಪ್ರದೇಶವೆಂದು ತೋರಿಸದೆ ಸ್ವಾಯುತ್ತತೆ ಹೊಂದಿರುವ ಪ್ರದೇಶಗಳಾಗಿ ತೋರಿಸಿದೆ
ಸರಿ ಉತ್ತರ ಗುರುತಿಸಿ
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಎರಡೂ ತಪ್ಪು
ಉತ್ತರ: ಬಿ

4. ಭಾರತದಿಂದ ಪಾಕಿಸ್ತಾನಕ್ಕೆ ಯಾವ ಉತ್ಪನ್ನಗಳು 2019ಕ್ಕೂ ಮುನ್ನ ಹೆಚ್ಚಾಗಿ ರಫ್ತಾಗುತ್ತಿತ್ತು?
1. ಪೆಟ್ರೋಲಿಯಂ ಉತ್ಪನ್ನಗಳು
2. ಮೆಕ್ಯಾನಿಕಲ್ ಬಿಡಿಭಾಗಗಳು
3. ಪ್ಲಾಸ್ಟಿಕ್ ಉತ್ಪನ್ನಗಳು 4. ರಾಸಾಯನಿಕಗಳು
ಸರಿ ಉತ್ತರ ಗುರುತಿಸಿ
ಎ. 2, 3 ಮತ್ತು 4 ಬಿ. 1 ಮತ್ತು 2
ಸಿ. 2 ಮತ್ತು 4 ಡಿ. 4 ಮಾತ್ರ
ಉತ್ತರ: ಎ

5. ಆಫ್ರಿಕಾದಲ್ಲಿ ಜೈವಿಕ ವೈವಿಧ್ಯ ಇರುವ ಪ್ರದೇಶಗಳನ್ನು ಸಂರಕ್ಷಿಸಲು ಐರೋಪ್ಯ ಆಯೋ ಯಾವ ಕಾರ್ಯಕ್ರಮವನ್ನು ಜಾರಿಗೆ ತರುತ್ತಿದೆ?
ಎ. ನೇಚರ್ ಆಫ್ರಿಕಾ ಕಾರ್ಯಕ್ರಮ
ಬಿ. ಆಫ್ರಿಕಾ ಎನ್ವಿರಾನ್ಮೆಂಟ್ ಪ್ರೊಟೆಕ್ಷನ್ ಪ್ರೋಗ್ರಾಮ್
ಸಿ. ಆಫ್ರಿಕಾ-ಏಷ್ಯಾ ಪ್ರೊಟೆಕ್ಷನ್ ಆಫ್ ಎನ್ವಿರಾನ್ಮೆಂಟ್ ಪ್ರೋಗ್ರಾಮ್
ಡಿ. ಆಫ್ರಿಕಾ ಜೈವಿಕ ವೈವಿಧ್ಯ ಸಂರಕ್ಷಣಾ ಕಾರ್ಯಕ್ರಮ
ಉತ್ತರ: ಎ

6. ಕೆಳಗಿನ ಯಾವ ಕಾಯ್ದೆಯನ್ವಯ ರಾಷ್ಟ್ರೀಯ ಮಹಿಳಾ ಆಯೋಗವನ್ನು ಸ್ಥಾಪಿಸಲಾಯಿತು?
ಎ. ರಾಷ್ಟ್ರೀಯ ಮಹಿಳಾ ಆಯೋಗ ಕಾಯ್ದೆ-1988
ಬಿ. ರಾಷ್ಟ್ರೀಯ ಮಹಿಳಾ ಆಯೋಗ ಕಾಯ್ದೆ-1990
ಸಿ. ಸಿಎಂ ಮಹಿಳಾ ಆಯೋಗ ಕಾಯ್ದೆ-1991
ಡಿ. ರಾಷ್ಟ್ರೀಯ ಮಹಿಳಾ ಹಕ್ಕುಗಳ ಕಾಯ್ದೆ-1990
ಉತ್ತರ: ಬಿ

7. ಯಾವುವು ಮಹಿಳಾ ಹಕ್ಕುಗಳನ್ನು ಸಂರಕ್ಷಿಸುವ ಕಾನೂನಾತ್ಮಕ ಕಾಯ್ದೆಗಳಾಗಿವೆ?
1. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ನಿಷೇಧ ಕಾಯ್ದೆ-2013
2. ಗಣಿಗಾರಿಕೆ ಕಾಯ್ದೆ-1952
3. ಕಾರ್ಖಾನೆ ಕಾಯ್ದೆ-1948
4. ಕನಿಷ್ಠ ವೇತನ ಕಾಯ್ದೆ-1948
ಸರಿ ಉತ್ತರ ಗುರುತಿಸಿ
ಎ. 1 ಮಾತ್ರ ಬಿ. 1, 2 ಮತ್ತು 4
ಸಿ. 1, 2, 3 ಮತ್ತು 4 ಡಿ. 3 ಮತ್ತು 4
ಉತ್ತರ: ಸಿ

8. ಯಾವ ಯುದ್ಧದಲ್ಲಿ ಸರ್ಬಿಯಾ ಕೊಸೋವೋ ಮೇಲಿನ ನಿಯಂತ್ರಣವನ್ನು ಕಳೆದುಕೊಂಡಿತ್ತು?
ಎ. ಕೊಸೋವೋ ಯುದ್ಧ - 1389
ಬಿ. ಕೊಸೋವೋ ಯುದ್ಧ - 1789
ಸಿ. ಸರ್ಬಿಯಾ ಯುದ್ಧ - 1254
ಡಿ. ಎರಡನೇ ಮಹಾಯುದ್ಧ - 1939
ಉತ್ತರ: ಎ

9. ಕೊಸೋವೋ ಪ್ರದೇಶದ ಜನಸಂಖ್ಯೆಯ ಸ್ವರೂಪಕ್ಕೆ ಸಂಬಂಧಿಸಿ ಸರಿ ಹೇಳಿಕೆ ಗುರುತಿಸಿ.
1. ಈ ಪ್ರದೇಶದಲ್ಲಿ ಅಲ್ಬೇನಿಯ ಮೂಲದ ಮುಸಲ್ಮಾನರು ಹೆಚ್ಚಾಗಿ ವಾಸಿಸುತ್ತಿದ್ದಾರೆ
2. ಈ ಪ್ರದೇಶದಲ್ಲಿ ಕಜಕಸ್ತಾನ ಮೂಲದ ಮುಸಲ್ಮಾನರು ಹೆಚ್ಚಾಗಿ ವಾಸಿಸುತ್ತಿದ್ದಾರೆ
3. ಈ ಪ್ರದೇಶದಲ್ಲಿ ಅಲ್ಬೇನಿಯ ಮತ್ತು ಕಜಕಸ್ತಾನ ಮೂಲದ ಮುಸಲ್ಮಾನರು ಹೆಚ್ಚಾಗಿ ವಾಸಿಸುತ್ತಿದ್ದಾರೆ
ಸರಿ ಉತ್ತರ ಗುರುತಿಸಿ
ಎ. 1, 2 ಮತ್ತು 3 ಬಿ. 1 ಮಾತ್ರ
ಸಿ. 2 ಮಾತ್ರ ಡಿ. 3 ಮಾತ್ರ
ಉತ್ತರ: ಬಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

Write an essay on any one of the following:

b) Mobile Phones

(………Contd)

as it is the fastest communicating device. It helps us to call the police and relatives so that they provide us help as soon as possible.

Helpful in emergency situations

Suppose a situation in which you are driving a car on an unknown road, and the car gets stuck. So in this situation, mobile is the first device that helps us to call the mechanic or any family member to get rid of the problem. If we get sick and need a doctor, and no one is at home we desperately use mobile to contact for help.

So generally in these type of situations, mobile is the device which we can use for fast communication.

Earn money via mobile

We can use our smartphones to earn money. We can create blogs, YouTube videos, promote business, and other activities to make money.

Disadvantages of Mobile Phones

1. Wasting Time: Nowaday's people have become addicted to mobiles. Even when we don't need to use it, we surf the net, play games making a real addict. As mobile phones became smarter, people became dumber.
2. Making us Non - communicable: Wide usage of mobiles has resulted in less meet and talk more. Now people don't meet physically rather chat or comment on social media.
3. Loss of Privacy: It is a major concern now of losing one's privacy because of much mobile usage. Today anyone could easily access the information like where you, your friends and family live, what is your occupation, where is your house, etc., just by easily browsing through your social media account.
4. Money wastage: As the usefulness of mobiles has increased so their costing. Today people are spending a lot amount of money of buying smartphones, which could rather be spent on more useful things like education, or other useful things in our life.

Conclusion

Like a coin has two sides, similarly a mobile phone has both positive and negative sides, which depends on how we use it. As mobiles have become a pivotal part of our life, so we should use in a proper way, carefully for our better hassle-free life rather using it improperly and making it a virus in our life.

(C) Chandrayan-3

India's third lunar mission, Chandrayaan – 3 made history on August 23, 2023, by successfully achieving a soft landing on the south pole of the moon. With this, India became the first nation to land on the moon's south pole and the fourth (after Russia, the US and China) to land successfully on Earth's only natural satellite

The Indian Space Research Organisation (ISRO) had undertaken two previous missions to the moon, namely, the Chandrayaan I and the Chandrayaan II. Chandrayaan-1 was launched in 2008 and lasted till 2009 after communications to it were lost. The mission, among other things, tested a crash landing on the lunar surface. Chandrayaan-2, launched in 2019 attempted a soft landing on the moon but failed. The third mission, Chandrayaan-3 took into account the drawbacks and lessons learnt from the second mission and successfully achieved soft landing.

Objectives of Chandrayaan 3 Mission

*To demonstrate a safe and soft landing on the lunar surface
*To demonstrate rover roving on the moon
*To conduct in-situ scientific experiments

Previous lunar missions have focused on the equatorial region of the moon owing to its favourable terrain. The south pole region is more challenging compared to the equatorial region. The lack of enough sunlight and extreme cold conditions (up to -230 degrees c) lead to difficulties in instrument operation and sustainability. The polar regions may contain water according to scientists. Also, experts think that the craters in these regions contain fossil records of the early planetary system.

. Four alternative are given for each of the following questions / incomplete statements, write the correct or the most appropriate answer in the space provided.

1) Choose the appropriate question tag and fill in the blank. Manasa sings well, ……..?
a. does she b. didn't she
c. doesn't she d. don't she
Ans:-(a) does she

1. The Gentleman, Don Anselmo, was very fond of …………
a. Children b. money
c. the land d. dress
Ans : (a) Children

2. Wangjia was sent by the folic for some purpose. It was,
a. To meet the monsters
b. to get on a long journey
c. to meet the Bird of Happiness
d. to learn more about the world.
Ans : (c) to meet the Bird of Happiness

3. 'Discipline is a thing of the past, sir, it's you or us' who said this?
a. Francisco b. Guillermo's ire's
c. Juan patino d. Pedro Qutirrez
Ans : (a) Francisco

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

PUC -CET BIOLOGY

18). **Statement (A)** Photorespiration decreases photosynthetic output.
Statement (B) In photorespiratory pathway, neither ATP nor NADPH is produced.
(a) Both the statements 'A' and 'B' are correct
(b) Both the statements 'A' and 'B' are wrong
(c) Statement 'A' is correct and statement 'B' is wrong
(d) Statement 'B' is correct and statement 'A' is wrong
Ans:a

Expl:- Photorespiration is a light dependent cyclic phenomenon of Oxygenation of RuBP and release of CO_2 by the photosynthetic organs of plant. Photorespiration is considered as a Wasteful process because there is no synthesis of sugar and ATP or NADPH also the CO_2 is released with the utilisation of ATP.

It decreases the overall photosynthetic output in C_3 palnts. C_4 plants lacks the process of photorespiration thus, the productivity and yields in these plants are better than those in C_3 and other plants

19) If a recombinant DNA bearing gene for resistance to Ampicillin is transferred into E.coli cells, host cells become transformed into Ampicillin resistant cells. What happens when these E.coli are grown on medium containing Ampicillin?
(a) Non-transformants will grow and transformants will die
(b) Non-transformants will die and transformants will grow
(c) Both non-transformants and transformant will die
(d) Both non-transformant and transformant will grow
Ans:-b

20) Identify the incorrect statement from the following.
(a) The reservoir pool for phosphorus cycle is earth's crust, whereas atmosphere is the reservoir pool for carbon cycle.
(b) During carbon cycle and phosphorus cycle, there is very little respiratory release of carbon and phosphorus respectively.
(c) Atmospheric inputs of phosphorus throughout rainfall are much smaller than carbon inputs.
(d) Gaseous exchanges of phosphorus between organism and environment are negligible
Ans: b

Expl:- All the statements given in the questions are correct except the one that there is very little respiratory release of carbon and phosphorus during each carbon and phosphorus cycle. In carbon cycle a considerable amount or large amount of carbon is returned to the atmosphere in the form of CO_2 through numerous respiratory activities of producers and consumers.

Decomposers also contribute substantially to CO_2 pool by their processing of waste materials and dead organic matter of land or oceans. Some amount of carbon is lost to sediments and removed from circulation. Additional human activities are also responsible for releasing CO_2 to the atmosphere. Whereas, in phosphorus cycle there is no respiratory release of phosphorus into the atmosphere.

21) The result of the following reaction/ experiment carried out by *Avery et. al.* on *Streptococcus pneumoniae* has proved conclusively that DNA is the genetic material
(a) Live 'R' strain + DNA from 'S' strain + DNAase
(b) Heat killed 'R' strain + DNA from 'S' strain + DNAase
(c) Live 'R' strain + DNA from 'S' strain + RNAase
(d) Live 'R' strain + Denatured DNA of 'S' strain+protease
Ans:a

Expl:- In 1944, *Avery et. al.* purified biochemical's from the heat killed *S*-type bacteria into three components, i.e., DNA, carbonydrate and protein. DNA fraction was further divided into two parts (i.e., one with DNase and one without DNase). It was observed that only DNA of *S*-type can change *R*-type of bacteria in to *S*-type.

Therefore, the character or gene of virulence is located in DNA. Protease and hormone RNases also did not cause this transformation. This shows that Protein and RNA was not the transforming substance. Hence, they came to the conclusion that the chemical to be inherited was DNA.

22) Match the storage products listed under column I with the organisms given under column II; choose the appropriate option from the given choices.

Column I	Column II
A) Glycogen	1) Sargassum
B) Pyrenoids	2) Nostoc
C) Laminarian and mannitol	3) Polysiphonia
	4) spirogyra
D) Floridean strach	5) agaricus

	A	B	C	D
(a)	3	4	1	5
(b)	4	3	5	2
(c)	5	4	1	3
(d)	2	1	4	3

Ans:C

(Contd.)

ಚಿನ್ನ ಕಳ್ಳಸಾಗಣೆ ಪ್ರಕರಣ • ಅಮೆರಿಕ ಪೌರತ್ವ ಹೊಂದಿರುವ ಆರೋಪಿ

ತರುಣ್ ರಾಜು ಜಾಮೀನು ಅರ್ಜಿ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ ಹರ್ಷವರ್ಧಿನಿ ರನ್ಯಾ ರಾವ್ ಚಿನ್ನ ಕಳ್ಳಸಾಗಣೆ ಪ್ರಕರಣದ ಎರಡನೇ ಆರೋಪಿ ತರುಣ್ ಕೊಂಡೂರು ರಾಜು ಅವರಿಗೆ ನ್ಯಾಯಾಲಯ ಜಾಮೀನು ನಿರಾಕರಿಸಿದೆ.

ಆರ್ಥಿಕ ಅಪರಾಧ ಪ್ರಕರಣಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ವಿಶ್ವನಾಥ ಚನ್ನಬಸಪ್ಪ ಗೌಡರ್ ಅವರು ಬುಧವಾರ ಜಾಮೀನು ನಿರಾಕರಿಸಿ, ಆದೇಶ ಹೊರಡಿಸಿದ್ದಾರೆ. ರೆವಿನ್ಯೂ ಗುಪ್ತಚರ ಅಧಿಕಾರಿಗಳು (ಡಿಆರ್‌ಐ) ಮಾರ್ಚ್ 9ರಂದು ತರುಣ್ ಅವರನ್ನು ಬಂಧಿಸಿ, ಐದು ದಿನ ವಿಚಾರಣೆ ನಡೆಸಿ, ನ್ಯಾಯಾಂಗ ಬಂಧನಕ್ಕೆ ನೀಡಿದ್ದಾರೆ. ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದಾರೆ.

ರನ್ಯಾ ಅರ್ಜಿ ವಿಚಾರಣೆ ಮುಂದೂಡಿಕೆ

ರನ್ಯಾ ಅವರ ಜಾಮೀನು ಅರ್ಜಿಯ ವಿಚಾರಣೆಯನ್ನು ನಗರದ ಸೆಷನ್ಸ್ ನ್ಯಾಯಾಲಯ ಶುಕ್ರವಾರಕ್ಕೆ ಮುಂದೂಡಿದೆ. ಆಕ್ಷೇಪಣೆ ಸಲ್ಲಿಸಲು ಡಿಆರ್‌ಐ ಪರ ವಕೀಲರು ಕಾಲಾವಕಾಶ ಕೇಳಿದ ಕಾರಣ ವಿಚಾರಣೆ ಮುಂದೂಡಿ ಆದೇಶಿಸಿದರು.



ಆರೋಪಿ ತರುಣ್ ರಾಜು ಸಲ್ಲಿಸಿದ್ದ ಜಾಮೀನು ಅರ್ಜಿಗೆ ಆಕ್ಷೇಪ ವ್ಯಕ್ತಪಡಿಸಿದ ಡಿಆರ್‌ಐ ಪರ ವಿಶೇಷ ಸರ್ಕಾರಿ ಅಭಿಯೋಜಕ (ಎಸ್‌ಪಿಪಿ) ಮಧು ಎನ್. ರಾವ್, ರನ್ಯಾ ಹಾಗೂ ತರುಣ್ ನಡುವಣ ಚಿನ್ನ ಕಳ್ಳಸಾಗಣೆ, ನಿರಂತರ ದುಬೈ ಪ್ರಯಾಣದ ಬಗ್ಗೆ ನ್ಯಾಯಾಲಯಕ್ಕೆ ತಿಳಿಸಿದರು.

2023 ಹಾಗೂ 2025ರ ನಡುವಣ ಅವಧಿಯಲ್ಲಿ ರನ್ಯಾ 26 ಬಾರಿ ತರುಣ್ ಜತೆ ಒಟ್ಟಿಗೆ ದುಬೈಗೆ ಹೋಗಿ ಬಂದಿದ್ದಾರೆ. ಮಾರ್ಚ್ 3ರಂದು ರನ್ಯಾ ಅವರು ತರುಣ್‌ಗೂ ದುಬೈಗೆ ವಿಮಾನ ಪ್ರಯಾಣದ ಟಿಕೆಟ್ ಬುಕ್ ಮಾಡಿದ್ದು, ಇಬ್ಬರೂ ಒಟ್ಟಿಗೆ ತೆರಳಿದ್ದರು. ತರುಣ್, ಅಲ್ಲಿಂದ ಚಿನ್ನ ಖರೀದಿಸಿ ವಾಪಸ್ ಬರುವಾಗ ದುಬೈ ವಿಮಾನ ನಿಲ್ದಾಣದಲ್ಲಿ ಜಿನೀವಾಕ್ಕೆ ತೆರಳುತ್ತಿರುವುದಾಗಿ ಮಾಹಿತಿ ನಮೂದಿಸಿದ್ದರು. ಆದರೆ, ಚಿನ್ನವನ್ನು ರನ್ಯಾಗೆ ನೀಡಿದ್ದ ತರುಣ್, ಹೈದರಾಬಾದ್‌ಗೆ ತೆರಳಿದ್ದರು' ಎಂದು ಎಸ್‌ಪಿಪಿ ನ್ಯಾಯಾಲಯಕ್ಕೆ ಹೇಳಿದರು.

'ರನ್ಯಾ ಅವರ ಮೊಬೈಲ್‌ನ ವಿಧಿ ವಿಜ್ಞಾನ ಪ್ರಯೋಗಾಲಯದ ವಿಶ್ಲೇಷಣಾ ವರದಿಯಲ್ಲಿ ತರುಣ್ ಜತೆ ಚಿನ್ನ ಕಳ್ಳಸಾಗಣೆಯಲ್ಲಿ ಭಾಗಿಯಾಗಿರುವ ಸಾಕ್ಷ್ಯ ದೊರೆತಿದೆ. ತರುಣ್ ಅಮೆರಿಕ ಪೌರತ್ವ ಹೊಂದಿದ್ದಾರೆ. ರನ್ಯಾ ಬಂಧನವಾಗುತ್ತಿದ್ದಂತೆ ಮಾರ್ಚ್ 8ರಂದು ಅಮೆರಿಕಕ್ಕೆ ಪರಾರಿಯಾಗಲು ಯತ್ನಿಸಿದ್ದರು. ಆರೋಪಿ ಬಂಧನಕ್ಕೆ ಲುಕ್‌ಔಟ್ ನೋಟಿಸ್ ಜಾರಿಗೊಳಿಸಿದ್ದರಿಂದ ಅನಿವಾರ್ಯವಾಗಿ ಬೆಂಗಳೂರಿಗೆ ಹಿಂದಿರುಗಿದ್ದರು. ಆರೋಪಿಯು ಅಮೆರಿಕ ಪೌರತ್ವ ಹೊಂದಿರುವುದು ಹಾಗೂ ವಿದೇಶಗಳಿಗೆ ನಿರಂತರವಾಗಿ ಪ್ರವಾಸ ಮಾಡುತ್ತಿರುವುದರ ಹಿಂದೆ ಹಲವು ಅನುಮಾನಗಳಿದ್ದು, ಈ ಬಗ್ಗೆಯೂ ಹೆಚ್ಚಿನ ತನಿಖೆ ಮುಂದುವರಿದಿದೆ' ಎಂದು ಎಸ್‌ಪಿಪಿ ಹೇಳಿದರು.

ತರುಣ್ ಪರ ವಾದ ಮಂಡಿಸಿದ ವಕೀಲರು, 'ತರುಣ್ ಬಂಧನದ ವೇಳೆ ಡಿಆರ್‌ಐ, ಬಂಧನದ ನಿಯಮಗಳನ್ನು ಉಲ್ಲಂಘಿಸಿದೆ. ರನ್ಯಾ ಹಾಗೂ ತರುಣ್ ಒಟ್ಟಿಗೆ ಹಲವು ಬಾರಿ ದುಬೈಗೆ ಹೋಗಿ ಬಂದಿದ್ದಾರೆ ಎನ್ನುವ ಮಾತಿನಲ್ಲಿ ಸತ್ಯವಿದೆ ಎಂದಾದರೆ ಆಗ ಡಿಆರ್‌ಐ ಏನು ಮಾಡುತ್ತಿತ್ತು' ಎಂದು ಪ್ರಶ್ನಿಸಿದರು.

ಸ್ಪೀಕರ್ ಯು.ಟಿ.ಖಾದರ್‌ಗೆ 'ಕೆಂಗಲ್ ಹನುಮಂತಯ್ಯ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಕೆಂಗಲ್ ಹನುಮಂತಯ್ಯ ದತ್ತಿ ಪ್ರಶಸ್ತಿ'ಗೆ ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್ ಆಯ್ಕೆಯಾಗಿದ್ದಾರೆ.

ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಪ್ರಶಸ್ತಿ ಸ್ಥಾಪಿಸಿದೆ. ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ.

ಯು.ಟಿ. ಖಾದರ್ ಅವರು ಕರ್ನಾಟಕದ ಸಾಂಸ್ಕೃತಿಕ ಲೋಕಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಹಿಂದೆ ಆರೋಗ್ಯ ಹಾಗೂ ವಸತಿ ಸಚಿವರಾಗಿ ಕಾರ್ಯ ನಿರ್ವಹಿಸುವಾಗಲೂ ಜನಪರ ಚಿಂತನೆಗಳನ್ನು ಹೊಂದಿದ್ದರು. ಪ್ರಸ್ತುತ ವಿಧಾನಸಭೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವ ಅವರು, ಹಲವು ಮಹತ್ವದ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಇತ್ತೀಚೆಗೆ ಯಶಸ್ವಿಯಾಗಿ ನಡೆದ 'ಪುಸ್ತಕ ಮೇಳ' ಅದಕ್ಕೆ ಉದಾಹರಣೆ ಎಂದು ಕಸಾಪ ತಿಳಿಸಿದೆ.

ಜಯಪ್ರಕಾಶಗೌಡ, ಸಂಗೀತಾ ಕಟ್ಟಿಗೆ 'ಕೆ.ಎಸ್.ನ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಮಂಡ್ಯ: ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ನೀಡುವ 5ನೇ ವರ್ಷದ 'ಕೆ.ಎಸ್.ನ ಸಾಹಿತ್ಯ ಪ್ರಶಸ್ತಿ'ಗೆ ಮಂಡ್ಯದ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ ಗೌಡ, ದಕ್ಷಿಣ ಕನ್ನಡ ಜಿಲ್ಲೆಯ ಲೇಖಕ ನಾ.ದಾಮೋದರ ಶೆಟ್ಟಿ ಭಾಜನರಾಗಿದ್ದಾರೆ. 'ಕೆ.ಎಸ್.ನ ಕಾವ್ಯ ಗಾಯನ ಪ್ರಶಸ್ತಿ'ಗೆ ಗಾಯಕರಾದ ಧಾರವಾಡದ ಸಂಗೀತಾ ಕಟ್ಟಿ ಮತ್ತು ಕಾಸರಗೋಡಿನ ರಮೇಶ್ ಚಂದ್ರ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹25 ಸಾವಿರ ಮತ್ತು ಫಲಕವನ್ನು ಒಳಗೊಂಡಿದೆ. ಮಂಡ್ಯದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಮಾರ್ಚ್ 23ರಂದು ಬೆಳಿಗ್ಗೆ 10.30ಕ್ಕೆ ನಡೆಯಲಿರುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು. ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದು ಟ್ರಸ್ಟ್ ಅಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ ಮಾಹಿತಿ ನೀಡಿದ್ದಾರೆ.

ಪ್ರೊ. ಜಯಪ್ರಕಾಶಗೌಡ



ದಾಮೋದರ ಶೆಟ್ಟಿ

ಸಂಗೀತಾ ಕಟ್ಟಿ



ರಮೇಶ್ ಚಂದ್ರ

ರಾಯಚೂರಿನಲ್ಲಿ ಗರಿಷ್ಠ ತಾಪಮಾನ

ಪ್ರಜಾವಾಣಿ ವಾರ್ತೆ

ರಾಯಚೂರು: ಜಿಲ್ಲೆಯಲ್ಲಿ ರಣ ಬಿಸಿಲಿದ್ದು, ಧಗೆ ಹೆಚ್ಚಾಗಿದೆ. ಬುಧವಾರ ಗರಿಷ್ಠ 42.7 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

ಬಿಸಿಲಿನ ಝಳಕ್ಕೆ ಜನ ಮಧ್ಯಾಹ್ನದ ವೇಳೆ ಮನೆಗಳಿಂದ ಹೊರಗೆ ಬರಲು ಹಿಂಜರಿಯುತ್ತಿದ್ದಾರೆ. ಮಾರುಕಟ್ಟೆ ಪ್ರದೇಶ ಜನರಿಲ್ಲದೇ ಬಿಕೋ ಎನ್ನುತ್ತಿದೆ. ಬೆಳಗಿನ ವಾಯುವಿಹಾರದ ಸಮಯ ಹಾಗೂ ಸಂಜೆ ಮಾತ್ರ ಮಾರುಕಟ್ಟೆ ಪ್ರದೇಶದಲ್ಲಿ ಜನ ಕಾಣಿಸಿಕೊಳ್ಳುತ್ತಿದ್ದಾರೆ.

ಶೃಂಗೇರಿಯಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಶೃಂಗೇರಿ: ಶೃಂಗೇರಿ ತಾಲ್ಲೂಕಿನ ಹಲವು ಕಡೆ ಬುಧವಾರ ಸಂಜೆ ಗುಡುಗು ಮತ್ತು ಸಿಡಿಲಿನೊಂದಿಗೆ ಧಾರಾಕಾರ ಮಳೆ ಸುರಿಯಿತು. ಶೃಂಗೇರಿ ಪಟ್ಟಣ, ತಾಲ್ಲೂಕಿನ ಮೆಣಸೆ, ತೆಕ್ಕೂರು, ವೈಕುಂಠಪುರ, ಕಲ್ಕಟ್ಟೆ, ಮೆಣಸೆ, ಸಸಿಮನೆ, ಕುಂಚೆಬೈಲು, ನೆಮ್ಮರ್ ಭಾಗದಲ್ಲಿ ಮಳೆ ಸುರಿದಿದೆ.

ಮನೆಗೆ ಹಾನಿ: ಬಾಳೆಹೊನ್ನೂರು ಪಟ್ಟಣದ ಸುತ್ತಮುತ್ತ ಬುಧವಾರ 1ಗಂಟೆಗೂ ಅಧಿಕ ಕಾಲ ಮಳೆ ಸುರಿದಿದ್ದು, ಸಿಡಿಲಿನಿಂದ ಮನೆಯೊಂದಕ್ಕೆ ಹಾನಿಯಾಗಿದೆ.

ಮೆಣಸುಕೊಡಿಗೆ ಮಂಜುನಾಥ್ ಎಂಬುವವರ ಮನೆಯ ಮುಂಭಾಗದಲ್ಲಿದ್ದ ತೆಂಗಿನ ಮರಕ್ಕೆ ಸಿಡಿಲು ಬಡಿದಿದ್ದು, ಮರ ಸೀಳಾಗಿದೆ. ಬಳಿಕ, ಅದು ಮನೆಗೆ ತಾಗಿ ಮನೆಯ ಒಳಗಿದ್ದ ಇನ್ವರ್ಟರ್‌ಗೆ ಹಾನಿಯಾಗಿದೆ. ನೆಲಕ್ಕೆ ಹಾಕಿದ್ದ ಟೈಲ್ಸ್ ಒಡೆದಿವೆ. ಇಡೀ ಮನೆಯ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ವೈರ್‌ಗಳು ಸುಟ್ಟು ಕರಕಲಾಗಿವೆ.

'ಮನೆಯಲ್ಲಿದ್ದವರಿಗೆ ಏನೂ ಆಗಿಲ್ಲ. ₹40 ಸಾವಿರಕ್ಕೂ ಅಧಿಕ ಹಾನಿಯಾಗಿದೆ' ಎಂದು ಮಂಜುನಾಥ್ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪ್ರಶ್ನೆಪತ್ರಿಕೆ ಸೋರಿಕೆ ಸುದ್ದಿ: ಎಫ್‌ಐಆರ್

ಕೊಪ್ಪಳ: ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ಆರಂಭವಾಗಲು ಒಂದು ದಿನ ಬಾಕಿ ಇರುವಾಗಲೇ ನಕಲಿ ಪ್ರಶ್ನೆಪತ್ರಿಕೆಯನ್ನು ಸಾಮಾಜಿಕ ತಾಣಗಳಲ್ಲಿ ಹಂಚಿಕೊಂಡಿರುವ ಘಟನೆ ನಡೆದಿದ್ದು, ಈ ಕುರಿತು ಕಾನೂನು ಕ್ರಮ ಕೈಗೊಳ್ಳುವಂತೆ ಡಿಡಿಪಿಐ ಶ್ರೀಶೈಲ ಬಿರಾದಾರ ನಗರ ಪೊಲೀಸ್ ಠಾಣೆಗೆ ಬುಧವಾರ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಾಗಿದೆ.

'ಇನ್‌ಸ್ಟಾ ಗ್ರಾಂ ಖಾತೆಯಲ್ಲಿ ಎಸ್.ಕೆ. ಕ್ರಿಯೇಷನ್ಸ್ ಹೆಸರಿನಲ್ಲಿ ಪ್ರಶ್ನೆಪತ್ರಿಕೆ ಪೋಸ್ಟ್ ಮಾಡಿದ್ದು ಗಮನಕ್ಕೆ ಬಂದಿದೆ. ಆ ಪೋಸ್ಟ್ ಗಮನಿಸಿದರೆ ಮೇಲ್ನೋಟಕ್ಕೆ ನಕಲಿ ಎಂದು ಕಂಡುಬಂದಿದೆ. ಸುಳ್ಳು ಸುದ್ದಿ ಹರಡಿಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಸಾರ್ವಜನಿಕ ಆಸ್ಪತ್ರೆ ದೇವನಹಳ್ಳಿ
ಆಡಳಿತ ವೈದ್ಯಾಧಿಕಾರಿಗಳ ಕಛೇರಿ,
ದೂರವಾಣಿ: 80298 02005, ಇಮೇಲ್: amodevanahalli@gmail.com
ಸಂಖ್ಯೆ : ಸಾ.ಆ.ದೇ./ಇ-ಟೆಂಡರ್/01/2024-25 ದಿನಾಂಕ : 17-03-2025

ತಿದ್ದುಪಡಿ ಪ್ರಕಟಣೆ

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯನ್ನು ಇದೇ ದಿನಪತ್ರಿಕೆಯಲ್ಲಿ ದಿನಾಂಕ : 16-03-2025 ರಂದು ಪ್ರಕಟಿಸಲಾಗಿದ್ದು, ಇದರಲ್ಲಿ 2024-25 ನೇ ಸಾಲಿಗೆ ಎಂಬುದನ್ನು 2025-26 ನೇ ಸಾಲಿಗೆ ಹಾಗೂ ಮರು ಟೆಂಡರ್ ಪ್ರಕಟಣೆ ಎಂಬುದನ್ನು ಇ-ಟೆಂಡರ್ ಪ್ರಕಟಣೆ ಎಂಬುದಾಗಿ ಓದಿಕೊಳ್ಳುವುದು. ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/- ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ದೇವನಹಳ್ಳಿ.
ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/5778/2024-25

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಛೇರಿ. ಕನನೀಸ ಮತ್ತು ಒಚ ಮಂಡಳಿ, ಜಲಭವನ, ನಂ.ಪಿ-4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ ಸರಸ್ವತಿ ಪುರಂ, ಮೈಸೂರು-570 009.
ದೂ.0821-2545894. Email: kwbcemys2014@gmail.com

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕಾಮಗಾರಿಯ ವಿವರ: ಮಾನ್ಯ ಮುಖ್ಯ ಮಂತ್ರಿಗಳ ನಗರೋತ್ಥಾನ ಹಂತ-4ರ ಯೋಜನೆಯಡಿ ಮಡಿಕೇರಿ ನಗರಸಭೆ ವ್ಯಾಪ್ತಿಯ ಮಡಿಕೇರಿ ನಗರದ ಸೆಂಟ್. ಜೋಸೆಫ್ ಶಾಲೆಯ ಬಳಿ ಹಾಲಿ ಇರುವ 2.5 ಲಕ್ಷ ಲೀ. ಸಾಮರ್ಥ್ಯದ ಮೇಲ್ಮಟ್ಟದ ಜಲ ಸಂಗ್ರಹಗಾರವನ್ನು ನೆಲಸಮಗೊಳಿಸಿ 5.00 ಲಕ್ಷ ಲೀ. ಸಾಮರ್ಥ್ಯದ ಮೇಲ್ಮಟ್ಟದ ಜಲ ಸಂಗ್ರಹಗಾರವನ್ನು ನಿರ್ಮಿಸುವ ಕಾಮಗಾರಿಯ ರೂ.126.24 ಲಕ್ಷಗಳಿಗೆ (ಜಿ.ಎಸ್.ಟಿ ಹೊರತುಪಡಿಸಿ) ಕರ್ನಾಟಕ ಸಾರ್ವಜನಿಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸಂಗ್ರಹಣೆಗಳ ಪೋರ್ಟಲ್ ಇಂಡೆಂಟ್ ಸಂಖ್ಯೆ: KUWSDB/2024-25/WS/WORK_INDENT326 ರಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪೋರ್ಟಲ್ ವೆಬ್‌ಸೈಟ್ https:// kppp.karnataka.gov.in ಸಂಪರ್ಕಿಸುವುದು.

ಸಹಿ/- ಅಧೀಕ್ಷಕ ಅಭಿಯಂತರರು, ಕ.ನ.ನೀ.ಸ. ಮತ್ತು ಒ.ಚ. ಮಂಡಳಿ, ಮೈಸೂರು
DIPR-DD-MYS/1465/KSMCA-1090/2024-25

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ: 16ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು-52.
ದೂರವಾಣಿ: 080-22268677/78/79 ಫ್ಯಾಕ್ಸ್: 080-22268667
ಇ-ಮೇಲ್ : kerc-ka@nic.in ವೆಬ್‌ಸೈಟ್: www.kerc.karnataka.gov.in
ಸಂಖ್ಯೆ : ಕವಿನಿಆ/ಕೆಇಜಿಸಿ/ಕೆಇಡಿಸಿ/2024-25/1756 ದಿನಾಂಕ: 18.03.2025

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಕರಡು – ಕರ್ನಾಟಕ ವಿದ್ಯುಚ್ಛಕ್ತಿ ಗ್ರಿಡ್ (ಜಾಲ) ಸಂಹಿತೆ ಮತ್ತು ವಿತರಣಾ ಸಂಹಿತೆ 2024.

ಉಲ್ಲೇಖ: ಕವಿನಿಆ/ಕೆಇಜಿಸಿ/ಕೆಇಡಿಸಿ/2024-25/1687, ದಿನಾಂಕ 13.03.2025.

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ಕರಡು ವಿನಿಮಯಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ 23.01.2025 ರಂದು ಪ್ರಕಟಗೊಳಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲ ತಾಣ https://kerc.karnataka.gov.in. ದಲ್ಲಿ ಸದರಿ ಕರಡನ್ನು ಲಭ್ಯವಿರಿಸಲಾಗಿದೆ.

ಆಯೋಗವು ಸದರಿ ವಿಷಯದ ಬಗ್ಗೆ ದಿನಾಂಕ 01.04.2025 ರಂದು ನಡೆಯಬೇಕಾಗಿದ್ದ ಸಾರ್ವಜನಿಕ ವಿಚಾರಣೆಯನ್ನು **ದಿನಾಂಕ 08.04.2025 ರಂದು ಮಧ್ಯಾಹ್ನ 3.00 ಗಂಟೆಗೆ** ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ಏರ್ಪಡಿಸಿದೆ. ಆಸಕ್ತರು ಈ ವಿಚಾರಣೆಯಲ್ಲಿ ಭಾಗವಹಿಸಿ ಆಯೋಗದ ಮುಂದೆ ಖುದ್ದಾಗಿ ಹಾಜರಾಗಬಹುದು ಮತ್ತು ಮೌಖಿಕ ಸಲ್ಲಿಕೆಗಳನ್ನು ಮಾಡಬಹುದು.

ಸಹಿ/-ಕಾರ್ಯದರ್ಶಿ, ಕವಿನಿಆ, ಬೆಂಗಳೂರು.
ವಾಸಾಸಂಇ/ಉನಿ-ಸಿ.ಪಿ/5782/ಕೆಎಸ್‌ಎಂಸಿಎ/2024-25

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052. ಫೋನ್: 080-22268677/78/79, ಫ್ಯಾಕ್ಸ್: 080-22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ನಂ: ಎಸ್/ಎಫ್-34/ವಾ-17/1757 ದಿನಾಂಕ: 18.03.2025

ಪ್ರಕಟಣೆ

ವಿಷಯ: ಚರ್ಚಾಪತ್ರ ಕುರಿತಂತೆ ಸಾರ್ವಜನಿಕರಿಂದ ಸಲಹೆ, ಸೂಚನೆ, ಅಭಿಪ್ರಾಯಗಳನ್ನು ಆಹ್ವಾನಿಸುವ ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು **"ಸೌರ ವಿದ್ಯುತ್ ಘಟಕಗಳ ಯೋಜನೆಗಳು (ಮೇಲ್ಛಾವಣಿ ಸೌರ ಘಟಕಗಳ ಯೋಜನೆಗಳು ಸೇರಿದಂತೆ) ಮುಂದಿನ ನಿಯಂತ್ರಿತ ಅವಧಿ ಆ.ವ. 2025-2026 ರವರೆಗೆ ದರ ನಿರ್ಧರಣೆ ಮತ್ತು ಮಾನದಂಡನಗಳ"** ಬಗ್ಗೆ ಚರ್ಚಾಪತ್ರವನ್ನು ಹೊರಡಿಸಿದೆ ಹಾಗೂ ಈ ಚರ್ಚಾಪತ್ರ ಕುರಿತಂತೆ ಸಾರ್ವಜನಿಕರು / ಆಸಕ್ತರಿಂದ ಆಕ್ಷೇಪಣೆ / ಅಭಿಪ್ರಾಯ ಹಾಗೂ ಸಲಹೆಗಳನ್ನು ಆಯೋಗವು ಆಹ್ವಾನಿಸುತ್ತದೆ.

ಸದರಿ ಚರ್ಚಾ ಪತ್ರವನ್ನು ಆಯೋಗದ ಅಂತರ್ಜಾಲ ತಾಣ https://kerc.karnataka.gov.in ಯಲ್ಲಿ ಪ್ರಕಟಿಸಲಾಗಿದೆ. ಆಸಕ್ತರು / ಸಾರ್ವಜನಿಕರು ತಮ್ಮ ಆಕ್ಷೇಪಣೆ / ಅಭಿಪ್ರಾಯ ಹಾಗೂ ಸಲಹೆಗಳಿದ್ದಲ್ಲಿ **ದಿನಾಂಕ: 15.04.2025 ರೊಳಗೆ ಅಥವಾ ಅದಕ್ಕೂ ಮುಂಚಿತವಾಗಿ** ಲಿಖಿತ ರೂಪದಲ್ಲಿ ಆಯೋಗದ ಕಾರ್ಯದರ್ಶಿಯವರಿಗೆ ಸಲ್ಲಿಸಬಹುದಾಗಿದೆ.

ಸಹಿ/- ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
DIPR/CP/5781/2024-25

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಂ.ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 080-26096839 /26096855 ಇ-ಮೇಲ್: purchase@kmf.coop
IFT No.-KMF/PUR/CFRM-632/2024-25 ದಿನಾಂಕ: 19-03-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(KPPP Tender No-KMF/2024-25/IND1319)

ಕರ್ನಾಟಕ ಹಾಲು ಮಹಾಮಂಡಳವು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಪಶು ಆಹಾರ ಘಟಕಗಳಾದ **ಗುಬ್ಬಿ ಮತ್ತು ಶಿಕಾರಿಪುರ ಘಟಕಗಳಿಗೆ ಕ್ರಮವಾಗಿ 5,000ಮೆ.ಟನ್ ಮತ್ತು 3,000ಮೆ.ಟನ್ ಮೆಕ್ಕೆಜೋಳ** ಖರೀದಿಸುವ ಸಂಬಂಧ ಟೆಂಡರ್ ಆಹ್ವಾನಿಸಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ಭಾಗವಹಿಸಬಹುದಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಹಾಗೂ ಐಟಂವಾರು ಇ.ಎಂ.ಡಿ ವಿವರಗಳನ್ನು KPP Portal https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ತಿದ್ದುಪಡಿ/ಟಿಪ್ಪಣಿಗಳೇನಾದರು ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿಯೇ ಪ್ರಕಟಿಸಲಾಗುವುದು.

ಟೆಂಡರ್ ವೇಳಾಪಟ್ಟಿ: ಟೆಂಡರ್ ಪ್ರಾರಂಭವಾಗುವ ದಿನಾಂಕ: 19-03-2025; ಪೂರ್ವಭಾವಿ ಸಭೆಯ ದಿನಾಂಕ: 24-03-2025 at 11.30 AM; ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 26-03-2025 at 3.00 PM. ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 27-03-2025 at 3.10 PM; ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ: 27-03-2025 at 03.15 PM.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392-200293
ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ-1/2024-25/2767 ದಿ:15.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲೂ-3 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ 01 ಕಾಮಗಾರಿಯನ್ನು ಲೆಕ್ಕಶೀರ್ಷಿಕೆ 4702 ಟಿ.ಎಸ್.ಪಿ ಯೋಜನೆಯಡಿ ಹಾಗೂ 4702 ಲೆಕ್ಕಶೀರ್ಷಿಕೆ ಪ್ಲಾನ್ ಏತ ನೀರಾವರಿ ಯೋಜನೆಯಡಿ 01 ಕಾಮಗಾರಿಯನ್ನು, ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಅಂದಾಜು ಮೊತ್ತ **ರೂ. 66.75 ಲಕ್ಷ(ಜಿ.ಎಸ್.ಟಿ ಹೊರತುಪಡಿಸಿ)**. ಟೆಂಡರಿಗಿಟ್ಟ ಗರಿಷ್ಠ ಅಂದಾಜು ಮೊತ್ತ **ರೂ. 75.85 ಲಕ್ಷಗಳಿರುತ್ತದೆ (ಜಿ.ಎಸ್.ಟಿ ಹೊರತುಪಡಿಸಿ)**. ಟೆಂಡರ್‌ನ್ನು **ದಿನಾಂಕ: 18.03.2025 ರಿಂದ ದಿನಾಂಕ: 26.03.2025 ರ ಸಂಜೆ 5.30** ಗಂಟೆಯವರೆಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ಗಳನ್ನು **ದಿನಾಂಕ: 28.03.2025** ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ಗಳನ್ನು **ದಿನಾಂಕ: 01.04.2025**ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು **"KPPP"** ವೆಬ್‌ಸೈಟ್ **http://kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/ ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/1048/ಕೆಎಸ್‌ಎಂಸಿಎ/2024-25

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಐಬಿಸಿ ವಿಭಾಗ ಸಂಖ್ಯೆ-2
ಆಲಮೇಲ-586202.ದೂರವಾಣಿ ಸಂ:08488-232298. ಇ-ಮೇಲ್:kbjnleealmel@gmail.com
ಸಂಖ್ಯೆ:ಕೃಭಾಜನಿನಿ/ಐಬಿಸಿವಿ-2/ಟಿಬಿ/2024-25/1202 ದಿನಾಂಕ:17.03.2025

ಇ-ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ಐಬಿಸಿ ವಿಭಾಗ ನಂ-2 ಆಲಮೇಲ ಇವರ ಕಚೇರಿಯಿಂದ ಈ ಕೆಳಗೆ ಪಟ್ಟಿಕರಿಸಿರುವ ಕಾಮಗಾರಿಗಳಿಗೆ ಶೇಕಡಾವಾರು ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ	ಕಾಮಗಾರಿಗಳ ಹೆಸರು	ಟೆಂಡರ್ ಪದ್ಧತಿ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ಗುತ್ತಿಗೆದಾರರ ಅರ್ಹತೆ	ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೇ
1	1.Repairs to MS pipe Leakage of Rising main of sankh LIS. 2. Providing and repairs of water supply and sanitary in KBJNL Lower clony Almel.	ಏಕ-ಲಕೋಟೆ	* ರೂ: 19.80 ಲಕ್ಷಗಳು (02 works) * ಕಾಮಗಾರಿಗಳ ಮೊತ್ತದ ವಿವರ: ಗರಿಷ್ಠ ಮೊತ್ತ ರೂ. 16.80 ಲಕ್ಷ. – ಕನಿಷ್ಠ ಮೊತ್ತ ರೂ. 3.00 ಲಕ್ಷ * ಗರಿಷ್ಠ ಇ.ಎಂ.ಡಿ ರೂ: 35,500/- ಕನಿಷ್ಠ ಇ.ಎಂ.ಡಿ. ರೂ. 6,200/-	ಕೆ.ಪಿ.ಡಬ್ಲ್ಯೂ.ಡಿ. ಯಲ್ಲಿ ನೋಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರ	DTS, ನೋಡುವ/ ಸಲ್ಲಿಸುವ ದಿನಾಂಕ: 18.03.2025 ರಿಂದ 25.03.2025 ರ ಸಂಜೆ 4.30 ರ ವರೆಗೆ ಹಾಗೂ ಬಿಡ್ಡನ್ನು ದಿನಾಂಕ : 27.03.2025 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.

ಗುತ್ತಿಗೆದಾರರು ದಾಖಲೆಗಳನ್ನು ಇ-ಟೆಂಡರಿಂಗ್ ಮೂಲಕ (http:www.kppp.kar.gov.in) ಅಂತರ್ಜಾಲದಲ್ಲಿ "ಶೆಡ್ಯೂಲ್-ಬಿ" ಮತ್ತು ತಾಂತ್ರಿಕ ವಿವರಗಳನ್ನು ಪಡೆಯಬಹುದಾಗಿದೆ. ಬಿಡ್ಡನ್ನು ತೆರೆಯುವ ಸ್ಥಳ ಕಾರ್ಯನಿರ್ವಾಹಕ ಇಂಜಿನೀಯರರು ಕೃಭಾಜನಿನಿ ಐಬಿಸಿ ವಿಭಾಗ ಸಂಖ್ಯೆ:2, ಆಲಮೇಲ ಇವರ ಕಚೇರಿಯಲ್ಲಿ ಮತ್ತು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿದಾರರ ಕಾರ್ಯಾಲಯಕ್ಕೆ (08488-232298) ಸಂಪರ್ಕಿಸಬಹುದಾಗಿದೆ. ಮತ್ತು ಷರತ್ತುಬದ್ಧ ಟೆಂಡರಗಳನ್ನು ತಿರಸ್ಕರಿಸಲಾಗುವುದು. ಯಾವುದೇ ಕಾಮಗಾರಿ/ಗಳ ಒಪ್ಪಿಗೆ/ತಿರಸ್ಕರಿಸುವ, ಅಥವಾ ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕೆ ಇರುತ್ತದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಐಬಿಸಿ ವಿಭಾಗ ಸಂಖ್ಯೆ-2, ಆಲಮೇಲ
ವಾಸಾಸಂಇ/ವಿಜಯಪುರ/775/ಕೆಎಸ್‌ಎಂಸಿಎ/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕನೀನಿನಿ ಘಟಪ್ರಭಾ ವಿಭಾಗ ನಂ. 2, ಹಿಡಕಲ್‌ಡ್ಯಾಂ
ಕಚೇರಿ ದೂರವಾಣಿ ಸಂ:08333-2200119/ಫ್ಯಾಕ್ಸ ಸಂ:08333-263405/ ಇ-ಮೇಲ್: eegrbc2@gmail.com
ಸಂ: ಕನೀನಿನಿ/ಜಿಆರ್‌ಬಿಸಿ-2/ಡಿಬಿ/ಟೆಂಡರ್/2024-25/3144 ದಿನಾಂಕ:18-03-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

2024-25 ನೇ ಸಾಲಿನಲ್ಲಿ ಈ ವಿಭಾಗ ಕಚೇರಿ ವ್ಯಾಪ್ತಿಯಲ್ಲಿ 01 ಸಂಖ್ಯೆ ಆಣೆಕಟ್ಟು ಸಂಬಂಧಿತ ಕಾಮಗಾರಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದು, ವಿವರಗಳು ಈ ಕೆಳಗಿನಂತಿವೆ. (ಅಂದಾಜು ಮೊತ್ತ ರೂ.228.64 ಲಕ್ಷಗಳವರಗೆ) 1)(ಇಂಡೆಂಟ್ ನಂ.2761 2) ಕರ್ನಾಟಕ ಸರ್ಕಾರದ https://kppp.karnataka.gov.in ಪೋರ್ಟಲ್‌ನಿಂದ ಟೆಂಡರ್ ಡಾಕ್ಯೂಮೆಂಟ್ ಅನ್ನು ದಿನಾಂಕ:18-03-2025 ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 3)ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ:25-03-2025 ವೇಳೆ:17.30 ಗಂಟೆಯೊಳಗೆ ಸಲ್ಲಿಸುವುದು 4) ಟೆಂಡರಗಳನ್ನು ತೆರೆಯುವ ದಿನಾಂಕ :27-03-2025 ವೇಳೆ : 10.30 ಗಂಟೆ 5)ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ-1) ಪೂರ್ವಾಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್ನನ್ನು (ಲಕೋಟೆ-2) ತೆರೆಯುವ ದಿನಾಂಕ: ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

Note: Here after any change with reference to this Notification will be Notified in https://kppp.karnataka.gov.in Portl Only.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಜಿಆರ್‌ಬಿಸಿಸಿ ವಿಭಾಗ ನಂ.2 ಹಿಡಕಲ್ ಡ್ಯಾಮ್
DIPR/BGM/RO-NO-1964/KSMCA/2024-25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ವಿಭಾಗ, ಗದಗ
ನಂ: ಗ್ರಾ.ಕು.ನೀ&ನೈ.ವಿ/ಗದಗ/ಸ.ಇಂ/ಟೆಂಡರ್/2024-25/1984 ದಿನಾಂಕ : 19.03.2025

ಟೆಂಡರ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅಥವಾ ಪಂಚಾಯತ ರಾಜ್ ಇಂಜನೀಯರಿಂಗ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಕುಡಿಯುವ ನೀರು ಸರಬರಾಜು ಯೋಜನೆ ಅಡಿಯಲ್ಲಿ ಗದಗ ಜಿಲ್ಲೆಯ ಸೇವಾ "ಇ ಪ್ರೊಕ್ಯುರಮೆಂಟ್" ಮುಖಾಂತರ ಟೆಂಡರ್ ಕರೆಯಲಾಗಿದೆ. RWSSD/2024-25/SE0695 ಟೆಂಡರಿಗಿಟ್ಟ ಮೊತ್ತ ಕ್ರಮವಾಗಿ ರೂ. 53.43 ಲಕ್ಷ ಈ ಕಾಮಗಾರಿಗಳ ವಿವರಗಳಿಗಾಗಿ ಹಾಗೂ ಡೌನಲೋಡ ಮಾಡಿಕೊಳ್ಳಲು ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ ಪ್ರೋಕ್ಯೂರಮೆಂಟ್ "ವೆಬ್‌ಸೈಟ್ https://kppp.karnataka.gov.in ನಲ್ಲಿ ನೋಡಿಕೊಳ್ಳಬಹುದು. ಟೆಂಡರ ಸಲ್ಲಿಸಲು ಪ್ರಾರಂಭವಾಗುವ ದಿನಾಂಕ : 20.03.2025 ಪ್ರಶ್ನೋತ್ತರದ ಕೊನೆಯ ದಿನಾಂಕ : 24.03.2025 ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : 26.03.2025 ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 28.03.2025 ಆರ್ಥಿಕ ಬಿಡ್ ತೆರೆಯುವ ದಿನಾಂಕ : 29.03.2025

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/708/2024-25

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
KUIDFC
ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಕ್ರಾಸ್, ಹಳೆ ಮದ್ರಾಸು ರಸ್ತೆ, ಇಂದಿರಾನಗರ 2ನೇ ಹಂತ, ಬಿಎಂಟಿಸಿ ಡಿಪೋ ಹತ್ತಿರ, ಬೆಂಗಳೂರು-560 038. ದೂರವಾಣಿ: 91-80-25196100, 25196124 ಫ್ಯಾಕ್ಸ್: 080-25196110
ಇ-ಮೇಲ್ ವಿಳಾಸ: info@kuidfc.com ಅಂತರ್ಜಾಲ ವಿಳಾಸ: www.kuidfc.com
ಸಂಖ್ಯೆ: ಕೆಯುಐಡಿಎಫ್‌ಸಿ/ಯುಡಬ್ಲ್ಯೂಎಮ್/37/ಟೆಂ.ಪ್ರ/2024-25/16 ದಿನಾಂಕ: 18.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೆಯುಐಡಿಎಫ್‌ಸಿ ಸಂಸ್ಥೆಯು N.G.T ಪರಿಸರ ಪರಿಹಾರ ನಿಧಿ ಹಾಗೂ ಸ್ವಚ್ಛ ಭಾರತ ಅಭಿಯಾನ (ನಗರ) 2.0 ರಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಈ ಕೆಳಕಂಡ ಯೋಜನೆಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆ.ಪಿ.ಪಿ ಪೋರ್ಟಲ್‌ನಲ್ಲಿ (https://kppp.karnataka.gov.in) ಲಭ್ಯವಿರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) ರೂ.ಲಕ್ಷಗಳಲ್ಲಿ	ಮುಂಗಡ ಭದ್ರತಾ ಠೇವಣಿ ರೂ.ಲಕ್ಷಗಳಲ್ಲಿ
1	Construction/ Upgradation of sewerage system in Gadag-Betageri city under Jalashuddhi Mission NGT environmental compensation fund on DBOT model.	2269.45	23.00
2	Construction/ Upgradation of sewerage system in Vijayapura city under Jalashuddhi Mission NGT environmental compensation fund on DBOT model.	2698.18	27.00
3	Construction/ Upgradation of sewerage system in Davanagere city under Jalashuddhi Mission NGT environmental compensation fund on DBOT model.	2190.00	22.00
4	Construction/ Upgradation of sewerage system in Tiptur city under Jalashuddhi Mission NGT environmental compensation fund & SBM (u) 2.0 fund on DBOT model.	1800.00	18.00
5	Construction/ Upgradation of sewerage system in Udupi city under Jalashuddhi Mission NGT environmental compensation fund on DBOT model.	2667.05	27.00
6	Construction/ Upgradation of sewerage system in Mangaluru city under Jalashuddhi Mission NGT environmental compensation fund on DBOT model.	3457.06	35.00
7	Construction/ Upgradation of sewerage system in Raichur city under Jalashuddhi Mission NGT environmental compensation fund on DBOT model.	3016.58	31.00
8	Construction/ Upgradation of sewerage system in Sindhanur city under Jalashuddhi Mission NGT environmental compensation fund on DBOT model.	1512.65	16.00

1) ಟೆಂಡರ್ ಆಹ್ವಾನಿಸಿರುವ ದಿನಾಂಕ: **19.03.2025.** 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ & ಸಮಯ: **28.03.2025 ಸಮಯ: 11.30 ಪೂರ್ವಾಹ್ನ.** 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ: **09.04.2025 ಸಮಯ: 5.30 ಅಪರಾಹ್ನ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **15.04.2025 ಸಮಯ: 11.30 ಪೂರ್ವಾಹ್ನ.** 5) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: **17.04.2025 ಸಮಯ: 11.30 ಪೂರ್ವಾಹ್ನ.**

ಆಸಕ್ತ ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಕೆಪಿಪಿ ಪೋರ್ಟಲ್ ಹಾಗೂ KUIDFC Official Website ಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/-
ಕಾರ್ಯಪಾಲಕ ಅಭಿಯಂತರರು, ಯೋಜನಾ ಮೇಲ್ವಿಚಾರಣಾ ಘಟಕ, ಯುಡಬ್ಲ್ಯೂಎಮ್-ಕೆಯುಐಡಿಎಫ್‌ಸಿ, ಬೆಂಗಳೂರು
ವಾಸಾಸಂಇ/ವಾಪ್ರ/5775/ಎಂಎಎ/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ವಿಜಯನಗರ ವಿಭಾಗ, 1ನೇ ಮಹಡಿ, ಶಾಸಕರ ಭವನ, 3ನೇ ಮೇನ್, ವಿಜಯನಗರ, ಬೆಂಗಳೂರು-560040
ಸಂಖ್ಯೆ: ಕಾಅ(ವಿನ/ಎಇ/ಕೆಪಿಪಿಪಿ/12/2024-25 ದಿನಾಂಕ : 19.03.2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಟೆಂಡರ್ ಪ್ರಕಟಣೆ- ದ್ವಿ ಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿಸಲಾದ ಅರ್ಹ ಟೆಂಡರ್‌ದಾರರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳ ನಿರ್ಮಾಣಕ್ಕಾಗಿ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	IHPS FRU CHC 25 Bed ನ ಮಾರ್ಗಸೂಚಿಗಳ ಪ್ರಕಾರ, ಮಾನವ ಸಂಪನ್ಮೂಲ ಮತ್ತು ಡಯಾಲಿಸಿಸ್ ಕೇಂದ್ರಕ್ಕೆ ಅಗತ್ಯವಿರುವ ಔಷಧಗಳು ಮತ್ತು lab regents, ಲಾಂಡ್ರಿ ಸೇವೆಗಳು, ವಿದ್ಯುತ್, ನೀರು, ಜೈವಿಕ ವೈದ್ಯಕೀಯ ತ್ಯಾಜ್ಯ, ದೂರವಾಣಿ / ಇಂಟರ್‌ನೆಟ್ ಮುದ್ರಣ ಮತ್ತು ಲೇಖನ ಸಾಮಗ್ರಿಗಳು ಇತರೆ ಕಾಮಗಾರಿ. ಕಾಮಗಾರಿ ಅಂದಾಜು ಮೊತ್ತ: ರೂ.450.00 ಲಕ್ಷಗಳು, ಇಎಂಡಿ : ರೂ.6,75,000/- (ರೂ. 1.00 ಲಕ್ಷವನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ಪಾವತಿಸಬೇಕು ಮತ್ತು ಬಾಕಿ ಮೊತ್ತ ರೂ. 5,75,000/- ಬ್ಯಾಂಕ್ ಗ್ಯಾರಂಟಿ ರೂಪದಲ್ಲಿರಬೇಕು).

ಟೆಂಡರ್‌ನ ಕಾರ್ಯಸೂಚಿ: (1) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **ದಿನಾಂಕ: 29.03.2025 ರಂದು ಸಂಜೆ 16:00 ಗಂಟೆಯೊಳಗೆ** ಅಥವಾ ಮೊದಲು ಆನ್‌ಲೈನ್‌ನಲ್ಲಿ ಸಲ್ಲಿಸುವುದು. (2) ಬಿಡ್ ಪೂರ್ವ ಸಭೆಯು ನಡೆಯುವ ದಿನಾಂಕ: ಮತ್ತು ಸ್ಥಳ : **24.03.2025 ರಂದು 15:00 ಗಂಟೆಗೆ,** ಮುಖ್ಯ ಎಂಜಿನಿಯರ್ (ದಕ್ಷಿಣ) ಕಚೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು-560011 (3) ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ: 24.03.2025 ರಂದು 16:00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು **ದಿನಾಂಕ 01.04.2025 ರಂದು ಅಥವಾ ನಂತರ 11:30 ಕ್ಕೆ** ವಿಜಯನಗರ ವಿಭಾಗದ ಕಾರ್ಯಪಾಲಕ ಅಭಿಯಂತರರ ಕಚೇರಿಯ ವೆಬ್‌ಸೈಟ್: **https://kppp.karnataka.gov.in** ನಲ್ಲಿ ತೆರೆಯಲಾಗುವುದು. (5) ಉಳಿದ ಇಎಂಡಿ ಬ್ಯಾಂಕ್ ಗ್ಯಾರಂಟಿಯನ್ನು **ದಿನಾಂಕ: 29.03.2025 ರಂದು 15:00 ಗಂಟೆಯೊಳಗೆ** ವಿಭಾಗ ಕಚೇರಿಗೆ ಸಲ್ಲಿಸಬೇಕು.

ಸಹಿ/- ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ

ಕರ್ನಾಟಕ ಸರ್ಕಾರ
ಜಿಲ್ಲಾ ನಗರಾಭಿವೃದ್ಧಿಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.
ದೂ.ಸಂಖ್ಯೆ:08172-234839 E-mail: pdhassandudc@gmail.com
ನಂ:ಮುನಿಸಿ(2)/ಸಿ.ಆರ್/309&310/2024-25 ದಿನಾಂಕ: 18.03.2025

ಟೆಂಡರ್ ಪ್ರಕಟಣೆ

'ಆಕಾಶದಲ್ಲಿ ಅಂದ್ರೆ ಅಲ್ಲಿ ಸ್ಪೇಸ್ ಸ್ಟೇಷನ್ ಅಂತಿರುತ್ತೆ. ಅಲ್ಲಿದ್ರೂ ಗುರುತ್ವಾಕರ್ಷಣ ಬಲ ಇಲ್ಲದೇ ಇರೋದ್ರಿಂದ ಅಲ್ಲಿ ಕಾಲೂರೋಕೇ ಆಗಲ್ಲ, ಇನ್ನು ಜಾಗ ಬೇರೆ ಖರೀದಿ ಮಾಡ್ತಾರಾ?'

'ಖರೀದಿಸೋಕೆ ಆಗಲ್ಲ ಅಂದ್ರೂ ಒತ್ತುವರಿ ಆದರೂ ಮಾಡಿರಬಹುದಾ?' ಎಂದು ನಕ್ಕಳು.

'ಎಲ್ಲೆಂದರಲ್ಲಿ ಒತ್ತುವರಿ ಮಾಡೋಕೆ ಅವರನ್ನೇನು ನಮ್ ಮಿನಿಸ್ಟರ್‌ಗಳು, ಎಂಪಿಗಳು, ಎಮ್ಮೆಲ್ಲೆಗಳು ಅಂದ್ಕೊಂಡಿದೀಯ?'

'ಯಾಕ್ರೀ ಹಾಗಂತೀರಾ, ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಗಬೇಡಿ. ಎಲ್ಲ ರಾಜಕಾರಣಿಗಳೂ ಜಾಗ ಹೊಡೆಯುವಷ್ಟು ಕೆಟ್ಟೋರಾಗಿರೋದಿಲ್ಲ ತಿಳ್ಕೊಳ್ಳಿ'.

'ಕೆರೆ, ನದಿಗಳಿಗೆ ಆರತಿ, ಪೂಜೆ ಮಾಡೋವಷ್ಟು ಒಳ್ಳೆಯವರೂ ಇರುತ್ತಾರಲ್ವ?' ವ್ಯಂಗ್ಯವಾಗಿ ಕೇಳಿದೆ.

'ನಿಮ್ಮ ವ್ಯಂಗ್ಯ ಅರ್ಥ ಆಗುತ್ತೆ. ಆದರೆ, ಕೆರೆ ಜಾಗ ನುಂಗೋದಕ್ಕಿಂತ ಕೆರೆ, ನದಿಗಳಿಗೆ ಆರತಿ ಮಾಡೋದು ಎಷ್ಟೋ ಬೆಟರ್ ಬಿಡಿ'.

'ಹಂಗಂತೀಯಾ?'

'ಹ್ಞೂಂ ಮತ್ತೆ, ಆರತಿ ಮಾಡೋಕಾದರೂ ಕೆರೆ-ಕಟ್ಟೆ ಉಳಿಸ್ಕೊಳ್ತಾರಲ್ಲ ಅನ್ನೋ ಸಮಾಧಾನ' ಎಂದು ನಗುತ್ತಾ ಒಳಹೋದಳು.

ದಿನದ ಟ್ವೀಟ್

ಸಮಯೋಚಿತ ನಿಲುವು

ಔರಂಗಜೇಬನ ಸಮಾಧಿ ತೆರವುಗೊಳಿಸಬೇಕೆಂಬ ಆಗ್ರಹಕ್ಕೆ ಅಸಮ್ಮತಿ ಸೂಚಿಸಿ, 'ಅದು ಅಪ್ರಸ್ತುತ', 'ಹಿಂಸಾಚಾರವು ಸಮಾಜಕ್ಕೆ ಅನಾರೋಗ್ಯಕರ' ಎಂದಿದ್ದಕ್ಕೆ ಆರ್‌ಎಸ್‌ಎಸ್ ಅನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಹಿಂಸಾಚಾರ ಸೃಷ್ಟಿಸುವ ಉದ್ದೇಶದಿಂದ ವಾತಾವರಣವನ್ನು ಕೋಮುವಾದೀಕರಿಸುವವರನ್ನು ಖಂಡಿಸುವಲ್ಲಿ ದಯವಿಟ್ಟು ಹೆಚ್ಚು ಸಮಯೋಚಿತ, ಸ್ಥಿರ, ಸ್ಪಷ್ಟವಾದ ನಿಲುವು ಹೊಂದಿ ಮತ್ತು ಧೈರ್ಯಶಾಲಿಯಾಗಿರಿ ಎಂಬುದು ಆರ್‌ಎಸ್‌ಎಸ್ ಸಂಘಟನೆಗೆ ನನ್ನ ವಿನಮ್ರ ಮನವಿ.

ಸುಧೀಂದ್ರ ಕುಲಕರ್ಣಿ, ರಾಜಕೀಯ ವಿಶ್ಲೇಷಕ, ಲೇಖಕ

ಕಿಡಿನುಡಿ

...ಗೃಹಲಕ್ಷ್ಮಿ ಹಣವನ್ನು ತಿಂಗಳು ತಿಂಗಳು ಕರೆಕ್ಟಾಗಿ ಕೊಡಲು ಅದೇನು ಸಂಬಳಾನಾ ಎಂದು ಕನ್ನಡಿಗರ ಸ್ವಾಭಿಮಾನವನ್ನೇ ಪ್ರಶ್ನೆ ಮಾಡಿದ್ದ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರೇ, ಈ ಬಾರಿ ಲೋಡ್‌ಶೆಡ್ಡಿಂಗ್ ಇರುವುದಿಲ್ಲ ಎಂದು ಹೇಳಿ ಈಗ ಅನಿಯಮಿತ ಲೋಡ್‌ಶೆಡ್ಡಿಂಗ್ ಮಾಡುತ್ತಿದ್ದೀರಲ್ಲ, ಇದೇನಾ ನುಡಿದಂತೆ ನಡೆಯುವ ನಿಮ್ಮ ಕಾಂಗ್ರೆಸ್ ನೇತೃತ್ವದ ಸರ್ಕಾರದ ಕಾರ್ಯವೈಖರಿ?

ಆರ್.ಅಶೋಕ, ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 20-3-2000

● ಅಧ್ಯಕ್ಷ ಕ್ಲಿಂಟನ್‌ಗೆ ಹಾರ್ದಿಕ ಸ್ವಾಗತ

ನವದೆಹಲಿ, ಮಾರ್ಚ್ 19– ಭಾರತವೂ ಸೇರಿದಂತೆ ಮೂರು ದೇಶಗಳ ಪ್ರವಾಸ ಪ್ರಾರಂಭಿಸಲು ಇಂದು ರಾತ್ರಿ 8.39ಕ್ಕೆ ತಮ್ಮ ವಿಶೇಷ ವಿಮಾನದಲ್ಲಿ ಇಲ್ಲಿಗೆ ಆಗಮಿಸಿದ ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರಿಗೆ ರತ್ನಗಂಬಳಿಯ ಸ್ವಾಗತ ನೀಡಲಾಯಿತು.

ಕಳೆದ 22 ವರ್ಷಗಳ ಅವಧಿಯಲ್ಲಿ ಅಮೆರಿಕದ ಅಧ್ಯಕ್ಷರೊಬ್ಬರು ಭಾರತಕ್ಕೆ ಭೇಟಿ ನೀಡುತ್ತಿರುವುದು ಇದೇ ಮೊದಲು.

ಆರು ದಿನಗಳ ದಕ್ಷಿಣ ಏಷ್ಯಾ ಪ್ರವಾಸದಲ್ಲಿರುವ ಕ್ಲಿಂಟನ್ ಅವರೊಂದಿಗೆ ಅವರ ಮಗಳು ಚೆಲ್ಸಿ, ಅತ್ತೆ ಡೊರೊತಿ ರೋಢಮ್ ಆಗಮಿಸಿದ್ದಾರೆ. 'ಹಾರುವ ಶ್ವೇತಭವನ' ಎಂದೇ ಕರೆಸಿಕೊಳ್ಳುವ ನೀಲಿ–ಬಿಳಿ ವರ್ಣದ ಅಮೆರಿಕ ವಾಯುಪಡೆಯ ವಿಶೇಷ ವಿಮಾನದಿಂದ ಕಪ್ಪು ಬಣ್ಣದ ಸೂಟ್ ಧರಿಸಿದ್ದ ಕ್ಲಿಂಟನ್ ಅವರು ಕೆಳಗಿಳಿಯುತ್ತಿದ್ದಂತೆ ಅವರನ್ನು ವಿದೇಶಾಂಗ ವ್ಯವಹಾರಗಳ ಸಚಿವ ಜಸ್ವಂತ್ ಸಿಂಗ್ ಕೈಕುಲುಕುವ ಮೂಲಕ ಆತ್ಮೀಯವಾಗಿ ಸ್ವಾಗತಿಸಿ, ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಅಜಿತ್ ಪಾಂಜಾ ಅವರನ್ನು ಪರಿಚಯ ಮಾಡಿಕೊಟ್ಟರು.

● ಆತಂಕದ ನೆರಳಲ್ಲಿ ಕೋಲಾರ ಚಿನ್ನದ ಗಣಿ ಕಾರ್ಮಿಕರು

ಬೆಂಗಳೂರು, ಮಾರ್ಚ್ 19– ಶತಮಾನ ಸವೆಸಿರುವ ಕೋಲಾರದ ಚಿನ್ನದ ಗಣಿಗಳನ್ನು ಮುಚ್ಚಲು ಕೇಂದ್ರ ಸರ್ಕಾರ ಕೈಗೊಂಡಿರುವ ನಿರ್ಧಾರ ಜಾರಿಗೆ ಬರಲು ಕ್ಷಣಗಣನೆ ಪ್ರಾರಂಭವಾಗಿದೆ. ಕೇಂದ್ರದ ಈ ತೀರ್ಮಾನದಿಂದಾಗಿ ನಾಲ್ಕು ಸಾವಿರಕ್ಕೂ ಹೆಚ್ಚು ಗಣಿ ಕಾರ್ಮಿಕರು ತೀವ್ರ ಆತಂಕಕ್ಕೆ ಒಳಗಾಗಿದ್ದು, ಗಣಿ ಪ್ರದೇಶದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗುತ್ತಿದೆ.

50 ವರ್ಷಗಳ ಹಿಂದೆ

ಗುರುವಾರ, 20-3-1975

● ಬರುವ ವರ್ಷ ಜೂನ್‌ನಿಂದ ಕೃಷಿಗಾಗಿ ರೈತರಿಗೆ ಹೇಮಾವತಿ ನೀರು

ಬೆಂಗಳೂರು, ಮಾರ್ಚ್ 19– ಹೇಮಾವತಿ ಯೋಜನೆಯ ಪ್ರಯೋಜನವನ್ನು ಮುಂದಿನ ವರ್ಷದ ಜೂನ್‌ನಿಂದಲೇ ಆ ಪ್ರದೇಶದ ರೈತರು ಪಡೆಯಲಿದ್ದಾರೆ.

ಇಂದು ವಿಧಾನಸಭೆಯಲ್ಲಿ ಈ ವಿಚಾರವನ್ನು ತಿಳಿಸಿದ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು, ಹೇಮಾವತಿ ಯೋಜನೆಯ ಕಾಮಗಾರಿಯನ್ನು ಮುಂದುವರಿಸಿಕೊಂಡು ಹೋಗುವ ರಾಜ್ಯದ ನಿಲುವನ್ನೂ ಸ್ಪಷ್ಟಪಡಿಸಿದರು.

ಕೇಂದ್ರದಿಂದ ತಾಂತ್ರಿಕ ಅನುಮತಿ ಸಿಕ್ಕದಿದ್ದರೂ ಈ ಯೋಜನೆಯನ್ನು ಮುಂದುವರಿಸಿಕೊಂಡು ಹೋಗುವುದಾಗಿ ಅವರು ಭರವಸೆ ನೀಡಿದರು.

ಈ ಯೋಜನೆಯ ಪ್ರಥಮ ಹಂತವನ್ನು ಇನ್ನು ಹತ್ತು ವರ್ಷಗಳಲ್ಲಿ ಪೂರ್ತಿಗೊಳಿಸಲು ಯೋಜಿಸಲಾಗಿದೆ ಎಂದು ಕೆ.ಎಚ್. ಹನುಮೇಗೌಡರಿಗೆ ತಿಳಿಸಿದ ಮುಖ್ಯಮಂತ್ರಿಗಳು, 'ಆದರೆ ಈ ಯೋಜನೆಯ ಪ್ರಯೋಜನವನ್ನು ರೈತರು 1976ನೇ ಜೂನ್ ತಿಂಗಳಿನಿಂದಲೇ ಪಡೆಯುವರು' ಎಂದರು.

ಸಂಗತ

ಹೃದಯದಲಿ ಚಿಮ್ಮಲಿ ಹಿಗ್ಗಿನ ಬುಗ್ಗೆ

ನಾವು ನಮ್ಮೊಳಗೆ ಕಂಡುಕೊಳ್ಳುವ ಸಂತೋಷವು ಷರತ್ತುರಹಿತ ಆಗಿರುತ್ತದೆ

● ಯೋಗಾನಂದ

ಮಹಾನಗರದಲ್ಲಿ ಒಂದೆಡೆ ಮನೆ ಕಟ್ಟಿಸುತ್ತಿದ್ದವ ಹೊರಗೋಡೆಗೆ ಪಾಯ ಕಡಿಮೆಯಾಯಿತೆಂದು ಗುತ್ತಿಗೆದಾರನೊಂದಿಗೆ ಬಿಸಿಮಾತಿಗಿಳಿದಿದ್ದ. ಪಕ್ಕದಲ್ಲಿ ಮರಕ್ಕೆ ಕಟ್ಟಿದ್ದ ಡೋಲಿಯಲ್ಲಿ ಕೂಸು ಸುಖವಾಗಿ ನಿದ್ರಿಸುತ್ತಿತ್ತು. ಕೂಲಿಗೆ ಬಂದಿದ್ದ ಅದರ ಅಪ್ಪ, ಅಮ್ಮ ಅದೇ ಮರದ ಕೆಳಗೆ ಕೂತು ನಗುನಗುತ್ತಾ ಮಾತಾಡಿಕೊಂಡು ಊಟ ಮಾಡುತ್ತಿದ್ದರು. ಸಂತೋಷ ಯಾರಿಗೆ, ಎಲ್ಲಿ, ಹೇಗೆ ಎನ್ನುವುದು ಸಂಕೀರ್ಣ.

ಆರೋಗ್ಯದ ಮೂಲವೂ ಸಂತೋಷವೇ. ಸಮಯವಿರಲಿ, ಸಂಪನ್ಮೂಲವಿರಲಿ ಅಥವಾ ಮುಗುಳ್ನಗೆಯಿರಲಿ ಹಂಚಿಕೊಂಡರೆ ಅದು ಇನ್ನೊಬ್ಬರ ದಿನವನ್ನು ಖುಷಿಯಾಗಿಸುತ್ತದೆ. ಹಂಚುವ ಹೃದಯವೇ ನಗುವ ಹೃದಯ. ಸಂತೋಷವು ಮಾನವನ ಮೂಲಭೂತ ಹಕ್ಕೆಂದು ವಿಶ್ವಸಂಸ್ಥೆ ಮಾನ್ಯ ಮಾಡಿದೆ. ಅದಕ್ಕೆ ಆರ್ಥಿಕ ಬೆಳವಣಿಗೆಯಷ್ಟೇ ಆದ್ಯತೆ ನೀಡುವುದು ಅಗತ್ಯ ಎಂದಿದೆ.

2012ರಲ್ಲಿ ವಿಶ್ವಸಂಸ್ಥೆ ಒಂದು ನಿರ್ಣಯವನ್ನು ಅಂಗೀಕರಿಸಿತು. ಪ್ರತಿವರ್ಷ ಮಾರ್ಚ್ 20 'ವಿಶ್ವ ಸಂತೋಷದ ದಿನ' ಎಂದು ಘೋಷಿಸಿತು. 2013ರ ಮಾರ್ಚ್ 20ರಂದು ಮೊದಲ ವಿಶ್ವ ಸಂತೋಷದ ದಿನವಾಗಿ ಜಗತ್ತು ಸಡಗರಿಸಿತು.

'ಪರರ ಬಗ್ಗೆ ಕಾಳಜಿ ವಹಿಸುವುದು ಮತ್ತು ಹಂಚಿಕೊಳ್ಳುವುದು' ಈ ಬಾರಿಯ ವಿಶ್ವ ಸಂತೋಷದ ದಿನಾಚರಣೆಯ ಧ್ಯೇಯವಾಕ್ಯ. ಐಕಮತ್ಯ, ಪರಸ್ಪರ ದಯೆ ಮತ್ತು ಔದಾರ್ಯದ ಮೂಲಕ ಮಾನವರೆಲ್ಲರೂ ಸುಖ, ಸಂತಸದತ್ತ ಸಾಗಲು ಈ ಉದ್ಘೋಷ ಪ್ರೇರಣೆಯಾಗುತ್ತದೆ. ಮಾನವೀಯತೆಯ ಪರಿಕಲ್ಪನೆಯು ಜಾಗತಿಕ ಬದ್ಧತೆಯಾಗಬೇಕಿದೆ. ಸಂತೋಷವನ್ನು ಅಳೆಯಲು ಹೊರಟರೆ ಆಗುವುದು ನಿರಾಸೆಯೇ. ಏಕೆಂದರೆ ಅದನ್ನು ಅಳೆಯುತ್ತಾ ಹೋದಂತೆ ಅವರಿವರ ಸಂತಸದ ಜೊತೆಗೆ ಹೋಲಿಸಿಕೊಳ್ಳಲು ಮುಂದಾಗುತ್ತೇವೆ. ಇದರ ಪರಿಣಾಮ ನಮ್ಮ ಹಿಗ್ಗಿಗೂ ಸಂಚಕಾರ. ಆನಂದವಾಗಿರಲು ಸರ್ವದಾ ಯತ್ನಿಸುವುದರಿಂದ ಪ್ರತಿಕೂಲವೇ. ಬದುಕಿನ ಪ್ರತಿ ಗಳಿಗೆಯಲ್ಲೂ ನೆಮ್ಮದಿ ಅಸಂಭವ. ಕಷ್ಟವಿದ್ದರೇನೆ ಸುಖದ ಅನುಭಾವ.

ಸ್ವರ್ಗಕ್ಕಾಗಿ ಹಪಹಪಿಸಿದವನೊಬ್ಬನಿಗೆ ಕಡೆಗೂ ಅದು ಸಿಕ್ಕಿತಂತೆ. ಅಲ್ಲಾದರೂ ಅವನು ನೆಮ್ಮದಿಯಾಗಿ ಇದ್ದನೇ? ಇಲ್ಲ, ಏಕೆಂದರೆ ಸದಾ ಅಮೃತ ಸೇವಿಸಿ ಬೇಸರ ಎಂದು ಗೊಣಗತೊಡಗಿದನಂತೆ! ಅನಗತ್ಯ ಸಾಮಗ್ರಿಗಳನ್ನು ವಿಲೇವಾರಿ ಮಾಡಿ ನಮ್ಮ ಕೊಠಡಿಯನ್ನು ಸ್ವಚ್ಛವಾಗಿ ಇರಿಸಿಕೊಂಡರೆ ಸಾಕು, ಹಿಗ್ಗಿನತ್ತ ಒಂದು ಹೆಜ್ಜೆಯಿಟ್ಟಂತೆ. ಇಂದು ಇಂದಿಗೆ, ನಾಳೆ ನಾಳೆಗೆ, ಇರಲಿ ಈ ಕ್ಷಣ ನಮಗೆ ಎನ್ನುವಂತೆ ವರ್ತಮಾನದಲ್ಲಿ ಬದುಕುವುದೇ ಒಂದು ಕೌಶಲ. ಭೂತಕಾಲದ ಬಗ್ಗೆ ವಿಷಾದ, ಭವಿಷ್ಯದತ್ತ ಭಯ- ಇವೆರಡನ್ನೂ ದೂರವಾಗಿಸುವ ಸಾಮರ್ಥ್ಯ ವರ್ತಮಾನಕ್ಕಿದೆ. ನಮ್ಮ ಗಮನವನ್ನು ಯಾವುದರತ್ತ ಹರಿಸುತ್ತೇವೆಯೊ ಅದು ನಮ್ಮ ಭಾವನಾತ್ಮಕ ಅನುಭವವನ್ನು ಪ್ರಭಾವಿಸುತ್ತದೆ. ಕೊರತೆಗೆ ಅಥವಾ ಕಳೆದುದಕ್ಕೆ ವೃಥಾ ಚಿಂತಿಸದೆ, ಇರುವುದನ್ನು ಹಬ್ಬವಾಗಿಸಿಕೊಳ್ಳುವುದು ವಿವೇಕ.

ಬದುಕಿನಲ್ಲಿ ನಿಭಾಯಿಸಲಾಗದ ಕಠಿಣ ಸಂದರ್ಭಗಳು ಎದುರಾದರೇನು? ಅವು ನೆನಪಿನ ಬುತ್ತಿ ಸೇರುವ ಉತ್ತಮ ಅನುಭವಗಳೇ. ಮುಂದೆ ಸಂಕಷ್ಟ ಒದಗಿದರೆ ಅವೇ ಮನಸ್ಸನ್ನು ಹಗುರಾಗಿಸಬಲ್ಲ ಘನ ಮಾರ್ಗಸೂಚಿಗಳು. ನಿಂದನೆಗಳಿರಲಿ, ಅವಮಾನಗಳಿರಲಿ ಅಥವಾ ನಷ್ಟಗಳಿರಲಿ ಅವನ್ನು ಹೇಗೆ ಸಂಸ್ಕರಿಸುತ್ತೇವೆ ಎನ್ನುವುದು ಮುಖ್ಯವಾಗುತ್ತದೆ.

ಸಂತಸದ ಮನಸ್ಸೇ ಸೃಜನಶೀಲ ಮನಸ್ಸು. ಗ್ರೀಕ್ ದಾರ್ಶನಿಕ ಅರಿಸ್ಟಾಟಲ್ ಹೇಳಿರುವಂತೆ, ಸಂತೋಷವು ನಮ್ಮನ್ನೇ ಅವಲಂಬಿಸಿದೆ. ನಾವು ನಮ್ಮೊಳಗೆ ಕಂಡುಕೊಳ್ಳುವ ಸಂತೋಷವು ಷರತ್ತುರಹಿತ ಆಗಿರುತ್ತದೆ. ಒಂದು ಚಮಚ ಉಪ್ಪನ್ನು ನೀರಿರುವ ಬಟ್ಟಲಿಗೆ ಹಾಕಿದರೆ ಆ ನೀರನ್ನು ಸೇವಿಸಲಾದೀತೆ? ಆದರೆ ಅದೇ ಒಂದು ಚಮಚ ಉಪ್ಪನ್ನು ಸರೋವರಕ್ಕೆ ಹಾಕಿದರೆ, ಏನೂ ವ್ಯತ್ಯಾಸವಾಗದು. ಎಂದಿನಂತೆ ಸರೋವರದ ನೀರನ್ನು ಸೇವಿಸಬಹುದು. ಅಂದರೆ, ನಮ್ಮ ಆಲೋಚನೆಯನ್ನು ವಿಶಾಲಗೊಳಿಸಿದರೆ ಸಂಕಟಗಳು ನಮ್ಮನ್ನು ಬಾಧಿಸವು.

ಒಂದು ದೇಶದ ಪ್ರಜೆಗಳ ಸಂತೃಪ್ತಿಯನ್ನು ನಿರ್ಧರಿಸುವ ಕೆಲವು ಅಂಶಗಳಿವು: ತನ್ನ ಸಂಕಷ್ಟದಲ್ಲಿ ಒಬ್ಬರಾದರೂ ನೆರವಿಗೆ ಬರುತ್ತಾರೆಂಬ ಭಾವ ಪ್ರತಿಯೊಬ್ಬರಲ್ಲೂ ಬರಬೇಕು. ಇದನ್ನೇ ಸಾಮಾಜಿಕ ಬೆಂಬಲ ಎನ್ನುವುದು. ನಿಗದಿತ ಅವಧಿಯಲ್ಲಿ ಒಂದು ದೇಶದ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ಆ ದೇಶದ ಆರ್ಥಿಕ ಆರೋಗ್ಯದ ಸೂಚಕ. ಜಿಡಿಪಿ ವಾರ್ಷಿಕ ಬೆಳವಣಿಗೆಯ ದರ ನಿಗದಿತ ಪ್ರಮಾಣದಲ್ಲಿ ಇದ್ದರೆ ನಿರಾತಂಕ ಸ್ಥಿತಿ ಎನಿಸುವುದು. ತಲಾ ಜಿಡಿಪಿ ಹೆಚ್ಚಿರುವುದು ಅಪೇಕ್ಷಣೀಯ.

ಜನರ ದೈಹಿಕ ಮತ್ತು ಮಾನಸಿಕ ಆರೋಗ್ಯ ಉತ್ತಮವಾಗಿರಬೇಕು. ದೇಶವಾಸಿಗಳಿಗೆ ಬದುಕಿನ ಆಯ್ಕೆಗಳ ಸ್ವಾತಂತ್ರ್ಯ ಅಗತ್ಯ. ಇವೆಲ್ಲಕ್ಕೂ ಪ್ರಧಾನವಾಗಿ ದೇಶವು ಭ್ರಷ್ಟಾಚಾರಮುಕ್ತ ಆಗಿರಬೇಕು. ಈ ದಿಸೆಯಲ್ಲಿ ಫಿನ್‌ಲ್ಯಾಂಡ್, ಡೆನ್ಮಾರ್ಕ್, ಐಸ್‌ಲ್ಯಾಂಡ್- ಈ ಮೂರು ದೇಶಗಳು ಸಂತೋಷದ ದೇಶಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿವೆ.

ಸಾಮಾಜಿಕ ಮಾಧ್ಯಮಗಳು ಕೆಲವರನ್ನು ಅತಿಶಯೋಕ್ತಿಯಿಂದ ಚಿತ್ರಿಸಿ ನಮ್ಮನ್ನು ಕೀಳರಿಮೆಗೆ ದೂಡುತ್ತವೆ. ಅವು ಸೃಷ್ಟಿಸುವ ಭ್ರಮೆಯಿಂದ ಪಾರಾಗುವ ಧೈರ್ಯ, ಜಾಣ್ಮೆಯನ್ನು ರೂಢಿಸಿಕೊಳ್ಳದಿದ್ದರೆ ನಮ್ಮ ಪಾಲಿಗೆ ಆನಂದ ಸಾಧ್ಯವೇ? ಇಡೀ ಜಗತ್ತೇ ದಿನವಿಡೀ ಆನ್‌ಲೈನ್‌ನಲ್ಲಿ ಮುಳುಗಿರಲಿ, ತಕ್ಕ ಬೇಲಿಗಳನ್ನು ಹಾಕಿ ವಾಸ್ತವವಾದ ಸಂವಹನಗಳನ್ನು ಗಮನಿಸಬಹುದಲ್ಲ. ಎಲ್ಲಕ್ಕೂ ತಂತ್ರಜ್ಞಾನವನ್ನು ನೆಚ್ಚಿಕೊಳ್ಳುವುದಕ್ಕಿಂತ ಜನರಲ್ಲಿ ಪ್ರೀತಿ, ನಂಬಿಕೆ ಇಟ್ಟು ಮುಂದುವರಿಯುವುದು ದೊಡ್ಡದಲ್ಲವೇ?

ವಾಚಕರ ವಾಣಿ

ಚರ್ಚೆಯ ಗುಣಮಟ್ಟ ಸುಧಾರಿಸಲಿ

'ದುಡಿಯುವ ಜನ ಮದ್ಯ ಕುಡಿಯುವುದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಗ್ಯಾರಂಟಿ ಯೋಜನೆಗಳ ಮಾದರಿಯಲ್ಲೇ ಪುರುಷರಿಗೆ ಉಚಿತವಾಗಿ ವಾರಕ್ಕೆ ಎರಡು ಬಾಟಲಿ ಮದ್ಯ ವಿತರಿಸುವ ಯೋಜನೆ ಜಾರಿಗೊಳಿಸಿ'- ಇದು ಜನರ ಬೇಡಿಕೆಯಲ್ಲ, ವಿಧಾನಸಭೆಯಲ್ಲಿ ನಡೆದ ಬಜೆಟ್ ಮೇಲಿನ ಚರ್ಚೆಯಲ್ಲಿ ಜೆಡಿಎಸ್ ಶಾಸಕರೊಬ್ಬರು ಸರ್ಕಾರಕ್ಕೆ ಕೊಟ್ಟಿರುವ ಸಲಹೆ. 'ಗ್ಯಾರಂಟಿ' ಯೋಜನೆಗಳಿಂದ ಸರ್ಕಾರ ದಿವಾಳಿಯಾಗಿದೆ ಎಂದು ವಿರೋಧ ಪಕ್ಷಗಳ ಕೆಲವು ಸದಸ್ಯರು ಒಂದೆಡೆ ಟೀಕೆ ಮಾಡುತ್ತಾರೆ. ಮತ್ತೊಂದೆಡೆ, ಅದರ ವ್ಯಾಪ್ತಿಯನ್ನು ಈ ರೂಪದಲ್ಲಿ ಹಿಗ್ಗಿಸಿ ಅಂತ ಸಲಹೆ ನೀಡುತ್ತಾರೆ! ಇದೇನೇ ಇರಲಿ, ಶಾಸಕರ ಈ ಸಲಹೆ ಒಪ್ಪುವಂತಹದ್ದಲ್ಲ.

ಶಾಸನಸಭೆಗಳಲ್ಲಿ ಚರ್ಚೆಯ ಗುಣಮಟ್ಟ ಕುಸಿಯುತ್ತಿದೆ ಎಂಬ ಮಾತು ಇತ್ತೀಚಿನ ವರ್ಷಗಳಲ್ಲಿ ಪದೇ ಪದೇ ಕೇಳಿಬರುತ್ತಿದೆ. ಅಭ್ಯರ್ಥಿಗಳ ಆಯ್ಕೆಯಲ್ಲಿ ಗೆಲ್ಲುವುದೊಂದೇ ಮಾನದಂಡ ಆಗಿರುವುದು ಇದಕ್ಕೆ ಒಂದು ಪ್ರಧಾನ ಕಾರಣ. ಜ್ವಲಂತ ಸಮಸ್ಯೆಗಳ ಬಗ್ಗೆ ಸದನದಲ್ಲಿ ಗಂಭೀರವಾಗಿ ಚರ್ಚೆಯಾಗಲಿ. ದೂರದೃಷ್ಟಿಯಿಂದ ಕೂಡಿದ ಶಾಸನಗಳು ರೂಪುಗೊಳ್ಳಲಿ.

ಶಾಂತಕುಮಾರ್, ಸರ್ಜಾಪುರ

ಪ್ರಬುದ್ಧವಾಗಿ ಯೋಚಿಸದಿದ್ದರೆ ಅಬದ್ಧ ಯೋಜನೆ

ಜಲಮಂಡಳಿ ವತಿಯಿಂದ ಇದೇ ಶುಕ್ರವಾರ ಬೆಂಗಳೂರಿನ ಸ್ಯಾಂಕಿ ಕೆರೆಯಲ್ಲಿ 'ಕಾವೇರಿ ಆರತಿ' ಹಮ್ಮಿಕೊಂಡಿರುವುದಕ್ಕೆ ಕೆಲವು ಸಂಘಟನೆಗಳು ವಿರೋಧ ವ್ಯಕ್ತಪಡಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಮಾರ್ಚ್ 19). ಸರ್ಕಾರ ಇಂತಹ ಕಾರ್ಯಕ್ರಮಗಳನ್ನು ನಡೆಸುವುದು ಒಂದು ದೃಷ್ಟಿಯಿಂದ ಹುಚ್ಚಾಟವೇ ಸರಿ. ಆದರೂ ಪರಿಸರಕ್ಕೆ ತೊಂದರೆಯಾಗದಂತೆ ರಂಜನೀಯ ಕಾರ್ಯಕ್ರಮಗಳನ್ನು ನಡೆಸುವುದು ಮಹಾ ಅಪರಾಧವೇನೂ ಆಗಲಾರದು. ಆದರೆ ಸರ್ಕಾರ ಎನ್ನುವುದು ಇದಕ್ಕಿಂತಲೂ ಹೆಚ್ಚು ಪ್ರಬುದ್ಧವಾಗಿ ಆಲೋಚಿಸುವುದು ಔಚಿತ್ಯಪೂರ್ಣವೆನಿಸೀತು.

ಬೆಂಗಳೂರೆಂಬ ನಗರವು ಲಾಗಾಯ್ತಿನಿಂದ ಸರಣಿ ಕೆರೆಗಳ ಊರು. ನೀರಾವರಿಯಂತೆ ನಿತ್ಯ ಬಳಕೆಗೂ ಇಲ್ಲಿ ಕೆರೆಯೇ ನೀರಿನ ಸ್ರೋತವಾಗಿತ್ತು. ಭಾದ್ರಪದದ ದೊಡ್ಡ ಹಬ್ಬದಲ್ಲಿ ಗೌರಿಯನ್ನು ಕರೆತರುತ್ತಿದ್ದದ್ದು, ಗಣೇಶನೊಂದಿಗೆ ಪೂಜಿಸಿ ಇಬ್ಬರನ್ನೂ ಕಳಿಸಿಕೊಡುತ್ತಿದ್ದದ್ದು ಕೆರೆಯ ಮುಖಾಂತರವೇ. ಆಗಲೂ ಕೆರೆಯಲ್ಲಿ 'ಗಂಗಾಪೂಜೆ' ಆಗುತ್ತಿತ್ತು. ಗಂಗೆ ಎನ್ನುವುದು ಸೀನೀರು (ಫ್ರೆಷ್ ವಾಟರ್) ಎಂಬ ರೂಢನಾಮವೇ ವಿನಾ ನದಿವಿಶೇಷದ ಅಂಕಿತನಾಮ ಅಲ್ಲ. ಒಂದಾನೊಂದು ಕಾಲಘಟ್ಟದಲ್ಲಿ, ಕೋಡಿ ಬಿದ್ದ ಬೆಂಗಳೂರು ಕೆರೆನೀರು, ಕೆಳಮಟ್ಟದ ಕಾವೇರಿ ಜಲಾನಯನಕ್ಕೆ ನೀರೊದಗಿಸುತ್ತಿತ್ತು.

ಈಗಲಾದರೋ ಇತಿಮಿತಿಯಿಲ್ಲದೆ ದಾಂಗುಡಿ ಇಡುತ್ತಿರುವ ವಲಸಿಗರನ್ನು ಓಲೈಸಲು ಕೆರೆ ಬತ್ತಿಸಿ ಅಲ್ಲಿ ಮನೆ ಕಟ್ಟಿಕೊಡಲಾಗುತ್ತಿದೆ. ಅವರ ಪಾನ-ಶೌಚಾದಿಗಳಿಗಾಗಿ ಸುಮಾರು 360 ಮೀಟರ್ ತಗ್ಗಿನಲ್ಲಿರುವ ತೊರೆಕಾಡನಹಳ್ಳಿಯಲ್ಲಿ ಕೃತಕವಾಗಿ ಕಾವೇರಿ ಮಡು ನಿರ್ಮಿಸಿ, ವಿದ್ಯುತ್ ಪಂಪಿನಿಂದ ನೀರು ಮೊಗೆದು ಕೊಡುವ ಅಸ್ವಾಭಾವಿಕ ಪ್ರಕ್ರಿಯೆ ಅವ್ಯಾಹತವಾಗಿ ನಡೆದಿದೆ. ಆಡಳಿತ ನಡೆಸುವವರ ಪ್ರಬುದ್ಧತೆ ಇದನ್ನು ಮನಗಾಣಬೇಕಾಗಿದೆ!

ಆರ್.ಕೆ.ದಿವಾಕರ, ಬೆಂಗಳೂರು

ಜಾತ್ರೆಯಲ್ಲೇಕೆ ರಾಜಕಾರಣ?

ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿಯಲ್ಲಿ ಇತ್ತೀಚೆಗೆ ಜರುಗಿದ, ಶಿಷ್ಟ ಮತ್ತು ಬುಡಕಟ್ಟು ಸಂಸ್ಕೃತಿಯ ಆರಾಧ್ಯದೈವ ಗುರು ತಿಪ್ಪೇರುದ್ರಸ್ವಾಮಿಯ ವಾರ್ಷಿಕ ಮಹಾರಥೋತ್ಸವ ಈ ಭಾಗದ ಅತಿ ದೊಡ್ಡ ಜಾತ್ರೆಯಾಗಿದೆ. ಪತ್ರಿಕೆಗಳಲ್ಲಿ ವರದಿಯಾದಂತೆ, ಈ ಸಂದರ್ಭದಲ್ಲಿ ಸಚಿವರೊಬ್ಬರ ಬೆಂಬಲಿಗರು 'ಮುಂದಿನ ಮುಖ್ಯಮಂತ್ರಿ ಇವರೇ' ಎಂದು ಸಚಿವರ ಭಾವಚಿತ್ರ ಪ್ರದರ್ಶಿಸಿದ್ದನ್ನು ನೋಡಿ ಬೇಸರವಾಯಿತು. ಇದು ಸರಿಯಾದ ನಡೆಯಲ್ಲ. ರಾಜಕಾರಣ ಏನೇ ಇರಲಿ, ಇಂಥ ಸಂದರ್ಭಗಳಲ್ಲಿ ಪವಾಡ ಪುರುಷ ತಿಪ್ಪೇರುದ್ರಸ್ವಾಮಿಯವರ ಗೌರವಕ್ಕೆ ಚ್ಯುತಿ ತರುವ ಕೆಲಸವನ್ನು ಯಾರೂ ಮಾಡಬಾರದು.

ಗುರು ಜಗಳೂರು, ಹರಿಹರ

ಕಸ ಸಂಸ್ಕರಣೆ: ತಂತ್ರಜ್ಞಾನ ಬಳಕೆಯಾಗಲಿ

ಬೆಂಗಳೂರಿನ ಘನತ್ಯಾಜ್ಯ ಸಂಸ್ಕರಣೆಗಾಗಿ ದೊಡ್ಡಬಳ್ಳಾಪುರದ ಟೆರ್ರಾಫಾರ್ಮ್ ಬಳಿ 100 ಎಕರೆ ಜಾಗವನ್ನು ಬಿಬಿಎಂಪಿ ಅಂತಿಮಗೊಳಿಸಿರುವುದು ದೊಡ್ಡಬಳ್ಳಾಪುರದ ಸುತ್ತಮುತ್ತಲಿನ ಹಳ್ಳಿಗರ ನೆಮ್ಮದಿಗೆ ಕೊಳ್ಳಿ ಇಡುವಂತಿದೆ. ಈ ಮೊದಲು ಈ ಪ್ರದೇಶದಲ್ಲಿ ಇದ್ದ ಘನತ್ಯಾಜ್ಯ ವಿಲೇವಾರಿ ಘಟಕವು ಏನೆಲ್ಲಾ ಅವಾಂತರ ಮಾಡಿತ್ತು ಎಂಬುದು ಅನುಭವಿಸಿದವರಿಗೆ ಮಾತ್ರ ಗೊತ್ತು. ಇದು ಬರೀ ತ್ಯಾಜ್ಯ ವಿಲೇವಾರಿ ಘಟಕದ ಸುತ್ತಲಿನ ಸಮಸ್ಯೆಯಾಗಿ ಉಳಿದಿರಲಿಲ್ಲ. ದಾರಿಯುದ್ದಕ್ಕೂ ಬರುತ್ತಿದ್ದ ಕಸದ ಲಾರಿಗಳು ಕಸವನ್ನು ಸುರಿಸುತ್ತಾ ರೋಗರುಜಿನಗಳನ್ನು ಹರಡುವ ಬಂಡಿಗಳಂತೆ ಆಗಿದ್ದವು. ಆ ದುರ್ನಾತಕ್ಕೆ ನಾವು ನಮ್ಮೂರುಗಳಲ್ಲಿ ಮೂಗು ಮುಚ್ಚಿ ಓಡಾಡಬೇಕಾದ ಪರಿಸ್ಥಿತಿ ಇತ್ತು. ಇನ್ನು ತ್ಯಾಜ್ಯ ಘಟಕದ ಪಕ್ಕದಲ್ಲಿನ ಜನ– ಜಾನುವಾರುಗಳ ಬವಣೆ ಬರೀ ಮಾತಿಗೆ ಅರ್ಥವಾಗುವಂಥದ್ದಲ್ಲ. ಜನ ಉಗ್ರ ಹೋರಾಟ ಮಾಡಿ 2014ರಲ್ಲಿ ಇದನ್ನು ಬಂದ್ ಮಾಡಿಸಿದ್ದರು. ಒಂದು ದಶಕದ ನಂತರ ಮತ್ತದೇ ಕೆಲಸಕ್ಕೆ ಸರ್ಕಾರ ಕೈ ಹಾಕುತ್ತಿದೆ.

ಹಸಿ ತ್ಯಾಜ್ಯವನ್ನು ಮನೆಗಳಲ್ಲಿಯೇ ಬೇರ್ಪಡಿಸಿ, ಸಂಸ್ಕರಿಸಿ ಕಾಂಪೋಸ್ಟ್ ಮಾಡಬಹುದಾದ ವ್ಯವಸ್ಥೆಯನ್ನು ತಂತ್ರಜ್ಞಾನ ಮಾಡಿಕೊಟ್ಟಿದೆ. ಅದನ್ನು ಸುಲಭವಾಗಿ ದಕ್ಕುವಂತೆ ಮಾಡಿ ಅಲ್ಲಲ್ಲೇ ಸಂಸ್ಕರಿಸಬಹುದು. ಹಸಿ ಮತ್ತು ಒಣ ಕಸವನ್ನು ಮೂಲದಲ್ಲಿ ಬೇರ್ಪಡಿಸುವ ಸಣ್ಣ ಕೆಲಸದಲ್ಲೇ ವಿಫಲವಾಗಿರುವ ಆಡಳಿತ, ಈಗ ನಮ್ಮೂರುಗಳ ಮಕ್ಕಳು ಮತ್ತು ಹಿರಿಯರು, ಜಾನುವಾರುಗಳು, ನೀರಿನ ಸೆಲೆಗಳ ಮೇಲೆ ಗುರಿ ಇಟ್ಟಂತಿದೆ. ಬಿಬಿಎಂಪಿ ತನ್ನ ಈ ದುರಾಲೋಚನೆಯನ್ನು ಈಗಲೇ ಕೈ ಬಿಟ್ಟು, ಹೊಸ ತಂತ್ರಜ್ಞಾನದ ಮೂಲಕ ಉತ್ಪಾದಿತ ಸ್ಥಳದಲ್ಲೇ ಕಸ ಸಂಸ್ಕರಿಸುವ ಕೆಲಸ ಮಾಡಬೇಕು. ಅಗತ್ಯವಿದ್ದಷ್ಟು ಮಾತ್ರ ಬಳಸುವ, ಕಸದ ಉತ್ಪಾದನೆ ಕಡಿಮೆ ಮಾಡುವ ಬಗ್ಗೆ ನಗರದ 'ವಿದ್ಯಾವಂತ' ಜನರಲ್ಲಿ ಜಾಗೃತಿ ಮೂಡಿಸಬೇಕು. ನಗರದವರ ಸಲುವಾಗಿ ಹಳ್ಳಿಯ ಬಡಪಾಯಿಗಳ ಬಾಳು ಬರಡಾಗದಿರಲಿ.

ಹೇಮಂತ್ ಲಿಂಗಪ್ಪ, ಚಿಕ್ಕಬೆಳವಂಗಲ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜೂನ್ 5, 2024 ಸುನಿತಾ ಮತ್ತು ಬುಚ್ ಅವರು ಬೋಯಿಂಗ್ ಸ್ಟಾರ್‌ಲೈನರ್‌ನಲ್ಲಿ ಐಎಸ್‌ಎಸ್‌ಗೆ ತೆರಳಿದ ದಿನ

ಜೂನ್ 14, 2024 ಇಬ್ಬರೂ ಗಗನಯಾತ್ರಿಗಳು ಸ್ಟಾರ್‌ಲೈನರ್‌ನಲ್ಲಿ ಭೂಮಿಗೆ ಮರಳಬೇಕಾಗಿದ್ದ ದಿನ

ಮಾರ್ಚ್ 19, 2025 ಸುನಿತಾ ಮತ್ತು ಬುಚ್ ಅವರು ಇನ್ನಿಬ್ಬರು ಗಗನಯಾತ್ರಿಗಳೊಂದಿಗೆ ಸ್ಪೇಸ್‌ಎಕ್ಸ್ ಡ್ರ್ಯಾಗನ್ ಕೋಶದಲ್ಲಿ ಭೂಮಿಗೆ ವಾಪಸ್ ಆದ ದಿನ

286 ಐಎಸ್‌ಎಸ್‌ನಲ್ಲಿ ಇಬ್ಬರೂ ಕಳೆದ ದಿನಗಳು

608 ಮೂರು ಬಾರಿಯ ಪ್ರಯಾಣದಲ್ಲಿ ಸುನಿತಾ ಐಎಸ್‌ಎಸ್‌ನಲ್ಲಿದ್ದ ದಿನಗಳು

62 ಗಂಟೆ 6 ನಿಮಿಷ: ಸುನಿತಾ ಕೈಗೊಂಡ ಬಾಹ್ಯಾಕಾಶ ನಡಿಗೆಯ ಒಟ್ಟು ಅವಧಿ

ಜಗಮೆಚ್ಚಿದ ಗಗನಯಾತ್ರಿ

ಐಎಸ್‌ಎಸ್‌ನಲ್ಲಿ ಕೆಲಸ ನಿರತ ಸುನಿತಾ ಮತ್ತು ಬುಚ್ –ನಾಸಾ ಚಿತ್ರ

ಪ್ರಜಾವಾಣಿ ವಾರ್ತೆ

ಬುಧವಾರ ನಸುಕು 3.27ಕ್ಕೆ ಭಾರತೀಯರು ಸೇರಿದಂತೆ ಜಗತ್ತಿನ ಕೋಟ್ಯಂತರ ಖಗೋಳ ಆಸಕ್ತರ ಪ್ರಾರ್ಥನೆ ಫಲಿಸಿತು. ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ಐಎಸ್‌ಎಸ್) ತ್ರಿಶಂಕು ಸ್ಥಿತಿಯಲ್ಲಿದ್ದ ಭಾರತ ಮೂಲದ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಹಾಗೂ ಮತ್ತೊಬ್ಬ ಗಗನಯಾತ್ರಿ ಬುಚ್ ವಿಲ್ಮೋರ್ ಅವರು ಸುರಕ್ಷಿತವಾಗಿ ಭೂಮಿಗೆ ಮರಳುವುದರೊಂದಿಗೆ ಒಂಬತ್ತೂವರೆ ತಿಂಗಳ 'ಅಂತರಿಕ್ಷ ವಾಸ'ದಿಂದ ಮುಕ್ತರಾಗಿದ್ದಾರೆ.

ಬೋಯಿಂಗ್‌ನ ಸ್ಟಾರ್‌ಲೈನರ್ ಬಾಹ್ಯಾಕಾಶ ಕೋಶದ (ಸ್ಪೇಸ್ ಕ್ಯಾಪ್ಸೂಲ್) ಮಾನವ ಸಹಿತ ಪರೀಕ್ಷಾರ್ಥ ಪ್ರಯಾಣದ ಭಾಗವಾಗಿ ಎಂಟು ದಿನಗಳ ಕೆಲಸಕ್ಕೆ ಐಎಸ್‌ಎಸ್‌ಗೆ ತೆರಳಿದ್ದ ಸುನಿತಾ ಮತ್ತು ಬುಚ್ ಅವರು ಕೋಶದಲ್ಲಿ ಕಂಡು ಬಂದ ತಾಂತ್ರಿಕ ದೋಷದ ಕಾರಣಕ್ಕೆ ಬಾಹ್ಯಾಕಾಶ ನಿಲ್ದಾಣದಲ್ಲೇ ಉಳಿಯಬೇಕಾಯಿತು. ಅವರನ್ನು ವಾಪಸ್ ಕರೆತರುವ ವಿಚಾರದಲ್ಲಿ ನಾಸಾ ತಕ್ಷಣಕ್ಕೆ ನಿರ್ಧಾರ ಕೈಗೊಳ್ಳದೇ ಇದ್ದುದರಿಂದ ಬಾಹ್ಯಾಕಾಶದಲ್ಲಿ ಅವರ ಸುರಕ್ಷತೆ ಮತ್ತು ಅವರು ಭೂಮಿಗೆ ವಾಪಸ್ ಮರಳುವ ಬಗ್ಗೆ ಅನಿಶ್ಚಿತತೆ ಉಂಟಾಗಿತ್ತು. ಇದು ಜಾಗತಿಕ ಮಟ್ಟದಲ್ಲಿ ಖಗೋಳ ಆಸಕ್ತರಲ್ಲಿ, ಅದರಲ್ಲೂ ವಿಶೇಷವಾಗಿ ಭಾರತೀಯರಲ್ಲಿ ಆತಂಕ ಉಂಟು ಮಾಡಿತ್ತು. ಗಗನಯಾನಿಯಾಗಿ ಹೆಸರು ಮಾಡಿದ್ದ ಭಾರತ ಮೂಲದವರೇ ಆದ ಕಲ್ಪನಾ ಚಾವ್ಲಾ ಅವರು ಭೂಮಿಗೆ ಮರಳುವ ಹಾದಿಯಲ್ಲಿ ಮೃತಪಟ್ಟಿದ್ದು ಭಾರತೀಯರು ಸುನಿತಾ ಬಗ್ಗೆ ಕಳವಳ ಪಡುವುದಕ್ಕೆ ಕಾರಣ.

ಆ ಆತಂಕ ಈಗ ದೂರವಾಗಿದೆ. ಸುನಿತಾ ಅವರ ತಂದೆಯ ಹುಟ್ಟೂರಾಗಿರುವ ಗುಜರಾತ್‌ನ ಝುಲಾಸನ್‌ನ ಗ್ರಾಮಸ್ಥರು ಬುಧವಾರ ಮಾಡಿರುವ ಸಂಭ್ರಮಾಚರಣೆಯೇ ಇದಕ್ಕೆ ಸಾಕ್ಷಿ.

ಇಬ್ಬರ ಆಗಮನವು ಸಾಗರದಲ್ಲಿದ್ದ ಡಾಲ್ಫಿನ್‌ಗಳಿಗೂ ಖುಷಿ ತಂದಿರಬೇಕು. 'ಡ್ರ್ಯಾಗನ್' ಬಾಹ್ಯಾಕಾಶ ಕೋಶ ನೀರನ್ನು ಸ್ಪರ್ಶಿಸಿದ ನಂತರ ಕೋಶದ ಸುತ್ತಲೂ ಡಾಲ್ಫಿನ್‌ಗಳು ಜಿಗಿಯುತ್ತಿದ್ದವು.

ಐಎಸ್‌ಎಸ್ ವಾಸ ಸುನಿತಾ ಮತ್ತು ಬುಚ್ ಅವರಿಗೆ ಹೊಸದೇನಲ್ಲ. ಇಬ್ಬರೂ ಈ ಹಿಂದೆ ಅಲ್ಲಿಗೆ ಹೋದವರೆ. ತಿಂಗಳುಗಟ್ಟಲೆ ಇದ್ದವರೆ. ಆದರೆ, ಈ ಬಾರಿ ಅವರು ಐಎಸ್‌ಎಸ್‌ನಲ್ಲಿ ಎಂಟು ದಿನಗಳನ್ನು ಕಳೆಯುವುದಕ್ಕೆ ಮಾನಸಿಕವಾಗಿ ಸಜ್ಜಾಗಿದ್ದರು. ಆದರೆ, ನಂತರ ನಡೆದ ಬೆಳವಣಿಗೆಗಳಿಂದಾಗಿ ಅವರು ವಾಪಸ್ ಆಗುವ ಸಮಯ ವಿಸ್ತರಿಸುತ್ತಲೇ ಇತ್ತು. ಗುರುತ್ವಾಕರ್ಷಣೆ ಶಕ್ತಿ ಇಲ್ಲದ ವಾತಾವರಣದಲ್ಲಿ ವಾಸ ಸುಲಭವಲ್ಲ. ಇಬ್ಬರೂ ತರಬೇತು ಪಡೆದವರಾದರೂ ದಿಢೀರ್ ಎದುರಾದ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವುದು ಬಹಳ ಮುಖ್ಯ. ಈ ದೀರ್ಘ ಅವಧಿಯಲ್ಲಿ ಇಬ್ಬರೂ ತೋರಿದ ಸಂಯಮ, ಪ್ರದರ್ಶಿಸಿದ ಧೈರ್ಯ, ಛಲ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಆಧಾರ: ಪಿಟಿಐ, ರಾಯಿಟರ್ಸ್, ನಾಸಾ, ಸ್ಪೇಸ್‌ಎಕ್ಸ್, ಬಿಬಿಸಿ

ಸವಾಲಿನ ಬದುಕು

ಗುರುತ್ವಾಕರ್ಷಣೆ, ವಾತಾವರಣದ ಒತ್ತಡ ಇಲ್ಲದ, ಭೂಮಿ ಮೇಲೆ ಇರುವಂಥ ಊಟ, ನೀರು ದುರ್ಲಭವಾಗಿರುವ ಐಎಸ್‌ಎಸ್‌ನಲ್ಲಿ ಒಂಬತ್ತು ತಿಂಗಳು ಬದುಕುವುದು ಸುಲಭದ ಮಾತಲ್ಲ.

- ಐಎಸ್‌ಎಸ್ ಭೂಮಿಯ ಸುತ್ತ 24 ಗಂಟೆಯಲ್ಲಿ 16 ಬಾರಿ (90 ನಿಮಿಷಕ್ಕೊಮ್ಮೆ) ಸುತ್ತುತ್ತದೆ. ಅಂದರೆ, 24 ಗಂಟೆಯಲ್ಲಿ ಐಎಸ್‌ಎಸ್‌ನಲ್ಲಿ ಇರುವವರು 16 ಸೂರ್ಯಾಸ್ತ, 16 ಸೂರ್ಯೋದಯಗಳನ್ನು ನೋಡುತ್ತಾರೆ. ಆದರೂ ಗಗನಯಾತ್ರಿಗಳು 24 ಗಂಟೆಯ ಲೆಕ್ಕದಲ್ಲೇ ತಮ್ಮ ದಿನಚರಿ ಅಳವಡಿಸಿಕೊಂಡಿರುತ್ತಾರೆ
- ಗಗನಯಾತ್ರಿಗಳು ಧಾನ್ಯಗಳು, ಮೊಟ್ಟೆ, ಓಟ್ಸ್, ಮಾಂಸ, ಹಾಲಿನ ಪುಡಿ, ಪಿಜ್ಜಾ ಇತ್ಯಾದಿ ಸೇವಿಸುತ್ತಾರೆ. ಹೆಚ್ಚು ಕಾಲ ಕೆಡದಿರಲು ಆಹಾರ ಪದಾರ್ಥಗಳಲ್ಲಿನ ನೀರಿನ ಅಂಶವನ್ನು ತೆಗೆದು ಶೇಖರಿಸಿಟ್ಟುಕೊಂಡಿರುತ್ತಾರೆ
- ಗಗನಯಾತ್ರಿಗಳು ತಮ್ಮ ಬೆವರು ಮತ್ತು ಮೂತ್ರವನ್ನು ಸಂಸ್ಕರಿಸಿ, ಶುದ್ಧೀಕರಿಸಿ, ಕುಡಿಯಲು ಮತ್ತು ಇತರ ಕೆಲಸಗಳಿಗೆ ಬಳಸುತ್ತಾರೆ. ಶೌಚಾಲಯದ ಸೌಲಭ್ಯವೂ ಇರುತ್ತದೆ. ತೇವದ ಬಟ್ಟೆಯಿಂದ ಮೈ ಒರೆಸಿಕೊಳ್ಳುವುದೇ ಅಲ್ಲಿ ಸ್ನಾನ
- ಗುರುತ್ವಾಕರ್ಷಣೆ ಇಲ್ಲದಿರುವುದರಿಂದ ಅಡುಗೆ ಸಿದ್ಧಪಡಿಸುವುದು, ಊಟ ಮಾಡುವುದು, ನೀರು ಕುಡಿಯುವುದು ಎಲ್ಲವೂ ತ್ರಾಸದ ಕೆಲಸ
- ಹಲ್ಲು ಉಜ್ಜಿ ಕೊನೆಯಲ್ಲಿ ಅದನ್ನು ನುಂಗಿಬಿಡುತ್ತಾರೆ. ಅಂತರಿಕ್ಷದಲ್ಲಿಯೂ ವಾರದ ದಿನ, ವಾರಾಂತ್ಯ ಇರುತ್ತದೆ
- ವರ್ಷದಲ್ಲಿ ಹಲವು ಬಾರಿ ಸರಕು ಸಾಗಣೆಯ ನೌಕೆ ಐಎಸ್‌ಎಸ್ ಬಳಿ ತೆರಳುತ್ತದೆ. ಅದರಲ್ಲಿ ತಾಜಾ ಹಣ್ಣು ಮತ್ತಿತರ ಆಹಾರ ಪದಾರ್ಥಗಳನ್ನು ಒಯ್ಯಲಾಗುತ್ತದೆ
- ಗಗನಯಾತ್ರಿಗಳು ನಿದ್ದೆ ಮಾಡಲು ಟೆಲಿಫೋನ್ ಬೂತ್ ರೀತಿಯ ಒಂದು ಕಂಪಾರ್ಟ್‌ಮೆಂಟ್ ಇರುತ್ತದೆ. ಅದರಲ್ಲಿರುವ ಸ್ಲೀಪಿಂಗ್ ಬ್ಯಾಗ್ಸ್‌ನಲ್ಲಿ ಮಲಗುತ್ತಾರೆ
- ಕುಟುಂಬದೊಂದಿಗೆ ನಿರಂತರ ಸಂಪರ್ಕದಲ್ಲಿರುತ್ತಾರೆ



ಆರೋಗ್ಯದ ಮೇಲೆ ಪರಿಣಾಮ

ಅಲ್ಲಿನ ಗುರುತ್ವರಹಿತ ವಾತಾವರಣದಲ್ಲಿ ಗಗನಯಾತ್ರಿಗಳ ದೇಹ ಮತ್ತು ಮನಸ್ಸು ಅನೇಕ ಬಗೆಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ವಿಕಿರಣಕ್ಕೆ ತೆರೆದುಕೊಳ್ಳುತ್ತಾರೆ. ಇದು ಭವಿಷ್ಯದಲ್ಲಿ ಕ್ಯಾನ್ಸರ್‌ನಂತಹ ರೋಗಕ್ಕೂ ಕಾರಣವಾಗಬಹುದು ಜತೆಗೆ, ಮೂಳೆ ಸಾಂದ್ರತೆ ಕಡಿಮೆ ಆಗುವುದು, ಕಣ್ಣಿನ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ.

ದೀರ್ಘಾವಧಿ ಬಾಹ್ಯಾಕಾಶದಲ್ಲಿದ್ದು ಭೂಮಿಗೆ ಮರಳಿದ ನಂತರ ಇಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳುವುದು ಗಗನಯಾತ್ರಿಗಳಿಗೆ ಕಷ್ಟವಾಗುತ್ತದೆ. ಭೂಮಿಯ ಮೇಲಿನ ಸಹಜ ಬದುಕಿಗೆ ಹೊಂದಿಕೊಳ್ಳಲು 45 ದಿನಗಳ ಕಾಲ ಹಲವು ರೀತಿಯ ಪುನಃಶ್ಚೇತನ ಚಿಕಿತ್ಸೆ ಮತ್ತು ತರಬೇತಿ ನೀಡಲಾಗುತ್ತದೆ. ದೈಹಿಕವಾಗಿ ಹಾಗೂ ಮಾನಸಿಕವಾಗಿ ಅವರು ಬಳಲಿರುತ್ತಾರೆ. ನಡೆಯುವುದು, ಸ್ನಾಯುಗಳ ಬಲವರ್ಧನೆ, ಮೂಳೆ ಚೇತರಿಕೆ, ಹೃದಯದ ಆರೋಗ್ಯ ಉತ್ತಮಪಡಿಸಿಕೊಳ್ಳಲು ಮೂರು ಹಂತಗಳಲ್ಲಿ ಚಿಕಿತ್ಸೆ ನೀಡಲಾಗುತ್ತದೆ.

ಭೂಮಿಗೆ ಮರಳಿದ ಸುನಿತಾ ಮತ್ತು ಇತರ ಗಗನಯಾತ್ರಿಗಳು ಮೇಲ್ನೋಟಕ್ಕೆ ಆರೋಗ್ಯವಾಗಿ ಇದ್ದಂತೆ ಕಂಡರೂ, ಅವರೆಲ್ಲರೂ ಇನ್ನೂ ಕೆಲವು ದಿನ ವೈದ್ಯಕೀಯ ಪರೀಕ್ಷೆಗಳು ಮತ್ತು ಚಿಕಿತ್ಸೆಗೆ ಒಳಪಡಲಿದ್ದಾರೆ.

ಸಾಧಕಿ ಸುನಿತಾ

59 ವರ್ಷದ ಸುನಿತಾ ವಿಲಿಯಮ್ಸ್ ಅವರು ಗಗನಯಾನ ಕ್ಷೇತ್ರದ ಬಹುದೊಡ್ಡ ಸಾಧಕಿ. ಅತ್ಯಂತ ಅನುಭವಿ ಗಗನಯಾತ್ರಿ. ಆಕೆ ಭಾರತ ಮೂಲದವರು ಎನ್ನುವುದು ಭಾರತೀಯರ ಹೆಮ್ಮೆ. ಐಎಸ್‌ಎಸ್‌ಗೆ ತೆರಳಿದ ಭಾರತ ಮೂಲದ ಎರಡನೇ ಮಹಿಳಾ ಗಗನಯಾತ್ರಿ ಅವರು. ಕಲ್ಪನಾ ಚಾವ್ಲಾ ಮೊದಲಿನವರು.

ಸುನಿತಾ ತಂದೆ ಡಾ.ದೀಪಕ್ ಅವರು ಗುಜರಾತ್‌ನ ಝುಲಾಸನ್ ಜಿಲ್ಲೆಯವರು. 1965ರ ಸೆ.19ರಂದು ಅಮೆರಿಕದ ಒಹಿಯೊದಲ್ಲಿ ಜನಿಸಿದ್ದ ಸುನಿತಾ, ಅಮೆರಿಕ ನೌಕಾ ಪಡೆಯಲ್ಲಿ ಕ್ಯಾಪ್ಟನ್ ಆಗಿದ್ದವರು. 1998ರಲ್ಲಿ ನಾಸಾವು ಅವರನ್ನು ಗಗನಯಾತ್ರಿಯನ್ನಾಗಿ ಆಯ್ಕೆ ಮಾಡಿತ್ತು.

2007 2012 2024 ಸುನಿತಾ ವಿಲಿಯಮ್ಸ್ ಬಾಹ್ಯಾಕಾಶಯಾನ ಕೈಗೊಂಡಿದ್ದ ವರ್ಷಗಳು

- ಸುನಿತಾ ಐಎಸ್‌ಎಸ್‌ಗೆ ಹೋಗಿ ಬಂದಿರುವುದು ಇದು ಮೂರನೇ ಬಾರಿ
- ಮೊದಲ ಬಾರಿ ಹೋಗಿದ್ದಾಗ ನಾಲ್ಕು ಬಾರಿ ಬಾಹ್ಯಾಕಾಶ ನಡಿಗೆ ಮಾಡಿ ಅತಿ ಹೆಚ್ಚು ಬಾಹ್ಯಾಕಾಶ ನಡಿಗೆ ಕೈಗೊಂಡ ಮಹಿಳಾ ಗಗನಯಾನಿ ಎಂದು ದಾಖಲೆ ಬರೆದಿದ್ದರು. ಎರಡು ಅವಧಿಯಲ್ಲಿ ಅವರು ಒಟ್ಟು 322 ದಿನಗಳನ್ನು ಬಾಹ್ಯಾಕಾಶ ನಿಲ್ದಾಣದಲ್ಲಿ ಕಳೆದಿದ್ದರು
- ಈವರೆಗೆ ಅವರು ಒಟ್ಟು 608 ದಿನಗಳನ್ನು ಐಎಸ್‌ಎಸ್‌ನಲ್ಲಿ ಕಳೆದಿದ್ದಾರೆ. 62 ಗಂಟೆ 6 ನಿಮಿಷಗಳ ಬಾಹ್ಯಾಕಾಶ ನಡಿಗೆ ಕೈಗೊಂಡು ನಾಸಾದ ಅಧ್ಯಯನಕ್ಕೆ ನೆರವಾಗಿದ್ದಾರೆ. ಆ ಮೂಲಕ ಅತಿ ಹೆಚ್ಚು ಅವಧಿಗೆ ಬಾಹ್ಯಾಕಾಶ ನಡಿಗೆ ಕೈಗೊಂಡ ಮಹಿಳೆ ಎಂಬ ಕೀರ್ತಿಗೂ ಭಾಜನರಾಗಿದ್ದಾರೆ



ಬೋಯಿಂಗ್ ಸ್ಟಾರ್‌ಲೈನರ್

ಬೋಯಿಂಗ್‌ಗೆ ಹಿನ್ನಡೆ

ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರು ಐಎಸ್‌ಎಸ್‌ಗೆ ಹೋಗಿದ್ದು ಬೋಯಿಂಗ್‌ನ ಸ್ಟಾರ್‌ಲೈನರ್ ಬಾಹ್ಯಾಕಾಶ ಕೋಶದಲ್ಲಿ. ಆದರೆ, ಬಂದಿದ್ದು ಅದರ ಪ್ರತಿಸ್ಪರ್ಧಿ ಕಂಪನಿಯಾದ ಸ್ಪೇಸ್ ಎಕ್ಸ್‌ನ 'ಡ್ರ್ಯಾಗನ್' ಕೋಶದಲ್ಲಿ.

ಬೋಯಿಂಗ್ ವೈಮಾಂತರಿಕ್ಷ ಕ್ಷೇತ್ರದಲ್ಲಿ ದೊಡ್ಡ ಹೆಸರು. ರಕ್ಷಣೆ, ಬಾಹ್ಯಾಕಾಶ ಕ್ಷೇತ್ರದಲ್ಲಿ 2002ರಿಂದ ಸಕ್ರಿಯವಾಗಿದ್ದರೂ ವಿಮಾನಯಾನ ಕ್ಷೇತ್ರದಲ್ಲಿ ಅದಕ್ಕೆ ಶತಮಾನದ ಇತಿಹಾಸವಿದೆ. ಎಲಾನ್ ಮಸ್ಕ್ ಸ್ಪೇಸ್ ಎಕ್ಸ್ ಹುಟ್ಟುಹಾಕಿದ್ದು 2002ರಲ್ಲಿ. ಬಾಹ್ಯಾಕಾಶ ಕ್ಷೇತ್ರದಲ್ಲಿ ಕಂಪನಿಯು ಎಲ್ಲವನ್ನೂ ಶೂನ್ಯದಿಂದ ಆರಂಭಿಸಿದೆ. ಆದರೆ, ಮಾನವಸಹಿತ ಅಂತರಿಕ್ಷಯಾನ ಪೈಪೋಟಿಯಲ್ಲಿ ಅನುಭವಿ ಬೋಯಿಂಗ್ ಅನ್ನು ಸ್ಪೇಸ್‌ಎಕ್ಸ್ ಹಿಂದಿಕ್ಕಿದೆ.

ನಾಸಾವು ಐಎಸ್‌ಎಸ್‌ಗೆ ಗಗನಯಾತ್ರಿಗಳನ್ನು ಕಳುಹಿಸಲು ಮತ್ತು ಕರೆದುಕೊಂಡು ಬರಲು 2011ರವರೆಗೂ ಬಾಹ್ಯಾಕಾಶ ನೌಕೆಗಳನ್ನು (ಸ್ಪೇಸ್ ಷಟಲ್) ಬಳಸುತ್ತಿತ್ತು. ಆ ಬಳಿಕ ಇದರ ಜವಾಬ್ದಾರಿಯನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಿದೆ. ಈ ಸಂಬಂಧ, 2014ರಲ್ಲಿ ಬೋಯಿಂಗ್ ಮತ್ತು ಸ್ಪೇಸ್‌ಎಕ್ಸ್ ಜೊತೆ ಒಪ್ಪಂದ ಮಾಡಿಕೊಂಡಿದೆ. 2017ರ ವೇಳೆಗೆ ಗಗನಯಾತ್ರಿಗಳನ್ನು ಕರೆದುಕೊಂಡು ಹೋಗುವ ಸಾಮರ್ಥ್ಯ ಹೊಂದಿರಬೇಕು ಎಂದು ಎರಡೂ ಕಂಪನಿಗಳಿಗೆ ನಾಸಾ ಹೇಳಿತ್ತು. ಆದರೆ, ಎರಡೂ ಕಂಪನಿಗಳು ಗಡುವು ಮೀರಿದ್ದವು. ಸ್ಪೇಸ್‌ಎಕ್ಸ್ 2020ರಿಂದ ತನ್ನ ರಾಕೆಟ್, ಡ್ರ್ಯಾಗನ್ ಬಾಹ್ಯಾಕಾಶ ಕೋಶಗಳ ಮೂಲಕ ಗಗನಯಾತ್ರಿಗಳನ್ನು ಐಎಸ್‌ಎಸ್‌ಗೆ ಕಳುಹಿಸುತ್ತಿದೆ. ಅಲ್ಲಿಂದ ವಾಪಸ್ ಕರೆತರುತ್ತಿದೆ.

ಆದರೆ, ಬೋಯಿಂಗ್ ಇನ್ನೂ ಇದರಲ್ಲಿ ಪೂರ್ಣ ಯಶಸ್ಸು ಗಳಿಸಲು ಆಗಿಲ್ಲ. ಕಳೆದ ವರ್ಷದ ಜೂನ್ 5ರಂದು ಸ್ಟಾರ್‌ಲೈನರ್ ಮೂಲಕ ಸುನಿತಾ ಮತ್ತು ಬುಚ್ ವಿಲ್ಮೋರ್ ಅವರನ್ನು ಕಳುಹಿಸಿದ್ದರೂ ತಾಂತ್ರಿಕ ದೋಷದ ಕಾರಣದಿಂದ ಅವರನ್ನು ಸ್ಟಾರ್‌ಲೈನರ್‌ನಲ್ಲೇ ವಾಪಸ್ ಕರೆತರಲು ಅದಕ್ಕೆ ಸಾಧ್ಯವಾಗಿಲ್ಲ (ಇಬ್ಬರೂ ಗಗನಯಾನಿಗಳ ಸುರಕ್ಷತೆಯ ಕಾರಣದಿಂದ ಅವರನ್ನು ಐಎಸ್‌ಎಸ್‌ನಲ್ಲೇ ಬಿಟ್ಟು ಸ್ಟಾರ್‌ಲೈನರ್ ಸೆಪ್ಟೆಂಬರ್ 7ರಂದು ಭೂಮಿಗೆ ಯಶಸ್ವಿಯಾಗಿ ಮರಳಿತ್ತು). ತಾನು ಕಳುಹಿಸಿದ್ದ ಗಗನಯಾತ್ರಿಗಳನ್ನು ಸುರಕ್ಷಿತವಾಗಿ ಕರೆತರಲು ತನ್ನ ಪ್ರತಿಸ್ಪರ್ಧಿ ಸ್ಪೇಸ್‌ಎಕ್ಸ್ ಕಂಪನಿಯನ್ನು ಅದು ಅನಿವಾರ್ಯವಾಗಿ ಅವಲಂಬಿಸಬೇಕಾಗಿ ಬಂದಿದೆ.

420 ಕಿ.ಮೀ ದೂರಕ್ಕೆ 17 ಗಂಟೆ ಏಕೆ?

ಭೂಮಿಯಿಂದ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಇರುವ ದೂರ 420 ಕಿ.ಮೀ. ಸುನಿತಾ ವಿಲಿಯಮ್ಸ್ ಮತ್ತು ಇತರ ಮೂವರು ಗಗನಯಾನಿಗಳಿದ್ದ 'ಡ್ರ್ಯಾಗನ್' ಬಾಹ್ಯಾಕಾಶ ಕೋಶವು ಭೂಮಿ ತಲುಪಲು 17 ಗಂಟೆಗಳನ್ನು ತೆಗೆದುಕೊಂಡಿದೆ. ಕಳೆದ ವರ್ಷ ರಷ್ಯಾದ ಸೋಯುಜ್ ಬಾಹ್ಯಾಕಾಶ ಕೋಶವು ಕೇವಲ 3.5 ಗಂಟೆಗಳಲ್ಲಿ ಮೂವರು ಗಗನಯಾನಿಗಳನ್ನು ಭೂಮಿಗೆ ಕರೆತಂದಿತ್ತು. ಆದರೆ, ಇದು ಹೆಚ್ಚು ಅಪಾಯಕಾರಿ.

ಗಗನಯಾನಿಗಳು ಮತ್ತು ಬಾಹ್ಯಾಕಾಶ ಕೋಶದ ಸುರಕ್ಷತೆ ಮತ್ತು ನಿಗದಿತ ಸ್ಥಳದಲ್ಲೇ ಬಾಹ್ಯಾಕಾಶ ಕೋಶವನ್ನು ಇಳಿಸುವ ಉದ್ದೇಶದಿಂದ ನಾಸಾ ಮತ್ತು 'ಸ್ಪೇಸ್ ಎಕ್ಸ್' ಅತ್ಯಂತ ವ್ಯವಸ್ಥಿತವಾಗಿ, ಹಂತ ಹಂತವಾಗಿ (ಕಕ್ಷೆಯಿಂದ ಜಾರುವುದು(ಡಿಆರ್ಬಿಟ್), ಭೂವಾತಾವರಣ ಪ್ರವೇಶ, ಪ್ಯಾರಾಚೂಟ್ ಮೂಲಕ ವೇಗ ನಿಯಂತ್ರಣ) 'ಡ್ರ್ಯಾಗನ್' ಕೋಶವು ಭೂಮಿಗೆ ತಲುಪುವಂತೆ ನೋಡಿಕೊಂಡವು. ಈ ಕಾರಣಕ್ಕೆ ಡ್ರ್ಯಾಗನ್ 17 ಗಂಟೆ ತೆಗೆದುಕೊಂಡಿದೆ.

ಸಿನಿ ಬಿಟ್ಸ್

ಸೆಟ್ಟೇರಿದ ಅಪ್ಪು ಅಭಿಮಾನಿ

ಪುನೀತ್ ರಾಜಕುಮಾರ್ ನಿಧನದ ನಂತರ ಅವರ ಹೆಸರಿನಲ್ಲಿ ಸಾಕಷ್ಟು ಸಿನಿಮಾಗಳು ಸೆಟ್ಟೇರಿವೆ. ಆ ಸಾಲಿಗೆ ಮತ್ತೊಂದು ಸೇರ್ಪಡೆ 'ಅಪ್ಪು ಅಭಿಮಾನಿ'. ಈ ಹಿಂದೆ 'ತಾರಕಾಸುರ' ಚಿತ್ರದಲ್ಲಿ ಅಭಿನಯಿಸಿದ್ದ ರವಿಕಿರಣ್ ನಾಯಕನಾಗಿ ನಟಿಸುತ್ತಿರುವ ಚಿತ್ರವಿದು. ಡಾ.ರೆಡ್ಡಿ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. 'ಚಿತ್ರದ ಶೀರ್ಷಿಕೆಯೇ ಹೇಳುವಂತೆ ಚಿತ್ರದಲ್ಲಿ ನಾಯಕ ರವಿಕಿರಣ್ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಅಪ್ಪಟ ಅಭಿಮಾನಿಯಾಗಿರುತ್ತಾರೆ. ಈಗಾಗಲೇ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಂಡಿದೆ. ಅಪ್ಪು ಜನ್ಮದಿನದಂದು ಅವರ 50 ಅಡಿ ಎತ್ತರದ ಕಟೌಟ್ ಅನಾವರಣಗೊಳಿಸಿ ಅವರಿಗೆ ಗೌರವ ಸಲ್ಲಿಸಿದ್ದೇವೆ. ಚಿತ್ರದ ನಾಯಕಿ ಇನ್ನಿತರೆ ವಿವರಗಳನ್ನು ಮುಂದಿನ ದಿನಗಳಲ್ಲಿ ನೀಡಲಾಗುವುದು' ಎಂದಿದ್ದಾರೆ ನಿರ್ದೇಶಕರು. ಅಕ್ಷಯ ಮೂವಿ ಫ್ಯಾಕ್ಟರಿ ಚಿತ್ರವನ್ನು ನಿರ್ಮಿಸುತ್ತಿದೆ. ರಾಘವೇಂದ್ರ ರಾಜ್‌ಕುಮಾರ್, ಶರತ್ ಲೋಹಿತಾಶ್ವ, ಹಿರಿಯ ನಟ ಸುಮನ್, ಚಿದಾನಂದ್, ಥ್ರಿಲ್ಲರ್ ಮಂಜು ಮುಂತಾದವರು ನಟಿಸುತ್ತಿದ್ದಾರೆ. ಶೇಖ್ ಮುನೀರ್ ಪಾಷಾ ಕಥೆಯಿದ್ದು, ಮಣಿಕಾಂತ್ ಕದ್ರಿ ಸಂಗೀತ ಸಂಯೋಜಿಸಿದ್ದಾರೆ.



ರವಿಕಿರಣ್

ಕಂಗ್ರಾಜುಲೇಷನ್ಸ್ ಬ್ರದರ್ ಎಂದ ಹರಿ ಸಂತೋಷ್

ಪ್ರಶಾಂತ್ ಕಲ್ಲೂರ್ ನಿರ್ಮಾಣದ, ಪ್ರತಾಪ್ ಗಂಧರ್ವ ನಿರ್ದೇಶನದ ಚೊಚ್ಚಲ ಚಿತ್ರ 'ಕಂಗ್ರಾಜುಲೇಷನ್ಸ್ ಬ್ರದರ್' ಸಿನಿಮಾ ಜೂನ್‌ನಲ್ಲಿ ತೆರೆಕಾಣಲಿದೆ. ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ.

'ಅಲೆಮಾರಿ', 'ವಿಕ್ಟರಿ–2' ಖ್ಯಾತಿಯ ನಿರ್ದೇಶಕ ಹರಿ ಸಂತೋಷ್ ಈ ಸಿನಿಮಾದ ಕಥೆ ಬರೆದಿದ್ದಾರೆ. ಕಿರುತೆರೆ ಹಿನ್ನೆಲೆಯ ರಕ್ಷಿತ್ ನಾಗ್ ಈ ಸಿನಿಮಾ ಮೂಲಕ ನಾಯಕನಾಗಿ ಚಂದನವನಕ್ಕೆ ಬರುತ್ತಿದ್ದಾರೆ. ಸಂಜನಾ, ಅನುಷಾ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ.

ಚಿತ್ರದ ಬಗ್ಗೆ ಮಾಹಿತಿ ನೀಡಲು ಕರೆದಿದ್ದ ಸುದ್ದಿಗೋಷ್ಠಿಗೂ ಮುನ್ನ ಮಾತಿಗೆ ಸಿಕ್ಕ ಹರಿ ಸಂತೋಷ್, ಕನ್ನಡ ಚಿತ್ರರಂಗದಲ್ಲಿ ಬರವಣಿಗೆಯ ಕೊರತೆ ಬಗ್ಗೆ ಬೇಸರ ವ್ಯಕ್ತಪಡಿಸಿದರು. 'ನಮ್ಮ ಉದ್ಯಮದಲ್ಲಿ ಬರವಣಿಗೆಗೆ ಬೆಲೆ ಕೊಡುತ್ತಿಲ್ಲ. ಬರವಣಿಗೆಗೆ ಸಮಯ, ಕಥೆಗಾರರಿಗೆ ತಕ್ಕ ಸಂಭಾವನೆ, ಸೌಲಭ್ಯ ನೀಡುತ್ತಿಲ್ಲ. ಎಲ್ಲಿ ಬರಹಗಾರರಿಗೆ ಬೆಲೆ ನೀಡುತ್ತಾರೋ ಆ ಚಿತ್ರೋದ್ಯಮ ಬೇಗ ಬೆಳೆಯುತ್ತದೆ. ಯಶಸ್ಸು ಪಡೆದ ಕಥೆಗಳು ಮತ್ತು ಮಾದರಿಯನ್ನು ನಾವು ಅನುಸರಿಸುತ್ತಿದ್ದು, ಹೊಸದನ್ನು ಯೋಚನೆ ಮಾಡುತ್ತಿಲ್ಲ. ನಮ್ಮ 12 ಜನರ 'ಪೆನ್ ಆ್ಯಂಡ್ ಪೇಪರ್' ತಂಡದ ಬಳಿ ಸದ್ಯ 45 ಕಥೆಗಳಿದ್ದು, ವೆಬ್ ಸರಣಿಯನ್ನೂ ಬರೆಯುತ್ತಿದ್ದೇವೆ. ಈ ಚಿತ್ರದ ನಾಯಕ ಕೂಡಾ ಓರ್ವ ಬರಹಗಾರ. ನಾವು ನಮ್ಮ ಕಥೆಗಳನ್ನು ಬೇರೆಯವರಿಗೂ ನೀಡಲಿದ್ದೇವೆ' ಎಂದರು.

'ಪ್ರಸ್ತುತ ಸ್ಥಿತಿಯಲ್ಲಿ ಒಬ್ಬ ಹುಡುಗನಿಗೆ ಒಂದು ಹುಡುಗಿ ಸಿಗುವುದೇ ಕಷ್ಟ. ಅಂತಹುದರಲ್ಲಿ ನಮ್ಮ ನಾಯಕನಿಗೆ ಇಬ್ಬಿಬ್ಬರು ನಾಯಕಿಯರು ಸಿಗುತ್ತಾರೆ. ಅದಕ್ಕೆ ಈ ಶೀರ್ಷಿಕೆ ಇಡಲಾಗಿದೆ' ಎಂದರು ಹರಿ ಸಂತೋಷ್. 'ಕಂಗ್ರಾಜುಲೇಷನ್ ಬ್ರದರ್' ಸಿನಿಮಾದಲ್ಲಿ ನಾಯಕನ ತಂದೆ ಪಾತ್ರದಲ್ಲಿ ಶಶಿಕುಮಾರ್ ನಟಿಸಿದ್ದು, ರಕ್ಷಿತ್ ಕಾಪು, ಸುದರ್ಶನ್, ಚೇತನ್ ದುರ್ಗ ತಾರಾಬಳಗದಲ್ಲಿದ್ದಾರೆ.

ಅನುಷಾ, ರಕ್ಷಿತ್, ಸಂಜನಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮಾರ್ಚ್ 20, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಷಷ್ಠಿ ಗಂ. 26-46 ನಕ್ಷತ್ರ: ಅನುರಾಧ ಗಂ. 23-32 ಯೋಗ: ವಜ್ರ ಗಂ. 18-20 ಕರಣ: ಗರ ಗಂ. 13-45, ಮೀನ ಮಾಸದ 06 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ1.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-38 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ : 19 ರಂಜಾನ್
ಅದೃಷ್ಟ ಸಂಖ್ಯೆ : 6, 2

ಮೇಷ: ಮಕ್ಕಳ ವಿದ್ಯಾಭ್ಯಾಸ ಅಥವಾ ವಿವಾಹದ ವಿಚಾರವಾಗಿ ಅನವಶ್ಯಕವಾದ ಹಾಗೂ ಅತಿ ಯೋಚನೆಗಳನ್ನು ಮಾಡಬೇಕಾಗುತ್ತದೆ. ಕೆಲಸಗಳೆಲ್ಲವೂ ಪೂರ್ಣಗೊಳ್ಳಲಿವೆ.

ವೃಷಭ: ಕುಟುಂಬದಲ್ಲಿ ಎಲ್ಲರ ಸಹಕಾರವೂ ದೊರೆಯುವ ಅದೃಷ್ಟವಂತರಾಗಿರುತ್ತೀರಿ. ಅಕ್ಕ ಅಥವಾ ತಂಗಿಯ ಆರೋಗ್ಯದ ಬಗ್ಗೆ ಖರ್ಚು ಮಾಡಬೇಕಾದ ಸಂದರ್ಭ ಬರುವುದು. ಹೂಗುಚ್ಛ ವ್ಯಾಪಾರಿಗಳಿಗೆ ಉತ್ತಮ ದಿನ.

ಮಿಥುನ: ತುಂಬಾ ಗಂಭೀರವೆನ್ನಿಸುವ ವಿಚಾರಗಳಿಗೆ ಪರಿಹಾರ ನೀಡಲಿದ್ದಾರೆ. ತರಕಾರಿ ಮಾರಾಟದಲ್ಲಿ ಲಾಭ ಇರಲಿದೆ. ನಿದ್ರೆಯಲ್ಲಿ ವ್ಯತ್ಯಾಸ ಉಂಟಾಗಬಹುದು.

ಕರ್ಕಾಟಕ: ಇಂದಿನ ಸಭೆಯಲ್ಲಿ ಭಾಗವಹಿಸುವಾಗ ಉಡುಗೆ ತೊಡುಗೆಯ ಬಗ್ಗೆ ಗಮನ ಕೊಡಿ. ಅನಿವಾರ್ಯ ಕಾಲಕ್ಕೆ ಇಷ್ಟ ಮಿತ್ರರಿಂದ ಸಹಕಾರ ಒದಗಿ ಬರಲಿದೆ.

ಸಿಂಹ: ತಪ್ಪು ಮಾಡುವುದು ಮಕ್ಕಳ ಸ್ವಾಭಾವಿಕ ಗುಣವೆಂಬುವುದನ್ನು ಮರೆತು ಅತಿಯಾಗಿ ಶಿಕ್ಷಿಸಬೇಡಿ. ಪೂಜಾದಿ ಕಾರ್ಯಗಳನ್ನು ನಡೆಸಿ ಧರ್ಮಕಾರ್ಯಗಳಿಗೆ ಹಣ ವಿನಿಯೋಗಿಸುವಿರಿ. ಬಿಳಿ ಬಣ್ಣ ಇಂದು ಶುಭಪ್ರದವಾಗಿರುತ್ತದೆ.

ಕನ್ಯಾ: ಕೆಲವು ವಿಷಯಗಳಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವುದಕ್ಕಿಂತ ಇತರರ ಸಲಹೆ ಪಡೆಯುವುದು, ಅವಕಾಶವನ್ನು ತೆಗೆದುಕೊಂಡು ಯೋಚಿಸಿ ಉತ್ತರ ನೀಡುವುದು ಉತ್ತಮ. ಓದಿನಲ್ಲಿ ಆಸಕ್ತಿ ತೋರುವಿರಿ.

ತುಲಾ: ಹಿಂದಿನ ತಪ್ಪುಗಳನ್ನು ತಿದ್ದಿಕೊಂಡು ಸರಿಯಾಗಿ ವ್ಯವಹರಿಸುವುದರಿಂದ ಲಾಭಾಂಶ ವೃದ್ಧಿ. ಕಚೇರಿಯಲ್ಲಿ ಸಹವರ್ತಿಗಳೊಂದಿಗೆ ಸ್ನೇಹಭಾವದಿಂದ ವರ್ತಿಸಿ. ಉದರ ವ್ಯಾಧಿ ಉಂಟಾಗುವುದು.

ವೃಶ್ಚಿಕ: ವಿದ್ಯಾರ್ಥಿಗಳು ಪಾಠ ಪ್ರವಚನದ ಮೇಲೆ ಗಮನ ಕೊಡಿ. ಅನಿರ್ದಿಷ್ಟ ಹೊತ್ತಿನಲ್ಲಿ ಊಟೋಪಚಾರಗಳನ್ನು ಮಾಡುವಿರಿ. ಕೃಶವಾದ ಶರೀರವನ್ನು ಪೋಷಿಸಿಕೊಳ್ಳುವಲ್ಲಿ ಪ್ರಯತ್ನವಿರಲಿ.

ಧನು: ಹೊಸ ವ್ಯಕ್ತಿಯ ಪರಿಚಯ ಅಧ್ಯಾತ್ಮ ಮಾರ್ಗದಲ್ಲಿ ಮುಂದುವರಿಯಲು ಸಹಕಾರಿ. ವಿದ್ಯಾರ್ಥಿ ನಿಲಯದ ಪಾಲಕರಿಗೆ ಹೊಸ ರೀತಿಯ ಸಮಸ್ಯೆ ಎದುರಾಗುವುದು. ಅಪಾತ್ರರಿಗೆ ದಾನ ಮಾಡದಿರಿ.

ಮಕರ: ಹಸಿ ತರಕಾರಿ ಹಾಗೂ ಕಾಳುಬೇಳೆಗಳನ್ನು ಸೇವನೆ ಮಾಡುವುದರಿಂದ ಅಪೌಷ್ಟಿಕತೆಯನ್ನು ದೂರ ಮಾಡಿಕೊಳ್ಳಬಹುದು. ಮರದ ಕೆಲಸ ಮಾಡುವವರಿಗೆ ಲಾಭದಾಯಕ ದಿನ. ಇಷ್ಟಮಿತ್ರರನ್ನು ಭೇಟಿ ಮಾಡುವಿರಿ.

ಕುಂಭ: ಗೃಹಿಣಿಯರು ಎಷ್ಟು ಸಾವಧಾನವಾಗಿ ಇದ್ದರೂ ತಾಳ್ಮೆಯ ಪರೀಕ್ಷೆಯಾಗುವುದು. ಬೃಹತ್ ಒಪ್ಪಂದಗಳಿಗೆ ಸಹಿ ಹಾಕುವ ಮುನ್ನ ಹಿರಿಯರು ಹಾಗೂ ಸ್ನೇಹಿತರ ಸಲಹೆಯನ್ನು ಪಡೆಯುವುದು ಸೂಕ್ತ.

ಮೀನ: ದೇಹದಲ್ಲಿ ಯಾವುದಾದರೂ ಧಾತುವು ಕಡಿಮೆಯಾಗಿ ಅನಾರೋಗ್ಯ ಉಂಟಾಗುತ್ತಿರಬಹುದು ಅದನ್ನು ಶೀಘ್ರವೇ ವೈದ್ಯರ ಬಳಿ ತೋರಿಸಿಕೊಳ್ಳಿ. ಸಂಗೀತಗಾರರಿಗೆ ಉತ್ತಮ ಪ್ರಚಾರ ಸಿಗುವುದು.

ಸ್ವಚ್ಛ ಹೃದಯದಲ್ಲಿ ದೇವರ ವಾಸ

ನುಡಿ ಬೆಳಗು — ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ — 156

ಈಗ ನಮ್ಮ ಶಿಕ್ಷಣ ಪದ್ಧತಿ ಹೇಗಿದೆ? ಒಂದು ಶಾಲೆಗೆ ಇನ್‌ಸ್ಪೆಕ್ಟರ್ ಹೋಗಿ ಮಕ್ಕಳಿಗೆ, ಎರಡು ಎರಡು ಸೇರಿದರೆ ಎಷ್ಟಾಗುತ್ತದೆ ಎಂದು ಕೇಳಿದರು. ಅದಕ್ಕೆ ಒಬ್ಬ ಹುಡುಗ ಎದ್ದು ನಿಂತು 26 ಎಂದ. ಇನ್‌ಸ್ಪೆಕ್ಟರ್‌ಗೆ ಸಿಟ್ಟು ಬಂತು. ಅಲ್ಲೇ ಇದ್ದ ಶಿಕ್ಷಕರಿಗೆ ಚೆನ್ನಾಗಿ ಬೈದರು. ಅದಕ್ಕೆ ಶಿಕ್ಷಕ 'ನಾನು ನಿಜವಾದ ಶಿಕ್ಷಕ ಅಲ್ಲ. ನಿಜವಾದ ಶಿಕ್ಷಕ ಕ್ರಿಕೆಟ್ ನೋಡಲು ಹೋಗಿದ್ದಾರೆ. ನಾನು ಡೂಪ್ಲಿಕೇಟ್ ಶಿಕ್ಷಕ' ಎಂದನಂತೆ. ಇನ್‌ಸ್ಪೆಕ್ಟರ್‌ಗೆ ಇನ್ನೂ ಸಿಟ್ಟು ಬಂದು ಮುಖ್ಯ ಶಿಕ್ಷಕನನ್ನು ಕರೆಸಿ ಜೋರು ಮಾಡಿದರು. ಆಗ ಮುಖ್ಯ ಶಿಕ್ಷಕನೂ 'ನಾನೂ ನಿಜವಾದ ಮುಖ್ಯ ಶಿಕ್ಷಕ ಅಲ್ಲ. ನಿಜವಾದ ಮುಖ್ಯ ಶಿಕ್ಷಕರು ಕ್ರಿಕೆಟ್ ನೋಡಲು ಹೋಗಿದ್ದಾರೆ' ಎಂದು ಹೇಳಿದ. ಆಗ ಇನ್‌ಸ್ಪೆಕ್ಟರ್ 'ಸದ್ಯ ನೀವಿಬ್ಬರೂ ಬಚಾವಾದಿರಿ. ನಾನೂ ನಿಜವಾದ ಇನ್‌ಸ್ಪೆಕ್ಟರ್ ಅಲ್ಲ. ನಿಜವಾದ ಇನ್‌ಸ್ಪೆಕ್ಟರ್ ಕ್ರಿಕೆಟ್ ನೋಡಲು ಹೋಗಿದ್ದಾರೆ' ಎಂದು ಹೇಳಿದನಂತೆ. ಇದು ನಮ್ಮ ಶಿಕ್ಷಣ ವ್ಯವಸ್ಥೆ.

ಚೀನಾದ ಒಬ್ಬ ತತ್ವಜ್ಞಾನಿ 'ಶಿಕ್ಷಕ ಮೊದಲು ತನ್ನ ವೃತ್ತಿಯನ್ನು ಪ್ರೀತಿಸಬೇಕು. ತಾನು ಕಲಿಸುವ ವಿಷಯವನ್ನು ಪ್ರೀತಿಸಬೇಕು. ಅಲ್ಲದೆ ಮಕ್ಕಳನ್ನು ಕೊನೆಯ ಪಕ್ಷ ತನ್ನ ಮಕ್ಕಳನ್ನಾದರೂ ಪ್ರೀತಿಸಬೇಕು' ಎನ್ನುತ್ತಾರೆ. ಶಿಕ್ಷಕರಿಗೆ ಮಕ್ಕಳು ಎಂದರೆ ಕೇವಲ ಮಕ್ಕಳಲ್ಲ. ಅವರೇ ಅನ್ನದಾತರು ಎನ್ನುವ ಭಾವವೂ ಇರಬೇಕು. ಅವರಿದ್ದಾರೆ ಎಂಬ ಕಾರಣಕ್ಕೆ ಶಿಕ್ಷಕರಿಗೆ ಸಂಬಳ ಸಿಗುತ್ತಿದೆ. ಎಲ್ಲ ಕ್ಷೇತ್ರದವರೂ ಕಲಿಯಬೇಕು.

ಧಾರ್ಮಿಕ ಕ್ಷೇತ್ರವೂ ಹೊಲಸಾಗಿದೆ. ಒಂದು ಗುಡಿ ಇರುತ್ತದೆ. ಅದರೊಳಗೆ ನಿರ್ದಿಷ್ಟ ಜನಾಂಗದವರು ಹೋಗಬಾರದು ಅನ್ನುತ್ತಾರೆ. ಒಬ್ಬ ಹೋದರೆ ಗುಡಿ ಅಪವಿತ್ರ ಆಗುತ್ತದೆ ಎಂದರೆ ನಮ್ಮ ದೇವರು ಅಷ್ಟು ದುರ್ಬಲ ಏನು? ಗುಡಿಯ ಒಳಕ್ಕೆ ಹೋದರೆ ಅಪವಿತ್ರ ಆಗುತ್ತದೆ ಎಂದರೆ ಅದು ದೇವಸ್ಥಾನ ಅಲ್ಲ. ಅಪವಿತ್ರರು ಒಳಕ್ಕೆ ಹೋಗಿ ಪವಿತ್ರರಾಗಿ ಹೊರಗೆ ಬರುತ್ತಾರಲ್ಲ ಅದು ದೇವಸ್ಥಾನ. ದೇವರು ಎಲ್ಲಿ ವಾಸವಾಗಿದ್ದಾನೆ ಎಂದರೆ ಎಲ್ಲಿ ಸ್ವಚ್ಛತೆ ಇದೆಯೋ ಅಲ್ಲಿ. ಒಬ್ಬ ದೇವಸ್ಥಾನಕ್ಕೆ ಹೋಗಿ ದೇವರಿಗೆ 101 ಕಾಯಿ ಒಡೆಸಿದ. ಮನೆಗೆ ಬಂದು ಮಲಗಿದಾಗ ಕನಸಿನಲ್ಲಿ ಅವನಿಗೆ ದೇವರು ಬಂದ. 'ನಾನು ಇವತ್ತು ಗುಡಿಗೆ ಬಂದಿದ್ದೆ. 101 ಕಾಯಿ ಒಡೆಸಿದೆ. ನಿನಗೆ ಸಂತೋಷ ಆಗಿರಬೇಕಲ್ಲ' ಎಂದು ಪ್ರಶ್ನಿಸಿದ. ಅದಕ್ಕೆ ದೇವರು 'ನಾನು ಗುಡಿಯಲ್ಲಿ ಇರಲಿಲ್ಲ' ಎಂದ. 'ಗುಡಿಯಲ್ಲಿ ಇರದೆ ಎಲ್ಲಿ ಹೋಗಿದ್ದೆ' ಎಂದು ಕೇಳಿದ ಈತ. 'ಇಲ್ಲ ಈಗ ನಾನು ಗುಡಿಯಲ್ಲಿ ಇರುವುದಿಲ್ಲ. ನೀನು 101 ಕಾಯಿ ಒಡೆಸಿ ಕೊಬ್ಬರಿ ತೆಗೆದುಕೊಂಡು ಮನೆಗೆ ಹೋಗುತ್ತಿ. ಕಸ ಅಲ್ಲಿ ಹಾಕುತ್ತಿ. ಇನ್ನೊಬ್ಬ ಬಂದು ಚುಟ್ಟಾ ಸೇದತಾನ, ಮತ್ತೊಬ್ಬ ಬಂದು ಇಸ್ಪೀಟ್ ಆಡುತ್ತಾನ. ನೈವೇದ್ಯ ಅಂತ ತಂದು ನನ್ನ ಮುಂದಿಟ್ಟು ತಾವೇ ತಿನ್ನುತ್ತಾರೆ. ಅದಕ್ಕೆ ಗುಡಿ ಬಿಟ್ಟೇನಿ' ಅಂದ ದೇವರು. 'ಹಾಗಾದರೆ ನೀನು ಎಲ್ಲಿ ಇರ್ತಿ' ಎಂದು ಕೇಳಿದ ಈತ. 'ಯಾರು ಸ್ವಚ್ಛ ಇರ್ತಾರ, ಯಾರ ಹೃದಯ ಸ್ವಚ್ಛವಾಗಿದೆಯೋ ಅಲ್ಲಿಯೇ ನಾನು ಇರ್ತೀನಿ' ಅಂದ ದೇವರು.

ಪದಬಂಧ 5987

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದಟ್ಟವಾದ ಕಾಡಿನಲ್ಲಿ ರಚಿಸಿದ ಕೋಟೆ (4)
2.ನಡುವೆ ರಂಪವಿದ್ದಾಗ ಪೀಳಿಗೆ ಕಾಣುತ್ತಿದೆಯಲ್ಲ! (4)
4.ಇದು ಕನ್ನಡಿಗನ ಚಾಳೀಸು (4)
6.ತಿರುಗಿದರೂ ಇದು ಹೊಸದು (3)
7.ಅತ್ಯಂತ ಚಿಕ್ಕ ಚೂರು ಇಲ್ಲಿ ಉಲ್ಟಾ ಆಗಿದೆ(2)
9.ಉಲ್ಟಾಪಲ್ಟಾ ಆಗಿರುವ ಬೆಟ್ಟು (3)
11.ಸೂರ್ಯನ ಇನ್ನೊಂದು ಹೆಸರು (2)
13.ಹೆಪ್ಪಾದ ಹಾಲು (3)
14.ಎಳೆತನದಿಂದಲೂ ಮೊಳೆತ ಸ್ನೇಹ (4)
16.ಆಹ್ವಾನ ಪತ್ರ ಇಲ್ಲಿದೆ (4)
17.ಇದು ಬೇರೆಯವರ ಹಣ (3)

ಮೇಲಿಂದ ಕೆಳಕ್ಕೆ
1.ಮಾನಸಿಕ ಪ್ರಭಾವವನ್ನು ಬೀರಿ ವಶಪಡಿಸಿಕೊಳ್ಳುವುದು (5)
2.ಛಂದೋಬದ್ಧವಾದ ಲಯಬದ್ಧವಾದ ರಚನೆ (2)
3.ಈತ ಡಿಗ್ರಿಯನ್ನು ಪಡೆದವನು (5)
5.ಸುರುಳಿಯಾಕಾರದ ಪಚನಾಂಗ (3)
8.ಕಲ್ಲಿನ ಹಾಗೆ ಗಟ್ಟಿಯಾಗಿರುವ ಸಕ್ಕರೆ ಬಿಲ್ಲೆ (5)
10.ಜೋಡಣೆಯನ್ನು ಹೀಗನ್ನಿ (3)
12.ಲೋಹದ ಹಕ್ಕಿಯಲ್ಲಿನ ಪಯಣ (5)
15.ಬಾಳೆಲೆ ಹಿಡಿದಿರುವ ಯುವತಿ (2)



5986ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಠರ 6.ಜನುಮ 7.ಮಾತುಲ 9.ಜ್ಞಾನ 10.ಗಣಪ 11.ರಾಡಿ 16.ತರಭಾ 17.ಮರುಕ 18.ವಿಯೋಗ

ಮೇಲಿಂದ ಕೆಳಕ್ಕೆ:
1.ಜನಾಂಗ 2.ರಜಕ 3.ಗಮನ 4.ಕ್ಷಮಾದಾನ 5.ತೋಲನೆ 8.ಅಂಗಡಿ 9.ಜ್ಞಾಪಕ 11.ರಾಯಭಾರಿ 12.ಅಂತಕ 13.ಅಮಲು 14.ಕುಕವಿ 15.ಅಣುಗಲ

ಸುಡೊಕು 6372

2		9			7	1		4
	6							
5		7	4		6	2		3
					5		3	1
	5	1		8			2	
3			9					8
		2		1		8		5
9			7		8		1	2
	8			2		4		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6371 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಕಂದಾಯ ಇಲಾಖೆಯ ಐದು ಮಸೂದೆಗಳಿಗೆ ವಿಧಾನಸಭೆಯಲ್ಲಿ ಒಪ್ಪಿಗೆ

ಸರ್ಕಾರಿ, ಖಾಸಗಿ ಸ್ವತ್ತುಗಳಿಗೆ ಡಿಜಿಟಲ್ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವತ್ತು ನೋಂದಣಿ ಪ್ರಕ್ರಿಯೆ ಇನ್ನಷ್ಟು ಸರಳೀಕರಣಗೊಳಿಸಿ, ಜನಸ್ನೇಹಿಯಾಗಿಸುವ ನಿಟ್ಟಿನಲ್ಲಿ ಸಮಗ್ರ ಡಿಜಿಟಲೀಕರಣಗೊಳಿಸುವ ಉದ್ದೇಶದ ಕರ್ನಾಟಕ ಸ್ಟಾಂಪ್ (ತಿದ್ದುಪಡಿ) ಮಸೂದೆ ಸೇರಿ ಕಂದಾಯ ಇಲಾಖೆಯ ಒಟ್ಟು ಐದು ಮಸೂದೆಗಳು ಚರ್ಚೆಯ ಬಳಿಕ ವಿಧಾನಸಭೆಯಲ್ಲಿ ಅಂಗೀಕಾರಗೊಂಡವು.

ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಮಸೂದೆಗಳನ್ನು ಪರ್ಯಾಲೋಚನೆಗೆ ಮಂಡಿಸಿದರು. ಚರ್ಚೆಯಲ್ಲಿ ಬಿಜೆಪಿಯ ಅರವಿಂದ ಬೆಲ್ಲದ, ಹರೀಶ್ ಪೂಂಜಾ, ವಿ.ಸುನಿಲ್‌ಕುಮಾರ್, ಆರಗ ಜ್ಞಾನೇಂದ್ರ, ಕಾಂಗ್ರೆಸ್‌ನ ಡಾ.ಮಂತರ್‌ಗೌಡ ಭಾಗವಹಿಸಿದ್ದರು.

ಸಚಿವ ಕೃಷ್ಣಬೈರೇಗೌಡ ವಿಧಾನ ಸಭೆಯಲ್ಲಿ ಮಾತನಾಡಿದರು

ಡಿಜಿಟಲ್ ಇ-ಸ್ಟಾಂಪ್ ಬಳಕೆ ಜಾರಿ: (ಕರ್ನಾಟಕ ಸ್ಟಾಂಪು ತಿದ್ದುಪಡಿ ಮಸೂದೆ)

ಸ್ವತ್ತು ಮತ್ತು ಇತರ ನೋಂದಣಿಗಳಲ್ಲಿ ಡಿಜಿಟಲ್ ಸಹಿ, ಡಿಜಿಟಲ್ ಇ-ಸ್ಟಾಂಪ್ ಬಳಕೆ ಜಾರಿ ಆಗಲಿದೆ. ಈ ಹಿಂದಿನಂತೆ ಅಂಟಿಸುವ ಅಥವಾ ಮುದ್ರೆ ಹಾಕುವ ಸ್ಟಾಂಪ್‌ಗಳನ್ನು ಬಳಸುವುದನ್ನು ನಿಲ್ಲಿಸಲಾಗುತ್ತದೆ. ಇ-ಸ್ಟಾಂಪ್ ದುರುಪಯೋಗವನ್ನು ತಡೆಯಲು ಸ್ಟಾಂಪ್ ಮೊತ್ತವನ್ನು ವಿದ್ಯುನ್ಮಾನ ಪಾವತಿ ಮಾಡಬೇಕು. ಸಿಬ್ಬಂದಿ ಮೂಲಕ (ಮ್ಯಾನ್ಯುವಲ್) ಸ್ಟಾಂಪ್ ವಿತರಿಸುವುದು ಸಂಪೂರ್ಣ ನಿಲ್ಲಲಿದೆ.

ಡಿಜಿಟಲ್ ಸಹಿ ದುರುಪಯೋಗ ಆಗದಂತೆ ಮಾಡಲು ಜಿಲ್ಲಾಧಿಕಾರಿ ಅಥವಾ ಸಕ್ಷಮ ಪ್ರಾಧಿಕಾರದ ಅಧಿಕಾರಿಯ ಸಹಿಯನ್ನು ಆಧಾರ್‌ಗೆ ಜೋಡಣೆ ಮಾಡಲಾಗಿರುತ್ತದೆ. ಸಹಿ ದೃಢೀಕರಣಗೊಂಡರೆ ಮಾತ್ರ ಸಹಿ ಸಾಧ್ಯ. ಡಿಜಿಟಲ್ ಸಹಿಯಲ್ಲಿ ಬಯೋಮೆಟ್ರಿಕ್ ಕೂಡ ಇರುತ್ತದೆ. ಮುಂದಿನ ದಿನಗಳಲ್ಲಿ ಫೇಸ್ ರೆಕಗ್ನೆಷನ್ ಕೂಡ ಅಳವಡಿಸಲಾಗುತ್ತದೆ.

ಜಿಪಿಎ ಡೀಡ್ ನೋಂದಣಿ ಕಡ್ಡಾಯ: (ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ)

ಸಾಮಾನ್ಯ ಅಧಿಕಾರ ಪತ್ರ (ಜಿಪಿಎ) ಬಳಸಿ ಅಕ್ರಮ ಮಾಡುವುದನ್ನು ತಡೆಗಟ್ಟಲು ಇನ್ನು ಮುಂದೆ ಸ್ಥಿರ ಸ್ವತ್ತಿನ ಜಿಪಿಎ ಡೀಡ್ ನೋಂದಣಿ ಮಾಡುವುದು ಕಡ್ಡಾಯ. ನೋಂದಣಿಯಾದ ಜಿಪಿಎ ಮಾತ್ರ ಅಧಿಕೃತ. ಅಲ್ಲದೇ, ಜಿಪಿಎ ಮೂಲಕ ಸ್ಥಿರ ಸ್ವತ್ತಿನ ವರ್ಗಾವಣೆ, ಸರ್ಕಾರದ ಮೂಲಕ ಮಂಜೂರಾದ ಸ್ಥಿರಸ್ವತ್ತಿಗೆ ಸಂಬಂಧಿಸಿದ ದಸ್ತಾವೇಜುಗಳ ನೋಂದಣಿ ಮತ್ತು ಜಿಪಿಎ ಹಾಜರುಪಡಿಸುವ ಮೂಲಕ ಕಡ್ಡಾಯವಾಗಿ ಖುಜುವಾತು ಪಡಿಸಬೇಕು ಎಂಬ ಅಂಶಗಳನ್ನು ಮಸೂದೆ ಒಳಗೊಂಡಿದೆ.

ಭೂಬಂಧಿತ ಸರ್ಕಾರಿ ಭೂಮಿಗೆ ಹೊಸ ವ್ಯಾಖ್ಯೆ

ಕರ್ನಾಟಕ ಭೂಕಂದಾಯ(ತಿದ್ದುಪಡಿ) ಮಸೂದೆಯ ಮುಖ್ಯಾಂಶಗಳು ಹೀಗಿವೆ–

ಭೂಬಂಧಿತ ಸರ್ಕಾರಿ ಭೂಮಿ (ಲ್ಯಾಂಡ್ ಲಾಕ್) ಮರು ವ್ಯಾಖ್ಯಾನ ಮಾಡಲಾಗಿದೆ. ಸರ್ವೆ ಸಂಖ್ಯೆಯೊಳಗಿರುವ ರಸ್ತೆ, ಕಾಲು ಹಾದಿ, ಬಂಡಿ ಹಾದಿಯ ಮೂಲಕ ಪ್ರವೇಶ ಸಾಧ್ಯವಿಲ್ಲದ ಭೂಮಿ, ಕೆರೆ-ಕುಂಟೆ, ಗೋಮಾಳ, ಬಳಕೆ ಮಾಡದ ಭೂಮಿಯನ್ನು ಸರ್ಕಾರಿ ಖರಾಬು ಭೂಮಿ ಎಂದು ಪರಿಗಣಿಸಿ, ಅದನ್ನು ಭೂಬಂಧಿತ ಭೂಮಿ ಎಂದು ವ್ಯಾಖ್ಯಾನಿಸಲಾಗಿದೆ. ಇಂತಹ ಭೂಬಂಧಿತ ಸರ್ಕಾರಿ ಭೂಮಿ ದುರುಪಯೋಗ ಮಾಡುವುದನ್ನು ತಡೆಯಲಾಗುವುದು.

- ಕಂದಾಯ ಭೂಮಿಗಳಿಗೆ ನಿರ್ದಿಷ್ಟ ಹೆಸರುಗಳನ್ನು ಇಡಲು ಕಾನೂನಿನ ಬಲ ನೀಡಲು
- ಕಂದಾಯ ಇಲಾಖೆಗೆ ಸಂಬಂಧಿಸಿದ ಸಾರ್ವಜನಿಕ ದಾಖಲೆಗಳನ್ನು ಪೋರ್ಜರಿ ಮತ್ತು ಕಳವು ಮಾಡುವುದನ್ನು ತಡೆಯಲು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವ ಕ್ರಮವನ್ನು ಕೈಬಿಟ್ಟು, ದಾಖಲೆಗಳನ್ನು ಸಂಪೂರ್ಣ ಡಿಜಿಟಲೀಕರಣ ಮಾಡುವುದು. ಇದರ ನಿರ್ವಹಣೆ ಜವಾಬ್ದಾರಿ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ಮತ್ತು ತಹಶೀಲ್ದಾರ್‌ಗಳಿಗೆ ವಹಿಸುವುದು.
- ಸೀಲು ಮತ್ತು ಸ್ಟಾಂಪ್‌ಗಳ ದುರುಪಯೋಗವು ಶಿಕ್ಷಾರ್ಹ ಅಪರಾಧ
- ರಿಜಿಸ್ಟರ್‌ಗಳು, ಲೆಕ್ಕಪತ್ರಗಳು ಮತ್ತು ಇತರ ದಾಖಲೆಗಳನ್ನು ಇಡುವ, ಸಂಗ್ರಹಿಸುವ ಮತ್ತು ಮರು ಪಡೆಯುವ ಅಧಿಕಾರ ತಹಶೀಲ್ದಾರ್‌ಗೆ
- ಬಿಬಿಎಂಪಿ ಪರಿಮಿತಿಯಿಂದ 18 ಕಿ.ಮೀ ವರೆಗೆ, ಇತರ ನಗರಪಾಲಿಕೆಗಳು ಮತ್ತು ಪುರಸಭೆ ಪರಿಮಿತಿಯಿಂದ 5 ಕಿ.ಮೀವರೆಗಿನ ನಗರ ಪ್ರದೇಶಗಳಲ್ಲಿರುವ ಭೂಬಂಧಿತ ಸರ್ಕಾರಿ ಖರಾಬು ಭೂಮಿಯನ್ನು ಸರ್ಕಾರವು ವಿಲೇ ಮಾಡುವಂತಿಲ್ಲ.
- ಗಡಿ ಗುರುತು ಅಳಿಸುವ, ತೆಗೆದು ಹಾಕುವ ಅಥವಾ ಹಾನಿ ಮಾಡುವವರಿಗೆ ₹500 ಜುಲ್ಮಾನೆ ವಿಧಿಸಲಾಗುವುದು.

ಭೂ ಕಬಳಿಕೆಗೆ ₹50 ಸಾವಿರ ದಂಡ

(ಕರ್ನಾಟಕ ಭೂಕಬಳಿಕೆ ನಿಷೇಧ (ತಿದ್ದುಪಡಿ) ಮಸೂದೆ)

ಭೂ ಕಬಳಿಕೆ ಕೃತ್ಯಗಳ ವಿಚಾರಣೆ ತ್ವರಿತವಾಗಿ ನಡೆಸಿ ಇತ್ಯರ್ಥಗೊಳಿಸಲು ವಿಶೇಷ ನ್ಯಾಯಾಲಯ ಸ್ಥಾಪಿಸುವುದು, ಸರ್ಕಾರಿ ಭೂಮಿ ರಕ್ಷಿಸುವುದು ಮತ್ತು ಕಂದಾಯ ಅಧಿಕಾರಿಗಳು ಭೂಕಬಳಿಕೆ ತಡೆಯುವ ಪ್ರಾಥಮಿಕ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳದಂತೆ ಹೊಣೆಗಾರಿಕೆಯನ್ನು ನಿಗದಿ.

ಒತ್ತುವರಿ ಪ್ರಕರಣಗಳ ಅಂತರವನ್ನು ವೈಮಾನಿಕವಾಗಿಯೇ ಲೆಕ್ಕ ಹಾಕಬೇಕು. ಭೂಕಬಳಿಕೆ ದಂಡ ಪ್ರಮಾಣವನ್ನು ₹25 ಸಾವಿರದಿಂದ ₹50 ಸಾವಿರಕ್ಕೆ ಹೆಚ್ಚಳ.

ಕರ್ನಾಟಕ ಗ್ರಾಮ ಹುದ್ದೆಗಳ ರದ್ದತಿ (ತಿದ್ದುಪಡಿ) ಮಸೂದೆಗೂ ಒಪ್ಪಿಗೆ ಸಿಕ್ಕಿದೆ.

ಕಂದಾಯ ಇಲಾಖೆಯ ಕಾನೂನಿನಲ್ಲಿ ಸಂಪೂರ್ಣ ಬದಲಾವಣೆ ತರುವ ಉದ್ದೇಶಕ್ಕೆ ಇದು ಮೊದಲ ಹೆಜ್ಜೆ. ಇನ್ನಷ್ಟು ಸುಧಾರಣಾ ಕ್ರಮಗಳು ಬರಲಿವೆ

ಕೃಷ್ಣ ಬೈರೇಗೌಡ, ಕಂದಾಯ ಸಚಿವ

ಒಂದು ಕುಟುಂಬದಲ್ಲಿ ಆಸ್ತಿ ಪಾಲಾದಾಗ ಅಥವಾ ಪರಭಾರೆ ಆದಾಗ ಕುಮ್ಕಿ ಹಕ್ಕು ಇರುತ್ತದೆಯೋ ಇಲ್ಲವೋ, ಆ ಹಕ್ಕು ಯಾರಿಗೆ ಹೋಗುತ್ತದೆ

ಹರೀಶ್ ಪೂಂಜಾ, ಬಿಜೆಪಿ ಸದಸ್ಯ

ಭೂಮಿಯ ಅಂತರವನ್ನು ಲೆಕ್ಕಹಾಕಲು ಏರಿಯಲ್ ವಿಧಾನ ಬಳಸುವುದು ಸರಿಯಲ್ಲ. ಇದನ್ನು ತೆಗೆದು ಹಾಕಬೇಕು

ವಿ.ಸುನಿಲ್‌ಕುಮಾರ್, ಬಿಜೆಪಿ ಸದಸ್ಯ

ಸುದ್ದಿ 2 ನಿಮಿಷ

ಸರ್ಕಾರವೇ ಹನಿಟ್ರ್ಯಾಪ್ ಫ್ಯಾಕ್ಟರಿ ಇಟ್ಟುಕೊಂಡಿದೆಯೇ: ಸುನಿಲ್ ಪ್ರಶ್ನೆ

ಬೆಂಗಳೂರು: ರಾಜ್ಯದಲ್ಲಿನ ಕಾನೂನು ಮತ್ತು ಸುವ್ಯವಸ್ಥೆ ಕುರಿತು ವಿಧಾನಸಭೆಯಲ್ಲಿ ಚರ್ಚೆಯಲ್ಲಿ ಮಾತನಾಡಿದ ಬಿಜೆಪಿಯ ವಿ. ಸುನಿಲ್ ಕುಮಾರ್, ಸಚಿವರ ಹನಿಟ್ರ್ಯಾಪ್ ವಿಷಯ ಪ್ರಸ್ತಾಪಿಸಿದರು.

'ನಾವು ಇಲ್ಲಿ 224 ಶಾಸಕರಿದ್ದೇವೆ. ಸಾರ್ವಜನಿಕವಾಗಿ ಗೌರವದಿಂದ ಕೆಲಸ ಮಾಡುತ್ತಿದ್ದೇವೆ. ಈ ಸರ್ಕಾರದಲ್ಲಿ ನಿನ್ನೆ, ಮೊನ್ನೆಯಿಂದ ಹನಿಟ್ರ್ಯಾಪ್ ಬಗ್ಗೆ ಸುದ್ದಿ ಆಗುತ್ತಿದೆ. ಸಾರ್ವಜನಿಕ ವ್ಯವಸ್ಥೆಯಲ್ಲಿ ಗೌರವದಿಂದ ಬದುಕುವುದು ಬೇಡವೇ? ಯಾರ್‍ಯಾರೊ ಹನಿಟ್ರ್ಯಾಪ್ ಮಾಡುತ್ತಿದ್ದಾರೆ ಎಂದರೆ ಏನು ಪರಿಸ್ಥಿತಿ? ಸಾರ್ವಜನಿಕ ಬದುಕೇ ಬೇಡ ಎನ್ನುವಷ್ಟು ಸುದ್ದಿ ಹರಿದಾಡುತ್ತಿದೆ. ಹೀಗಾದರೆ ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇ' ಎಂದು ಪ್ರಶ್ನಿಸಿದರು.

'ವಿರೋಧಿಗಳನ್ನು, ತಮ್ಮ ಪಕ್ಷದಲ್ಲಿರುವ ಪ್ರತಿಸ್ಪರ್ಧಿಗಳನ್ನು ಹತ್ತಿಕ್ಕಬೇಕೆನ್ನುವ ಕಾರಣಕ್ಕೆ ಯಾವ ಮಟ್ಟಕ್ಕೂ ಹೋಗಬಹುದೇ? ಸರ್ಕಾರವೇ ಹನಿ ಟ್ರ್ಯಾಪ್ ಫ್ಯಾಕ್ಟರಿ ಇಟ್ಟುಕೊಂಡರೆ, ಯಾರಿಗೆ ಬುದ್ಧಿ ಹೇಳುತ್ತೀರಿ? ಯಾರಿಗೆ ಉಪದೇಶ ಮಾಡುತ್ತೀರಿ? ಗೃಹ ಇಲಾಖೆ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದರು.

'ವಿರೋಧಿಗಳನ್ನು, ಸ್ವಪಕ್ಷೀಯರನ್ನು ಹತ್ತಿಕ್ಕಲು ಬೇರೆ ಮಾರ್ಗ ಇಲ್ಲವೇ? ಇದರ ಬಗ್ಗೆ ಒಂದುಗೂಡಿ ಕೈ ಜೋಡಿಸಬೇಕು. ಈ ಸರ್ಕಾರ ಅಪರಾಧಿಗಳಿಗೆ ಸಿಂಹಸ್ವಪ್ನ ಆಗಿದೆ ಎಂಬ ಸಂದೇಶ ಕಳುಹಿಸಬೇಕು. ಸಮಾಜಘಾತುಕ ಚಟುವಟಿಕೆ ಮಾಡಿದರೆ ಸಾಸಿವೆ ಕಾಳಷ್ಟು ಸಹಿಸಲ್ಲ ಎಂಬ ಎಚ್ಚರಿಕೆ ನೀಡಬೇಕು' ಎಂದರು.

'ಗಂಡಭೇರುಂಡ ಲಾಂಛನ ಹಾಕಿಕೊಂಡ ನಂತರ ಗಂಡಸ್ಥನದಿಂದ ಸರ್ಕಾರ ನಡೆಸಬೇಕು. ಯಾರು ಬೇಕಾದರೂ ಏನು ಬೇಕಾದರೂ ಮಾಡಬಹುದು ಎನ್ನುವಂಥದ್ದು ಬೇಡ. ಗೃಹ ಇಲಾಖೆ ನಡೆಸಲು ಇಷ್ಟ ಇಲ್ಲವೇ ಅಥವಾ ಇಲಾಖೆಯಲ್ಲಿ ಯಾರಾದರೂ ಕೈ ಆಡಿಸುತ್ತಿದ್ದಾರೆಯೇ? ಇಲಾಖೆ ನಡೆಸಲು ಗೃಹ ಸಚಿವರಿಗೆ ಸ್ವಾತಂತ್ರ್ಯ ಇಲ್ಲವೇ' ಎಂದೂ ವಾಗ್ದಾಳಿ ನಡೆಸಿದರು.

ಒಳ ಏಟು, ಹೊರ ಏಟು...

ಬೆಂಗಳೂರು: ವಿಧಾನ ಪರಿಷತ್ತಿನಲ್ಲಿ ಜೆಡಿಎಸ್‌ನ ಎಸ್.ಎಲ್.ಬೋಜೇಗೌಡ, 'ಪ್ಲಾಸ್ಟಿಕ್ ಹೂಗಳನ್ನು ನಿಷೇಧಿಸಬೇಕು' ಎಂದು ಬಜೆಟ್ ಮೇಲಿನ ಚರ್ಚೆಯಲ್ಲಿ ವಿಷಯ ಪ್ರಸ್ತಾಪಿಸಿದರು.

ಮುಂದುವರೆದು, 'ಪ್ಲಾಸ್ಟಿಕ್ ಹೂ ನಿಷೇಧಿಸಿದರೆ, ಹೂ ಬೆಳೆಗಾರರಿಗೆ ಅನುಕೂಲವಾಗಲಿದೆ. ಮುಂದೆ ಮುಖ್ಯಮಂತ್ರಿ ಆಗಲಿರುವ ಜಿ.ಪರಮೇಶ್ವರ ಅವರಿಗೆ ನಿಜದ ಹೂಗಳನ್ನು ನೀಡಬಹುದು' ಎಂದು ಕಿಚಾಯಿಸಿದರು.

ಅವರ ಮಾತನ್ನು ಮಧ್ಯದಲ್ಲೇ ತಡೆದ ಬಿಜೆಪಿ ಸದಸ್ಯ ಸಿ.ಟಿ.ರವಿ, 'ನೀವು ಅವರಿಗೆ ಈ ರೀತಿ ಒಳಏಟು ನೀಡಬಾರದು' ಎಂದರು. ಬೋಜೇಗೌಡ, 'ಇದು ಒಳ ಏಟಲ್ಲ, ಹೊರಏಟು' ಎಂದರು.

ರವಿ ಅವರು, 'ಅವರು ಕೆಪಿಸಿಸಿ ಅಧ್ಯಕ್ಷರಾಗಿದ್ದಾಗ ನೀವು ನೀಡಿದ ಒಳಏಟಿನ ಕಾರಣದಿಂದಲೇ ಅದನ್ನೂ ಕಳೆದುಕೊಂಡರು, ಮುಖ್ಯಮಂತ್ರಿಯೂ ಆಗಲಿಲ್ಲ. ಇನ್ನು ಈಗ ಹೊರಏಟು ನೀಡಿದರೆ ಏನಾಗಬಹುದು? ಒಳಏಟಿನ ಕಾರಣದಿಂದಲೇ ನಾನು ಇಲ್ಲಿದ್ದೇನೆ. ಇಲ್ಲದಿದ್ದರೆ ಅಲ್ಲಿ (ವಿಧಾನ ಸಭೆಯಲ್ಲಿ) ಇರುತ್ತಿದ್ದೆ' ಎಂದರು.

ಸಚಿವ ಬೈರತಿ ಸುರೇಶ್, 'ರವಿ ಅವರು ತಮ್ಮ ಅನುಭವದ ಮಾತು ಹೇಳುತ್ತಿದ್ದಾರೆ' ಎಂದು ಕಾಲೆಳೆದರು.

ನಗುತ್ತಲೇ ಕುಳಿತಿದ್ದ ಗೃಹ ಸಚಿವ ಪರಮೇಶ್ವರ ಅವರನ್ನು ನೋಡಿ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, 'ನಿಮ್ಮನ್ನು ನೋಡಲು ನಿಜವಾದ ಹೂವುಗಳ ಗುಚ್ಛ ಹಿಡಿದುಕೊಂಡು ಬರುವುದು ಯಾವಾಗ ಹೇಳಿ' ಎಂದರು.

'ಬಗರ್‌ಹುಕುಂ ಜಮೀನಿನ ಖಾತೆಗೆ ಕ್ರಮ'

ಬಗರ್‌ಹುಕುಂ ಅಡಿಯಲ್ಲಿ ಮಂಜೂರಾದ ಜಮೀನುಗಳಿಗೆ ಖಾತೆ ಮಾಡಿಕೊಡಲು ಅಧಿಕಾರಿಗಳು ಲಂಚ ಕೇಳುತ್ತಿರುವ ಬಗ್ಗೆ ದೂರು ಬಂದರೆ, ಕ್ರಮ ತೆಗೆದುಕೊಳ್ಳಲಾಗುತ್ತದೆ. ಅಕ್ರಮವಾಗಿ ಮಂಜೂರಾದ ಪ್ರಕರಣಗಳಲ್ಲಿ ಖಾತೆ ಆಗುವುದಿಲ್ಲ. ಕ್ರಮಬದ್ಧವಾಗಿ ಇರುವ ಪ್ರಕರಣಗಳಲ್ಲಿ ಖಾತೆ ಮಾಡಿಕೊಡಲಾಗುತ್ತದೆ. ಅದನ್ನು ಶೀಘ್ರವೇ ಮುಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

5.61 ಲಕ್ಷ ಬಗರ್‌ಹುಕುಂ ಅಡಿ ನಮೂನೆ 50, 53 ಮತ್ತು 57ರ ಅಡಿ ಖಾತೆ ಮಾಡಿಕೊಡಲಾದ ಅರ್ಜಿಗಳ ಸಂಖ್ಯೆ

19,142 ಖಾತೆ ಮಾಡಿಕೊಡಲು ಬಾಕಿಯಿರುವ ಅರ್ಜಿಗಳ ಸಂಖ್ಯೆ

–ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್‌ನ ಡಾ.ಯತೀಂದ್ರ ಸಿದ್ದರಾಮಯ್ಯ ಪ್ರಶ್ನೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಉತ್ತರ

'ಕುರಿ ವಧಾಗಾರ ಉದ್ಘಾಟನೆ ಶೀಘ್ರ'

ಶಿರಾ ತಾಲ್ಲೂಕಿನಲ್ಲಿ ಕುರಿ ಕಟಾವಿಗೆ ನಿರ್ಮಿಸುತ್ತಿರುವ ಆಧುನಿಕ ಸಂಸ್ಕರಣಾ ಘಟಕ (ವಧಾಗಾರ) ಸಂಪೂರ್ಣ ಸಿದ್ಧವಾಗಿದೆ. ಶೀಘ್ರವೇ ಉದ್ಘಾಟನೆಯಾಗಲಿದೆ. ಪ್ರತಿದಿನ 1,500 ಕುರಿಗಳ ವಧೆ ಮತ್ತು ಕುರಿಮಾಂಸ ಸಂಸ್ಕರಣೆ ಸಾಮರ್ಥ್ಯ ಇರುವ ವಧಾಗಾರದಿಂದ ತಾಲ್ಲೂಕಿನ ಕುರಿಗಾಹಿಗಳಿಗೆ ಅನುಕೂಲವಾಗಲಿದ್ದು, ಸಾಗಣೆ ವೆಚ್ಚ ಕಡಿಮೆಯಾಗಲಿದೆ. 150-200 ಯುವಜನರಿಗೆ ಉದ್ಯೋಗ ದೊರೆಯಲಿದೆ. ಕುರಿಗಾಹಿಗಳ ರಕ್ಷಣೆಗೆ ಪ್ರತ್ಯೇಕ ಕಾನೂನು ರಚಿಸುವ ಬಗ್ಗೆ ಚರ್ಚೆ ನಡೆಯುತ್ತಿದೆ.

–ವಿಧಾನ ಪರಿಷತ್ತಿನಲ್ಲಿ ಬಿಜೆಪಿಯ ಚಿದಾನಂದ ಎಂ.ಗೌಡ ಪ್ರಶ್ನೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಉತ್ತರ

'ದೇವಾಲಯಗಳ ಆದಾಯ ಹೆಚ್ಚಳ'

ದೇವಾಲಯಗಳಿಂದ ಸಂಗ್ರಹವಾಗುವ ಆದಾಯ ಹೆಚ್ಚಳವಾಗಿದೆ. ದೇವಾಲಯಗಳ ಆಸ್ತಿಗಳಿಂದ ಆದಾಯ ಸಂಗ್ರಹಿಸುವ ಸಂಬಂಧ ಸರ್ಕಾರ ಪರಿಶೀಲನೆ ನಡೆಸುತ್ತಿದೆ. ಈಗಾಗಲೇ ಕೆಲವೆಡೆ ಇದನ್ನು ಜಾರಿಗೆ ತರಲಾಗಿದೆ. ಮುಜರಾಯಿ ಅಡಿಯಲ್ಲಿ ಬರುವ ದೇವಾಲಯಗಳಲ್ಲಿ ಸಂಗ್ರಹವಾಗುವ ಆದಾಯ ಅವುಗಳ ಖಾತೆಗೇ ಜಮೆಯಾಗುತ್ತದೆ, ಸರ್ಕಾರದ ಬೊಕ್ಕಸಕ್ಕೆ ಸಂದಾಯವಾಗುವುದಿಲ್ಲ.

ಆರ್ಥಿಕ ವರ್ಷ	ದೇವಾಲಯಗಳಲ್ಲಿ ಸಂಗ್ರಹವಾದ ಆದಾಯ
2019-20	₹484.5 ಕೋಟಿ
2020-21	₹354.3 ಕೋಟಿ
2021-22	₹446.8 ಕೋಟಿ
2022-23	₹708.8 ಕೋಟಿ
2023-24	₹778.8 ಕೋಟಿ

–ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್‌ನ ಡಿ.ಟಿ.ಶ್ರೀನಿವಾಸ್ ಪ್ರಶ್ನೆಗೆ ಧಾರ್ಮಿಕ ದತ್ತಿ ಸಚಿವ ರಾಮಲಿಂಗಾರೆಡ್ಡಿ ಉತ್ತರ

ಗಣಿ ನಿಗಮದ ಎಂ.ಡಿ ವಿರುದ್ಧ ಹಕ್ಕುಚ್ಯುತಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮದ ವ್ಯವಸ್ಥಾಪಕ ನಿರ್ದೇಶಕರ ವಿರುದ್ಧ ಹಕ್ಕುಚ್ಯುತಿ ಮಂಡಿಸಲಾಗುವುದು ಎಂದು ಬಿಜೆಪಿ ಸದಸ್ಯರು ಹೇಳಿದರು.

'ಬಳ್ಳಾರಿ ಜಿಲ್ಲಾ ಖನಿಜ ನಿಧಿಯ ಹಣ ಬಳಕೆಯ ಕುರಿತು ವ್ಯವಸ್ಥಾಪಕ ನಿರ್ದೇಶಕರನ್ನು ಭೇಟಿ ಮಾಡಿದಾಗ ಅಪಮಾನ ಮಾಡಿದ್ದಾರೆ. ಒಬ್ಬ ಜನಪ್ರತಿನಿಧಿಯಾಗಿ ಸಹಿಸಿಕೊಂಡು ಬಂದೆ. ವರ್ಷಕ್ಕೆ ಒಮ್ಮೆಯೂ ಗಣಿ ಪ್ರದೇಶಗಳಿಗೆ ಭೇಟಿ ನೀಡಿದ ಅಧಿಕಾರಿ, ಸೊಕ್ಕಿನ ನಡೆ ಪ್ರದರ್ಶಿಸುತ್ತಾರೆ' ಎಂದು ಬಿಜೆಪಿಯ ವೈ.ಎಂ. ಸತೀಶ್ ಆರೋಪಿಸಿದರು.

ಸದಸ್ಯರಿಗೆ ಅವಮಾನವಾದರೆ ಸಹಿಸುವ ಅಗತ್ಯವಿಲ್ಲ. ಹಕ್ಕುಚ್ಯುತಿ ಮಂಡಿಸಬಹುದು ಎಂದು ಸಭಾಪತಿ ಪೀಠದಲ್ಲಿದ್ದ ಮಂಜುನಾಥ ಭಂಡಾರಿ ಸಲಹೆ ನೀಡಿದರು. ಅದಕ್ಕೆ ಬಿಜೆಪಿ ಸದಸ್ಯರು ಸಹಮತ ವ್ಯಕ್ತಪಡಿಸಿದರು.

'ಖೋತಾ, ಸಾಲ, ಹಲಾಲ್ ಬಜೆಟ್'

'7 ಲಕ್ಷ ಕೋಟಿ ದಾಟಲಿದೆ ಸಾಲ'

ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ, ಎಲ್ಲ ಪರಿಶಿಷ್ಟ ಸಮುದಾಯಗಳ ಅಭಿವೃದ್ಧಿ ನಿಗಮಗಳಿಗೆ ನಮ್ಮ ಸರ್ಕಾರ ನೀಡಿದ್ದಕ್ಕಿಂತ ಕಡಿಮೆ ಅನುದಾನವನ್ನು ನೀಡಿದ್ದಾರೆ. ಆದರೆ ಮುಸ್ಲಿಮರಿಗೆ ಹೆಚ್ಚಿನ ಅನುದಾನ ನೀಡಲಾಗಿದೆ. ಗುತ್ತಿಗೆಯಲ್ಲೂ ಮುಸ್ಲಿಮರಿಗೆ ಮೀಸಲಾತಿ ನೀಡಲಾಗುತ್ತಿದೆ. ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಕೂಗಿದವರಿಗೆ ಭಕ್ಷೀಸು ನೀಡಿದೆ. ಇದು ಹಲಾಲ್ ಬಜೆಟ್. 2025–26ನೇ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ರಾಜ್ಯದ ಒಟ್ಟು ಸಾಲ ₹7 ಲಕ್ಷ ಕೋಟಿ ದಾಟಲಿದ್ದು, ಅದರಲ್ಲಿ ₹4 ಲಕ್ಷ ಕೋಟಿಗೂ ಹೆಚ್ಚು ಸಾಲ ಸಿದ್ದರಾಮಯ್ಯ ಅವರೇ ಮಾಡಿದ್ದಾರೆ. 16 ಬಾರಿ ಬಜೆಟ್ ಮಂಡಿಸಿದ ದಾಖಲೆ ಜತೆಗೆ, ಅತಿಹೆಚ್ಚು ಸಾಲ ಮಾಡಿದ ದಾಖಲೆಯೂ ಅವರಿಗೇ ಸಲ್ಲುತ್ತದೆ.

ಸಿ.ಟಿ.ರವಿ, ವಿಧಾನ ಪರಿಷತ್ತಿನಲ್ಲಿ ಬಿಜೆಪಿ ಸದಸ್ಯ

'ನಿಮ್ಮ ಸರ್ಕಾರದ್ದೇ ಹೊರೆ'

ನಿಮ್ಮ ಸರ್ಕಾರವಿದ್ದಾಗ ಬಜೆಟ್ ಅನುಮೋದನೆ ಪಡೆದುಕೊಳ್ಳದೆ ಎಲ್ಲ ಮಠಮಂದಿರಗಳಿಗೆ, ಕಾಮಗಾರಿಗಳಿಗೆ, ನಿಗಮಗಳಿಗೆ ಮನಬಂದಂತೆ ಅನುದಾನ ಘೋಷಿಸಿದ್ದೀರಿ. ಅಂತಹ ಅನುದಾನಗಳ ₹12,616 ಕೋಟಿಯಷ್ಟು ಹೊರೆ ನಮ್ಮ ಸರ್ಕಾರದ ಮೇಲೆ ಬಿದ್ದಿದೆ. ಅದನ್ನು ಸರಿಪಡಿಸಲೇ ಸಾಕಷ್ಟು ಹಣ ಬೇಕು. ಇನ್ನು ಅತಿಹೆಚ್ಚು ಬಜೆಟ್ ಮಂಡಿಸಿದರೆ, ಸಹಜವಾಗಿ ಅತಿಹೆಚ್ಚು ಸಾಲ ಮಾಡಿದ ಶ್ರೇಯವೂ ಅವರಿಗೇ ಹೋಗುತ್ತದೆ. ಸಮಸ್ಯೆ ಏನು?

ಎನ್.ಎಸ್.ಬೋಸರಾಜು, ವಿಧಾನ ಪರಿಷತ್ತಿನ ಸಭಾನಾಯಕ

'ಅಧಿಕಾರವಿದ್ದಾಗ ಏಕೆ ಮಾಡಲಿಲ್ಲ'

ಪರಿಶಿಷ್ಟ ಸಮುದಾಯ ಗಳಿಗೆ ಕಾಂಗ್ರೆಸ್ ನೇತೃತ್ವದ ಸರ್ಕಾರ ಸಾಕಷ್ಟು ಅನುದಾನ ನೀಡಿದೆ. ಅವರ ಸಬಲೀಕರಣಕ್ಕಾಗಿ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಆದರೂ, ವಿರೋಧ ಪಕ್ಷಗಳು ಅನಗತ್ಯ ಟೀಕೆ ಮಾಡುತ್ತಿವೆ. ಅದೇ ಕೆಲಸ ಅಧಿಕಾರದಲ್ಲಿದ್ದಾಗ ಏಕೆ ಮಾಡಲಿಲ್ಲ?

ವಸಂತಕುಮಾರ್, ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಸದಸ್ಯ

ಗಮನ ಸೆಳೆಯುವ ಸೂಚನೆ

ಪರಿಷತ್

ಕಾರ್ಯದರ್ಶಿ ಹಾಜರಿಗೆ ಸೂಚನೆ

ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ವಿಧಾನಪರಿಷತ್‌ನಿಂದ ನಾಮನಿರ್ದೇಶನ ಪ್ರಸ್ತಾವ ಸಲ್ಲಿಸಿದ್ದರೂ, ಕ್ರಮ ಕೈಗೊಳ್ಳದ ತೋಟಗಾರಿಕಾ ಇಲಾಖೆ ಕಾರ್ಯದರ್ಶಿ, ಕುಲಪತಿ, ಕುಲಸಚಿವರು ಹಾಜರಾಗಬೇಕು ಎಂದು ಸಭಾಪತಿ ಬಸವರಾಜ ಹೊರಟ್ಟಿ ರೂಲಿಂಗ್ ನೀಡಿದರು.

ಕಾಂಗ್ರೆಸ್‌ನ ಪುಟ್ಟಣ್ಣ ಮಾತ ನಾಡಿ, ವಿಧಾನಪರಿಷತ್‌ನಿಂದ ಒಬ್ಬರನ್ನು ನಾಮನಿರ್ದೇಶನ ಮಾಡಿದ್ದರೂ, ಕ್ರಮ ಕೈಗೊಂಡಿಲ್ಲ. ಪರಿಷತ್ ನಿರ್ಣಯಕ್ಕೆ ಮಾನ್ಯತೆ ನೀಡದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

'ಮೂವರೂ ಮಾರ್ಚ್ 20ರಂದು ಬೆಳಿಗ್ಗೆ 10.30ಕ್ಕೆ ಸಭಾಪತಿಗಳ ಮುಂದೆ ಹಾಜರಾಗಬೇಕು. ಅವರನ್ನು ಕರೆಯಿಸಿ' ಎಂದು ಸಭಾನಾಯಕರಿಗೆ ಹೊರಟ್ಟಿ ಸೂಚಿಸಿದರು.

ಶಿಕ್ಷಕರ ಬಡ್ತಿ; ವರದಿ ನಂತರ ಕ್ರಮ

ಅಧಿಕಾರಿಗಳ ಸಮಿತಿ ವರದಿ ಸ್ವೀಕೃತವಾದ ನಂತರ ಪದವಿ ಪಡೆದ 58 ಸಾವಿರಕ್ಕೂ ಹೆಚ್ಚು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಡ್ತಿ ಸೌಲಭ್ಯ ದೊರಕಿಸುವ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುವುದು. ಈ ಕುರಿತು ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ಮಾಡುವ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು.

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಬೇಡಿಕೆಗಳ ಕುರಿತು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಅಧ್ಯಕ್ಷತೆಯಲ್ಲಿ ನೇಮಿಸಲಾದ ಸಮಿತಿಯ ವರದಿ ಪಡೆದು ಕ್ರಮ ಕೈಗೊಳ್ಳಲಾಗುವುದು.

ಕಾಂಗ್ರೆಸ್‌ನ ರಾಮೋಜಿಗೌಡ ಅವರು ಕೇಳಿದ ಪ್ರಶ್ನೆಗೆ ಸಚಿವ ಮಧು ಬಂಗಾರಪ್ಪ ಉತ್ತರ

ಶಾಲಾ ಮಕ್ಕಳಿಗೆ ನೈತಿಕ ಶಿಕ್ಷಣ

ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮಕ್ಕಳಿಗೆ ವಾರದಲ್ಲಿ ಎರಡು ತರಗತಿಗಳನ್ನು ನೈತಿಕ ಶಿಕ್ಷಣಕ್ಕಾಗಿ ಮೀಸಲಿಡಲಾಗುವುದು. ಈ ಅವಧಿಯಲ್ಲಿ ನೀತಿ ಕಥೆಗಳ ಮೂಲಕ ಮಕ್ಕಳಲ್ಲಿ ಸತ್ಯ, ಪ್ರಾಮಾಣಿಕತೆ, ಧೈರ್ಯ, ಪ್ರೀತಿ, ಗೌರವ, ಆತ್ಮವಿಶ್ವಾಸ ಮೂಡಿಸಲಾಗುವುದು. 8ರಿಂದ 12ನೇ ತರಗತಿಯ ಮಕ್ಕಳಿಗೆ ವಾರದಲ್ಲಿ ಎರಡು ತರಗತಿ ಲೈಂಗಿಕತೆಯ ಅರಿವು ಮೂಡಿಸುವ ಶಿಕ್ಷಣ ನೀಡಲಾಗುವುದು. ಹೆಣ್ಣು ಮಕ್ಕಳಿಗೆ ಈಗಾಗಲೇ ಕರಾಟೆ ಕಲಿಸಲಾಗುತ್ತಿದೆ. ಸೈಬರ್ ವ್ಯಸನ ಮುಕ್ತಿಗೆ ಕ್ರಮ ವಹಿಸಲಾಗಿದೆ.

ವಿಧಾನಪರಿಷತ್‌ನಲ್ಲಿ 'ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳ ಬಗ್ಗೆ ನಡೆದ ಸುದೀರ್ಘ ಚರ್ಚೆಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಉತ್ತರ

ತೊಗರಿ ನಷ್ಟ; ಸಿ.ಎಂ ಜತೆ ಚರ್ಚೆ

ರೋಗ ಬಾಧೆಯಿಂದ ಸಂಕಷ್ಟದಲ್ಲಿರುವ ತೊಗರಿ ಬೆಳೆಗಾರರಿಗೆ ಪರಿಹಾರದ ವಿಶೇಷ ಪ್ಯಾಕೇಜ್ ನೀಡುವ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಿದ ನಂತರ ನಿರ್ಧಾರ ಪ್ರಕಟಿಸಲಾಗುವುದು. ತೊಗರಿ ಬೆಳೆ ಪ್ರದೇಶದ ಶಾಸಕರ ಸಭೆ ಕರೆದು ಹೆಚ್ಚಿನ ಮಾಹಿತಿ ಪಡೆಯಲಾಗುವುದು. ರೈತರು ಬೆಳೆವಿಮೆ ಮಾಡಿಸುವ ಮೂಲಕ ಪರಿಹಾರ ಪಡೆಯಬೇಕು. ಎಲ್ಲದಕ್ಕೂ ಸರ್ಕಾರದ ಮೇಲೆ ಅವಲಂಬಿತರಾಗಬಾರದು. ವಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮುಖ್ಯಸಚೇತಕ ಎನ್. ರವಿಕುಮಾರ್, ಶಶೀಲ್ ನಮೋಶಿ, ತಳವಾರ ಸಾಬಣ್ಣ ಪ್ರಶ್ನೆಗೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಉತ್ತರ



ಬೆಳಕಿನ ಸೌಧ ಹೊಸದಾಗಿ ಅಳವಡಿಸಿರುವ ವಿದ್ಯುತ್ ದೀಪಗಳಿಂದ ಬೆಂಗಳೂರಿನ ವಿಧಾನಸೌಧ ಕಂಗೊಳಿಸುತ್ತಿರುವ ದೃಶ್ಯ ಕ್ಯಾಮರಾ ಕಣ್ಣಿಗೆ ಕಂಡಿದ್ದು ಹೀಗೆ... ಚಿತ್ರ: ಎಂ. ಎಸ್. ಮಂಜುನಾಥ್

ವಕ್ಫ್ ಮಸೂದೆ ತಿದ್ದುಪಡಿಗೆ ವಿರೋಧ ಸೇರಿ 3 ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಕ್ಫ್ ಮಸೂದೆಗೆ ತಿದ್ದುಪಡಿ ತರುವ ಉದ್ದೇಶದ ಮಸೂದೆ ಹಿಂಪಡೆಯಬೇಕು, ತನ್ನ ಬಜೆಟ್‌ನಲ್ಲೂ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟರ ಕಲ್ಯಾಣ ಯೋಜನೆಗಳಿಗೆ ಅನುದಾನ ಮೀಸಲಿಡಬೇಕು, ಯುಜಿಸಿ ನಿಯಮಾವಳಿಗೆ ತಿದ್ದುಪಡಿ ಕೈಬಿಡಬೇಕು ಎಂದು ಕೇಂದ್ರವನ್ನು ಒತ್ತಾಯಿಸುವ ನಿರ್ಣಯವನ್ನು ರಾಜ್ಯ ಸರ್ಕಾರವು ವಿಧಾನಸಭೆಯಲ್ಲಿ ಮಂಡಿಸಿ, ಅಂಗೀಕಾರ ಪಡೆಯಿತು.

'ಒಂದು ವರ್ಗದ ಮತಕ್ಕಾಗಿ ವಕ್ಫ್ ತಿದ್ದುಪಡಿ ಮಸೂದೆಯನ್ನು ವಿರೋಧಿಸಿ ನಿರ್ಣಯ ಮಂಡಿಸಲಾಗಿದೆ. ಈ ನಡೆಗೆ ಧಿಕ್ಕಾರ' ಎಂದು ಘೋಷಣೆ ಕೂಗಿ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು.

'ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆಯಡಿ ಮೀಸಲಿಟ್ಟ ಹಣವನ್ನು 'ಗ್ಯಾರಂಟಿ' ಯೋಜನೆಗಳಿಗೆ ಹಂಚಿಕೆ ಮಾಡಿರುವ ರಾಜ್ಯ ಸರ್ಕಾರಕ್ಕೆ, ಕೇಂದ್ರ ಸರ್ಕಾರ ಕೂಡಾ ಪರಿಶಿಷ್ಟರ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟರ ಕಲ್ಯಾಣ ಯೋಜನೆಗಳಿಗೆ ಅನುದಾನ ಮೀಸಲಿಡಬೇಕು ಎಂದು ನಿರ್ಣಯ ಕೈಗೊಳ್ಳುವ ನೈತಿಕತೆ ಇಲ್ಲ' ಎಂದು ವಿಪಕ್ಷ ನಾಯಕ ಆರ್. ಅಶೋಕ ಆಕ್ಷೇಪಿಸಿದರು.

ಮಸೂದೆಗಳಿಗೆ ಅಂಗೀಕಾರ: ಗ್ರಾಮ ಪಂಚಾಯಿತಿಗಳಲ್ಲೂ ಅನಧಿಕೃತ ನಿವೇಶನಗಳಿಗೆ ಇ- ಖಾತಾ ಮೂಲಕ 'ಬಿ' ಖಾತಾ ಕೊಡಲು ಮತ್ತು ತೆರಿಗೆ ವ್ಯಾಪ್ತಿಗೆ ತರಲು ಅವಕಾಶ ಕಲ್ಪಿಸುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ಮಸೂದೆ ಮತ್ತು ಮಂಡ್ಯದಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸಲು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ತಿದ್ದುಪಡಿ ಮಸೂದೆಗಳಿಗೂ ವಿಧಾನಸಭೆ ಅಂಗೀಕಾರ ನೀಡಿತು.

ನಾಳೆಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾರ್ಚ್ 21ರಿಂದ ಆರಂಭವಾಗಲಿದ್ದು, 2,818 ಕೇಂದ್ರಗಳಲ್ಲಿ 8.96 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ.

ರಾಜ್ಯದ 15,881 ಪ್ರೌಢಶಾಲೆಗಳ 4.61 ಲಕ್ಷ ಬಾಲಕರು, 4.34 ಲಕ್ಷ ಬಾಲಕಿಯರು ಈ ಬಾರಿ ಪರೀಕ್ಷೆ ತೆಗೆದುಕೊಂಡಿದ್ದಾರೆ.

ಮೊದಲ ದಿನ ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ ಪರೀಕ್ಷೆಗಳು ಬೆಳಿಗ್ಗೆ 10ರಿಂದ 1.15ರವರೆಗೆ ನಡೆಯಲಿವೆ.

ನಕಲು ತಡೆ ಹಾಗೂ ಪರೀಕ್ಷಾ ಅಕ್ರಮಗಳಿಗೆ ಕಡಿವಾಣ ಹಾಕಲು ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗಿದ್ದು, ಪರೀಕ್ಷಾ ಕೊಠಡಿಗಳಲ್ಲಿ ವೆಬ್‌ಕಾಸ್ಟಿಂಗ್ ಅಳವಡಿಸಲಾಗಿದೆ. ಹೊರಗೆ ಸಿ.ಸಿ.ಟಿ.ವಿ ಕಣ್ಗಾವಲು ಇರಲಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿ: ಮಾರ್ಚ್ 21-ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ (ಎನ್‌ಸಿಇಆರ್‌ಟಿ), ಸಂಸ್ಕೃತ, 24-ಗಣಿತ, 26-ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ, 29-ಸಮಾಜ ವಿಜ್ಞಾನ, ಏಪ್ರಿಲ್ 1-ಅರ್ಥಶಾಸ್ತ್ರ, ಎಂಜಿನಿಯರಿಂಗ್ ವಿಷಯಗಳು, 2-ವಿಜ್ಞಾನ ಹಾಗೂ ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ, 4-ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು ಹಾಗೂ ಎನ್‌ಎಸ್‌ಕ್ಯೂಎಫ್ ವಿಷಯಗಳು.

ಐ.ಟಿ. ಉಪಕರಣದ ಬದಲು ಚಪಾತಿ ಯಂತ್ರ, ವಾಷಿಂಗ್ ಮಷಿನ್ ಖರೀದಿ

ಕಿಯೋನಿಕ್ಸ್‌ನಲ್ಲಿ ₹450 ಕೋಟಿ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಮತ್ತು ಬಿಜೆಪಿ ಸರ್ಕಾರದ ಅವಧಿಯಲ್ಲಿ ಕಿಯೋನಿಕ್ಸ್ ಸಂಸ್ಥೆಯಲ್ಲಿ ನಡೆದ ಖರೀದಿ ವಹಿವಾಟಿನಲ್ಲಿ ₹450 ಕೋಟಿ ಅಕ್ರಮ ನಡೆದಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ.

ಮಾಹಿತಿ ತಂತ್ರಜ್ಞಾನ ಉಪಕರಣಗಳಿಗೆ ಮೀಸಲಾದ ಹಣದಲ್ಲಿ ಕಿಯೋನಿಕ್ಸ್ ಚಪಾತಿ ಮಾಡುವ ಯಂತ್ರ, ತೊಳೆಯುವ ಯಂತ್ರ ಖರೀದಿಸಿದೆ ಎಂಬ ವಿವರ ಸಿಎಜಿ ಸಲ್ಲಿಸಿರುವ, 'ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ವರದಿ'ಯಲ್ಲಿ ಈ ಮಾಹಿತಿ ಇದೆ. 2018-19ರಿಂದ 2022-23ರ ಅವಧಿಯ ವರದಿ ಇದಾಗಿದೆ.

'ರಾಜ್ಯ ಸರ್ಕಾರದ ಇಲಾಖೆ ಮತ್ತು ಸಂಸ್ಥೆಗಳ ಮಾಹಿತಿ ತಂತ್ರಜ್ಞಾನ (ಐ.ಟಿ) ಕ್ಷೇತ್ರದ ಉಪಕರಣಗಳ ಖರೀದಿ, ಸರಬರಾಜು, ನಿರ್ವಹಣೆ, ಮತ್ತು ಐ.ಟಿ ಸೇವೆ ಒದಗಿಸುವ ಹೊಣೆಗಾರಿಕೆ ಕಿಯೋನಿಕ್ಸ್‌ನದ್ದು. ಆದರೆ ಕಿಯೋನಿಕ್ಸ್ 405 ಖರೀದಿ ಆದೇಶಗಳಲ್ಲಿ ಐ.ಟಿಯೇತರ ಉಪಕರಣಗಳನ್ನು ಖರೀದಿಸಿದೆ' ಎಂದು ಸಿಎಜಿ ವಿವರಿಸಿದೆ.



'ಈ ಖರೀದಿ ಆದೇಶಗಳ ಮೂಲಕ ಕಿಯೋನಿಸ್ಕ್ ₹255.17 ಕೋಟಿ ಮೌಲ್ಯದ ಚಪಾತಿ ಯಂತ್ರಗಳು, ಬಟ್ಟೆ/ಪಾತ್ರೆ ತೊಳೆಯುವ ಯಂತ್ರಗಳು, ಹೈಮಾಸ್ಟ್ ದೀಪಗಳು, ಸೌರಶಕ್ತಿ ದೀಪಗಳು, ಆರ್.ಒ ನೀರು ಶುದ್ಧೀಕರಣ ಯಂತ್ರಗಳನ್ನು ಖರೀದಿಸಿ, ಸರ್ಕಾರದ ವಿವಿಧ ಇಲಾಖೆ ಮತ್ತು ಸಂಸ್ಥೆಗಳಿಗೆ ಪೂರೈಸಿದೆ. ಆದರೆ ಇದು ಪೂರ್ಣ ಅಕ್ರಮ' ಎಂದು ಹೇಳಿದೆ.

'ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ಮಾರ್ಟ್ ತರಗತಿಗಳ ನಿರ್ಮಾಣ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಡಿಜಿಟಲ್ ತರಗತಿ ಸ್ಥಾಪನೆ, ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ಕಂಪ್ಯೂಟರ್ ಪ್ರಯೋಗಾಲಯ ಸ್ಥಾಪನೆ ಮಾಡುವಲ್ಲಿ ₹47.97 ಕೋಟಿ ಅಕ್ರಮ ನಡೆದಿದೆ. ಈ ಎಲ್ಲವುಗಳ ಮಾರುಕಟ್ಟೆ ಬೆಲೆ 27.84ಕೋಟಿಯಷ್ಟಾಗುತ್ತದೆ. ಆದರೆ ಕಿಯೋನಿಸ್ಕ್ ₹75.81 ಕೋಟಿ ಪಾವತಿಸಿದೆ' ಎಂದು ಸಿಎಜಿ ಹೇಳಿದೆ.

'₹1 ಕೋಟಿಗಿಂತ ಕಡಿಮೆ ಮೊತ್ತದ ಖರೀದಿಗೆ ಮಾತ್ರ ಟೆಂಡರ್ ಕರೆಯದೆ ಗುತ್ತಿಗೆ ನೀಡಬಹುದು. ಈ ವಿನಾಯತಿಯನ್ನು ದುರ್ಬಳಕೆ ಮಾಡಿಕೊಳ್ಳಲು ₹154.4 ಕೋಟಿ ಮೊತ್ತದ ಗುತ್ತಿಗೆಯನ್ನು ₹1 ಕೋಟಿಗೂ ಕಡಿಮೆ ಮೊತ್ತದ 195 ಖರೀದಿ ಆದೇಶಗಳಾಗಿ ವಿಭಜಿಸಿ, ಅಕ್ರಮ ಎಸಗಲಾಗಿದೆ' ಎಂದಿದೆ.

ಲೋಕಸಭೆಯಲ್ಲಿ ಗುತ್ತಿಗೆ ಗದ್ದಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಸ್ಲಿಮರಿಗೆ ಸರ್ಕಾರಿ ಗುತ್ತಿಗೆಗಳಲ್ಲಿ ಶೇ 4ರಷ್ಟು ಮೀಸಲಾತಿ ನೀಡುವ ಕರ್ನಾಟಕದ ಕಾಂಗ್ರೆಸ್ ಸರ್ಕಾರದ ತೀರ್ಮಾನದ ವಿಷಯವು ಲೋಕಸಭೆಯಲ್ಲಿ ಬುಧವಾರ ಪ್ರಸ್ತಾಪವಾಗಿ ಕೆಲಕಾಲ ಗದ್ದಲಕ್ಕೆ ಕಾರಣವಾಯಿತು.

ಗಮನ ಸೆಳೆಯುವ ಸೂಚನೆ ವೇಳೆ ಜಾರ್ಖಂಡ್‌ನ ಬಿಜೆಪಿ ಸಂಸದ ನಿಶಿಕಾಂತ್ ದುಬೆ ವಿಷಯ ಪ್ರಸ್ತಾಪಿಸಿ, 'ಕಾಂಗ್ರೆಸ್ ಸರ್ಕಾರವು ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ನೀಡಲು ತೀರ್ಮಾನಿಸಿದೆ. ಮುಸ್ಲಿಮರಿಗೆ ಈಗಾಗಲೇ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮೀಸಲಾತಿ ನೀಡಲಾಗುತ್ತಿದೆ. ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಲು ನಿರ್ಧರಿಸಿರುವುದು ಕಾನೂನುಬಾಹಿರ. ಇತರ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲಾತಿ ಕಡಿತ ಮಾಡಿ ಮುಸ್ಲಿಮರಿಗೆ ಹಂಚಲು ಕಾಂಗ್ರೆಸ್ ಹೊರಟಿದೆ' ಎಂದರು.

'1937ರಲ್ಲಿ ಮುಸ್ಲಿಂ ಲೀಗ್ ಜೊತೆ ಮೈತ್ರಿ ಮಾಡಿಕೊಂಡು ಪ್ರಾಂತೀಯ ಸರ್ಕಾರಗಳನ್ನು ರಚಿಸುವ ಕಾಂಗ್ರೆಸ್ ನಿರ್ಧಾರವು 1947ರಲ್ಲಿ ಧಾರ್ಮಿಕ ಆಧಾರದ ಮೇಲೆ ಭಾರತದ ವಿಭಜನೆಗೆ ಕಾರಣವಾಯಿತು ಎಂದು ದುಬೆ ಹೇಳಿದರು. 'ಈಗ ಜಾತಿ ಜನಗಣತಿಯ ಬೇಡಿಕೆಯನ್ನು ಹೆಚ್ಚಿಸುವ ಮೂಲಕ ಮತ್ತು ಧರ್ಮದ ಹೆಸರಿನಲ್ಲಿ ಸರ್ಕಾರಿ ಗುತ್ತಿಗೆಗಳನ್ನು ನೀಡುವ ಮೂಲಕ ಕಾಂಗ್ರೆಸ್ ಪಕ್ಷವು ಮತ ಬ್ಯಾಂಕ್‌ಗಾಗಿ ಭಾರತವನ್ನು ಮತ್ತೆ ವಿಭಜಿಸಲು ಬಯಸುತ್ತಿದೆ' ಎಂದು ಅವರು ಆರೋಪಿಸಿದರು.

'ಮತ ಬ್ಯಾಂಕ್ ರಾಜಕಾರಣಕ್ಕಾಗಿ ಮುಸ್ಲಿಮರನ್ನು ಓಲೈಸುವ ಪ್ರವೃತ್ತಿ ವಿರೋಧ ಪಕ್ಷಗಳಲ್ಲಿ ಹೆಚ್ಚಾಗಿದೆ. ತೆಲಂಗಾಣದಲ್ಲಿ ಒಬಿಸಿ ಪಟ್ಟಿಗೆ ಮುಸ್ಲಿಮರನ್ನು ಸೇರಿಸುವ ಪ್ರಯತ್ನ ನಡೆದಿದೆ' ಎಂದು ಅವರು ದೂರಿದರು. ಆಗ ಬಿಜೆಪಿ ಸದಸ್ಯರು ನಾಚಿಕೆಗೇಡು ಎಂದು ಘೋಷಣೆಗಳನ್ನು ಕೂಗಿದರು. ಕಾಂಗ್ರೆಸ್ ಸದಸ್ಯರು ಇದಕ್ಕೆ ಆಕ್ಷೇಪಿಸಿದರು. ಈ ವೇಳೆ ಗದ್ದಲ ಉಂಟಾಯಿತು.

ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್, 'ಇದೊಂದು ಪ್ರಮುಖ ವಿಷಯ. ಸಂಸದರು ತಮ್ಮ ಕಳಕಳಿಯನ್ನು ಸದನ ಹಾಗೂ ಸಚಿವಾಲಯದ ಗಮನಕ್ಕೆ ತರುತ್ತಿದ್ದಾರೆ' ಎಂದರು.

ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಮಾತನಾಡಿ, 'ಸರ್ಕಾರಿ ಟೆಂಡರ್‌ಗಳಲ್ಲಿ ಶೇ 4ರಷ್ಟು ಮೀಸಲಾತಿ ಕಲ್ಪಿಸುವ ಮೂಲಕ ಕಾಂಗ್ರೆಸ್ ಸರ್ಕಾರ ಮುಸ್ಲಿಮರ ಅತಿಯಾದ ತುಷ್ಟೀಕರಣಕ್ಕೆ ಮುಂದಾಗಿದೆ. ಜಾತ್ಯತೀತ ಸರ್ಕಾರಗಳು ಈ ರೀತಿ ಧರ್ಮದ ಆಧಾರದ ಮೇಲೆ ಓಲೈಸುವ ಕ್ರಮಗಳನ್ನು ಕೈಗೊಳ್ಳುವ ಯಾವುದೇ ಅಧಿಕಾರ ಹೊಂದಿರುವುದಿಲ್ಲ. ಈಗಾಗಲೇ ನಿಷೇಧಕ್ಕೆ ಒಳಗಾಗಿರುವ ಪಿಎಫ್‌ಐ ಮತ್ತು ಕೆಎಫ್‌ಡಿಯಂತಹ ಸಮಾಜಘಾತುಕ ಶಕ್ತಿಗಳ 'ಕೈ'ಗಳನ್ನು ಇನ್ನಷ್ಟು ಭದ್ರಪಡಿಸುವ ಹುನ್ನಾರ ಇದಾಗಿದೆ' ಎಂದು ಆರೋಪಿಸಿದರು.

ಸಿದ್ದರಾಮಯ್ಯ ಸರ್ಕಾರದ ಮುಸ್ಲಿಂ ಮೀಸಲಾತಿ ಮಸೂದೆ ಅಸಾಂವಿಧಾನಿಕ. ಅದನ್ನು ಕೂಡಲೇ ಹಿಂದಕ್ಕೆ ಪಡೆಯಬೇಕು ಎಂದು ಅವರು ಆಗ್ರಹಿಸಿದರು.

ಹೃದಯಾಘಾತಕ್ಕೆ 'ಆಯುಷ್ಮಾನ್' ಚಿಕಿತ್ಸೆ: ದೇವೇಗೌಡ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಆಯುಷ್ಮಾನ್ ಭಾರತ್ ಕಾರ್ಯಕ್ರಮದಡಿಯಲ್ಲಿ ಹೃದಯಾಘಾತ ಮತ್ತು ಪಾರ್ಶ್ವವಾಯುವಿಗೆ ಚಿಕಿತ್ಸೆ ನೀಡಲು ರಾಷ್ಟ್ರವ್ಯಾಪಿ ಯೋಜನೆ ರೂಪಿಸಬೇಕು' ಎಂದು ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಮನವಿ ಮಾಡಿದರು.

ರಾಜ್ಯಸಭೆಯಲ್ಲಿ ಬುಧವಾರ ನಡೆದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬೇಡಿಕೆ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ದೇಶದಲ್ಲಿ ಹೃದಯಾಘಾತ ಮತ್ತು ಪಾರ್ಶ್ವವಾಯುವಿನಿಂದ ಮರಣ ಹೊಂದುವವರು ಹೆಚ್ಚುತ್ತಿದ್ದಾರೆ. ಪ್ರತಿ ವರ್ಷ ನಾವು ಲಕ್ಷಾಂತರ ಜನರನ್ನು ಕಳೆದುಕೊಳ್ಳುತ್ತಿದ್ದೇವೆ. ದುರದೃಷ್ಟವಶಾತ್ ಶೇ 30ರಷ್ಟು ಹೃದಯಾಘಾತಗಳು 45 ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳಲ್ಲಿ ಸಂಭವಿಸುತ್ತವೆ' ಎಂದು ಅವರು ಕಳವಳ ವ್ಯಕ್ತಪಡಿಸಿದರು.

ವಿವಿಧ ಜಿಲ್ಲೆಗಳಲ್ಲಿ ಅನಧಿಕೃತ ‘ಲೋಡ್‌ಶೆಡ್ಡಿಂಗ್’ ● ಅಧಿಕಾರಿಗಳಿಂದ ದುರಸ್ತಿ, ನಿರ್ವಹಣೆಯ ಸಬೂಬು

ಬೇಗೆ ಹೆಚ್ಚಿಸಿದ ವಿದ್ಯುತ್ ಕಣ್ಣಾಮುಚ್ಚಾಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿರುಬೇಸಿಗೆಯ ಧಗೆ ಹೆಚ್ಚುತ್ತಿರುವಂತೆಯೇ ಆಗಾಗ್ಗೆ ಕೈಕೊಡುವ ವಿದ್ಯುತ್, ರಾಜ್ಯದಾದ್ಯಂತ ವಿವಿಧ ಜಿಲ್ಲೆಗಳಲ್ಲಿ ನಿತ್ಯದ ಜನ ಜೀವನವನ್ನು ಹೈರಾಣಾಗಿಸಿದೆ. ಸರ್ಕಾರ ಅಧಿಕೃತವಾಗಿ ಲೋಡ್ ಶೆಡ್ಡಿಂಗ್ ಪ್ರಕಟಿಸಿಲ್ಲ. ಆದರೆ, ದುರಸ್ತಿ ನೆಪದಲ್ಲಿ ನಿತ್ಯ ಜಾರಿಯಲ್ಲಿದೆ.

ಜಿಲ್ಲಾವಾರು ಮಾಹಿತಿ ಪ್ರಕಾರ, ಹಗಲಿನ ಹೊತ್ತಿನ ಜೊತೆಗೆ ರಾತ್ರಿಯ ಹೊತ್ತೂ 4–5 ಗಂಟೆ ಅನಿಯಮಿತ ವಿದ್ಯುತ್ ಕಡಿತ ಆಗುತ್ತಿದೆ. ಸಮಸ್ಯೆಯನ್ನು ಇನ್ನಷ್ಟು ಸಂಕೀರ್ಣವಾಗಿಸಿದೆ. ಗೃಹ, ವಾಣಿಜ್ಯ ಸಂಪರ್ಕಗಳ ಸ್ಥಿತಿ ಇದಾದರೆ, ಕೃಷಿಗೆ ನೀರು ಹಾಯಿಸಲೂ ಸಮಸ್ಯೆ ಹೆಚ್ಚಿದೆ.

ಕೋಲಾರ ವರದಿ: ಜಿಲ್ಲೆಯಾದ್ಯಂತ ದುರಸ್ತಿ, ಕಾಮಗಾರಿ ಹೆಸರಲ್ಲಿ ಪದೇ ಪದೇ ವಿದ್ಯುತ್ ಕಡಿತ ಆಗುತ್ತಿದೆ. ಅಧಿಕಾರಿ ಗಳು ದುರಸ್ತಿ ನೆಪ ಒಡ್ಡುತ್ತಿದ್ದಾರೆ ಎಂಬ ದೂರು ವ್ಯಾಪಕವಾಗಿದೆ.

‘ಪದೇ ಪದೇ ವಿದ್ಯುತ್ ಕಡಿತ ಆಗುತ್ತಿದೆ. ಬೇಸಿಗೆ ಧಗೆ ಹೆಚ್ಚಿದೆ. ಕುಡಿಯುವ ನೀರು ಹಾಗೂ ಕೃಷಿಗೆ ಗುಣಮಟ್ಟದ ವಿದ್ಯುತ್ ನೀಡಬೇಕು. ಪರೀಕ್ಷೆಗಳಿರುವ ಕಾರಣ ರಾತ್ರಿ ವೇಳೆ ವಿದ್ಯುತ್ ಕಡಿತ ಮಾಡಬಾರದು’ ಎಂದು ರೈತ ಸಂಘದ ಮುಖಂಡರು ಆಗ್ರಹಪಡಿಸಿದ್ದಾರೆ.

ದಾವಣಗೆರೆ ವರದಿ: ಜಿಲ್ಲೆಯ ಕೆಲವೆಡೆ ಕೃಷಿಗೆ 5 ಗಂಟೆಯಷ್ಟೇ ವಿದ್ಯುತ್ ಸಿಗುತ್ತಿದೆ. ಜಗಳೂರು ತಾಲ್ಲೂಕಿನಲ್ಲಿ ವೋಲ್ಟೇಜ್ ಸಮಸ್ಯೆ ಇದೆ. ಬೆಳೆ ಒಣಗುತ್ತಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ರಾತ್ರಿ 6 ಗಂಟೆಯಿಂದ ಬೆಳಿಗ್ಗೆ 9 ಗಂಟೆವರೆಗೆ ತ್ರಿ-ಫೇಸ್ ವಿದ್ಯುತ್ ಸರಬರಾಜು ವೇಳೆ ತೋಟದ ಮನೆಗಳಿಗೆ ವಿದ್ಯುತ್ ಸ್ಥಗಿತಗೊಳ್ಳುತ್ತಿದೆ. ಮೆಸ್ಕಾಂ ವ್ಯಾಪ್ತಿಯ ಶಿವಮೊಗ್ಗ ಜಿಲ್ಲೆಯಲ್ಲಿ ವಿದ್ಯುತ್ ಸಮಸ್ಯೆ ಸದ್ಯ ಬಾಧಿಸುತ್ತಿಲ್ಲ.

ಮೈಸೂರು ವರದಿ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್) ವ್ಯಾಪ್ತಿಯ ಮೈಸೂರು ಭಾಗದ ಜಿಲ್ಲೆಗಳಲ್ಲಿ ಆಗಾಗ್ಗೆ ವಿದ್ಯುತ್ ಕೈಕೊಡುತ್ತಿದ್ದು, ಅಧಿಕಾರಿಗಳಿಂದ ದುರಸ್ತಿ, ತುರ್ತು ಕಾಮಗಾರಿಯ ಸಿದ್ಧ ಉತ್ತರ ಸಿಗುತ್ತಿದೆ.

ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ಅಧಿಕೃತ ಲೋಡ್ ಶೆಡ್ಡಿಂಗ್ ಇಲ್ಲದಿದ್ದರೂ, ‘ದುರಸ್ತಿಗಾಗಿ’ ಬೆಳಿಗ್ಗೆ 10ರಿಂದ ಸಂಜೆ 5ಗಂಟೆಯವರೆಗೆ ವಿದ್ಯುತ್ ಕಡಿತ ಮಾಡಲಾಗುತ್ತಿದೆ ಎಂಬ ದೂರುಗಳು ಸಾಮಾನ್ಯವಾಗಿ ಕೇಳಿಬರುತ್ತಿವೆ.

‘ವಿದ್ಯುತ್ ಪೂರೈಕೆಯಲ್ಲಿ ಅಭಾವ ಆಗಿಲ್ಲ. ತ್ರೈಮಾಸಿಕ ನಿರ್ವಹಣೆ, ದೂರು ಬಂದಲ್ಲಿ ದುರಸ್ತಿ ನಡೆಯುತ್ತಿದೆ. ಹೀಗಾಗಿ ವ್ಯತ್ಯಯ ಆಗಿರಬಹುದು’ ಎಂದು ಸೆಸ್ಕ್ ನಿಗಮದ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲರಾಜು ತಿಳಿಸಿದರು.

ಹೆಸ್ಕಾಂ: ದುರಸ್ತಿ ನೆಪ, ವಿದ್ಯುತ್ ಕಡಿತ ನಿರಂತರ

ಹುಬ್ಬಳ್ಳಿ: ಹೆಸ್ಕಾಂ ವ್ಯಾಪ್ತಿಯ ಏಳು ಜಿಲ್ಲೆಗಳಲ್ಲಿ ನಿರಂತರವಾಗಿ ವಿದ್ಯುತ್ ಕಡಿತ ಆಗುತ್ತಿದೆ. ಪಟ್ಟಣ, ಗ್ರಾಮೀಣ ಭಾಗದಲ್ಲಿ ಪ್ರತಿದಿನ ವಿದ್ಯುತ್ ಕಡಿತವಿದೆ. ಟ್ರಿಪ್ ಸಮಸ್ಯೆಯಿಂದ ಪಂಪ್‌ಸೆಟ್‌ಗಳು ಹಾಳಾಗುತ್ತಿವೆ. ಬೆಳೆಗಳು ಒಣಗಿ ಹೋಗುತ್ತಿವೆ ಎಂಬ ದೂರುಗಳಿವೆ.

ಧಾರವಾಡ, ಗದಗ, ಹಾವೇರಿ, ಉತ್ತರ ಕನ್ನಡ, ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ವ್ಯಾಪ್ತಿಯಲ್ಲಿ ಇದೇ ಸ್ಥಿತಿಯಿದೆ. ‘ತಾಂತ್ರಿಕ ಕಾರಣಗಳಿಗಾಗಿ, ದುರಸ್ತಿಗಾಗಿ ಮಾತ್ರ ವಿದ್ಯುತ್ ಕಡಿತಗೊಳಿಸಲಾಗುತ್ತಿದೆ’ ಎನ್ನುವುದು ಅಧಿಕಾರಿಗಳ ಸಿದ್ಧ ಉತ್ತರ.

‘ಉತ್ತರ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಕಡಿತಕ್ಕೆ ಅಧಿಕಾರಿಗಳು ಜಂಗಲ್ ಕಟಿಂಗ್ ನೆಪ ಹೇಳಿದರೆ, ಹಾವೇರಿ ಜಿಲ್ಲೆಯಲ್ಲಿ ತಾಂತ್ರಿಕ ನಿರ್ವಹಣೆ ಕಾಮಗಾರಿ ಹಾಗೂ ಹಳೇ ಕಂಬ–ತಂತಿಗಳ ಬದಲಾವಣೆ ಕೆಲಸ ನಡೆಯುತ್ತಿದೆ ಎಂಬ ಸಬೂಬು ಹೇಳುತ್ತಾರೆ.

ವಿದ್ಯುತ್ ಕಡಿತ: ಎಲ್ಲಿ, ಏನು?

- ಕೋಲಾರ: ಸಂಜೆ 6ರಿಂದ ರಾತ್ರಿ 10ಗಂಟೆ ಅವಧಿಯಲ್ಲಿ ಪದೇ ಪದೇ ಕೈಕೊಡುವ ವಿದ್ಯುತ್
- ದಾವಣಗೆರೆ: ಕೃಷಿಗೆ 7 ಗಂಟೆ ವಿದ್ಯುತ್ ಭರವಸೆ ನೀಡಲಾಗಿತ್ತು. ಆದರೆ, ಐದು ಗಂಟೆ ಕೊಡಲಾಗುತ್ತಿದೆ. ಅಲ್ಲೂ ವೋಲ್ಟೇಜ್, ಟ್ರಿಪ್ ಸಮಸ್ಯೆ ಕಾಡುತ್ತಿದೆ
- ಮೈಸೂರು ಭಾಗದ ಜಿಲ್ಲೆಗಳಲ್ಲಿ ಬೆಳಿಗ್ಗೆ 10 ರಿಂದ 5ರವರೆಗೆ ಆಗಾಗ್ಗೆ ಕೈಕೊಡುವ ವಿದ್ಯುತ್. ಹಳ್ಳಿ ಕಡೆ ರಾತ್ರಿ ವೇಳೆ ಸಿಂಗಲ್ ಫೇಸ್ ವಿದ್ಯುತ್
- ಬೆಳಗಾವಿ: ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ ವಿವಿಧ ಫೀಡರ್‌ಗಳಲ್ಲಿ ವಿದ್ಯುತ್ ಸ್ಥಗಿತ. ಮಳೆಗಾಲದ ಸಮಸ್ಯೆ ಸರಿಪಡಿಸಲು ಕಡಿತ ಎಂಬ ಸ್ಪಷ್ಟನೆ
- ಉತ್ತರ ಕನ್ನಡ: ಲೋಡ್ ಶೆಡ್ಡಿಂಗ್ ಇಲ್ಲ. ಆದರೆ ಜಂಗಲ್ ಕಟಿಂಗ್, ದುರಸ್ತಿಗಾಗಿ ಬುಧವಾರ, ಗುರುವಾರ 7–8 ತಾಸು ವಿದ್ಯುತ್ ಪೂರೈಕೆ ಸ್ಥಗಿತ



4,672 ವಿದ್ಯುತ್ ಪರಿವರ್ತಕನಿರ್ವಹಣೆ ನಡೆದಿದೆ. ಕೊಡಗಿನಲ್ಲಿ ವಿತರಣ ಜಾಲ ಬಲಪಡಿಸುತ್ತಿದ್ದೇವೆ. ಮೈಸೂರಿನಲ್ಲಿ ಭೂಗತ ಕೇಬಲ್ ಅಳವಡಿಸುತ್ತಿದ್ದೇವೆ. ವ್ಯತ್ಯಯ ಆಗಿರಬಹುದು
ಕೆ.ಎಂ. ಮುನಿಗೋಪಾಲರಾಜು, ಪ್ರಭಾರ ವ್ಯವಸ್ಥಾಪಕ, ಸೆಸ್ಕ್

‘ಕೃಷಿ ಪಂಪ್‌ಸೆಟ್‌ಗೆ ಒಮ್ಮೊಮ್ಮೆ 5 ಗಂಟೆಯೂ ವಿದ್ಯುತ್ ಸಿಗುವುದಿಲ್ಲ. ಇದರಿಂದ ಕೃಷಿ ಚಟುವಟಿಕೆಗೆ ತೊಂದರೆ ಉಂಟಾಗುತ್ತಿದೆ
ಹುಚ್ಚವನಹಳ್ಳಿ ಮಂಜುನಾಥ್, ಅಧ್ಯಕ್ಷ ಕರ್ನಾಟಕ ರಾಜ್ಯ ರೈತ ಸಂಘ, ದಾವಣಗೆರೆ

ಜಿಲ್ಲೆಯಲ್ಲಿ ವಿದ್ಯುತ್ ಕೊರತೆ ಇಲ್ಲ ತಾಂತ್ರಿಕ ಕಾರಣ, ದುರಸ್ತಿಗೆ ಮಾತ್ರ ವಿದ್ಯುತ್ ಕಡಿತ ಮಾಡುತ್ತಿದ್ದೇವೆ. ಕೃಷಿಗೆ 7 ತಾಸು ವಿದ್ಯುತ್ ಕೊಡುತ್ತಿದ್ದೇವೆ.
ರಾಜೇಶ್ ಕಲ್ಯಾಣಶೆಟ್ಟಿ, ಇಇ, ಗದಗ ವಿಭಾಗ, ಹೆಸ್ಕಾಂ

ಸಿಂಗಲ್ ಫೇಸ್ ವಿದ್ಯುತ್ ಪೂರೈಸುವಾಗ ರಾತ್ರಿ ವೇಳೆಯಲ್ಲಿ ಪಂಪ್‌ಸೆಟ್ ಚಾಲನೆ ಮಾಡಿದಲ್ಲಿ, ಫೀಡರ್ ಟ್ರಿಪ್ ಆಗಲಿದೆ. ಇದರಿಂದ ವಿದ್ಯುತ್ ವ್ಯತ್ಯಯ ಆದರೆ ನಿಗಮ ಹೊಣೆ ಅಲ್ಲ
ಕೃಷ್ಣಪ್ಪ, ಸೂಪರಿಂಟೆಂಡೆಂಟ್ ಎಂಜಿನಿಯರ್ ಸೆಸ್ಕ್,ಹಾಸನ ವೃತ್ತ

ಜೆಸ್ಕಾಂ: ಗ್ರಾಮೀಣ ವ್ಯಾಪ್ತಿಯಲ್ಲಿ ವ್ಯತ್ಯಯ

ಕಲಬುರಗಿ: ಜೆಸ್ಕಾಂ ವ್ಯಾಪ್ತಿಯಲ್ಲಿ ಬಹುತೇಕ ಸಮಸ್ಯೆಯಿಲ್ಲ. ಈ ವ್ಯಾಪ್ತಿಯ ಕೆಲ ಜಿಲ್ಲೆಗಳ ಗ್ರಾಮೀಣ ಭಾಗದಲ್ಲಿ ಅಲ್ಪಾವಧಿಗೆ ವಿದ್ಯುತ್ ಸ್ಥಗಿತಗೊಳಿಸಲಾಗುತ್ತಿದೆ. ಜೊತೆಗೆ ಕೃಷಿ ಪಂಪ್‌ಸೆಟ್‌ಗಳಿಗೆ ವೋಲ್ಟೇಜ್ ಸಮಸ್ಯೆ ಕಾಡುತ್ತಿದೆ ಎಂಬ ಆರೋಪಗಳಿವೆ.

ವಿದ್ಯುತ್‌ಕಡಿತಕುರಿತುಪೂರ್ವಭಾವಿಯಾಗಿ ಮಾಹಿತಿ ನೀಡುತ್ತಿಲ್ಲ. ಏಕಾಏಕಿ ಕಡಿತ ಮಾಡುತ್ತಾರೆ. ಕೇಳಿದರೆ ದುರಸ್ತಿ ಎನ್ನುತ್ತಾರೆ ಎಂಬುದು ನಾಗರಿಕರ ದೂರು. ಯಾದಗಿರಿ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಅನಿಯಮಿತ ವಿದ್ಯುತ್ ಕಡಿತ ಆಗುತ್ತಿದೆ. ಕಲಬುರಗಿ, ಬೀದರ್, ಕೊಪ್ಪಳ ಜಿಲ್ಲೆಗಳಲ್ಲಿ ಪ್ರಸ್ತುತ ಸಮಸ್ಯೆಯಿಲ್ಲ.

ಮೆಸ್ಕಾಂ– ಹಳ್ಳಿಗಳಲ್ಲಿ ಪೂರೈಕೆ ಸಮಸ್ಯೆ

ಮಂಗಳೂರು: ಮೆಸ್ಕಾಂ ವ್ಯಾಪ್ತಿಯ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಸಮರ್ಪಕ ವಿದ್ಯುತ್ ಪೂರೈಕೆ ಆಗುತ್ತಿಲ್ಲ. ವೋಲ್ಟೇಜ್ ಸಮಸ್ಯೆಯೂ ಇದೆ. ಆದರೆ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಸಲ ವಿದ್ಯುತ್ ಕಡಿತ ಕಡಿಮೆ ಇದೆ.

ಮೆಸ್ಕಾಂ ವ್ಯಾಪ್ತಿಯಲ್ಲಿ ಕೈಗಾರಿಕೆಗೆ ಹಾಗೂ ಗೃಹಬಳಕೆ ವಿದ್ಯುತ್ ಪೂರೈಕೆಯಲ್ಲಿ ಅನಿಯಮಿತ ಲೋಡ್‌ಶೆಡ್ಡಿಂಗ್ ಇಲ್ಲ. ‘ಕೆಲವೆಡೆ ಉಪಕರಣಗಳು ಕೆಟ್ಟಿದ್ದರಿಂದ ಪೂರೈಕೆ ವ್ಯತ್ಯಯವಾಗಿತ್ತು. ಅದನ್ನು ಹೊರತುಪಡಿಸಿ ಯಾವುದೇ ಸಮಸ್ಯೆ ಇಲ್ಲ’ ಎಂದು ಮೆಸ್ಕಾಂ ಅಧಿಕಾರಿಗಳು ತಿಳಿಸಿದರು.

ಧೈರ್ಯವಿದ್ದರೆ ವಾಪಸು ಪಡೆಯಿರಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಡವರು ಐದು ಅಡಿ ಒತ್ತುವರಿ ಮಾಡಿದರೆ ಸಾಕು ಓಡೋಡಿ ಬಂದು ತೆರವು ಮಾಡ್ತೀರಿ. ಬುಲ್ಡೋಜರ್ ತೆಗೆದುಕೊಂಡು ಹೋಗಿ ಮನೆ ಒಡೆದು ಹಾಕುತ್ತೀರಿ. ಭಿಕ್ಷುಕರನ್ನೂ ಬಿಡುವುದಿಲ್ಲ. ಪ್ರಭಾವಿಗಳು ಒತ್ತುವರಿ ಮಾಡಿದರೆ ಸದರವೇ’ ಎಂದು ರಾಜ್ಯ ಸರ್ಕಾರವನ್ನು ಹೈಕೋರ್ಟ್ ಕಟುವಾಗಿ ಪ್ರಶ್ನಿಸಿದೆ.

‘ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತವರ ಕುಟುಂಬದ ಸದಸ್ಯರು ಮಾಡಿರುವ ಒತ್ತುವರಿ ಜಮೀನನ್ನು ಧೈರ್ಯವಿದ್ದರೆ ವಾಪಸು ಪಡೆಯಿರಿ. ಇಲ್ಲವಾದರೆ ಬಿಟ್ಟುಬಿಡಿ’ ಎಂದು ತನ್ನ ವಾಗ್ದಾಳಿ ಮುಂದುವರಿಸಿದೆ.

‘ಕುಮಾರಸ್ವಾಮಿ ಹಾಗೂ ಅವರ ಸಂಬಂಧಿ ಮಾಜಿ ಶಾಸಕ ಡಿ.ಸಿ. ತಮ್ಮಣ್ಣ ಮತ್ತಿತರರು ರಾಮನಗರ ಜಿಲ್ಲೆ ಕೇತಗಾನಹಳ್ಳಿ ವ್ಯಾಪ್ತಿಯಲ್ಲಿ 14 ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿದ್ದಾರೆ’ ಎಂಬ ಆರೋಪಕ್ಕೆ ಸಂಬಂಧಿಸಿ ಎಸ್.ಆರ್.ಹಿರೇಮಠ ನೇತೃತ್ವದ ‘ಸಮಾಜ ಪರಿವರ್ತನಾ ಸಮುದಾಯ’ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ, ‘ಯಾರೇ ಆಗಲಿ, ಒಂದು ಇಂಚು ಜಮೀನು ಅತಿಕ್ರಮಣ ಆಗಿದ್ದರೂ ಬಿಡುವುದಿಲ್ಲ. ಸದ್ಯ 14 ಎಕರೆ ಒತ್ತುವರಿ ತೆರವುಗೊಳಿಸಲಾಗಿದೆ. ಇನ್ನೂ 18 ಎಕರೆ ಒತ್ತುವರಿ ತೆರವಿಗೆ ಸಂಬಂಧಿಸಿ ನೋಟಿಸ್ ನೀಡಲಾಗುತ್ತಿದೆ’ ಎಂದರು.

ಅರ್ಜಿದಾರ ಹಿರೇಮಠ ಪರ ಪದಾಂಕಿತ ಹಿರಿಯ ವಕೀಲ ಎಸ್. ಬಸವರಾಜು, ‘110 ಎಕರೆ ಗೋಮಾಳ ಜಮೀನು ಒತ್ತುವರಿಯಾಗಿದೆ. ಪ್ರಭಾವಿಗಳು ಈ ಗೋಮಾಳ ಜಮೀನು ಖರೀದಿಸಿದ್ದಾರೆ. ನಕಲಿ ಭೂ ಮಂಜೂರಾತಿ ಆಧರಿಸಿ ಖರೀದಿ ಮಾಡಲಾಗಿದೆ. ಈ ಬಗ್ಗೆ ತಹಶೀಲ್ದಾರ್ 2014ರಲ್ಲೇ ವರದಿ ನೀಡಿದ್ದಾರೆ. ಆದರೆ, ಸಂಪೂರ್ಣ ಒತ್ತುವರಿ ತೆರವುಗೊಳಿಸಿಲ್ಲ. ಹೀಗಾಗಿ, ಸಂಪೂರ್ಣ ಜಮೀನನ್ನು ಒತ್ತುವರಿ ಎಂದು ಪರಿಗಣಿಸಿ ವಶಪಡಿಸಿಕೊಳ್ಳಬೇಕು’ ಎಂದು ಕೋರಿದರು.

‘10 ದಿನದಲ್ಲಿ ಪೂರ್ಣ ವರದಿ ಕೊಡಿ’

‘ಕೇತಗಾನಹಳ್ಳಿ ಸರ್ವೆ ನಂ. 7, 8, 9, 10, 16, 17 ಮತ್ತು 79ರಲ್ಲಿ ಒತ್ತುವರಿಯಾಗಿರುವ ಜಮೀನು ತೆರವಿನ ಬಗ್ಗೆ 10 ದಿನದಲ್ಲಿ ಸಂಪೂರ್ಣ ವರದಿ ಕೊಡಿ. ಅರ್ಧಂಬರ್ಧ ಕೊಡಬೇಡಿ’ ಎಂದು ನ್ಯಾಯಪೀಠವು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕಟಾರಿಯಾಗೆ ತಾಕೀತು ಮಾಡಿತು.

ಅರ್ಜಿದಾರರ ಪರ ವಕೀಲರ ವಾದಕ್ಕೆ ಪ್ರತಿಕ್ರಿಯಿಸಿದ ಕಟಾರಿಯಾ, ‘ಕೇತಗಾನಹಳ್ಳಿಯಲ್ಲಿ ಜಮೀನು ಮಂಜೂರು ಮಾಡಿದ ದಾಖಲೆ ಇಲ್ಲ. ಹೀಗಾಗಿ, ಸಮಿತಿ ರಚನೆ ಮಾಡಲಾಗಿದ್ದು, ಮಂಜೂರಾತಿ ಪತ್ರಗಳು ಅಸಲಿ ಹೌದೊ ಅಲ್ಲವೊ ಎಂಬುದನ್ನು ಪರಿಶೀಲಿಸಲಾಗುತ್ತಿದೆ’ ಎಂದು ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಈಗ ದಾಖಲೆ ನಾಪತ್ತೆಯಾಗಿವೆ. ಮುಂದೆ ಜಮೀನೂ ನಾಪತ್ತೆ ಆಗಬಹುದು’ ಎಂದು ಕುಟುಕಿತಲ್ಲದೆ, ವಿಚಾರಣೆಯನ್ನು ಏಪ್ರಿಲ್ 3ಕ್ಕೆ ಮುಂದೂಡಿತು.

ಕೆಪಿಎಸ್‌ಸಿ ಅಕ್ರಮ ಇಬ್ಬರ ಮೇಲೆ ಗುಮಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಹಾಯಕ ಎಂಜಿನಿಯರ್‌ಗಳ ನೇಮಕದಲ್ಲಿ ಅಕ್ರಮ ಸಾಬೀತಾಗಿದೆ’ ಎಂಬ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಯ (ಕೆಎಸ್‌ಎಟಿ) ಆದೇಶ ಪ್ರಶ್ನಿಸಲಾದ ಅರ್ಜಿಯಲ್ಲಿ, ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಇಬ್ಬರು ಕಾರ್ಯದರ್ಶಿಗಳ ಮೇಲೆ ಹೈಕೋರ್ಟ್ ಗುಮಾನಿ ವ್ಯಕ್ತಪಡಿಸಿದೆ.

ಕೆಪಿಎಸ್‌ಸಿ ಸುಧಾರಣೆ ವಿಷಯದಲ್ಲಿ ಆಡಳಿತಾರೂಢ ರಾಜ್ಯ ಸರ್ಕಾರದ ನಡೆಯನ್ನು ಮುಕ್ತಕಂಠದಿಂದ ಶ್ಲಾಘಿಸಿರುವ ವಿಭಾಗೀಯ ನ್ಯಾಯಪೀಠ, ಕೆಪಿಎಸ್‌ಸಿ ಭಾನಗಡಿಗಳ ತನಿಖೆಯನ್ನು ಸಿಬಿಐ ಸುಪರ್ದಿಗೆ ಒಪ್ಪಿಸುವ ಇಂಗಿತವನ್ನು ಮುಕ್ತವಾಗಿರಿಸಿ ಆದೇಶಿಸಿದೆ.

ಕೆಎಸ್‌ಎಟಿ ಆದೇಶ ಪ್ರಶ್ನಿಸಿ ಎಂಜಿನಿಯರ್‌ಗಳಾದ ವಿಶ್ವಾಸ್ ಮತ್ತಿತರರು ಸಲ್ಲಿಸಿರುವ ರಿಟ್ ಅರ್ಜಿಗಳ ವಿಚಾರಣೆಯನ್ನು ಹಿರಿಯ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಹಾಗೂ ರಾಮಚಂದ್ರ ಡಿ.ಹುದ್ದಾರ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರವೂ ಮುಂದುವರಿಸಿತು. ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, ‘ನೇಮಕಾತಿ ವಿಷಯದಲ್ಲಿ ಯಾವುದೇ ಮುಚ್ಚುಮರೆ ಅನುಸರಿಸಿಲ್ಲ. ಎಲ್ಲವೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ದಾಖಲೆಯಲ್ಲಿ ಸ್ಪಷ್ಟವಾಗಿ ನಮೂದಾಗಿದೆ. ಕೆಪಿಎಸ್‌ಸಿ ಸ್ವಚ್ಛಗೊಳಿಸುವ ವಿಷಯದಲ್ಲಿ ರಾಜ್ಯ ಸರ್ಕಾರ ಹಿಂದೆ ಬಿದ್ದಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಸಾರ್ವಜನಿಕ ನೇಮಕಾತಿ ವ್ಯವಸ್ಥೆಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ; ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) ಮಸೂದೆ ರೂಪಿಸಿ, ಅದಕ್ಕೆ ಸದನದಲ್ಲಿ ಒಪ್ಪಿಗೆ ಪಡೆದು ಅದನ್ನು ರಾಜ್ಯಪಾಲರ ಅಂಕಿತಕ್ಕಾಗಿ ಕಳುಹಿಸಿಕೊಡಲಾಗಿದೆ. ಸುಧಾರಣಾ ಕ್ರಮಕ್ಕೆ ಪಕ್ಷಾತೀತ ಸಹಕಾರ ಪಡೆದು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ’ ಎಂದು ಪೀಠಕ್ಕೆ ವಿವರಿಸಿದರು.

ಅಡ್ವೊಕೇಟ್ ಜನರಲ್ ಅವರ ಸುದೀರ್ಘ ವಿವರಣೆಗೆ ತೃಪ್ತಿ ವ್ಯಕ್ತಪಡಿಸಿದ ನ್ಯಾಯಪೀಠ, ‘ಐಎಎಸ್ ಅಧಿಕಾರಿಗಳು ಎಂದಾಕ್ಷಣ ಅವರಿಗೆ ಅಂಥಾ ವಿಶೇಷವಾದ ನಿರೋಧಕ ಶಕ್ತಿ ಏನೂ ಇರುವುದಿಲ್ಲ. ಅವರೇನೂ ಸ್ವರ್ಗದಿಂದ ಇಳಿದು ಬಂದಿರುವುದಿಲ್ಲ. ಸಾರ್ವಜನಿಕ ಕೆಲಸ ಮಾಡುವ ಹೊಣೆಗಾರಿಕೆ ಅರಿತು ನಡೆಯಬೇಕು. ನಮ್ಮನ್ನು ಮುಟ್ಟೋಕೆ ಆಗುವುದಿಲ್ಲ ಎಂದು ಅವರೇನಾದರೂ ಅಂದುಕೊಂಡಿದ್ದರೆ ಅಂತಹುದನ್ನು ಕೋರ್ಟ್ ಸಹಿಸುವುದಿಲ್ಲ. ಎಲ್ಲರೂ ಸಂವಿಧಾನಕ್ಕೆ ಅನುಗುಣವಾಗಿಯೇ ನಡೆದುಕೊಳ್ಳಬೇಕು. ಹಾಲಿ ಪ್ರಕರಣದಲ್ಲಿ ಬಹಳಷ್ಟು ಜನರು ಶಾಮೀಲಾದಂತಿದೆ. ಅದರಲ್ಲೂ ಕೆಪಿಎಸ್‌ಸಿ ಕಾರ್ಯದರ್ಶಿಗಳ ಲೋಪ ಮೇಲ್ನೋಟಕ್ಕೆ ಕಾಣಬರುತ್ತಿದೆ’ ಎಂದು ಮೌಖಿಕವಾಗಿ ನುಡಿಯಿತು.

ಸಿಬಿಐ ಪರ ಹೈಕೋರ್ಟ್ ವಕೀಲ ಪಿ.ಪ್ರಸನ್ನಕುಮಾರ್ ಅವರ ಹಾಜರಿಯನ್ನು ದಿನದ ಆದೇಶದಲ್ಲಿ ದಾಖಲಿಸಿದ ನ್ಯಾಯಪೀಠ, ‘ಮುಂದಿನ ವಿಚಾರಣೆ ವೇಳೆಗೆ ಹಾಲಿ ಪ್ರಕರಣಕ್ಕೆ ಸಂಬಂಧಿಸಿದ ವಿವರಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಿ’ ಎಂದು ಕೆಪಿಎಸ್‌ಸಿ ಪರ ಪದಾಂಕಿತ ಹಿರಿಯ ವಕೀಲ ರೂಬೆನ್ ಜಾಕೊಬ್ ಮತ್ತು ಅಡ್ವೊಕೇಟ್ ಜನರಲ್ ಅವರಿಗೆ ನಿರ್ದೇಶಿಸಿ ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಿತು. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲರಾದ ಎಂ.ಎಸ್.ಭಾಗವತ್ ಹಾಗೂ ವಿ.ಲಕ್ಷ್ಮಿನಾರಾಯಣ ಇದ್ದರು.

ಶರಣಬಸವೇಶ್ವರ ಜಾತ್ರೆ

ಕಲಬುರಗಿಯ ಶರಣಬಸವೇಶ್ವರರ ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ಬುಧವಾರ ಸಂಜೆ ಮಹಾರಥೋತ್ಸವ ವಿಜೃಂಭಣೆಯಿಂದ ಜರುಗಿತು
ಚಿತ್ರ: ತಾಜುದ್ದೀನ್ ಆಜಾದ್

ಗಡಿ ಗುರುತು ಪೂರ್ಣ

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಕೇತಗಾನಹಳ್ಳಿ 5 ಸರ್ವೆ ನಂಬರ್‌ಗಳಲ್ಲಿ ಸರ್ಕಾರಿ ಜಮೀನು ಒತ್ತುವರಿ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಕಂದಾಯ ಇಲಾಖೆ ಕೈಗೊಂಡಿರುವ ಒತ್ತುವರಿ ಗಡಿ ಗುರುತಿಸುವಿಕೆ ಕಾರ್ಯ ಬುಧವಾರವೂ ಮುಂದುವರಿಯಿತು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ತೋಟದ ಮನೆ ಜಮೀನು ಇರುವ ಸರ್ವೆ ನಂಬರ್‌ಗಳಲ್ಲಿ ಮಂಗಳವಾರ ಒತ್ತುವರಿಯಾಗಿದ್ದ ಸರ್ಕಾರಿ ಜಾಗದ ಗಡಿ ಗುರುತಿಸಿದ್ದ ಅಧಿಕಾರಿಗಳು, ಉಳಿದ ಸರ್ವೆ ನಂಬರ್‌ಗಳಲ್ಲಿನ ಒತ್ತುವರಿ ಗುರುತಿಸಿದರು.

ಉಪ ತಹಶೀಲ್ದಾರ್ ಮಲ್ಲೇಶ್ ನೇತೃತ್ವದಲ್ಲಿ ಸ್ಥಳಕ್ಕೆ ಬೆಳಗ್ಗೆ ಬಂದ ಕಂದಾಯ ಮತ್ತು ಸರ್ವೆ ಇಲಾಖೆ ಅಧಿಕಾರಿಗಳ ತಂಡವು, ಸರ್ವೆ ನಂಬರ್ 7, 8, 9, 10, 16, 16/32 ಹಾಗೂ 79ರಲ್ಲಿ ಸರ್ವೆ ವರದಿ ಆಧರಿಸಿ ಒತ್ತುವರಿಯಾಗಿರುವ ಸರ್ಕಾರಿ ಜಾಗದ ಗಡಿ ಗುರುತಿಸಿದರು. 10ರ ಸರ್ಕಾರಿ ಜಾಗದಲ್ಲಿರುವ ಸ್ಮಶಾನ, ಬಂಡಿ ದಾರಿ ಹಾಗೂ ಹಳ್ಳಗಳನ್ನು ಗುರುತಿಸಿ ಕೆಂಪು ಬಾವುಟ ನೆಟ್ಟರು.

ಆರ್‌ಎಸ್‌ಎಸ್: 21ರಿಂದ ಸಭೆ

ಚನ್ನೇನಹಳ್ಳಿ ಜನಸೇವಾ ವಿದ್ಯಾಕೇಂದ್ರದಲ್ಲಿ ಆಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಂದಿನ ಕಾರ್ಯಸೂಚಿ ಹಾಗೂ ಕಾರ್ಯಕ್ರಮಗಳನ್ನು ರೂಪಿಸುವ ಉದ್ದೇಶ ಹೊಂದಿದ ‘ಅಖಿಲ ಭಾರತೀಯ ಪ್ರತಿನಿಧಿ ಸಭಾ’ದ ಬೈಠಕ್ ಮಾರ್ಚ್ 21ರಿಂದ 23ರವರೆಗೆ ಚನ್ನೇನಹಳ್ಳಿ ಜನಸೇವಾ ವಿದ್ಯಾಕೇಂದ್ರದಲ್ಲಿ ನಡೆಯಲಿದೆ.

ಆರ್‌ಎಸ್‌ಎಸ್ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿ, ‘2024-25ನೇ ವರ್ಷದ ಸಂಘಟನೆಯ ಚಟುವಟಿಕೆ ಕುರಿತು ವಿಮರ್ಶಾತ್ಮಕ ಚರ್ಚೆಯ ಜೊತೆಗೆ ವಿಶೇಷ ಯೋಜನೆಗಳು ಮತ್ತು ಭವಿಷ್ಯದ ಕಾರ್ಯತಂತ್ರಗಳ ಕುರಿತು ಚರ್ಚೆ ನಡೆಸಲಾಗುತ್ತದೆ’ ಎಂದು ಮಾಹಿತಿ ನೀಡಿದರು.

ಸುನೀಲ್ ಅಂಬೇಕರ್

ಬಾಂಗ್ಲಾದೇಶದಲ್ಲಿ ಹಿಂದೂಗಳು ಸೇರಿದಂತೆ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ಚರ್ಚೆಯಾಗಲಿದೆ. ಇದರ ಬಗ್ಗೆ ಮುಂದೆ ಏನು ಮಾಡಬೇಕು ಎಂಬ ಬಗ್ಗೆಯೂ ಚಿಂತನೆ ನಡೆಯಲಿದೆ ಎಂದು ತಿಳಿಸಿದರು.

2025ರ ವಿಜಯದಶಮಿಗೆ ಆರ್‌ಎಸ್‌ಎಸ್ ಸ್ಥಾಪನೆಯಾಗಿ 100 ವರ್ಷ ಪೂರೈಸಲಿದೆ. ನಡೆದು ಬಂದ ಹಾದಿ, ಕ್ರಮಿಸಬೇಕಿರುವ ಪಥಗಳ ಬಗ್ಗೆ ಚರ್ಚೆ ನಡೆಯಲಿದೆ. ಜೊತೆಗೆ ಈ ವರ್ಷದ ವಿಜಯ ದಶಮಿಯಿಂದ 2026ರ ವಿಜಯ ದಶಮಿವರೆಗೆ ಶತಮಾನ 2025ರಿಂದ 2026ರವರೆಗೆ ಶತಮಾನೋತ್ಸವ ವರ್ಷ ಆಚರಿಸ ಲಾಗುವುದು ಎಂದರು. ಈ ಎರಡು ಪ್ರಮುಖ ವಿಚಾರಗಳಲ್ಲದೇ ಇನ್ನೂ ಅನೇಕ ವಿಷಯಗಳು ಚರ್ಚೆಗೆ ಬರಲಿವೆ. ಸಂಘದ ಸರಸಂಘ ಚಾಲಕ ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಸಹ ಸರಕಾರ್ಯವಾಹರಾದಕೃಷ್ಣ ಗೋಪಾಲ, ಮುಕುಂದ, ಅರುಣ್ ಕುಮಾರ್, ರಾಮಕೃಷ್ಣ, ಅಲೋಕ್ ಕುಮಾರ್, ಅತುಲ್ ಲಿಮೆ ಪಾಲ್ಗೊಳ್ಳುವರು. ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಆರ್‌ಎಸ್‌ಎಸ್‌ನ 32 ಅಂಗ ಸಂಸ್ಥೆಗಳ ಪ್ರಮುಖ ಪದಾಧಿಕಾರಿಗಳು ಮತ್ತು ಕಾರ್ಯಕಾರಿಣಿಯ ಸದಸ್ಯರು ಸಭೆಯಲ್ಲಿ ಭಾಗಿಯಾಗುವರು ಎಂದು ಮಾಹಿತಿ ನೀಡಿದರು.

ಕ್ಷೇತ್ರೀಯ ಕಾರ್ಯವಾಹ ಎನ್. ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

ಪಿಂಚಣಿ ಹೊರೆ: ಗ್ರಾಹಕರಿಗೆ ಬರೆ

ಒಂದನೇ ಪುಟದಿಂದ...

ನೀರಾವರಿ ಪಂಪ್‌ಸೆಟ್‌ಗಳ ವಿದ್ಯುತ್ ಬಳಕೆದಾರರು ಸೇರಿದಂತೆ ಎಲ್ಲ ಗ್ರಾಹಕರಿಂದಲೂ ಈ ಮೊತ್ತ ವಸೂಲಿ ಮಾಡುವಂತೆ ಕೆಇಆರ್‌ಸಿ ಆದೇಶದಲ್ಲಿ ಹೇಳಿದೆ.

ಪಿಂಚಣಿ ಮತ್ತು ಗ್ರಾಚ್ಯುಟಿ ನಿಧಿಯ ನಿರ್ವಹಣೆಗಾಗಿ ‘ಕೆಪಿಟಿಸಿಎಲ್ ಆ್ಯಂಡ್ ಎಸ್ಕಾಮ್ಸ್ ಪೆನ್ಷನ್ ಆ್ಯಂಡ್ ಗ್ರಾಚ್ಯುಟಿ ಟ್ರಸ್ಟ್’ ಅಸ್ತಿತ್ವಕ್ಕೆ ಬರಲಿದೆ. ಈ ಟ್ರಸ್ಟ್ ಹೆಸರಿನಲ್ಲೇ ಬ್ಯಾಂಕ್‌ನಲ್ಲಿ ಖಾತೆ ತೆರೆದು, ಅದರಲ್ಲಿ ಈ ಮೊತ್ತವನ್ನು ಇರಿಸಬೇಕಿದೆ. ಈ ಮೊತ್ತದ ಬಳಕೆಗೆ ಸಂಬಂಧಿಸಿದಂತೆ ವಿದ್ಯುತ್ ಸರಬರಾಜು ಕಂಪನಿಗಳು ಪ್ರತಿ ತಿಂಗಳು ರಾಜ್ಯ ಸರ್ಕಾರ ಮತ್ತು ಕೆಇಆರ್‌ಸಿಗೆ ವರದಿ ನೀಡಬೇಕು. ಟ್ರಸ್ಟ್ ಕೂಡ ಇದೇ ಮಾದರಿಯ ವರದಿಯನ್ನು ಸಲ್ಲಿಸಬೇಕು.

ಹೈಕೋರ್ಟ್ ಆದೇಶದ ಬಳಿಕ ಹೊಸ ಅರ್ಜಿ

ರಾಜ್ಯ ಸರ್ಕಾರವು ಕರ್ನಾಟಕ ವಿದ್ಯುತ್ ಮಂಡಳಿ (ಕೆಇಬಿ) ರದ್ದುಗೊಳಿಸಿ ಕೆಪಿಟಿಸಿಎಲ್ ಹಾಗೂ ಐದು ಎಸ್ಕಾಂ ರಚಿಸಿದಾಗ, ನೌಕರರ ಪಿಂಚಣಿ ಮತ್ತು ಗ್ರಾಚ್ಯುಟಿಯನ್ನು ಭರಿಸುವುದಾಗಿ ಒಪ್ಪಿತ್ತು. 2021ರಲ್ಲಿ ಕೆಇಆರ್‌ಸಿ ಮುಂದೆ ದರ ಪರಿಷ್ಕರಣೆಗೆ ಸಲ್ಲಿಸಿದ್ದ ಅರ್ಜಿಯಲ್ಲಿ ಪಿಂಚಣಿ ಮತ್ತು ಗ್ರಾಚ್ಯುಟಿಯಲ್ಲಿ ಸರ್ಕಾರದ ಪಾಲನ್ನು ಗ್ರಾಹಕರಿಗೆ ವರ್ಗಾಯಿಸಲು ಆದೇಶ ನೀಡುವಂತೆ ಕೋರಿತ್ತು. ಇದನ್ನು ಕೆಇಆರ್‌ಸಿ ತಿರಸ್ಕರಿಸಿತ್ತು.

ಪಿಂಚಣಿ, ಗ್ರಾಚ್ಯುಟಿ ಬಾಬ್ತು ಸರ್ಕಾರ ಭರಿಸಬೇಕಿದ್ದ ಪಾಲನ್ನು ಗ್ರಾಹಕರಿಂದ ವಸೂಲಿ ಮಾಡುವ ತೀರ್ಮಾನವನ್ನು ಪ್ರಶ್ನಿಸಿ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ (ಎಫ್‌ಕೆಸಿಸಿಐ) ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಇದನ್ನು ಹೈಕೋರ್ಟ್ 2024ರ ಮಾರ್ಚ್ 25ರಂದು ತಿರಸ್ಕರಿಸಿತ್ತು. ಅದರ ಬಳಿಕ, ಪಿಂಚಣಿ ಮತ್ತು ಗ್ರಾಚ್ಯುಟಿ ಬಾಬ್ತು ಸರ್ಕಾರದ ಪಾಲಿನ ವಂತಿಕೆಯನ್ನು ಗ್ರಾಹಕರಿಂದ ವಸೂಲಿ ಮಾಡಲು ಸಮ್ಮತಿ ಕೋರಿ 2024ರ ನ. 30ರಂದು ಕೆಪಿಟಿಸಿಎಲ್, ಎಸ್ಕಾಂಗಳು ಅರ್ಜಿ ಸಲ್ಲಿಸಿದ್ದವು.

ದರ ಪರಿಷ್ಕರಣೆ ಅರ್ಜಿ ಬಾಕಿ

ಮುಂದಿನ 3 ವರ್ಷಗಳಿಗೆ ವಿದ್ಯುತ್ ದರ ಪರಿಷ್ಕರಣೆ ಕೋರಿ ಕೆಪಿಟಿಸಿಎಲ್ ಮತ್ತು ವಿದ್ಯುತ್ ಸರಬರಾಜು ಕಂಪನಿಗಳು ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ನಡೆಸುತ್ತಿದೆ.

ಈ ಅರ್ಜಿಗಳ ಕುರಿತು ಸಾರ್ವಜನಿಕ ವಿಚಾರಣೆಗಳನ್ನು ಆಯೋಗ ಪೂರ್ಣಗೊಳಿಸಿದ್ದು, ಏಪ್ರಿಲ್ 1ರೊಳಗೆ ಆದೇಶ ಪ್ರಕಟಿಸಬೇಕಿದೆ. ಕೆಪಿಟಿಸಿಎಲ್ ಮತ್ತು ಎಸ್ಕಾಂಗಳ ಬೇಡಿಕೆಯನ್ನು ಕೆಇಆರ್‌ಸಿ ಪುರಸ್ಕರಿಸಿದರೆ ಗ್ರಾಹಕರ ಮೇಲೆ ಮತ್ತೊಮ್ಮೆ ದರ ಏರಿಕೆಯ ಹೊರ ಬೀಳಲಿದೆ.

ಸಂಕ್ಷಿಪ್ತ ಸುದ್ದಿ

ಸ್ವಾತಿ ಹತ್ಯೆ: ಕುಟುಂಬಕ್ಕೆ ₹ 5 ಲಕ್ಷ ಪರಿಹಾರ

ಹಾವೇರಿ: ಶುಶ್ರೂಷಕಿ ಸ್ವಾತಿ ಬ್ಯಾಡಗಿ (22) ಹತ್ಯೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅವರ ಕುಟುಂಬಕ್ಕೆ ರಾಜ್ಯ ಸರ್ಕಾರ ₹ 5 ಲಕ್ಷ ಪರಿಹಾರ ಘೋಷಿಸಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ, ‘ಶಾಸಕ ಯು.ಬಿ. ಬಣಕಾರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ, ಪರಿಹಾರ ಬಿಡುಗಡೆಗೆ ಮನವಿ ಮಾಡಲಾಗಿತ್ತು. ಇದೀಗ ಪರಿಹಾರ ಬಿಡುಗಡೆಯಾಗಿದೆ’ ಎಂದಿದ್ದಾರೆ.

ರಟ್ಟೀಹಳ್ಳಿ ತಾಲ್ಲೂಕಿನ ಮಾಸೂರು ಗ್ರಾಮದ, ರಾಣೆಬೆನ್ನೂರಿನ ಆಸ್ಪತ್ರೆಯೊಂದರ ಶುಶ್ರೂಷಕಿಯಾಗಿದ್ದ ಸ್ವಾತಿ ಬ್ಯಾಡಗಿ ಅವರನ್ನು ಮಾರ್ಚ್ 3ರಂದು ಕೊಲೆ ಮಾಡಿ ಮೃತದೇಹವನ್ನು ತುಂಗಭದ್ರಾ ನದಿಯಲ್ಲಿ ಎಸೆಯಲಾಗಿತ್ತು.

ಪೊಲೀಸ್ ಠಾಣೆಯಲ್ಲೇ ಇಸ್ಪೀಟ್: ಐವರು ಅಮಾನತು

ಕಲಬುರಗಿ: ಚಿತ್ತಾಪುರ ತಾಲ್ಲೂಕಿನ ವಾಡಿ ಪೊಲೀಸ್ ಠಾಣೆಯ ಕಟ್ಟಡದಲ್ಲಿ ಇಸ್ಪೀಟ್ ಆಡಿದ ಆರೋಪದಡಿ ಐವರನ್ನು ಅಮಾನತು ಮಾಡಲಾಗಿದೆ.

ಠಾಣೆಯ ಐವರು ಸಿಬ್ಬಂದಿ ಇಸ್ಪೀಟ್ ಆಡಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಈ ಹಿನ್ನೆಲೆಯಲ್ಲಿ ಠಾಣೆಯ ಎಎಸ್‌ಐ ಮಹಿಮೂದ್ ಮಿಯಾ, ಹೆಡ್ ಕಾನ್‌ಸ್ಟೆಬಲ್‌ಗಳಾದ ನಾಗರಾಜ, ಸಾಯಿಬಣ್ಣ, ಇಮಾಮ್ ಮತ್ತು ಕಾನ್‌ಸ್ಟೆಬಲ್ ನಾಗಭೂಷಣ ಅವರನ್ನು ಅಮಾನತು ಮಾಡಿ ಎಸ್‌ಪಿ ಅಡ್ಡೂರು ಶ್ರೀನಿವಾಸುಲು ಅವರು ಆದೇಶ ಹೊರಡಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪೊಲೀಸರು ಇಸ್ಪೀಟ್ ಜೂಜಾಟ ಆಡಿರುವ ವಿಡಿಯೊ ಹರಿದಾಡಿದ ಕುರಿತು ‘ಪ್ರಜಾವಾಣಿ’ ಬುಧವಾರದ ಸಂಚಿಕೆಯಲ್ಲಿ ವರದಿ ಪ್ರಕಟಿಸಿತ್ತು.

ಕಲುಷಿತ ಆಹಾರ: ಮಕ್ಕಳ ಆಯೋಗದಿಂದ ದೂರು ದಾಖಲು

ಮಂಡ್ಯ: ‘ಮಳವಳ್ಳಿ ತಾಲ್ಲೂಕಿನಲ್ಲಿ ಕಲುಷಿತ ಆಹಾರ ಸೇವಿಸಿ ಮೇಘಾಲಯ ಮೂಲದ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟು, 40ಕ್ಕೂ ಅಧಿಕ ಮಕ್ಕಳು ಅಸ್ವಸ್ಥಗೊಂಡಿರುವ ಬಗ್ಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು’ ಎಂದು ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ ತಿಳಿಸಿದರು.

ತಾಲ್ಲೂಕಿನ ಟಿ.ಕಾಗೇಪುರದ ಗೋಕುಲ ವಿದ್ಯಾಸಂಸ್ಥೆಗೆ ಬುಧವಾರ ಮೇಘಾಲಯ ಆಡಳಿತ ಇಲಾಖೆಯ ಆಯುಕ್ತ ಸಿರಿಲ್ ಡರ್ಲಾಂಗ್ ಅವರ ತಂಡದೊಂದಿಗೆ ಭೇಟಿ ನೀಡಿ, ತಾಲ್ಲೂಕು ವೈದ್ಯಾಧಿಕಾರಿ ಡಾ.ಪಿ. ವೀರಭದ್ರಪ್ಪ, ಸ್ಥಳೀಯ ವೈದ್ಯಾಧಿಕಾರಿ ಡಾ.ಸಚಿನ್ ಡಿ.ಗೌಡ ಅವರಿಂದ ಚಿಕಿತ್ಸೆಯ ಬಗ್ಗೆ ಮಾಹಿತಿ ಪಡೆದರು. ನಂತರ ಸಿಪಿಐ ಬಿ.ಜಿ.ಮಹೇಶ್ ಅವರಿಂದ ಪ್ರಕರಣದ ತನಿಖೆ ಬಗ್ಗೆ ವಿಚಾರಿಸಿದರು.

‘ಮಕ್ಕಳಿಗೆ ಹೊರಗಿನ ಊಟ ನೀಡುವುದು ಸರಿಯಲ್ಲ. ವಿದ್ಯಾಸಂಸ್ಥೆಯ ಬೇಜವಾಬ್ದಾರಿತನದಿಂದ ಘಟನೆ ನಡೆದಿದೆ. ಸೇವೆಗೆ ಮೊದಲು ನಿಯಮಗಳನ್ನು ಪಾಲಿಸಬೇಕು. ಇಲ್ಲದಿದ್ದರೆ ಸರ್ಕಾರಿ ವಿದ್ಯಾರ್ಥಿ ನಿಲಯಕ್ಕೆ ಕಳುಹಿಸಬೇಕು. ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸುವ ಅಧಿಕಾರ ಯಾರಿಗೂ ಇಲ್ಲ’ ಎಂದರು.

ಪರೀಕ್ಷೆ ಬರೆಯಲು ವ್ಯವಸ್ಥೆ: ‘ಚಿಕಿತ್ಸೆ ಪಡೆಯುತ್ತಿರುವ ಮೇಘಾಲಯದ 22 ಹಾಗೂ ಸ್ಥಳೀಯ 14 ವಿದ್ಯಾರ್ಥಿಗಳು ಗುಣಮುಖರಾದ ನಂತರ ಶೈಕ್ಷಣಿಕ ವರ್ಷದ ಪರೀಕ್ಷೆ ಬರೆಯಲು ವ್ಯವಸ್ಥೆ ಮಾಡಬೇಕು’ ಎಂದು ಜಿಲ್ಲಾಧಿಕಾರಿ ಕುಮಾರ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

‘ಅಸ್ವಸ್ಥಗೊಂಡವರ ಪೈಕಿ ಎಸ್.ಎಸ್.ಎಲ್.ಸಿಯ 11 ವಿದ್ಯಾರ್ಥಿಗಳಿದ್ದು, ವೈದ್ಯರ ಸಲಹೆ ಹಾಗೂ ಪೋಷಕರ ಒಪ್ಪಿಗೆ ಪಡೆದು ಪರೀಕ್ಷೆ-1 ಬರೆಯಲಿ, ಇಲ್ಲವಾದಲ್ಲಿ ಪರೀಕ್ಷೆ-2 ಬರೆಯಲು ವ್ಯವಸ್ಥೆ ಮಾಡಬೇಕು. ಸರ್ಕಾರದ ವಸತಿ ಶಾಲೆಗಳಲ್ಲಿ ಹೊರಗಿನ ವ್ಯಕ್ತಿ ಹಾಗೂ ಸಂಸ್ಥೆಯಿಂದ ಆಹಾರ ಪಡೆಯುವಂತಿಲ್ಲ. ದೂರು ಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದ್ದಾರೆ.

ಕುಷ್ಟಗಿ ಪುರಸಭೆ ಮುಖ್ಯಾಧಿಕಾರಿಗೆ ಕಡ್ಡಾಯ ನಿವೃತ್ತಿ ಶಿಕ್ಷೆ

ಕುಷ್ಟಗಿ (ಕೊಪ್ಪಳ ಜಿಲ್ಲೆ): ಕುಷ್ಟಗಿ ಪುರಸಭೆ ಪ್ರಭಾರ ಮುಖ್ಯಾಧಿಕಾರಿ ಡಿ.ಎನ್.ಧರಣೇಂದ್ರಕುಮಾರ ಅವರು ಹಾವೇರಿ ಜಿಲ್ಲೆ ಗುತ್ತಲ ಪಟ್ಟಣ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುವಾಗ ಹಣ ದುರ್ಬಳಕೆ ಹಾಗೂ ಕರ್ತವ್ಯಲೋಪ ಎಸಗಿದ ಕಾರಣಕ್ಕಾಗಿ ಅವರನ್ನು ನೌಕರಿಯಿಂದ ಕಡ್ಡಾಯ ನಿವೃತ್ತಿಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ.

ಧರಣೇಂದ್ರ ಕುಮಾರ

ಅವರ ಸೇವಾ ಅವಧಿ ಇನ್ನೂ ಹತ್ತು ವರ್ಷ ಇತ್ತು. ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದ್ದಾರೆ. ಕಾರಟಗಿ ಪುರಸಭೆ ಪ್ರಭಾರ ಮುಖ್ಯಾಧಿಕಾರಿ ಸುರೇಶ ಅವರನ್ನು ಕುಷ್ಟಗಿಗೆ ಪ್ರಭಾರ ಮುಖ್ಯಾಧಿಕಾರಿ ಹುದ್ದೆಗೆ ಹೆಚ್ಚುವರಿಯಾಗಿ ನೇಮಿಸಲಾಗಿದೆ.

ಸ್ಪರ್ಧಾತ್ಮಕ ಪರೀಕ್ಷೆ: ಕರ್ನಾಟಕದ ಮರಾಠಿಗರಿಗೆ ಅವಕಾಶ

‘ಮಹಾ’ ಉದ್ಯೋಗ ಭರವಸೆ

● ಸಂತೋಷ ಈ. ಚಿನಗುಡಿ

ಬೆಳಗಾವಿ: ‘ಗಡಿ ವಿವಾದಕ್ಕೆ ಒಳಪಟ್ಟ, ಕರ್ನಾಟಕದೊಳಗಿನ 865 ಹಳ್ಳಿ–ಪಟ್ಟಣಗಳ ಯುವಜನರಿಗೂ ಮಹಾರಾಷ್ಟ್ರದಲ್ಲಿ ಉದ್ಯೋಗ ಅವಕಾಶ ನೀಡಬೇಕು’ ಎಂಬ ನಿರ್ಣಯವನ್ನು, ಅಲ್ಲಿನ ವಿಧಾನ ಪರಿಷತ್ ಕಲಾಪದಲ್ಲಿ ಅಂಗೀಕರಿಸಲಾಗಿದೆ.

ಈ ಮೂಲಕ ಮಹಾರಾಷ್ಟ್ರ ಸರ್ಕಾರ ಇಲ್ಲಿನ ಮರಾಠಿಗರ ಮನಸ್ಸನ್ನು ತನ್ನೆಡೆಗೆ ಸೆಳೆಯುವ ಮತ್ತು ಸುಪ್ರೀಂ ಕೋರ್ಟ್‌ಗೆ ಬೇಕಾದ ದಾಖಲೆ ಸೃಷ್ಟಿಸಿಕೊಳ್ಳುವ ಹೆಜ್ಜೆ ಇಟ್ಟಿರುವುದಾಗಿ ವಿಶ್ಲೇಷಿಸಲಾಗುತ್ತಿದೆ. ಮುಂಬೈನಲ್ಲಿ ಸೋಮವಾರ ನಡೆದ ಪರಿಷತ್ ಕಲಾಪದಲ್ಲಿ ಅಲ್ಲಿನ ಕಂದಾಯ ಸಚಿವ ಚಂದ್ರಶೇಖರ್ ಭವನಕುಲೆ ‘ಗಡಿ ವಿವಾದ’ ಹಾಗೂ ಅಲ್ಲಿನ ಸಮಸ್ಯೆಗಳ ಕುರಿತು ಭಾಷಣ ಮಾಡಿದ್ದಾರೆ.

ಕರ್ನಾಟಕದ ಗಡಿಯೊಳಗೆ ಇರುವ ಐದು ಜಿಲ್ಲೆಗಳ 865 ಹಳ್ಳಿ–ಪಟ್ಟಣಗಳಲ್ಲಿ ಮರಾಠಿಗರು ಇದ್ದಾರೆ. ಅವರಿಗೆ ಮಹಾರಾಷ್ಟ್ರ ಸರ್ಕಾರದ ಉದ್ಯೋಗ ಪಡೆಯಲು ಅವಕಾಶ ನೀಡಬೇಕಿದೆ. ಇದಕ್ಕಾಗಿ ಈ ವರ್ಷದಿಂದ ಕೆಲವು ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಅರ್ಜಿ ಸಲ್ಲಿಸಲು ಅವಕಾಶ ಕೊಡಲಾಗುವುದು ಎಂದು ಹೇಳಿದ್ದಾರೆ.

ಮುಖ್ಯವಾಗಿ, ಮಹಾರಾಷ್ಟ್ರದ ಗಡಿಯ ಗ್ರಾಮ ಪಂಚಾಯಿತಿಗಳಲ್ಲಿ ‘ತಲಾಠಿ’ ಹುದ್ದೆ ನೇಮಕಾತಿ ನಡೆದಿದೆ. ಇದಕ್ಕೆ ಕರ್ನಾಟಕದೊಳಗಿನ ಮರಾಠಿಗರನ್ನು ಪರಿಗಣಿಸಲಾಗುವುದು. 2023ರಲ್ಲಿ ಕೂಡ 391 ಯುವಜನರು ತಲಾಠಿ ಹುದ್ದೆಗೆ ಅರ್ಜಿ ಸಲ್ಲಿಸಿದ್ದರು. ನಿಯಮಗಳು ಅಡ್ಡಿಬಂದ ಕಾರಣ ಉದ್ಯೋಗ ವಂಚಿತರಾಗಿದ್ದಾರೆ. ಈಗ ಅವರನ್ನೂ ಮಹಾರಾಷ್ಟ್ರದ ಭಾಗ ಮಾಡಿಕೊಳ್ಳುವ ಹೆಜ್ಜೆ ಇಡಬೇಕಾಗಿದೆ ಎಂದು ಹೇಳಿದ್ದಾಗಿ ಮೂಲಗಳು ತಿಳಿಸಿವೆ.

ಮಹಾರಾಷ್ಟ್ರ ವಿಧಾನ ಪರಿಷತ್ ಸದಸ್ಯ ನಿರಂಜನ್ ಧವಕರೆ ಅಧಿವೇಶನದಲ್ಲಿ ಈ ಪ್ರಶ್ನೆ ಎತ್ತಿದ್ದರು. ಗಡಿಯಲ್ಲಿನ ಆಕಾಂಕ್ಷಿಗಳಿಗಾಗಿ ಪರೀಕ್ಷಾ ಕೇಂದ್ರ, ಕೌಶಲ ಅಭಿವೃದ್ಧಿ ಕೇಂದ್ರ ತೆರೆಯುವ ಕುರಿತೂ ಪ್ರಶ್ನೆ ಮಾಡಿದ್ದರು. ಇದಕ್ಕೆ ಸಚಿವ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಏನೇನು ಸೌಲಭ್ಯ?: ವಿವಾದಕ್ಕೆ ಒಳಪಟ್ಟ ಪ್ರದೇಶದ ಜನರಿಗಾಗಿ ಕಳೆದ ವರ್ಷ ಮಹಾರಾಷ್ಟ್ರ ಸರ್ಕಾರ ₹5 ಲಕ್ಷ ವೆಚ್ಚದ ‘ಜನಾರೋಗ್ಯ ವಿಮೆ’ ಜಾರಿಗೊಳಿಸಿದೆ. ಈ ವಿಮೆಗೆ ‘ನಾನು ಮರಾಠಿಗ’ ಎಂದು ಮುಚ್ಚಳಿಕೆ ಬರೆದು ಕೊಡುವುದನ್ನು ಕಡ್ಡಾಯ ಮಾಡಿದೆ. ಜನ ಮುಚ್ಚಳಿಕೆ ಬರೆದುಕೊಟ್ಟು ಆರೋಗ್ಯ ವಿಮೆ ಪಡೆಯುತ್ತಲೇ ಇದ್ದಾರೆ.

ಶಿಕ್ಷಣದಲ್ಲಿ ಮೀಸಲಾತಿ, ಪದವಿ, ವಿಶ್ವವಿದ್ಯಾಲಯಕ್ಕೆ ಬರುವ ವಿದ್ಯಾರ್ಥಿಗಳಿಗೆ ಉಚಿತ ಹಾಸ್ಟೆಲ್ ಸೌಲಭ್ಯವನ್ನೂ ಈ ಹಿಂದೆಯೇ ಜಾರಿಗೊಳಿಸಲಾಗಿದೆ.

‘ಈಗ ಮತ್ತೊಂದು ಹೆಜ್ಜೆ ಮುಂದೆ ಬಂದು ಉದ್ಯೋಗ ನೇಮಕಾತಿಗೆ ಕೈ ಹಾಕಲಾಗಿದೆ. ಶಿಕ್ಷಣ, ಉದ್ಯೋಗ, ವಸತಿ, ಆರೋಗ್ಯ ಸೇರಿದಂತೆ ಈ ನಾಲ್ಕೂ ಮೂಲ ಸೌಕರ್ಯಗಳನ್ನು ಮಹಾರಾಷ್ಟ್ರ ಸರ್ಕಾರವೇ ಪೂರೈಕೆ ಮಾಡುತ್ತಿದೆ ಎಂಬ ದಾಖಲೆ ಸೃಷ್ಟಿಸುವುದು ಇದರ ಹಿಂದಿನ ಕುತಂತ್ರ’ ಎಂಬುದು ಕನ್ನಡ ಹೋರಾಟಗಾರರ ಅನಿಸಿಕೆ.

ಬಾಯಿ ಮುಚ್ಚಿಕೊಂಡು ಕುಳಿತ ‘ಅಧ್ಯಕ್ಷರು’

‘ಮಹಾರಾಷ್ಟ್ರ ಸರ್ಕಾರ ವರ್ಷದಿಂದ ವರ್ಷಕ್ಕೆ ದಾಖಲೆಗಳನ್ನು ಸೃಷ್ಟಿಸುತ್ತಿದೆ. ಕಣ್ಣಿಗೆ ಕಾಣದಂತೆ ಆಕ್ರಮಣ ನಡೆಸಿದೆ. ಆದರೆ, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಗಡಿ ಸಂರಕ್ಷಣಾ ಆಯೋಗ, ಕನ್ನಡ ಅಭಿವೃದ್ಧಿ ಪ್ರಾಧಿಕಾರಗಳು ಇದ್ದರೂ ಇಲ್ಲದಂತಾಗಿದೆ. ಇವುಗಳ ಅಧ್ಯಕ್ಷರು ಯಾವುದನ್ನೂ ಗಂಭಿರವಾಗಿ ಪರಿಗಣಿಸುತ್ತಿಲ್ಲ. ಮಹಾರಾಷ್ಟ್ರದ ನಡೆಯನ್ನು ಪ್ರಶ್ನಿಸುವವರೇ ಇಲ್ಲವಾಗಿದೆ’ ಎಂದು ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಪ್ರತಿಕ್ರಿಯಿಸಿದ್ದಾರೆ.

‘ಮಹಾರಾಷ್ಟ್ರದ ನಾಗರಿಕರಿಗೆ ಸಿಗುವ ಎಲ್ಲ ಸೌಕರ್ಯಗಳನ್ನೂ ಕರ್ನಾಟಕದ ಗಡಿಯೊಳಗಿನ ಮರಾಠಿಗರಿಗೂ ನೀಡಲಾಗುತ್ತಿದೆ. ಸುಪ್ರೀಂಕೋರ್ಟ್ ಇದನ್ನೇ ದಾಖಲೆ ಎಂದು ಪರಿಗಣಿಸಿದರೆ, ಅಪಾಯ ತಪ್ಪಿದ್ದಲ್ಲ’ ಎಂದೂ ಹೇಳಿದರು.

‘ಬೆಳಗಾವಿಯಲ್ಲಿ ಮಹಾರಾಷ್ಟ್ರ ನಾಡಗೀತೆ ಹಾಡಿದ್ದಕ್ಕೆ ಎಫ್‌ಐಆರ್ ದಾಖಲಿಸಲಾಗಿದೆ. ಈ ವಿಚಾರವನ್ನೂ ಎಂಇಎಸ್ ನಾಯಕರು ಮಹಾರಾಷ್ಟ್ರ ಸರ್ಕಾರದ ಗಮನಕ್ಕೆ ತಂದಿದ್ದಾರೆ, ನೈತಿಕ ಬೆಂಬಲ ಕೋರಿದ್ದಾರೆ’ ಎಂದರು.

ಸುನಿತಾ, ವಿಲ್ಮೋರ್‌ಗೆ ಡಾಲ್ಫಿನ್‌ಗಳ ಅಚ್ಚರಿಯ ಸ್ವಾಗತ...

ಕೇಪ್ ಕನಾವರಲ್/ನ್ಯೂಯಾರ್ಕ್ (ಎಪಿ, ನ್ಯೂಯಾರ್ಕ್ ಟೈಮ್ಸ್): ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ಐಎಸ್‌ಎಸ್) ಎಂಟು ದಿನ ಇದ್ದು ವಾಪಸ್ ಬರಬೇಕಿದ್ದ ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರ ಯಾನವು, ಅನಿರೀಕ್ಷಿತ ತಿರುವುಗಳನ್ನು ಪಡೆಯಿತು. ಅವರ ಯಾನಕ್ಕೆ ಸಂಬಂಧಿಸಿದ ಬೆಳವಣಿಗೆ ಗಳನ್ನು ಇಡೀ ಜಗತ್ತು ತುದಿಗಾಲ ಮೇಲೆ ನಿಂತು ಗಮನಿಸುವಂತಹ ಪರಿಸ್ಥಿತಿ ಸೃಷ್ಟಿಯಾಗಿತ್ತು.

ಈ ಯಾನವು ಸುನಿತಾ ಮತ್ತು ವಿಲ್ಮೋರ್ ಅವರ ಪಾಲಿಗೆ ಜೀವಮಾನದ ಪಯಣದಂತೆ ಆಯಿತು. ಜೂನ್‌ನಿಂದಲೂ ತಮ್ಮ ನಿವಾಸವಾಗಿದ್ದ ಐಎಸ್‌ಎಸ್‌ಗೆ ಸುನಿತಾ ಮತ್ತು ವಿಲ್ಮೋರ್ ವಿದಾಯ ಹೇಳಿ ಈಗ ಭೂಮಿಗೆ ಮರಳಿದ್ದಾರೆ.

ಮಂಗಳವಾರ ರಾತ್ರಿ ಐಎಸ್‌ಎಸ್‌ನಿಂದ ‘ಸ್ಪೇಸ್‌ಎಕ್ಸ್ ಡ್ರ್ಯಾಗನ್’ ಪಯಣ ಆರಂಭಿಸಿತ್ತು. ತಾಸಿಗೆ ಸುಮಾರು 27 ಸಾವಿರ ಕಿ.ಮೀ. ವೇಗದಲ್ಲಿ ಕೋಶವು ಭೂಮಿಯತ್ತ ನುಗ್ಗಿತ್ತು. ಬಳಿಕ ನಾಲ್ಕು ಪ್ಯಾರಚೂಟ್‌ಗಳನ್ನು ಬಳಸಿ ಕೋಶದ ವೇಗವನ್ನು ನಿಯಂತ್ರಿಸ ಲಾಯಿತು. ಸಾಗರದ ನೀರಿನ ಮೇಲೆ ಬಂದಿಳಿದ ಕೋಶವನ್ನು ಡಾಲ್ಫಿನ್‌ಗಳು ಕೌತುಕದಿಂದ ಸುತ್ತುವರಿದವು. ಗಗನಯಾನಿ ಗಳನ್ನು ಡಾಲ್ಫಿನ್‌ಗಳು ಭೂಮಿಗೆ ಸ್ವಾಗತಿಸಿದಂತೆ ಇದು ಭಾಸವಾಯಿತು.

ರಕ್ಷಣಾ ತಂಡಗಳ ಸದಸ್ಯರು ಕೋಶವನ್ನು ಪರಿಶೀಲನೆಗೆ ಒಳಪಡಿಸಿದರು. ಕೋಶವನ್ನು ಹಡಗಿಗೆ ವರ್ಗಾಯಿಸಿದ ಬಳಿಕ ಬಾಗಿಲುಗಳನ್ನು ತೆರೆಯಲಾಯಿತು. ಗಗನಯಾನಿಗಳನ್ನು ಕೋಶದಿಂದ ಎತ್ತಿ ಹೊರಗೆ ತರಲಾಯಿತು. ತಿಂಗಳುಗಳಿಂದ ಭಾರರಹಿತ ಸ್ಥಿತಿಯಲ್ಲಿದ್ದ ಅವರ ದೇಹಗಳು, ಭೂಮಿಯ ಗುರುತ್ವಾಕರ್ಷಣ ಬಲಕ್ಕೆ ಹೊಂದಿಕೊಳ್ಳಲು ಶ್ರಮಪಡುತ್ತಿದ್ದವು.

ಕೋಶದ ಕಮಾಂಡರ್ ನಿಕ್ ಹೇಗ್ ಮತ್ತು ರಷ್ಯಾದ ಗಗನಯಾತ್ರಿ ಅಲೆಕ್ಸಾಂಡರ್ ಗೊರ್ಬುನೊವ್ ಅವರೂ ಸುನಿತಾ ಮತ್ತು ಬುಚ್ ಜೊತೆಯಲ್ಲಿದ್ದರು.

ಬಾಹ್ಯಾಕಾಶದಲ್ಲಿ ಸಿಲುಕಿಕೊಂಡಿ ದ್ದರು ಎಂಬುದನ್ನು ಸುನಿತಾ ಮತ್ತು ಬುಚ್ ಅವರು ನಿರಾಕರಿಸಿದ್ದಾರೆ. ‘ಅದು ನಮ್ಮ ಕೆಲಸವಾಗಿತ್ತು. ಅದನ್ನು ಸಂಭ್ರಮದಿಂದಲೇ ಮಾಡಿದ್ದೇವೆ. ಕೆಲವೊಮ್ಮೆ ಪ್ರಯಾಸವಾಗಿದ್ದೂ ಇದೆ, ಅದರಲ್ಲಿ ಅನುಮಾನ ಇಲ್ಲ’ ಎಂದು ದಿ ನ್ಯೂಯಾರ್ಕ್ ಟೈಮ್ಸ್‌ಗೆ ಕಳೆದ ವಾರ ಐಎಸ್‌ಎಸ್‌ನಿಂದಲೇ ನೀಡಿದ್ದ ಸಂದರ್ಶನ ದಲ್ಲಿ ಬುಚ್ ಹೇಳಿದ್ದರು. ‘ನೀವು ಅಲ್ಲಿ ಸಿಲುಕಿಕೊಂಡಿದ್ದೀರಿ, ಅನಿವಾರ್ಯವಾಗಿ ಅಲ್ಲಿ ಉಳಿಯಬೇಕಾಗಿದೆ’ ಮುಂತಾದ ಎಲ್ಲ ಪ್ರಶ್ನೆಗಳಿಗೂ ಅವರು ‘ಇಲ್ಲವೇ ಇಲ್ಲ’ ಎಂಬ ಉತ್ತರವನ್ನೇ ಕೊಟ್ಟಿದ್ದರು.

ಸುನಿತಾ ಮತ್ತು ವಿಲ್ಮೋರ್ ಅವರು ಬಾಹ್ಯಾಕಾಶ ನಿಲ್ದಾಣದಲ್ಲಿ ಒಟ್ಟು 286 ದಿನ ಕಳೆದಿದ್ದಾರೆ. ಈ ಅವಧಿಯಲ್ಲಿ ಅವರು ಭೂಮಿಯನ್ನು 4,576 ಬಾರಿ ಸುತ್ತುಹಾಕಿದ್ದಾರೆ.

ಬಾಹ್ಯಾಕಾಶ ನಿಲ್ದಾಣಕ್ಕೆ ಅತಿಥಿಗಳಾಗಿ ತೆರಳಿದ್ದ ಈ ಇಬ್ಬರು ಬಹಳ ಬೇಗ ಅಲ್ಲಿನ ಸಿಬ್ಬಂದಿಯಂತೆ ಬದಲಾದರು. ಅಲ್ಲಿ ಪ್ರಯೋಗಗಳನ್ನು ನಡೆಸಿದರು, ಅಲ್ಲಿನ ಉಪಕರಣಗಳನ್ನು ಸರಿಪಡಿಸುವ ಕೆಲಸ ಮಾಡಿದರು, ಇಬ್ಬರೂ ಒಟ್ಟಾಗಿ ಬಾಹ್ಯಾಕಾಶ ನಡಿಗೆಯಲ್ಲಿ ಭಾಗಿಯಾದರು.

ಮಹಿಳಾ ಗಗನಯಾನಿಗಳ ಪೈಕಿ ಅತಿ ಹೆಚ್ಚಿನ ಅವಧಿಗೆ ಬಾಹ್ಯಾಕಾಶ ನಡಿಗೆಯಲ್ಲಿ ಭಾಗಿಯಾದ ಖ್ಯಾತಿ ಈಗ ಸುನಿತಾ ಅವರದ್ದಾಗಿದೆ. ಸುನಿತಾ ಅವರು ಅಲ್ಲಿಗೆ ತೆರಳಿದ ನಂತರ ನಿಲ್ದಾಣದ ಕಮಾಂಡರ್ ಆಗಿಯೂ ಕೆಲಸ ನಿರ್ವಹಿಸಿದರು.

ಸುನಿತಾ ಮತ್ತು ವಿಲ್ಮೋರ್ ಅವರ ಸುರಕ್ಷತೆಗಾಗಿ ಅಮೆರಿಕದ 21 ಹಿಂದೂ ದೇವಸ್ಥಾನಗಳಲ್ಲಿ ಪೂಜಾ ಕಾರ್ಯಕ್ರಮ ನಡೆಸಲಾಗಿತ್ತು.

ಗಗನಯಾನಿ ಸುನಿತಾ ವಿಲಿಯಮ್ಸ್ ಅವರು ಸ್ಪೇಸ್‌ಎಕ್ಸ್ ಬಾಹ್ಯಾಕಾಶ ಕೋಶದಿಂದ ಹೊರಬಂದ ಕ್ಷಣ ಪಿಟಿಐ ಚಿತ್ರ

ಹೈದರಾಬಾದ್‌ನ ಮೇಲ್ಸೇತುವೆಯ ಕಂಬದ ಮೇಲೆ ಸುನಿತಾ ವಿಲಿಯಮ್ಸ್ ಅವರ ಚಿತ್ರ ಬರೆಯಲಾಗಿದೆ ಎಎಫ್‌ಪಿ ಚಿತ್ರ

ಸುನಿತಾ ವಿಲಿಯಮ್ಸ್ ಅವರಿಗೆ ಭಾರತ ರತ್ನ ಪುರಸ್ಕಾರ ನೀಡಿ ಗೌರವಿಸಬೇಕು

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ನಿಮ್ಮ ಪಯಣವು ಸಂಯಮ, ಧೈರ್ಯ ಮತ್ತು ವೈಜ್ಞಾನಿಕ ಅನ್ವೇಷಣೆಗೆ ಬದ್ಧವಾದುದಾಗಿತ್ತು. ನಿಮ್ಮ ಸಾಹಸವು ಮನುಷ್ಯ ಸಾಧನೆಗೆ ಎಲ್ಲೆಯೇ ಇಲ್ಲ ಎಂಬುದರ ದ್ಯೋತಕವಾಗಿದೆ. ಬಾಹ್ಯಾಕಾಶ ಶೋಧದ ಕನಸು ಕಾಣುತ್ತಿರುವ ಅಸಂಖ್ಯ ಭಾರತೀಯರೂ ಸೇರಿ ಜಗತ್ತಿನ ಕೋಟ್ಯಂತರ ಜನರಿಗೆ ನೀವು ಸ್ಫೂರ್ತಿಯಾಗಿದ್ದೀರಿ

ರಾಹುಲ್ ಗಾಂಧಿ, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ

ಲಕ್ಷಾಂತರ ಮಂದಿಗೆ ಸ್ಫೂರ್ತಿ: ಮೋದಿ ಶ್ಲಾಘನೆ

ನವದೆಹಲಿ (ಪಿಟಿಐ): ಗಗನಯಾನಿಗಳಾದ ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಭೂಮಿಗೆ ಸ್ವಾಗತಿಸಿದ್ದಾರೆ. ಸುನಿತಾ ಅವರು ಮುಂದಿನ ಹಲವು ತಲೆಮಾರುಗಳಿಗೆ ಸ್ಫೂರ್ತಿಯಾಗಿರುತ್ತಾರೆ ಎಂದು ಶ್ಲಾಘಿಸಿದ್ದಾರೆ. ‘ಅರಿಯದ ಆಕಾಶದ ಎದುರು ಗಗನಯಾನಿಗಳು ತೋರಿದ ಅಚಲವಾದ ಬದ್ಧತೆಯು ಲಕ್ಷಾಂತರ ಮಂದಿಗೆ ಎಂದೆಂದಿಗೂ ಸ್ಫೂರ್ತಿ ನೀಡುತ್ತದೆ. ಬಾಹ್ಯಾಕಾಶ ಸಂಶೋಧನೆ ಅಂದರೆ ಮಾನವನ ಸಾಮರ್ಥ್ಯದ ಮಿತಿಯನ್ನು ಹಿಗ್ಗಿಸುವುದು, ಎದೆಗಾರಿಕೆಯಿಂದ ಕನಸುಗಳನ್ನು ಕಾಣುವುದು, ಅಂತಹ ಕನಸುಗಳನ್ನು ನನಸು ಮಾಡಿಕೊಳ್ಳುವ ಧೈರ್ಯ ತೋರುವುದು’ ಎಂದು ಪ್ರಧಾನಿ ಹೇಳಿದ್ದಾರೆ.

‘ಸುನಿತಾ ಅವರು ತಮ್ಮ ವೃತ್ತಿಯುದ್ದಕ್ಕೂ ಈ ಆಶಯಕ್ಕೆ ಉದಾಹರಣೆಯಾಗಿ ನಿಂತಿದ್ದಾರೆ. ಗಗನಯಾನಿಗಳು ಸುರಕ್ಷಿತವಾಗಿ ಮರಳಲು ಶ್ರಮಿಸಿದ ಎಲ್ಲರ ಬಗ್ಗೆ ನಮಗೆ ಹೆಮ್ಮೆ ಇದೆ’ ಎಂದು ಕೂಡ ಪ್ರಧಾನಿ ಹೇಳಿದ್ದಾರೆ.

ಸುನಿತಾ ಅವರು ಬಾಹ್ಯಾಕಾಶ ನಿಲ್ದಾಣದಲ್ಲಿ ಅಂದುಕೊಂಡಿದ್ದಕ್ಕಿಂತ ಹೆಚ್ಚಿನ ಅವಧಿಗೆ ವಾಸ ಮಾಡಿದ್ದನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು ಗಮನಾರ್ಹವಾದ ಸಾಧನೆ ಎಂದು ಬಣ್ಣಿಸಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ ಸಿಂಗ್, ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸುನಿತಾ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ. ‘ಸುನಿತಾ ಅವರು ಧೈರ್ಯದ ಮೂರ್ತ ರೂಪ ಇದ್ದಂತೆ. ಅವರು ಮತ್ತೆ ನಮ್ಮ ನಡುವೆ ಬಂದಿರುವುದು ಒಳ್ಳೆಯ ಸಂಗತಿ. ಸ್ವಾಗತಂ ಸುನಿತಾ’ ಎಂದು ಮಹೀಂದ್ರ ಸಮೂಹದ ಅಧ್ಯಕ್ಷ ಆನಂದ ಮಹೀಂದ್ರ ಹೇಳಿದ್ದಾರೆ.

ಪೂರ್ವಜರ ಊರಿನಲ್ಲಿ ಮನೆಮಾಡಿದ ಸಂಭ್ರಮ

ಮೆಹ್ಸಾನಾ (ಪಿಟಿಐ): ಗುಜರಾತ್‌ನ ಮೆಹ್ಸಾಣಾ ಜಿಲ್ಲೆಯ ಝುಲಾಸನ್ ಎಂಬ ಗ್ರಾಮ ಸುನಿತಾ ವಿಲಿಯಮ್ಸ್ ಅವರ ಪೂರ್ವಜರ ಊರು. ಸುನಿತಾ ಅವರು ಸುರಕ್ಷಿತವಾಗಿ ಭೂಮಿಗೆ ಮರಳಿದ ಸುದ್ದಿ ತಿಳಿದ ಊರಿನ ಜನ ಪಟಾಕಿಗಳನ್ನು ಸಿಡಿಸಿ, ಸಿಹಿ ಹಂಚಿ, ನರ್ತಿಸಿ, ಊರ ದೇವರಿಗೆ ಪೂಜೆ ಸಲ್ಲಿಸಿ ಸಂಭ್ರಮಿಸಿದರು.

‘ಹರ ಹರ ಮಹಾದೇವ’ ಎಂದು ಜನ ಖುಷಿಪಟ್ಟರು.

ಸುನಿತಾ ಅವರು ಸುರಕ್ಷಿತವಾಗಿ ವಾಪಸ್ಸಾಗಲಿ ಎಂದು ಪ್ರಾರ್ಥಿಸಿ ಊರಿನ ಜನ ಯಜ್ಞ ನಡೆಸಿದ್ದರು. ಸುನಿತಾ ಅವರು ಶೀಘ್ರವೇ ಊರಿಗೆ ಭೇಟಿ ನೀಡಲಿ, ಶಾಲೆಯ ಮಕ್ಕಳಿಗೆ ಸ್ಫೂರ್ತಿಯಾಗಲಿ ಎಂದು ಆಶಿಸಿದರು.

ಊರಿನ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಕೂಡ ಈ ಸಂದರ್ಭದಲ್ಲಿ ಸಂಭ್ರಮದಿಂದ ಗರ್ಬಾ ನೃತ್ಯ ಮಾಡಿದರು, ಶಾಲೆಯಿಂದ ಊರಿನ ದೇವಿಯ ದೇವಸ್ಥಾನದವರೆಗೆ ಮೆರವಣಿಗೆ ನಡೆಸಿದರು. ಸುನಿತಾ ಅವರ ತಂದೆ ದೀಪಕ್ ಪಾಂಡ್ಯ ಅವರು ಝುಲಾಸನ್ ಗ್ರಾಮದವರು.

ಟಿ.ವಿ. ಪರದೆ ಮೇಲೆ ಹೂವಿನ ಮಳೆ: ಸುನಿತಾ ಅವರು ಭೂಮಿಗೆ ಸುರಕ್ಷಿತವಾಗಿ ಮರಳಿದ್ದಾರೆ ಎಂಬ ಸುದ್ದಿಯು ವಾಹಿನಿಗಳಲ್ಲಿ ಬಿತ್ತರಗೊಂಡಿದ್ದೇ ತಡ, ಟಿ.ವಿ. ಮುಂದೆ ನಿಂತಿದ್ದ 84 ವರ್ಷ ವಯಸ್ಸಿನ ದಿನೇಶ್ ರಾವಲ್ ಅವರು ಚಪ್ಪಾಳೆ ತಟ್ಟಲು ಆರಂಭಿಸಿದರು.

ನಂತರ ಕೆಲವೇ ಕ್ಷಣಗಳಲ್ಲಿ ಅವರು ಟಿ.ವಿ. ಪರದೆಯ ಮೇಲೆ ಗುಲಾಬಿಯ ಎಸಳುಗಳ ಮಳೆ ಸುರಿಸಿದರು. ಸಂತಸ ಮತ್ತು ಸಮಾಧಾನ ವ್ಯಕ್ತಪಡಿಸಿದರು. ದಿನೇಶ್ ಅವರು ಸುನಿತಾ ಅವರ ಹತ್ತಿರದ ಸಂಬಂಧಿ.

ಸುನಿತಾ ಅವರು ಸುರಕ್ಷಿತವಾಗಿ ಮರಳಿದ್ದಕ್ಕೆ ದಿನೇಶ್ ಕುಟುಂಬದವರು ಸಿಹಿ ಹಂಚಿದರು, ದೇವರಿಗೆ ಧನ್ಯವಾದ ಅರ್ಪಿಸಿದರು. ಸುನಿತಾ ಅವರು ಸುರಕ್ಷಿತವಾಗಿ ಮರಳುವಂತೆ ಆಗಲಿ ಎಂದು ಪ್ರಾರ್ಥಿಸಿ, ಊರಿನ ಜನ ದೇವಸ್ಥಾನದಲ್ಲಿ ಅಖಂಡ ಜ್ಯೋತಿಯನ್ನು ಹಚ್ಚಿದ್ದರು. ದೇವಸ್ಥಾನದಲ್ಲಿ ದೇವಿಯ ಮೂರ್ತಿಯ ಬದಿಯಲ್ಲಿ ಸುನಿತಾ ಅವರ ಭಾವಚಿತ್ರವನ್ನೂ ಇರಿಸಿದ್ದರು.

‘ನಮಗೆಷ್ಟು ಸಂತಸ ಆಗಿದೆ ಎಂಬುದನ್ನು ಹೇಳಲು ಸಾಧ್ಯವಿಲ್ಲ. ಇಡೀ ಊರು ಸುನಿತಾ ಅವರ ಸುರಕ್ಷತೆಗಾಗಿ ಪೂಜೆ ಸಲ್ಲಿಸಿದೆ’ ಎಂದು ದೇವಸ್ಥಾನ ಅರ್ಚಕ ದಿನೇಶ್ ಪಾಂಡ್ಯ ತಿಳಿಸಿದ್ದಾರೆ.

ಸುನಿತಾ ವಿಲಿಯಮ್ಸ್ ಅವರು ಸುರಕ್ಷಿತವಾಗಿ ಮರಳಿದ ಸುದ್ದಿ ತಿಳಿದ ಝುಲಾಸನ್ ಗ್ರಾಮದ ವಿದ್ಯಾರ್ಥಿಗಳು ಸಂಭ್ರಮಿಸಿದ ಕ್ಷಣ ಎಎಫ್‌ಪಿ ಚಿತ್ರ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,834
ಇಂದಿನ ಅಂತ್ಯ	22,907
▲	73
ದಿನದ ಗರಿಷ್ಠ	22,940

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹470
12 ಕ್ಕೆ	₹63
ಮೈಸೂರು	
100ಕ್ಕೆ	₹470

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹325-625
ದ್ವಿತಳಿ (ಬಿ.ವಿ)	₹352-768

ಎನ್.ಆರ್. ಪುರ ರಬ್ಬರ್

ಆರ್‌ಎಸ್‌ಎಸ್-4	₹195
ಆರ್‌ಎಸ್‌ಎಸ್-5	₹189
ಗುಡ್ ಲಾಟ್	₹183

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹26250
ಎಸಿ	₹15820
ಆರ್‌ಪಿ	₹22500
ಆರ್‌ಸಿ	₹12420

₹1,500 ಕೋಟಿ ನಿಗದಿ: ಸಣ್ಣ ವರ್ತಕರಿಗೆ ವರದಾನ

ಯುಪಿಐ ಬಳಕೆಗೆ ಉತ್ತೇಜನ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು, ದೇಶದಲ್ಲಿ ಸಣ್ಣ ಮೊತ್ತದ ಏಕೀಕೃತ ಪಾವತಿ ವ್ಯವಸ್ಥೆಯ (ಯುಪಿಐ) ಉತ್ತೇಜನಕ್ಕಾಗಿ ₹1,500 ಕೋಟಿ ನೀಡಲು ಒಪ್ಪಿಗೆ ನೀಡಿದೆ.

ಯುಪಿಐ ಮೂಲಕ ₹2 ಸಾವಿರಕ್ಕಿಂತ ಕಡಿಮೆ ಮೊತ್ತ ಪಾವತಿಸುವವರಿಗೆ ಉತ್ತೇಜನ ನೀಡುವುದು ಇದರ ಮೂಲ ಗುರಿಯಾಗಿದೆ. ಗ್ರಾಹಕರು ವರ್ತಕರಿಗೆ ಪಾವತಿಸುವ ಮೊತ್ತದಲ್ಲಿ ನೀಡಬೇಕಿರುವ ಮರ್ಚಂಟ್ ಡಿಸ್ಕೌಂಟ್ ರೇಟ್ (ಎಂಡಿಆರ್) ಶುಲ್ಕವನ್ನು ಸರ್ಕಾರವೇ ಭರಿಸಲಿದೆ.

ಗ್ರಾಹಕರಿಂದ ವರ್ತಕರಿಗೆ ಭೀಮ್-ಯುಪಿಐ ಮೂಲಕ ಪಾವತಿಸುವ ಕಡಿಮೆ ಮೊತ್ತಕ್ಕೆ ಈ ಸೌಲಭ್ಯ ದೊರೆಯಲಿದೆ. 2024-25ನೇ ಆರ್ಥಿಕ ವರ್ಷಕ್ಕೆ ಈ ಯೋಜನೆಯು ಅನ್ವಯವಾಗಲಿದೆ ಎಂದು ಸರ್ಕಾರ ತಿಳಿಸಿದೆ.

ಸಣ್ಣ ವರ್ತಕರಿಗೆ ಇದರಿಂದ ಹೆಚ್ಚಿನ ಅನುಕೂಲವಾಗಲಿದೆ. ₹2 ಸಾವಿರಕ್ಕಿಂತ ಕಡಿಮೆ ಮೊತ್ತದ ಪ್ರತಿ ಪಾವತಿಗೆ ಶೇ 0.15ರಷ್ಟು ಪ್ರೋತ್ಸಾಹಧನ ಲಭಿಸಲಿದೆ. ಬ್ಯಾಂಕ್‌ಗಳು ವರ್ತಕರ ಖಾತೆಗೆ ಈ ಪ್ರೋತ್ಸಾಹ ಧನವನ್ನು ನೇರವಾಗಿ ವರ್ಗಾವಣೆ ಮಾಡಲಿವೆ ಎಂದು ಹೇಳಿದೆ.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ಯುಪಿಐ ಮೂಲಕ ಸಣ್ಣ ಮೊತ್ತ ಪಾವತಿಗೆ ಉತ್ತೇಜನ ನೀಡುವುದು ಸರ್ಕಾರದ ಪ್ರಮುಖ ಉದ್ದೇಶವಾಗಿದೆ. 2025-26ನೇ ಆರ್ಥಿಕ ವರ್ಷಕ್ಕೂ ಸರ್ಕಾರವು ₹1,500 ಕೋಟಿ ಮೀಸಲಿಡಲಿದೆ ಎಂದು ತಿಳಿಸಿದರು.

ಉಕ್ಕು ಆಮದು ತಡೆ: ಸುಂಕಕ್ಕೆ ಶಿಫಾರಸು

ನವದೆಹಲಿ (ಪಿಟಿಐ): ದೇಶದಲ್ಲಿ ಉಕ್ಕು ಆಮದು ಪ್ರಮಾಣ ಹೆಚ್ಚುತ್ತಿದ್ದು, ದೇಶೀಯ ಉಕ್ಕು ಉದ್ಯಮ ವಲಯವು ಸಂಕಷ್ಟಕ್ಕೆ ಸಿಲುಕಿದೆ. ಹಾಗಾಗಿ, ಈ ವಲಯದ ರಕ್ಷಣೆ ದೃಷ್ಟಿಯಿಂದ ಉಕ್ಕು ಉತ್ಪನ್ನಗಳ ಮೇಲೆ 200 ದಿನದವರೆಗೆ ಶೇ 12ರಷ್ಟು ತಾತ್ಕಾಲಿಕ ಸುಂಕ ವಿಧಿಸಬೇಕು ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು, ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಕೇಂದ್ರ ಹಣಕಾಸು ಸಚಿವಾಲಯವು ಸುಂಕ ಹೇರಿಕೆಗೆ ಸಂಬಂಧಿಸಿದಂತೆ ಅಂತಿಮ ನಿರ್ಧಾರ ಕೈಗೊಳ್ಳಲಿದೆ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ಭಾರತದ ಉಕ್ಕು ಸಂಘಟನೆಯು ಆಮದು ಹೆಚ್ಚಳಕ್ಕೆ ಆಕ್ಷೇಪ ವ್ಯಕ್ತಪಡಿಸಿ, ದೂರು ಸಲ್ಲಿಸಿತ್ತು. ಇದರ ಮೇರೆಗೆ ತನಿಖೆ ನಡೆಸಿದ ವಾಣಿಜ್ಯ ಪರಿಹಾರಗಳ ಮಹಾನಿರ್ದೇಶನಾಲಯವು (ಡಿಜಿಟಿಆರ್) ಉಕ್ಕು ಆಮದು ಹೆಚ್ಚಳವಾಗಿರುವುದನ್ನು ಪತ್ತೆ ಹಚ್ಚಿತ್ತು.

ಈ ಉಕ್ಕನ್ನು ಫ್ಯಾಬ್ರಿಕೇಷನ್, ಪೈಪ್ ತಯಾರಿಕೆ, ನಿರ್ಮಾಣ, ಸರಕು, ಆಟೊ, ಟ್ರ್ಯಾಕ್ಟರ್, ಬೈಸಿಕಲ್, ಎಲೆಕ್ಟ್ರಿಕ್ ಪ್ಯಾನೆಲ್ ತಯಾರಿಕೆಯಲ್ಲಿ ಬಳಸಲಾಗುತ್ತಿದೆ ಎಂದು ಹೇಳಿತ್ತು.

ಚೀನಾ, ಜಪಾನ್, ಕೊರಿಯಾ ಮತ್ತು ವಿಯೆಟ್ನಾಂದಿಂದ ಹೆಚ್ಚಿನ ಪ್ರಮಾಣದ ಉಕ್ಕು ಆಮದಾಗುತ್ತಿದೆ. ಚೀನಾ ಮತ್ತು ವಿಯೆಟ್ನಾಂ ಕಡಿಮೆ ಗುಣಮಟ್ಟದ ಉಕ್ಕು ಪೂರೈಸುತ್ತವೆ.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ	
ಚೆಟ್ಟೆ	34149-38099
ಚಾಲಿ	31819-37498
ಚಿಪ್ಪು	17569-25009
ಕೋಕ	6089-19999
ಫ್ಯಾಕ್ಟರಿ	3569-24999
ಹೊಸಚಾಲಿ	31569-37515
ಶಿವಮೊಗ್ಗ	
ಬೆಟ್ಟೆ	48800-56019
ಗೊರಬಲು	17009-26239
ರಾಶಿ	32009-52599
ಸರಕು	59210-87440
ಸಿದ್ದಾಪುರ	
ಬಿಳಿಗೋಟು	21019-27109
ಚಾಲಿ	32899-36309
ಕೋಕ	11619-12699
ಹೊಸಚಾಲಿ	30509-35699
ಕೆಂಪುಗೋಟು	19809-22899
ರಾಶಿ	40099-45599

ತುಮಕೂರಿನಲ್ಲಿ ಸಾಯಿ ಸಿಲ್ಕ್ ಕಲಾಮಂದಿರ್‌ನಿಂದ ಬುಧವಾರ ಆರಂಭವಾದ ಕಾಂಚೀಪುರಂ ವರಮಹಾಲಕ್ಷ್ಮಿ ಸಿಲ್ಕ್ಸ್ ಹೊಸ ಮಳಿಗೆಯನ್ನು ಸಿದ್ಧಗಂಗಾ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಉದ್ಘಾಟಿಸಿದರು. ಸಾಯಿ ಸಿಲ್ಕ್ ಕಲಾಮಂದಿರ್ ಸಂಸ್ಥೆ ನಿರ್ದೇಶಕ ದುರ್ಗಾರಾವ್ ಚಲವಾದಿ ಉಪಸ್ಥಿತರಿದ್ದರು

ಜಾಹೀರಾತು ಏಜೆನ್ಸಿ ಮೇಲೆ ಸಿಸಿಐ ದಾಳಿ

ನವದೆಹಲಿ (ಪಿಟಿಐ): ಭಾರತೀಯ ಸ್ಪರ್ಧಾತ್ಮಕ ಆಯೋಗವು (ಸಿಸಿಐ) ಜಾಗತಿಕ ಜಾಹೀರಾತು ಏಜೆನ್ಸಿಗಳಾದ ಗ್ರೂಪ್‌ಎಂ, ಇಂಟರ್‌ಪಬ್ಲಿಕ್, ಪಬ್ಲಿಕ್ಸ್ ಮತ್ತು ಡೆಂಟ್ಸು ಮೇಲೆ ದಾಳಿ ನಡೆಸಿದೆ.

ದೆಹಲಿ ಸೇರಿ ದೇಶದ ಹತ್ತು ಸ್ಥಳಗಳಲ್ಲಿ ಈ ದಾಳಿ ನಡೆದಿದ್ದು, ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಮಂಗಳವಾರ ಆರಂಭಗೊಂಡಿದ್ದ ಕಾರ್ಯಾಚರಣೆಯು ಬುಧವಾರವೂ ಮುಂದುವರಿಯಿತು ಎಂದು ಮೂಲಗಳು ತಿಳಿಸಿವೆ.

ಐಪಿಎಲ್ ಕ್ರಿಕೆಟ್ ಟೂರ್ನಿ ಆರಂಭಕ್ಕೂ ಮುನ್ನವೇ ಈ ದಾಳಿ ನಡೆದಿದೆ. ದೇಶದ ಮಾಧ್ಯಮಗಳಲ್ಲಿ ಜಾಹೀರಾತು ಪ್ರಸಾರ ಸಮಯ ಮತ್ತು ಮುದ್ರಣಕ್ಕೆ ಸಂಬಂಧಿಸಿದಂತೆ ಪೂರ್ವ ನಿಗದಿತ ದರ ಒಪ್ಪಂದ ಮಾಡಿಕೊಳ್ಳಲಾಗಿದೆ. ಹಾಗಾಗಿ, ಜಾಹೀರಾತು ಏಜೆನ್ಸಿಗಳು ಮತ್ತು ಪ್ರಮುಖ ಪ್ರಸಾರ ಕಂಪನಿಯ ಕಚೇರಿಯನ್ನು ತಪಾಸಣೆ ನಡೆಸಲಾಗಿದೆ ಎಂದು ಹೇಳಿವೆ.

ಅಮೆರಿಕ ಮೂಲದ ಇಂಟರ್ ಪಬ್ಲಿಕ್ಸ್‌ನ ಐಪಿಜಿ ಮೀಡಿಯಾ ಬ್ರಾಂಡ್ ಘಟಕ, ಜಪಾನ್‌ನ ಡೆಂಟ್ಸು, ಇಂಡಿಯನ್ ಬ್ರಾಡ್‌ಕಾಸ್ಟಿಂಗ್ ಆ್ಯಂಡ್ ಡಿಜಿಟಲ್ ಫೌಂಡೇಷನ್ (ಐಬಿಡಿಎಫ್) ಕಚೇರಿ ಮೇಲಿನ ದಾಳಿ ಪೂರ್ಣಗೊಂಡಿದೆ. ರಿಲಯನ್ಸ್-ಡಿಸ್ನಿ ಕಂಪನಿ ಸೇರಿ ದೇಶೀಯ ಪ್ರಮುಖ ಪ್ರಸಾರಕರನ್ನು ಐಬಿಡಿಎಫ್ ಪ್ರತಿನಿಧಿಸುತ್ತದೆ ಎಂದು ತಿಳಿಸಿವೆ.

ಈ ಏಜೆನ್ಸಿಗಳು ಸಿಸಿಐ ನಿಯಮಾವಳಿ ಉಲ್ಲಂಘಿಸಿರುವ ಆರೋಪ ಸಾಬೀತಾದರೆ ಅವುಗಳ ವಾರ್ಷಿಕ ವಹಿವಾಟಿನ ಮೇಲೆ ಶೇ 10ರಷ್ಟು ದಂಡ ವಿಧಿಸಲು ಅವಕಾಶವಿದೆ.

ಸಂಕ್ಷಿಪ್ತ ಸುದ್ದಿ

3ನೇ ದಿನ ಗೂಳಿ ಓಟ

ಮುಂಬೈ (ಪಿಟಿಐ): ಸತತ ಮೂರನೇ ದಿನವಾದ ಬುಧವಾರವೂ ದೇಶದ ಷೇರುಪೇಟೆಯಲ್ಲಿ ಗೂಳಿ ಓಟ ಮುಂದುವರಿಯಿತು.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಗಳನ್ನು ಖರೀದಿಸಿದ್ದಾರೆ. ಮತ್ತೊಂದೆಡೆ ಅಮೆರಿಕದ ಡಾಲರ್ ಮೌಲ್ಯ ಇಳಿಕೆಯಾಗಿದೆ. ಇದು ಸೂಚ್ಯಂಕಗಳು ಏರಿಕೆಗೆ ನೆರವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 148 ಅಂಶ ಏರಿಕೆ ಕಂಡು, 75,449 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 73 ಅಂಶ ಹೆಚ್ಚಳ ಕಂಡು 22,907 ಅಂಶಗಳಲ್ಲಿ ಸ್ಥಿರಗೊಂಡಿತು.

ಬಿಎಸ್‌ಇ ಮಿಡ್‌ಕ್ಯಾಪ್ ಶೇ 2.28ರಷ್ಟು ಹಾಗೂ ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 2.17ರಷ್ಟು ಏರಿಕೆಯಾಗಿದೆ.

ಮೂರು ದಿನಗಳಲ್ಲಿ ಹೂಡಿಕೆದಾರರ ಸಂಪತ್ತು ₹13.82 ಲಕ್ಷ ಕೋಟಿ ಹೆಚ್ಚಳವಾಗಿದೆ.

ಹುಂಡೈ, ಹೋಂಡಾ ವಾಹನ ದರ ಏರಿಕೆ

ನವದೆಹಲಿ (ಪಿಟಿಐ): ವಾಹನ ತಯಾರಿಕಾ ಕಂಪನಿಗಳಾದ ಹುಂಡೈ ಮೋಟರ್ ಇಂಡಿಯಾ ಮತ್ತು ಹೋಂಡಾ ಕಾರ್ಸ್ ಇಂಡಿಯಾ ವಾಹನಗಳ ಬೆಲೆ ಏರಿಕೆಗೆ ನಿರ್ಧರಿಸಿದ್ದು, ಈ ಪರಿಷ್ಕೃತ ದರವು ಏಪ್ರಿಲ್‌ನಿಂದ ಜಾರಿಗೆ ಬರಲಿದೆ.

ಶೇ 3ರಷ್ಟು ದರ ಹೆಚ್ಚಳ ಮಾಡುವುದಾಗಿ ಹುಂಡೈ ತಿಳಿಸಿದೆ. ಹೋಂಡಾ ಕೂಡ ತನ್ನ ಎಲ್ಲಾ ಮಾದರಿಯ ವಾಹನಗಳ ಬೆಲೆ ಹೆಚ್ಚಿಸಲು ಮುಂದಾಗಿದೆ. ಆದರೆ, ಎಷ್ಟು ದರ ಹೆಚ್ಚಳ ಮಾಡಲಾಗುತ್ತಿದೆ ಎಂಬ ಬಗ್ಗೆ ಕಂಪನಿಯು ತಿಳಿಸಿಲ್ಲ.

ಆರು ತಿಂಗಳೊಳಗೆ ವಿದ್ಯುತ್‌ಚಾಲಿತ ವಾಹನ ಬೆಲೆ ಇಳಿಕೆ: ಗಡ್ಕರಿ

ನವದೆಹಲಿ (ಪಿಟಿಐ): ‘ಮುಂದಿನ ಆರು ತಿಂಗಳೊಳಗೆ ವಿದ್ಯುತ್ ಚಾಲಿತ ವಾಹನಗಳ ಬೆಲೆಯು ಪೆಟ್ರೋಲ್ ವಾಹನಗಳ ಬೆಲೆಗೆ ಸರಿ ಸಮನಾಗಿ ಇರಲಿದೆ’ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಆಮದು ಬದಲಿಗೆ ದೇಶೀಯವಾಗಿ ಉತ್ಪಾದನೆಗೆ ಒತ್ತು ನೀಡುವುದು ಸರ್ಕಾರದ ಗುರಿಯಾಗಿದೆ. ಮಾಲಿನ್ಯ ಮುಕ್ತ ವಾತಾವರಣ ನಿರ್ಮಿಸುವ ಆಶಯ ಹೊಂದಲಾಗಿದೆ’ ಎಂದರು.

ಉತ್ತಮ ರಸ್ತೆಗಳ ನಿರ್ಮಾಣದಿಂದ ಸರಕು ಸಾಗಣೆ ವೆಚ್ಚ ಕಡಿಮೆ ಮಾಡಲು ಸಾಧ್ಯ ಎಂದು ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಗೌರವಾನ್ವಿತ ಮಧ್ಯಸ್ಥಿಕೆ ನ್ಯಾಯಮಂಡಳಿಯ ಮುಂದೆ,
ಚೆನ್ನೈ ಗೌರವಾನ್ವಿತ ಶ್ರೀ ಎಂ.ವಿಜಯರಾಘವನ್ (ನಿವೃತ್ತ)
ಏಕೈಕ ಮಧ್ಯಸ್ಥಗಾರ
೨೦೨೫ ರ A.C.ಸಂ ೧
೧೯೯೬ ರ ಮಧ್ಯಸ್ಥಿಕೆ ಮತ್ತು
ಸಂಧಾನ ಕಾಯ್ದೆಯ ವಿಷಯದಲ್ಲಿ ಮತ್ತು
ಇವರುಗಳ ನಡುವೆ,

ಶ್ರೀರಾಮ್ ಫೈನಾನ್ಸ್ ಲಿಮಿಟೆಡ್,
(ಹಿಂದೆ ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಕಂಪನಿ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಅದರ ಪವರ್ ಆಫ್ ಅಟಾರ್ನಿಯಿಂದ ಪ್ರತಿನಿಧಿ
ಶ್ರೀ ಪೊನ್ನುಸ್ವಾಮಿ ನಟರಾಜನ್,
ನೋಂದಾಯಿತ ಕಚೇರಿ: ಶ್ರೀ ಟವರ್ಸ್, ನಂ.14ಎ, ಸೌತ್ ಫೇಸ್,
ಇಂಡಸ್ಟ್ರಿಯಲ್ ಎಸ್ಟೇಟ್, ಗಿಂಡಿ, ಚೆನ್ನೈ - 600032
.....ಹಕ್ಕುದಾರ
-Vs-
1. .ಇಂಪ್ರಿಂಟ್ಸ್ ಇನ್ಫ್ರಾಸ್ಟ್ರಕ್ಚರ್ ಮತ್ತು ಲಾಜಿಸ್ಟಿಕ್ಸ್ ಲಿಮಿಟೆಡ್,
ಅದರ ಅಧಿಕೃತ ಸಹಿದಾರರು ಪ್ರತಿನಿಧಿಸುತ್ತಾರೆ,
ವ್ಯವಸ್ಥಾಪಕ ನಿರ್ದೇಶಕರು, ಶ್ರೀ ಅಶೋಕ್ ಚಟ್ಟರಾಜ್.
17/7, ಅಲಿ ಆಸ್ಕರ್ ರಸ್ತೆ, ಕನ್ನಿಂಗ್ಹ್ಯಾಮ್ ರಸ್ತೆ,
ಬೆಂಗಳೂರು,
ಕರ್ನಾಟಕ – 560052
ಅದಲ್ಲದೆ : ೬೦೪, ಆಕ್ಟೇವಿಯಸ್ ಕಂ. ಆಪ್. ಎಚ್‌ಎಸ್ಜಿ. ಸೊಸೈಟಿ, ಹಿರಾನಂದಾನಿ ಗಾರ್ಡನ್ಸ್,
ಪೊವೈ, ಪೊವೈ ಲೇಕ್, ಮುಂಬೈ, ಮಹಾರಾಷ್ಟ್ರ - ೪೦೦೦೭೬
ಅದಲ್ಲದೆ: 607, ATL ಕಾರ್ಪೊರೇಟ್ ಪಾರ್ಕ್, 72, ಸಾಕಿ ವಿಹಾರ್ ರಸ್ತೆ,
ಪೊವೈ, ಮುಂಬೈ, ಮಹಾರಾಷ್ಟ್ರ - 400072.
2. ಶ್ರೀ.ಡಿ.ಕಿರಣ್ ದತ್ತಾತ್ರಯ ಸಾಳುಂಕೆ,
ಸ/ಓ.ಶ್ರೀ.ದತ್ತತಾರ್ಯ ಪಾಂಡುರಂಗ ಸಾಳುಂಕೆಫ್ಲಾಟ್ ನಂ.21/3G, ಆದಿತ್ಯ ಗಾರ್ಡನ್ ಸಿಟಿ, ವಾರ್ಜೆ ಹೆದ್ದಾರಿ,
RMD ಕಾಲೇಜು ಹತ್ತಿರ, ವಾರ್ಜೆ, ಪುಣೆ, ಮಹಾರಾಷ್ಟ್ರ - 411058.
ಅದಲ್ಲದೆ: B301, ಕ್ರಾಸ್ವಿಂಡ್ಸ್, ಲಕ್ಷ್ಮಣ್ ನಗರ, ಬ್ಯಾನರ್, ಪುಣೆ, ಮಹಾರಾಷ್ಟ್ರ - 411045.
...ಪ್ರತಿಕ್ರಿಯಿಸುವವರು
ಮದ್ರಾಸ್‌ನಲ್ಲಿರುವ ಗೌರವಾನ್ವಿತ ಹೈಕೋರ್ಟ್ ಆಫ್ ಜ್ಯುಡಿಕೇಚರ್‌ನ 31.01.2025 ರ ಆದೇಶದ ಪ್ರಕಾರ, ಮೇಲೆ ಹೆಸರಿಸಲಾದ ಹಕ್ಕುದಾರ ಮತ್ತು ಪ್ರತಿವಾದಿಗಳ ನಡುವಿನ ವಿವಾದಗಳನ್ನು ಇತ್ಯರ್ಥಪಡಿಸಲು ಗೌರವಾನ್ವಿತ ಮಧ್ಯಸ್ಥಗಾರರು ತಮ್ಮ 20.02.2025 ರ ಪತ್ರದ ಮೂಲಕ ಉಲ್ಲೇಖವನ್ನು ಪಡೆದಿದ್ದಾರೆ. R P A D ಮೂಲಕ ಪ್ರತಿವಾದಿಗಳಿಗೆ ಕಳುಹಿಸಲಾದ ಗೌರವಾನ್ವಿತ ಮಧ್ಯಸ್ಥಗಾರರ ಉಲ್ಲೇಖ ಪತ್ರವನ್ನು ಪಡೆಯದೆ ಹಿಂತಿರುಗಿಸಲಾಗಿರುವುದರಿಂದ, 03.04.2025 ರೊಳಗೆ ಕಾಗದ ಪ್ರಕಟಣೆಯನ್ನು ಹಿಂತಿರುಗಿಸುವಂತೆ ಪ್ರತಿವಾದಿಗಳಿಗೆ ನೋಟಿಸ್ ನೀಡುವಂತೆ ಗೌರವಾನ್ವಿತ ಮಧ್ಯಸ್ಥಗಾರರು ಆದೇಶಿಸಿದ್ದಾರೆ.
ಆದ್ದರಿಂದ, ಮೇಲಿನ ಮಧ್ಯಸ್ಥಿಕೆ ಪ್ರಕರಣವನ್ನು ನೀವು ವೈಯಕ್ತಿಕವಾಗಿ ಅಥವಾ ವಕೀಲರು/ಅಧಿಕೃತ ಪ್ರತಿನಿಧಿಯ ಮೂಲಕ 03.04.2025 (ಗುರುವಾರ) ಬೆಳಿಗ್ಗೆ 11.00 ಗಂಟೆಗೆ ಗೌರವಾನ್ವಿತ ಮಧ್ಯಸ್ಥಿಕೆ ನ್ಯಾಯಮಂಡಳಿ, ಮದ್ರಾಸ್ ಹೈಕೋರ್ಟ್ ಮಧ್ಯಸ್ಥಿಕೆ ಕೇಂದ್ರ, ಮದ್ರಾಸ್ ಹೈಕೋರ್ಟ್ ಕ್ಯಾಂಪಸ್, ಚೆನ್ನೈ - 600104 ರ ಮುಂದೆ ಹಾಜರಾಗಲು ಪೋಸ್ಟ್ ಮಾಡಲಾಗಿದೆ ಎಂಬುದನ್ನು ದಯವಿಟ್ಟು ಗಮನಿಸಿ ಮತ್ತು ಹಾಜರಾಗದಿದ್ದಲ್ಲಿ, ಮೇಲೆ ಹೇಳಲಾದ ಮಧ್ಯಸ್ಥಿಕೆ ಪ್ರಕರಣವನ್ನು ಕಾನೂನಿನ ಪ್ರಕಾರ ನಿಮ್ಮ ಅನುಪಸ್ಥಿತಿಯಲ್ಲಿ ಅರ್ಹತೆಯ ಆಧಾರದ ಮೇಲೆ ವಿಚಾರಣೆ ಮಾಡಿ ನಿರ್ಧರಿಸಲಾಗುತ್ತದೆ.
ದಿನಾಂಕ: 20.03.2025
ಜಿ.ಬಾಲಕೃಷ್ಣನ್
ಜಿ. ಬಾಲಾಜಿ
ಹಕ್ಕುದಾರರ ವಕೀಲರು

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 06.04.2025,27.04.2025 18.05.2024 12/15/21ದಿನ ಈಶಾನ್ಯ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ 25.03.2025.25.04.2025 25.5.2025 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಪೂಚಲಿಂಗ್ 14.05.2025 12ದಿನಗಳು ಆದಿಕೈಲಾಸಓಂಪರ್ವತ್ ನೈನಿತಾಲ್,ಭೀಮ್‌ತಾಲ್ ಜಾಗೇಶ್ವರ,ಪಾತಾಳೇಶ್ವರ. 9743351212 9206979202

★ಶ್ರೇಯಸ್ ಟೂರ್ಸ್★ 10.05.2025,10.06.2025 10ದಿನ ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ ಸಹಿತ)ಅಯೋಧ್ಯೆ 23.05.25,24.06.25 7ದಿನ ನೈಮಿಷಾರಣ್ಯ,ಅಯೋಧ್ಯ ಪ್ರಯಾಗ್‌ರಾಜ್,ಕಾಶಿ,ಗಯಾ ದೇವಘರ್.04.06.2025, 28.06.2025,12.07.2025 26.07.25 12ದಿನ ಚಾರ್ ದಾಮ್‌ಯಾತ್ರಾ,ಕೇದಾರನಾಥ ಬದರಿನಾಥ,ಯಮುನೋತ್ರಿ ಗಂಗೋತ್ರಿ,ಇತರೆ. 9743351212, 9206979202, 9606032154

2.4.2025 ದೆಹಲಿ, ಅಮೃತ್‌ಸರ್, ವೈಷ್ಣೋದೇವಿ, ಕಾಶಿ,ಗಯಾ 22.4.2025 ಶಿರಡಿ/ ಮಹಾರಾಷ್ಟ್ರ 5ಜ್ಯೋತಿರ್ಲಿಂಗ ಪ್ರವಾಸ 1.5.2025, 15.5.2025 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್15.5.2025 ನೇಪಾಳ, ಮುಕ್ತಿನಾಥ, ಕಾಶಿ ಕರ್ನಾಟಕ ಹೆರಿಟೇಜ್ ಟೂರ್ಸ್,(ಹನುಮಂತನಗರ) 9845035349, 9482435755

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164
*Conditions apply

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಎನ್.ಮುನಿರತ್ನಮ್ಮ

ಲೇಟ್ ಶ್ರೀ ಪಿ.ವಿ.ಚಿಕ್ಕಕೃಷ್ಣಪ್ಪನವರ ಧರ್ಮಪತ್ನಿ
ಅಮೃತಹಳ್ಳಿ, ಬೆಂಗಳೂರು-92
(ನಿಧನ: 20-03-2024)

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಆದರೆ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಅಮರ, ನಿಮ್ಮ ಆದರ್ಶಗಳು ನಮಗೆ ದಾರಿದೀಪ.

ಇಂತಿ: ಮಕ್ಕಳು, ಮೊಮ್ಮಕ್ಕಳು ಹಾಗೂ ಪಟೇಲ್ ಕುಟುಂಬದವರು

ಎರಡನೇ ವರ್ಷದ ಪುಣ್ಯಸ್ಮರಣೆ



ಶ್ರೀ ಕೆ.ಪಿ.ಮುನಿರೆಡ್ಡಿ

ನಿಧನ: 20-03-2023

ನೀವು ನಮ್ಮನ್ನಗಲಿ ಎರಡು ವರ್ಷ ಕಳೆದರು, ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಅಮರವಾಗಿದೆ, ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ

ಇಂತಿ ದುಃಖತಪ್ತರು:
ಎಂ. ಪ್ರಸನ್ನ
ಮತ್ತು ಕುಟುಂಬವರ್ಗದವರು ಹಾಗೂ ಬಂಧು ಮಿತ್ರರು

ಪಡಿತರ: ಕೋವಿಡ್–19 ಪಿಡುಗಿನ ವೇಳೆ ವಲಸೆ ಕಾರ್ಮಿಕ ಸಂಕಷ್ಟ ಕುರಿತ ಅರ್ಜಿ ವಿಚಾರಣೆ ನಡೆಸಿದ 'ಸುಪ್ರೀಂ'

'ಅರ್ಹ ಫಲಾನುಭವಿಗಳಿಗೆ ತಲುಪುತ್ತಿವೆಯೇ?'

ನವದೆಹಲಿ(ಪಿಟಿಐ): ಪಡಿತರ ಚೀಟಿಗಳು 'ಜನಪ್ರಿಯತೆಗಾಗಿ ರೂಪಿಸಿರುವ ಕಾರ್ಡು'ಗಳಂತಾಗಿವೆ ಎಂದು ಅಭಿಪ್ರಾಯಪಟ್ಟಿರುವ ಸುಪ್ರೀಂ ಕೋರ್ಟ್, 'ಬಡವರಿಗಾಗಿ ಜಾರಿಗೊಳಿಸಿರುವ ಸಾರ್ವಜನಿಕ ಪಡಿತರ ಯೋಜನೆಯ ಪ್ರಯೋಜನ ನಿಜವಾದ ಫಲಾನುಭವಿಗಳಿಗೆ ತಲುಪುತ್ತಿದೆಯೇ' ಎಂದು ಬುಧವಾರ ಪ್ರಶ್ನಿಸಿದೆ.

'ಸಬ್ಸಿಡಿಯ ಲಾಭ ಅರ್ಹ ಫಲಾನುಭವಿಗಳಿಗೇ ತಲುಪಬೇಕು. ಬಡವರಿಗಾಗಿ ಇರುವ ಈ ಪ್ರಯೋಜನಗಳು ಅರ್ಹತೆ ಹೊಂದಿರದ ವ್ಯಕ್ತಿಗಳ ಪಾಲಾಗುತ್ತಿವೆ' ಎಂದೂ ಸುಪ್ರೀಂ ಕೋರ್ಟ್ ಅಚ್ಚರಿ ವ್ಯಕ್ತಪಡಿಸಿದೆ.

ಕೋವಿಡ್–19 ಪಿಡುಗಿನ ವೇಳೆ ವಲಸೆ ಕಾರ್ಮಿಕರು ಎದುರಿಸಿದ ಸಂಕಷ್ಟಗಳಿಗೆ ಸಂಬಂಧಿಸಿ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ಅರ್ಜಿ ವಿಚಾರಣೆ ವೇಳೆ, ನ್ಯಾಯಾಲಯ ಈ ಮಾತು ಹೇಳಿದೆ. ನ್ಯಾಯಮೂರ್ತಿಗಳಾದ ಸೂರ್ಯ ಕಾಂತ ಹಾಗೂ ಎನ್. ಕೋಟೀಶ್ವರ ಸಿಂಗ್ ಅವರು ಇದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ಬಡವರಿಗೆ ವಿತರಿಸಲಾದ ಉಚಿತ ಪಡಿತರ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿದ ಪೀಠ, ವಿಚಾರಣೆಯನ್ನು ಮುಂದೂಡಿತು.

ವಿಚಾರಣೆ: ಇದಕ್ಕೂ ಮುನ್ನ ವಿಚಾರಣೆ ವೇಳೆ, 'ಕೆಲವು ರಾಜ್ಯಗಳು ಸಾಕಷ್ಟು ಸಂಖ್ಯೆಯಲ್ಲಿ ಪಡಿತರ ಚೀಟಿಗಳನ್ನು ವಿತರಣೆ ಮಾಡಿದ್ದಾಗಿ ಹೇಳುತ್ತವೆ. ಅಭಿವೃದ್ಧಿ ವಿಚಾರ ಬಂದಾಗ ಕೆಲ ರಾಜ್ಯಗಳು ತಮ್ಮ ತಲಾದಾಯ ವೃದ್ಧಿಸುತ್ತಿದೆ ಎಂಬ ವಾದ ಮಂಡಿಸುತ್ತವೆ. ಆದರೆ, ಸಬ್ಸಿಡಿ ವಿಷಯ ಪ್ರಸ್ತಾಪಿಸಿದಾಗ ತಮ್ಮ ರಾಜ್ಯದ ಒಟ್ಟು ಜನಸಂಖ್ಯೆಯ ಶೇ 75ರಷ್ಟು ಜನರು ಬಿಪಿಎಲ್ ಕಾರ್ಡು ಹೊಂದಿದ್ದಾಗಿ ಹೇಳುತ್ತವೆ. ಇಂತಹ ಸಂಗತಿಗಳ ನಡುವೆ ಸಮನ್ವಯ ಸಾಧಿಸುವುದು ಹೇಗೆ?' ಎಂದು ಪೀಠ ಕೇಳಿದೆ.

ಕೆಲ ಅರ್ಜಿದಾರರ ಪರ ಹಾಜರಿದ್ದ ಹಿರಿಯ ನ್ಯಾಯವಾದಿ ಪ್ರಶಾಂತ ಭೂಷಣ್, 'ಇಂತಹ ವ್ಯತ್ಯಾಸಗಳಿಗೆ ಜನರ ಆದಾಯದಲ್ಲಿನ ಅಸಮಾನತೆಯೇ ಕಾರಣ' ಎಂದು ಪೀಠಕ್ಕೆ ತಿಳಿಸಿದರು.

'ಬೆರಳೆಣಿಕೆಯಷ್ಟು ಜನರು ಭಾರಿ ಸಂಪತ್ತು ಹೊಂದಿದ್ದಾರೆ. ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ, ಬಡವರು ಬಡವರಾಗಿಯೇ ಉಳಿಯುತ್ತಿದ್ದಾರೆ' ಎಂದು ಪ್ರಶಾಂತ ಭೂಷಣ್ ಹೇಳಿದರು.

'ಇ–ಶ್ರಮ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಂಡಿರುವ ಬಡ ವಲಸೆ ಕಾರ್ಮಿಕರ ಸಂಖ್ಯೆ 8 ಕೋಟಿ ಇದ್ದು, ಇವರಿಗೆ ಉಚಿತವಾಗಿ ಪಡಿತರ ನೀಡಬೇಕು' ಎಂದೂ ಹೇಳಿದರು.

ಆಗ, ನ್ಯಾಯಮೂರ್ತಿ ಸೂರ್ಯಕಾಂತ, 'ಪಡಿತರ ಚೀಟಿಗಳನ್ನು ನೀಡುವ ವೇಳೆ ಯಾವುದೇ ರಾಜಕೀಯ ಬೆರಸುವುದಿಲ್ಲ ಎಂಬ ವಿಶ್ವಾಸ ನಮ್ಮದು. ಅಲ್ಲದೇ, ಬಡವರ ಸ್ಥಿತಿ ಕುರಿತು ನನಗೆ ಅರಿವು ಇದೆ. ಕೆಲ ಕುಟುಂಬಗಳು ಈಗಲೂ ಬಡತನದಿಂದ ಬಳಲುತ್ತಿರುವುದೂ ನನಗೆ ತಿಳಿದಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಪ್ರಶಾಂತ ಭೂಷಣ್, 'ಕೇಂದ್ರ ಸರ್ಕಾರ 2021ರಲ್ಲಿ ಜನಗಣತಿ ನಡೆಸಿಲ್ಲ. 2011ರ ಜನಗಣತಿಯ ದತ್ತಾಂಶ ಆಧರಿಸಿಯೇ ಪಡಿತರ ನೀಡುತ್ತಿದೆ. ಈ ಕಾರಣದಿಂದ, ಉಚಿತ ಪಡಿತರ ಪಡೆಯಲು ಅರ್ಹರಾಗಿರುವ 10 ಕೋಟಿ ಜನರು ಬಿಪಿಎಲ್ ನಿಂದ ಹೊರಗುಳಿದಿದ್ದಾರೆ' ಎಂದರು.

ಕೇಂದ್ರ ಸರ್ಕಾರ ಪರ ವಾದಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ, 'ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ, ಅಂದಾಜು 81.35 ಕೋಟಿ ಜನರಿಗೆ ಕೇಂದ್ರ ಸರ್ಕಾರ ಉಚಿತ ಪಡಿತರ ನೀಡುತ್ತಿದೆ. ಇತರ 11 ಕೋಟಿ ಜನರು ಇಂಥದೇ ಯೋಜನೆಗಳಡಿ ಪ್ರಯೋಜನ ಪಡೆಯುತ್ತಿದ್ದಾರೆ' ಎಂದು ಪೀಠಕ್ಕೆ ತಿಳಿಸಿದರು.

ದಾರಾ ಸಿಂಗ್ ಅರ್ಜಿ: ನಿರ್ಧರಿಸಲು ಸುಪ್ರೀಂ ಕೋರ್ಟ್ ಸೂಚನೆ

ನವದೆಹಲಿ(ಪಿಟಿಐ): ಆಸ್ಟ್ರೇಲಿಯಾದ ಕ್ರೈಸ್ತ ಮಿಷನರಿ ಗ್ರಹಾಂ ಸ್ಟುವರ್ಟ್ ಸ್ಟೇನ್ಸ್ ಮತ್ತು ಅವರ ಇಬ್ಬರು ಅಪ್ರಾಪ್ತ ವಯಸ್ಸಿನ ಪುತ್ರರನ್ನು ಹತ್ಯೆ ಮಾಡಿದ ಅಪರಾಧಿ ರವೀಂದ್ರ ಪಾಲ್ ಅಲಿಯಾಸ್ ದಾರಾ ಸಿಂಗ್ ಕ್ಷಮಾದಾನ ಅರ್ಜಿಯನ್ನು ನಿರ್ಧರಿಸುವಂತೆ ಸುಪ್ರೀಂ ಕೋರ್ಟ್ ಬುಧವಾರ ಒಡಿಶಾ ಸರ್ಕಾರಕ್ಕೆ ಸೂಚಿಸಿದೆ.

1999ರ ಜನವರಿಯಲ್ಲಿ ಕಿಯೊಂಜಾರ್ ಜಿಲ್ಲೆಯ ಮನೋಹರ್‌ಪುರ ಗ್ರಾಮದಲ್ಲಿ ಇವರನ್ನು ಹತ್ಯೆ ಮಾಡಿದ ಪ್ರಕರಣದಲ್ಲಿ ದಾರಾ ಸಿಂಗ್ (61) ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾನೆ.

ನ್ಯಾಯಮೂರ್ತಿಗಳಾದ ಮನೋಜ್ ಮಿಶ್ರಾ ಮತ್ತು ಕೆ.ವಿ. ವಿಶ್ವನಾಥನ್ ಅವರನ್ನೊಳಗೊಂಡ ನ್ಯಾಯಪೀಠವು, ಒಡಿಶಾ ಸರ್ಕಾರದ ಪರ ಹಾಜರಾದ ವಕೀಲ ಶಿಬಾಶಿಶ್ ಮಿಶ್ರಾ ಅವರಿಗೆ ಆರು ವಾರಗಳಲ್ಲಿ ನಿರ್ಧಾರ ತೆಗೆದುಕೊಂಡು, ನ್ಯಾಯಾಲಯಕ್ಕೆ ಮಾಹಿತಿ ನೀಡಲು ಸೂಚಿಸಿತು.

ಸಿಂಗ್ ಸಲ್ಲಿಸಿದ್ದ ಕ್ಷಮಾಧಾನದ ಅರ್ಜಿಯ ಕುರಿತು ಕಳೆದ ವರ್ಷ ಜುಲೈ 9ರಂದು ಸುಪ್ರೀಂ ಕೋರ್ಟ್, ಒಡಿಶಾ ಸರ್ಕಾರಕ್ಕೆ ನೋಟಿಸ್ ನೀಡಿತ್ತು.

ಉತ್ತರಾಖಂಡ ಸರ್ಕಾರಕ್ಕೆ ಚಾಟಿ

ನವದೆಹಲಿ: ಕಾರ್ಬೆಟ್ ಹುಲಿ ಮೀಸಲು ಅರಣ್ಯದಲ್ಲಿ ಅಕ್ರಮ ನಿರ್ಮಾಣ ಮಾಡಿರುವ ಆರೋಪ ಎದುರಿಸುತ್ತಿರುವ ಹಿರಿಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮೀನಮೇಷ ಎಣಿಸುತ್ತಿರುವ ಉತ್ತರಾಖಂಡ ಸರ್ಕಾರವನ್ನು ಸುಪ್ರೀಂ ಕೋರ್ಟ್ ಬುಧವಾರ ತೀವ್ರ ತರಾಟೆಗೆ ತೆಗೆದುಕೊಂಡಿದೆ.

ಆಪಾದಿತ ಅಧಿಕಾರಿಗಳ ವಿರುದ್ಧದ ಇಲಾಖಾ ಪ್ರಕ್ರಿಯೆಗಳನ್ನು ಮೂರು ತಿಂಗಳೊಳಗೆ ಪೂರ್ಣಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ 'ಸುಪ್ರಿಂ' ತಾಕೀತು ಮಾಡಿದೆ.

'ಯಾವುದು ಉತ್ತಮ ಎಂದು ಮಗು ನಿರ್ಧರಿಸಲು ಸಾಧ್ಯವಿಲ್ಲ'

ನವದೆಹಲಿ: ವಿಚ್ಛೇದನ ಪ್ರಕರಣಗಳಲ್ಲಿ ಮಗು ಯಾರ ಜೊತೆ ಇರಬೇಕು ಎಂಬ ವಿಚಾರದಲ್ಲಿ ತೀರ್ಪು ಪ್ರಕಟಿಸುವ ಮುನ್ನ ನ್ಯಾಯಾಲಯವು ಎಚ್ಚರಿಕೆಯಿಂದ ಇರಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಒತ್ತಿ ಹೇಳಿದೆ.

ತಂದೆ ಭೇಟಿಗೆ ಮಗು ಪ್ರತಿರೋಧ ವ್ಯಕ್ತಪಡಿಸಿದ್ದರೂ, ಮಗುವನ್ನು ಭೇಟಿ ಮಾಡಲು ತಂದೆಗೆ ಅವಕಾಶ ನೀಡಿ ನ್ಯಾಯಾಲಯವು ಹೀಗೆ ಅಭಿಪ್ರಾಯಪಟ್ಟಿತು.

ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಅಹಸಾನುದ್ದೀನ್ ಅಮಾನುಲ್ಲಾಹ್ ಅವರನ್ನು ಒಳಗೊಂಡ ನ್ಯಾಯಪೀಠವು, ಮಗುವನ್ನು ಭೇಟಿ ಮಾಡಲು ಅವಕಾಶ ನೀಡುವಂತೆ ವ್ಯಕ್ತಿಯೊಬ್ಬರು ಕೋರಿದ್ದ ಅರ್ಜಿಯನ್ನು ಪುರಸ್ಕರಿಸಿತು. ಇದೇ ಸಂದರ್ಭದಲ್ಲಿ, ಇದು ಅಪ್ರಾಪ್ತ ವಯಸ್ಸಿನ ಬಾಲಕನ ಜೀವನಕ್ಕೆ ಸಂಬಂಧಿಸಿದ ವಿಚಾರ. ಬಾಲಕನಿಗೆ ತನಗೇನು ಸೂಕ್ತ ಎಂದು ನಿರ್ಧರಿಸುವ ಪ್ರಬುದ್ಧತೆ ಬಂದಿಲ್ಲ ಎಂದು ಹೇಳಿತು.

ಪ್ರಕರಣವೇನು?: ದಂಪತಿ ವಿವಾಹವಾದ 9 ವರ್ಷಗಳ ನಂತರ ಪರಸ್ಪರ ಒಪ್ಪಿಗೆ ಮೇರೆಗೆ ವಿಚ್ಛೇದನ ಪಡೆದಿದ್ದು, ಮಗು ತಾಯಿಯೊಟ್ಟಿಗೆ ನೆಲಸಿದೆ. ತಂದೆ ಮಗುವನ್ನು ಆಗಾಗ್ಗ ಭೇಟಿ ಮಾಡುವ ಅವಕಾಶ ಪಡೆದಿದ್ದರು. ಆದರೆ ಮಗು ತಂದೆಯನ್ನು ಭೇಟಿ ಮಾಡಲು ನಿರಾಕರಿಸುತ್ತಿದೆ ಎಂದು ಕೋರ್ಟ್ ಮೆಟ್ಟಿಲೇರಲಾಗಿತ್ತು. ಕುಟುಂಬ ನ್ಯಾಯಾಲಯವು ಮಗು ಭೇಟಿಗೆ ತಂದೆಗೆ ಅವಕಾಶ ನೀಡಿತ್ತು. ಆದರೆ ಹೈಕೋರ್ಟ್ ಈ ತೀರ್ಪನ್ನು ವಜಾಗೊಳಿಸಿತ್ತು. ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ವ್ಯಕ್ತಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು.

'ಮಗು ಸಾಕ್ಷ್ಯ ಹೇಳದಿದ್ದರೂ ಆರೋಪಿಗೆ ಶಿಕ್ಷೆ ನೀಡಬಹುದು'

ಲೈಂಗಿಕ ದೌರ್ಜನ್ಯದಿಂದಾಗಿ ಆಘಾತಕ್ಕೆ ಒಳಗಾಗಿರುವ ಮಗು, ಕಣ್ಣೀರು ಹಾಕುವುದನ್ನು ಹೊರತುಪಡಿಸಿ ಬೇರೆ ಏನೂ ಸಾಕ್ಷ್ಯ ನುಡಿಯುತ್ತಿಲ್ಲ ಎಂಬ ಅಂಶವು ಆರೋಪಿಗೆ ಶಿಕ್ಷೆ ನೀಡದೇ ಇರುವುದಕ್ಕೆ ಆಧಾರವಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಇಂತಹ ಪ್ರಕರಣಗಳಲ್ಲಿ, ಲಭ್ಯವಿರುವ ವೈದ್ಯಕೀಯ ಹಾಗೂ ಸಾಂದರ್ಭಿಕ ಸಾಕ್ಷ್ಯಗಳೇ ಆರೋಪಿಯು ತಪ್ಪಿತಸ್ಥ ಎಂದು ಘೋಷಿಸಲು ಆಧಾರವಾಗುತ್ತವೆ' ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

'ಸಂತ್ರಸ್ತ ಮಗುವಿನ ಹೇಳಿಕೆ ಇಲ್ಲದಿರುವ ಕಾರಣ, ತಪ್ಪಿತಸ್ಥ ವ್ಯಕ್ತಿಗೆ ಶಿಕ್ಷೆ ನೀಡಬಾರದು ಎಂಬಂತಹ ನಿಯಮ ಇಲ್ಲ' ಎಂದು ನ್ಯಾಯಮೂರ್ತಿಗಳಾದ ವಿಕ್ರಮ ನಾಥ ಹಾಗೂ ಸಂಜಯ್ ಕರೋಲ್ ಅವರು ಇದ್ದ ನ್ಯಾಯಪೀಠ ಹೇಳಿದೆ. ರಾಜಸ್ಥಾನದಲ್ಲಿ 1986ರ ಮಾರ್ಚ್ 3ರಂದು 1ನೇ ತರಗತಿ ಬಾಲಕಿ ಮೇಲೆ ನಡೆದಿದ್ದ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ, ಚತ್ರಾ ಎಂಬ ವ್ಯಕ್ತಿ ದೋಷಿ ಎಂದು ಘೋಷಿಸಿದ್ದ ಟೊಂಕ್‌ನ ನ್ಯಾಯಾಲಯ, ಆತನಿಗೆ 7 ವರ್ಷ ಜೈಲು ಶಿಕ್ಷೆ ವಿಧಿಸಿತ್ತು.

ಇದನ್ನು ಪ್ರಶ್ನಿಸಿ ಚತ್ರಾ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ರಾಜಸ್ಥಾನ ಹೈಕೋರ್ಟ್, ಆತನಿಗೆ ವಿಧಿಸಿದ್ದ ಶಿಕ್ಷೆಯನ್ನು ರದ್ದುಪಡಿಸಿ 2013ರಲ್ಲಿ ಆದೇಶಿಸಿತ್ತು. ಇದರ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿತ್ತು.

'ವೃದ್ಧರ ಆರೈಕೆ ಮಾಡದಿದ್ದರೆ ಆಸ್ತಿ ವರ್ಗಾವಣೆ ರದ್ದು'

ಚೆನ್ನೈ (ಪಿಟಿಐ): ಮಕ್ಕಳು ಅಥವಾ ಹತ್ತಿರದ ಸಂಬಂಧಿಕರು ಹಿರಿಯ ನಾಗರಿಕರ ಆರೈಕೆ ಮಾಡದೆ ಇದ್ದರೆ, ದಾನಪತ್ರದ ಮೂಲಕ, ಇತ್ಯರ್ಥ ಕರಾರಿನ ಮೂಲಕ ಅವರ ಹೆಸರಿಗೆ ಆಸ್ತಿ ವರ್ಗಾಯಿಸಿದ್ದನ್ನು ರದ್ದು ಮಾಡಲು ಹಿರಿಯ ನಾಗರಿಕರಿಗೆ ಅವಕಾಶ ಇದೆ ಎಂದು ಮದ್ರಾಸ್ ಹೈಕೋರ್ಟ್ ಹೇಳಿದೆ.

ಆರೈಕೆ ಮಾಡದೆ ಇದ್ದರೆ ಆಸ್ತಿ ವರ್ಗಾವಣೆ ರದ್ದಾಗುತ್ತದೆ ಎಂಬ ಷರತ್ತು ಕರಾರಿನಲ್ಲಿ ಉಲ್ಲೇಖವಾಗದೆ ಇದ್ದರೂ, ಕರಾರು ಪತ್ರವನ್ನು ಹಿರಿಯ ನಾಗರಿಕರು ರದ್ದುಪಡಿಸಬಹುದು ಎಂದು ನ್ಯಾಯಾಲಯ ಹೇಳಿದೆ.

ಮೃತ ಎಸ್. ನಾಗಲಕ್ಷ್ಮಿ ಎನ್ನುವವರ ಸೊಸೆ ಎಸ್. ಮಾಲಾ ಅವರು ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ಎಸ್.ಎಂ. ಸುಬ್ರಮಣಿಯಂ ಮತ್ತು ಕೆ. ರಾಜಶೇಖರ್ ಅವರು ಇರುವ ವಿಭಾಗೀಯ ಪೀಠವು ವಜಾಗೊಳಿಸಿದೆ.

ನಾಗಲಕ್ಷ್ಮಿ ಅವರು ತಮ್ಮ ಮಗ ಕೇಶವನ್ ಹೆಸರಿನಲ್ಲಿ ಇತ್ಯರ್ಥ ಕರಾರು ಮಾಡಿದ್ದರು. ಮಗ ಮತ್ತು ಸೊಸೆ ತಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎಂಬ ಆಸೆಯಿಂದ ಅವರು ಹೀಗೆ ಮಾಡಿದ್ದರು. ಆದರೆ ಕೇಶವನ್ ಆ ಕೆಲಸ ಮಾಡಲಿಲ್ಲ. ಕೇಶವನ್ ಮೃತರಾದ ನಂತರ ಸೊಸೆ ಕೂಡ ನಾಗಲಕ್ಷ್ಮಿ ಅವರ ಬಗ್ಗೆ ಉಪೇಕ್ಷೆ ತೋರಿದರು. ಆಗ ನಾಗಲಕ್ಷ್ಮಿ ಅವರು ನಾಗಪಟ್ಟಣಂ ಕಂದಾಯ ಉಪವಿಭಾಗಾಧಿಕಾರಿಯ (ಆರ್‌ಡಿಒ) ಮೊರೆ ಹೋದರು.

ನಾಗಲಕ್ಷ್ಮಿ ಮತ್ತು ಮಾಲಾ ಅವರ ಹೇಳಿಕೆ ದಾಖಲಿಸಿಕೊಂಡ ಆರ್‌ಡಿಒ, ಇತ್ಯರ್ಥ ಕರಾರನ್ನು ರದ್ದುಪಡಿಸಿದರು. ಇದನ್ನು ಪ್ರಶ್ನಿಸಿ ಮಾಲಾ ಅವರು ಸಲ್ಲಿಸಿದ್ದ ಅರ್ಜಿ ವಜಾಗೊಂಡಿತು. ಹೀಗಾಗಿ, ಮಾಲಾ ಅವರು ಮೇಲ್ಮನವಿ ಸಲ್ಲಿಸಿದರು.

ಪಾಲಕರು, ಹಿರಿಯ ನಾಗರಿಕರ ನಿರ್ವಹಣೆ ಹಾಗೂ ಕಲ್ಯಾಣ ಕಾಯ್ದೆ 2007ರ ಸೆಕ್ಷನ್ 23(1)ಅನ್ನು ಹಿರಿಯ ನಾಗರಿಕರ ಹಿತ ಕಾಯಲು ರೂಪಿಸಲಾಗಿದೆ ಎಂದು ಪೀಠ ಹೇಳಿದೆ.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿಕೆ

ಟೋಲ್ ಸಂಗ್ರಹಕ್ಕೆ ಶೀಘ್ರ ಹೊಸ ನೀತಿ

ನವದೆಹಲಿ(ಪಿಟಿಐ): 'ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹಕ್ಕೆ ಸಂಬಂಧಿಸಿದಂತೆ ಸರ್ಕಾರ ಶೀಘ್ರವೇ ಹೊಸ ನೀತಿಯನ್ನು ಪ್ರಕಟಿಸಲಿದೆ. ಇದರಲ್ಲಿ ಗ್ರಾಹಕರಿಗೆ ಸೂಕ್ತ ರಿಯಾಯಿತಿ ನೀಡಲಾಗುವುದು' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಬುಧವಾರ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ರಸ್ತೆ ಮೂಲ ಸೌಕರ್ಯ ನಿರ್ಮಾಣಕ್ಕಾಗಿ ಸರ್ಕಾರ ಸಾಕಷ್ಟು ಹಣ ವ್ಯಯಿಸುತ್ತಿದೆ. ಹಾಗಾಗಿ, ಟೋಲ್ ಸಂಗ್ರಹಿಸುವ ಅಗತ್ಯವಿದೆ ಎಂದು ಸಮರ್ಥಿಸಿಕೊಂಡರು.

2008ರ ನಿಯಮಗಳ ಪ್ರಕಾರ, ರಾಷ್ಟ್ರೀಯ ಹೆದ್ದಾರಿಯ ಒಂದೇ ವಿಭಾಗದಲ್ಲಿ ಮತ್ತು ಒಂದೇ ಮಾರ್ಗದಲ್ಲಿ 60 ಕಿಲೋ ಮೀಟರ್ ಒಳಗೆ ಟೋಲ್ ಪ್ಲಾಜಾ ಸ್ಥಾಪಿಸುವುದಿಲ್ಲ. ಅಧಿವೇಶನ ಮುಕ್ತಾಯವಾದ ನಂತರ, ನಾವು ಟೋಲ್‌ಗಾಗಿ ಹೊಸ ನೀತಿ ಘೋಷಿಸಲಿದ್ದೇವೆ. ಆಗ, ಈ ಈ ಸಮಸ್ಯೆ ಬಗೆಹರಿಸಲಾಗುವುದು. 2023-24ರಲ್ಲಿ ದೇಶದಲ್ಲಿ ಒಟ್ಟು ₹64,809.86 ಕೋಟಿ ಟೋಲ್ ಸಂಗ್ರಹ ಆಗಿದೆ. ಇದು ಹಿಂದಿನ ವರ್ಷಕ್ಕಿಂತ ಶೇ 35ರಷ್ಟು ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ.

ಉತ್ತಮ ರಸ್ತೆಯನ್ನು ಬಯಸಿದಾಗ, ಅದಕ್ಕೆ ಶುಲ್ಕ ಪಾವತಿಸಬೇಕು. ಇದು ಇಲಾಖೆಯ ನೀತಿಯಾಗಿದೆ

ನಿತಿನ್ ಗಡ್ಕರಿ, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ

ಹೆದ್ದಾರಿ ಯೋಜನೆಗಳ ಪೂರ್ಣಕ್ಕೆ ಒತ್ತಾಯ

ಮಲ್ಲಿಕಾರ್ಜುನ ಖರ್ಗೆ

ನವದೆಹಲಿ: ಕರ್ನಾಟಕದಲ್ಲಿ ಬಹುಕಾಲದಿಂದ ಬಾಕಿ ಉಳಿದಿರುವ ರಾಷ್ಟ್ರೀಯ ಹೆದ್ದಾರಿ ಯೋಜನೆಗಳನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದರು.

ರಾಜ್ಯಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಅವಧಿಯಲ್ಲಿ ಮಾತನಾಡಿದ ಖರ್ಗೆ, ರಾಷ್ಟ್ರೀಯ ಹೆದ್ದಾರಿಗಳ ಮಂಜೂರಾತಿ ಹಾಗೂ ಅನುದಾನ ಬಿಡುಗಡೆಗೆ ಪ್ರಧಾನಿ ಕಚೇರಿಯಿಂದ ಮಂಜೂರಾತಿ ಸಿಗಬೇಕಿದೆ ಎಂಬ ಮಾಧ್ಯಮ ವರದಿಗಳನ್ನು ಉಲ್ಲೇಖಿಸಿದರು.

ಬಾಕಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಒತ್ತಾಯಿಸಿ ಪ್ರಧಾನಿ ಹಾಗೂ ಹೆದ್ದಾರಿ ಸಚಿವರಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದೇನೆ. ಆದರೆ, ಯಾವುದೇ ಪ್ರಗತಿ ಆಗಿಲ್ಲ. ಇತ್ತೀಚಿನ ದಿನಗಳಲ್ಲಿ ಭೂಮಿ ಸುಲಭವಾಗಿ ಲಭ್ಯವಿಲ್ಲ ಎಂಬುದು ಸಚಿವರಿಗೆ ಚೆನ್ನಾಗಿ ತಿಳಿದಿದೆ. ಆದರೂ, ರಸ್ತೆ ನಿರ್ಮಾಣಕ್ಕಾಗಿ ಮೊದಲು ಭೂಮಿಯನ್ನು ಒದಗಿಸುವಂತೆ ಸಚಿವರು ಆಗಾಗ್ಗೆ ಕೇಳುತ್ತಿದ್ದಾರೆ ಎಂದು ಅವರು ಹೇಳಿದರು. ಆದರೆ, ಭೂಮಿ ಈಗಾಗಲೇ ಲಭ್ಯವಿರುವ ಸ್ಥಳಗಳಲ್ಲಿ ಕೆಲಸ ಪ್ರಾರಂಭಿಸಬೇಕು ಎಂದು ಒತ್ತಾಯಿಸಿದರು.

ಪತಿ ಮೃತದೇಹ ಕತ್ತರಿಸಿ, ಡ್ರಮ್ ಒಳಗೆ ಮುಚ್ಚಿಟ್ಟದ್ದ ಪತ್ನಿ

ಪ್ರಜಾವಾಣಿ ವಾರ್ತೆ

ಲಖನೌ: ಸರಕು ಸಾಗಣೆ ಹಡಗು ಕಂಪನಿಯೊಂದರಲ್ಲಿ ಅಧಿಕಾರಿಯಾಗಿದ್ದ ಪತಿಯನ್ನು, ಪ್ರಿಯಕರನ ನೆರವಿನಿಂದ ಪತ್ನಿ ಹತ್ಯೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಮೃತದೇಹವನ್ನು ಹಲವು ತುಂಡುಗಳಾಗಿ ಕತ್ತರಿಸಿ, ಡ್ರಮ್‌ವೊಂದರಲ್ಲಿ ಇರಿಸಿ ಸಿಮೆಂಟ್‌ನಿಂದ ಪ್ಯಾಕ್‌ಮಾಡಲಾಗಿತ್ತು ಎಂದೂ ಆರೋಪಿಸಲಾಗಿದೆ.

ಉತ್ತರ ಪ್ರದೇಶದ ಮೀರತ್‌ನಲ್ಲಿ ಈ ಭೀಕರ ಘಟನೆ ವರದಿಯಾಗಿದೆ. ಸೌರವ್ ಹತ್ಯೆಯಾಗಿರುವ ಅಧಿಕಾರಿ.

ಪ್ರಕರಣಕ್ಕೆ ಸಂಬಂಧಿಸಿ, ಸೌರವ್ ಪತ್ನಿ ಮುಸ್ಕಾನ್ ರಸ್ತೋಗಿ ಹಾಗೂ ಆಕೆಯ ಪ್ರಿಯಕರ ಸಾಹಿಲ್ ಶುಕ್ಲಾ ಎಂಬುವವರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸೌರವ್ ಅವರನ್ನು ಹತ್ಯೆ ಮಾಡಿದ ನಂತರ, ಮುಸ್ಕಾನ್ ಹಾಗೂ ಸಾಹಿಲ್ ಶಿಮ್ಲಾಕ್ಕೆ ತೆರಳಿದ್ದರು. ತಮ್ಮ ಮದುವೆಗೆ ಸಿದ್ಧತೆಯಲ್ಲಿದ್ದರು' ಎಂದು ತಿಳಿಸಿವೆ.

ಪರಸ್ಪರ ಪ್ರೀತಿಸುತ್ತಿದ್ದ ಸೌರವ್ ಹಾಗೂ ಮುಸ್ಕಾನ್, 9 ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಆರು ವರ್ಷದ ಮಗಳು ಇದ್ದಾಳೆ. ಮಗಳ ಜನ್ಮದಿನಾಚರಣೆಗಾಗಿ ಸೌರವ್, ಫೆಬ್ರುವರಿ 24ರಂದು ಮನೆಗೆ ಬಂದಿದ್ದರು.

'ಮಾರ್ಚ್ 4ರಂದು ಮುಸ್ಕಾನ್, ನಿದ್ರೆ ಮಾತ್ರೆ ಬೆರೆಸಿದ್ದ ಆಹಾರವನ್ನು ಸೌರವ್ ಅವರಿಗೆ ನೀಡಿದ್ದಳು. ನಿದ್ರೆಗೆ ಜಾರಿದ್ದ ಅವರನ್ನು ಚಾಕುವಿನಿಂದ ಇರಿದು ಮುಸ್ಕಾನ್ ಹತ್ಯೆ ಮಾಡಿದ್ದಳು. ಇದಕ್ಕೆ ಸಾಹಿಲ್ ನೆರವು ನೀಡಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮೃತದೇಹದ ತುಂಡುಗಳನ್ನು ಇರಿಸಿದ್ದ ಡ್ರಮ್‌ಅನ್ನು ನಿರ್ಜನ ಪ್ರದೇಶವೊಂದರಲ್ಲಿ ಬಿಸಾಕಲು ಇಬ್ಬರೂ ಮಂಗಳವಾರ ಪ್ರಯತ್ನಿಸಿದ್ದರು. ಅದು ಭಾರವಾಗಿದ್ದ ಕಾರಣ, ಅವರ ಪ್ರಯತ್ನ ಕೈಗೂಡಿರಲಿಲ್ಲ'.

ಈ ನಡುವೆ, ಸೌರವ್ ತಮ್ಮ ಮೊಬೈಲ್ ಕರೆಗಳನ್ನು ಸ್ವೀಕರಿಸದ ಕಾರಣ, ಅವರ ಪಾಲಕರು ದೂರು ನೀಡಿದ್ದರು. ದೂರಿನ ಆಧಾರದಲ್ಲಿ ಪೊಲೀಸರು ಶೋಧ ಕೈಗೊಂಡಿದ್ದರು.

ಶಿಮ್ಲಾದಿಂದ ವಾಪಸು ಬಂದಿದ್ದ ಮುಸ್ಕಾನ್ ಹಾಗೂ ಸಾಹಿಲ್ ಅವರನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದಾಗ, ಅವರು ತಪ್ಪೊಪ್ಪಿಕೊಂಡಿದ್ದಾರೆ ಎಂದು ಹೇಳಲಾಗಿದೆ.

ಜಲ ವಿವಾದ: ಏಕ ನ್ಯಾಯಮಂಡಳಿಗೆ ಬೊಮ್ಮಾಯಿ ಸಲಹೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಂತರರಾಜ್ಯ ಜಲ ವಿವಾದಗಳನ್ನು ಬಗೆಹರಿಸಲು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ಒಂದೇ ನ್ಯಾಯಮಂಡಳಿ ಸ್ಥಾಪಿಸಿ ಆರು ತಿಂಗಳಲ್ಲಿ ವಿವಾದ ಬಗೆಹರಿಸಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದರು.

ಲೋಕಸಭೆಯಲ್ಲಿ ಬುಧವಾರ ನಡೆದ ಜಲಶಕ್ತಿ ಸಚಿವಾಲಯದ ಬೇಡಿಕೆ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, 'ಅಂತರರಾಜ್ಯ ಜಲ ವಿವಾದ ಕಾಯ್ದೆಯ ಕಾರಣದಿಂದ ಆರ್ಥಿಕವಾಗಿ ಹಾಗೂ ಜೀವನ ಕ್ರಮದಲ್ಲಿಯೂ ನಷ್ಟ ಆಗುತ್ತಿದೆ. ಈ ಕಾಯ್ದೆಯ ಸೆಕ್ಷನ್ 3ರ ಪ್ರಕಾರ ಯಾವುದಾದರೂ ರಾಜ್ಯ ಜಲ ವ್ಯಾಜ್ಯ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ದೂರು ಸಲ್ಲಿಸಿದರೆ, ನ್ಯಾಯಮಂಡಳಿ ರಚನೆ ಮಾಡಬೇಕಾಗುತ್ತದೆ. ಅಂತರರಾಜ್ಯ ಜಲವ್ಯಾಜ್ಯಗಳಿಂದ ನಾವು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ' ಎಂದರು.

ಸಂಕ್ಷಿಪ್ತ ಸುದ್ದಿ

ರೈತರ ಜತೆ ಮತ್ತೆ ಮೇ 4ಕ್ಕೆ ಚರ್ಚೆ

ನವದೆಹಲಿ: ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಸೇರಿದಂತೆ ವಿವಿಧ ಬೇಡಿಕೆಗಳ ಕುರಿತು ರೈತ ಮುಖಂಡರು ಮತ್ತು ಕೇಂದ್ರ ಸರ್ಕಾರದ ಜತೆ ಬುಧವಾರ ನಡೆದ ಮಾತುಕತೆಯಲ್ಲಿ ಯಾವುದೇ ನಿರ್ಣಯ ಹೊರಹೊಮ್ಮಲಿಲ್ಲ. ಮುಂದಿನ ಸಭೆ ಮೇ 4ಕ್ಕೆ ನಿಗದಿಪಡಿಸಲಾಗಿದೆ.

ರೈತ ನಾಯಕರ ಜತೆ ಏಳನೇ ಸುತ್ತಿನ ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಸೌಹಾರ್ದಯುತ ವಾತಾವರಣದಲ್ಲಿ ಸಕಾರಾತ್ಮಕ ಚರ್ಚೆ ನಡೆದಿದ್ದು, ಮಾತುಕತೆ ಮುಂದುವರಿಯಲಿದೆ ಎಂದು ಮಾಹಿತಿ ನೀಡಿದರು.

ಚಂಡೀಗಢದಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಶ್ ಗೋಯಲ್, ಪಂಜಾಬ್ ಹಣಕಾಸು ಸಚಿವ ಹರ್‌ಪಾಲ್ ಸಿಂಗ್ ಚೀಮಾ, ಕೃಷಿ ಸಚಿವ ಗುರ್ಮೀತ್ ಸಿಂಗ್ ಖುದ್ದಿಯನ್ ಭಾಗವಹಿಸಿದ್ದರು.

ಎಂಎಸ್‌ಪಿಗೆ ಕಾನೂನು ಬೆಂಬಲ ನೀಡುವುದೂ ಸೇರಿದಂತೆ ರೈತ ನಾಯಕರು ಪ್ರಸ್ತಾಪಿಸಿದ ಹಲವು ವಿಷಯಗಳ ಕುರಿತು ಚರ್ಚೆ ನಡೆಯಿತು.

ಇ.ಡಿ ಮುಂದೆ ಲಾಲು ಹಾಜರು

ಪಟ್ನಾ (ಪಿಟಿಐ): ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರು ಜಾರಿ ನಿರ್ದೇಶನಾಲಯದ (ಇ.ಡಿ) ಮುಂದೆ ಬುಧವಾರ ವಿಚಾರಣೆಗೆ ಹಾಜರಾದರು. ಉದ್ಯೋಗಕ್ಕಾಗಿ ಭೂಮಿ ಹಗರಣದಲ್ಲಿ ಲಾಲು ಪ್ರಸಾದ್ ವಿರುದ್ಧ ಮೇಲೆ ಇ.ಡಿ ತನಿಖೆ ನಡೆಸುತ್ತಿದೆ.

ಲಾಲು ಪ್ರಸಾದ್ ಅವರನ್ನು ಇ.ಡಿ ಅಧಿಕಾರಿಗಳು ನಾಲ್ಕು ತಾಸುಗಳ ವರೆಗೆ ವಿಚಾರಣೆ ನಡೆಸಿದರು. ಇ.ಡಿ ಕಚೇರಿಯ ಮುಂದೆ ಆರ್‌ಜೆಡಿ ಪಕ್ಷದ ಕಾರ್ಯಕರ್ತರು ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ್ದರು. ಲಾಲು ಅವರ ಪರವಾಗಿ ಜಯಘೋಷಗಳನ್ನು ಕೂಗಿದರು. ಮಗಳು, ಸಂಸದೆ ಮೀಸಾ ಭಾರತಿ ಅವರೊಂದಿಗೆ ಲಾಲು ಬಂದಿದ್ದರು.

12 ಸ್ಥಳಗಳಲ್ಲಿ ಎನ್‌ಐಎ ಶೋಧ

ನವದೆಹಲಿ (ಪಿಟಿಐ): ಭಯೋತ್ಪಾದಕರ ಒಳನುಸುಳುವಿಕೆ ಪ್ರಕರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ಏಜೆನ್ಸಿ (ಎನ್‌ಐಎ) ಜಮ್ಮುವಿನ 12 ಸ್ಥಳಗಳಲ್ಲಿ ಬುಧವಾರ ಶೋಧ ನಡೆಸಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿಷೇಧಿತ ಲಷ್ಕರ್-ಎ-ತಯಬಾ (ಎಲ್‌ಇಟಿ) ಮತ್ತು ಜೈಶ್-ಎ-ಮೊಹಮ್ಮದ್‌ಗೆ (ಜೆಇಎಂ) ಸೇರಿದ ಭಯೋತ್ಪಾದಕರು ಅಂತರ ರಾಷ್ಟ್ರೀಯ ಗಡಿ (ಐಬಿ) ಮತ್ತು ನಿಯಂತ್ರಣ ರೇಖೆ (ಎಲ್‌ಒಸಿ) ಮೂಲಕ ಭಾರತಕ್ಕೆ ನುಸುಳಿದ್ದಾರೆ ಎಂಬ ಮಾಹಿತಿ ಆಧರಿಸಿ ಕಳೆದ ವರ್ಷ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿ ಶೋಧ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸತ್ಯೇಂದ್ರ ಜೈನ್ ವಿರುದ್ಧ ಎಫ್‌ಐಆರ್

ಸತ್ಯೇಂದ್ರ ಜೈನ್

ನವದೆಹಲಿ (ಪಿಟಿಐ): ಸಿ.ಸಿ.ಟಿ.ವಿ ಯೋಜನೆಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಎಎಪಿಯ ಹಿರಿಯ ನಾಯಕ ಸತ್ಯೇಂದ್ರ ಜೈನ್ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳವು (ಎಸಿಬಿ) ಪ್ರಕರಣ ದಾಖಲಿಸಿದೆ.

₹571 ಕೋಟಿ ವೆಚ್ಚದ ಸಿ.ಸಿ.ಟಿ.ವಿ ಯೋಜನೆಗೆ ಸಂಬಂಧಿಸಿದಂತೆ ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಸೆಕ್ಷನ್ 17ಎ ಅಡಿಯಲ್ಲಿ ಜೈನ್ ವಿರುದ್ಧ ಮಂಗಳವಾರ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಜಂಟಿ ಪೊಲೀಸ್ ಆಯುಕ್ತ (ಎಸಿಬಿ) ಮಧುರ್ ವರ್ಮಾ ಹೇಳಿದ್ದಾರೆ.

ಭೂಕುಸಿತ: ಅನಾಥ ಮಕ್ಕಳಿಗೆ ₹10 ಲಕ್ಷ ಶೈಕ್ಷಣಿಕ ನೆರವು

ತಿರುವನಂತಪುರ (ಪಿಟಿಐ): ಕಳೆದ ಜುಲೈನಲ್ಲಿ ವಯನಾಡ್‌ನಲ್ಲಿ ಸಂಭವಿಸಿದ ಭೂಕುಸಿತದಲ್ಲಿ ಅನಾಥರಾಗಿರುವ ಮಕ್ಕಳಿಗೆ ತಲಾ ₹10 ಲಕ್ಷ ಶೈಕ್ಷಣಿಕ ನೆರವು ನೀಡುವುದಾಗಿ ಕೇರಳ ಸರ್ಕಾರ ಬುಧವಾರ ಘೋಷಿಸಿದೆ.

ಮೆಪ್ಪಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತಂದೆ ತಾಯಿ ಇಬ್ಬರನ್ನೂ ಕಳೆದುಕೊಂಡ 7 ಹಾಗೂ ತಂದೆ ಇಲ್ಲವೇ ತಾಯಿಯನ್ನು ಕಳೆದುಕೊಂಡಿರುವ 14 ಮಕ್ಕಳ ಶಿಕ್ಷಣಕ್ಕೆ ಆರ್ಥಿಕ ನೆರವು ನೀಡುವುದಾಗಿ ಮುಖ್ಯಮಂತ್ರಿ ಕಚೇರಿಯು (ಸಿಎಂಒ) ಪ್ರಕಟಣೆ ತಿಳಿಸಿದೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಮಲಿನಗೊಂಡ ಯಮುನೆ ಆಗ್ರಾದ ತಾಜ್‌ಮಹಲ್ ಬಳಿ ಯಮುನಾ ನದಿಗೆ ಸೇರುವ ಕಲುಷಿತ ನೀರಿನಲ್ಲಿ ಎಮ್ಮೆಗಳು ಮಿಂದವು –ಪಿಟಿಐ ಚಿತ್ರ

ಬಿಸಿಗಾಳಿ: ಬೇಕಿದೆ ದೀರ್ಘಾವಧಿ ಪರಿಹಾರ ಕ್ರಮ

ನವದೆಹಲಿ (ಪಿಟಿಐ): ಭವಿಷ್ಯದಲ್ಲಿ ಅತಿ ಹೆಚ್ಚು ಬಿಸಿಗಾಳಿ ಎದುರಿಸಲಿರುವ ಭಾರತದ ಕೆಲವು ನಗರಗಳು ದೀರ್ಘಾವಧಿಯ ಪರಿಣಾಮಕಾರಿ ಕ್ರಮಗಳ ಬದಲು ತಾತ್ಕಾಲಿಕ ಕ್ರಮಗಳ ಮೊರೆ ಹೋಗುತ್ತಿವೆ ಎಂದು ಅಧ್ಯಯನವೊಂದು ತಿಳಿಸಿದೆ.

ನವದೆಹಲಿ ಮೂಲದ 'ಸಸ್ಟೈನಬಲ್ ಫ್ಯೂಚರ್ ಕೊಲಾಬರೇಟಿವ್' ಸಂಶೋಧನಾ ಸಂಸ್ಥೆಯು ಈ ಬಗ್ಗೆ ವಿಶ್ಲೇಷಣಾತ್ಮಕ ವರದಿ ನೀಡಿದೆ.

ಹೆಚ್ಚುತ್ತಿರುವ ಬಿಸಿಗಾಳಿ ಎದುರಿಸಲು ಬೆಂಗಳೂರು, ದೆಹಲಿ, ಫರೀದಾಬಾದ್, ಗ್ವಾಲಿಯರ್, ಕೋಟಾ, ಲುಧಿಯಾನ, ಮೀರತ್, ಮುಂಬೈ ಮತ್ತು ಸೂರತ್ ಕೈಗೊಂಡ ಕ್ರಮಗಳ ಬಗ್ಗೆ ಅದು ವಿಶ್ಲೇಷಿಸಿದೆ. ಈ ನಗರಗಳು ಭಾರತದ ನಗರ ಪ್ರದೇಶದ ಜನಸಂಖ್ಯೆಯ ಶೇ 11ರಷ್ಟನ್ನು ಒಳಗೊಂಡಿವೆ.

ಈ ಒಂಬತ್ತು ನಗರಗಳೂ ಬಿಸಿಗಾಳಿ ಎದುರಿಸಲು ಅಲ್ಪಾವಧಿ ಕ್ರಮಗಳತ್ತ ಮಾತ್ರ ಹೆಚ್ಚು ಗಮನ ನೀಡುತ್ತಿವೆ ಎಂದು ವರದಿ ಹೇಳಿದೆ. ಭಾರತವು ದೀರ್ಘಾವಧಿಯ ಪರಿಣಾಮಕಾರಿ ಕ್ರಮಗಳನ್ನು ಅನುಷ್ಠಾನ ಮಾಡದಿದ್ದರೆ, ಭವಿಷ್ಯದಲ್ಲಿ ಬಿಸಿಗಾಳಿಗೆ ಸಂಬಂಧಿಸಿದ ಹೆಚ್ಚು ಹೆಚ್ಚು ಸಾವುಗಳಿಗೆ ಸಾಕ್ಷಿಯಾಗಬೇಕಾಗುತ್ತದೆ ಎಂದು ಎಚ್ಚರಿಸಿದೆ.

ಚುರಾಚಾಂದ್‌ಪುರದಲ್ಲಿ ಕಲ್ಲುತೂರಾಟ: ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ/ ಪಿಟಿಐ

ಇಂಫಾಲ್: ಮಣಿಪುರದಲ್ಲಿ ಮತ್ತೆ ಜನಾಂಗೀಯ ಹಿಂಸಾಚಾರ ಭುಗಿಲೆದ್ದಿದ್ದು, ಚುರಾಚಾಂದ್‌ಪುರ ಜಿಲ್ಲೆಯಲ್ಲಿ ಝೋಮಿ ಮತ್ತು ಹಮರ್ ಬುಡಕಟ್ಟು ಗುಂಪುಗಳ ನಡುವೆ ನಡೆದ ಘರ್ಷಣೆಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಎರಡು ಸಮುದಾಯಗಳ ಪ್ರಮುಖ ಸಂಘಟನೆಗಳ ನಡುವೆ ಶಾಂತಿ ಒಪ್ಪಂದ ಏರ್ಪಟ್ಟ ಕೆಲವೇ ತಾಸುಗಳ ನಂತರ ಮಂಗಳವಾರ ತಡರಾತ್ರಿ ಚುರಾಚಾಂದ್‌ಪುರ ಪಟ್ಟಣದಲ್ಲಿ ಕಲ್ಲುತೂರಾಟ ನಡೆದಿದೆ. ಘರ್ಷಣೆಯಲ್ಲಿ 53 ವರ್ಷದ ಲಾಲ್ರೋಪುಯಿ ಪಖುಮಾಟೆ ಎಂಬುವರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪಟ್ಟಣದಲ್ಲಿ ಝೋಮಿ ಬಂಡುಕೋರ ಸಂಘಟನೆಯ ಧ್ವಜವನ್ನು ಗುಂಪೊಂದು ಉರುಳಿಸಲು ಯತ್ನಿಸಿರುವುದು ಮತ್ತೆ ಹಿಂಸಾಚಾರ ಭುಗಿಲೇಳಲು ಕಾರಣವಾಗಿದೆ. ತಕ್ಷಣವೇ ಭದ್ರತಾ ಪಡೆ ಸಿಬ್ಬಂದಿ ಅಶ್ರುವಾಯು ಸಿಡಿಸಿ, ಗಾಳಿಯಲ್ಲಿ ಹಲವು ಸುತ್ತು ಗುಂಡು ಹಾರಿಸಿ ಗುಂಪುಗಳನ್ನು ಚದುರಿಸಿದ್ದಾರೆ.

ಕೆಲವು ಸೂಕ್ಷ್ಮ ಪ್ರದೇಶಗಳಲ್ಲಿ ಕರ್ಫ್ಯೂ ಮುಂದುವರಿಕೆ

ನಾಗ್ಪುರ ಗಲಭೆ : ಸೂತ್ರಧಾರಿ ಬಂಧನ

ಪ್ರಜಾವಾಣಿ ವಾರ್ತೆ/ಪಿಟಿಐ

ನಾಗ್ಪುರ: ಸೋಮವಾರ ಸಂಜೆ ಇಲ್ಲಿ ನಡೆದ ಕೋಮು ಗಲಭೆಯ ಪ್ರಮುಖ ಸೂತ್ರಧಾರಿ ಎನ್ನಲಾದ ಸ್ಥಳೀಯ ರಾಜಕೀಯ ಮುಖಂಡ ಫಾಹಿಮ್ ಖಾನ್ ಅವರನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಅಲ್ಪಸಂಖ್ಯಾತ ಪ್ರಜಾಸತ್ತಾತ್ಮಕ ಪಕ್ಷದ ನಾಗ್ಪುರ ಘಟಕದ ಜಿಲ್ಲಾ ಅಧ್ಯಕ್ಷರಾದ ಫಾಹಿಮ್ ಖಾನ್ ಅವರ ಹೆಸರು ಗಣೇಶಪೇಠ್ ಪೊಲೀಸ್ ಠಾಣೆಯಲ್ಲಿ ದಾಖಲಾದ ಎಫ್‌ಐಆರ್ ನಲ್ಲಿ ಅಧಿಕೃತವಾಗಿ ಸೇರಿಸಿದ ಕೆಲವೇ ತಾಸುಗಳಲ್ಲಿ ಅವರ ಬಂಧನವಾಗಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಖಾನ್, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ಬಿಜೆಪಿಯ ನಿತಿನ್ ಗಡ್ಕರಿ ವಿರುದ್ಧ ನಾಗ್ಪುರ ಕ್ಷೇತ್ರದಿಂದ ಸ್ಪರ್ಧಿಸಿ ಪರಾಭವಗೊಂಡಿದ್ದರು.

ನಾಗ್ಪುರದಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಕೆಲವು ಸೂಕ್ಷ್ಮ ಪ್ರದೇಶಗಳಲ್ಲಿ ಕರ್ಫ್ಯೂ ಮುಂದುವರಿಸಲಾಗಿದೆ. 51 ಜನರನ್ನು ಬಂಧಿಸಲಾಗಿದೆ ಎಂದು ನಾಗ್ಪುರದ ಪೊಲೀಸ್ ಆಯುಕ್ತ ಡಾ. ರವೀಂದ್ರ ಸಿಂಘಾಲ್ ತಿಳಿಸಿದರು.

ವಿಎಚ್‌ಪಿ, ಬಜರಂಗದಳ ಕಾರ್ಯಕರ್ತರು ಶರಣು

ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗ ದಳದ ಎಂಟು ಕಾರ್ಯಕರ್ತರು ಕೊತ್ವಾಲಿ ಪೊಲೀಸರ ಮುಂದೆ ಶರಣಾದರು. ಪೊಲೀಸರು ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಔರಂಗಜೇಬ್‌ನ ಸಮಾಧಿ ತೆರವಿಗೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದಾಗ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡಿದ ಆರೋಪದ ಮೇಲೆ ಈ ಸಂಘಟನೆಗಳ ಕೆಲವು ಪದಾಧಿಕಾರಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

ಸಮಾಧಿ ಸ್ಥಳ: ಡ್ರೋನ್‌ಗೆ ನಿಷೇಧ

ಕುಲ್ದಾಬಾದ್‌ನಲ್ಲಿರುವ ಔರಂಗಜೇಬ್ ಸಮಾಧಿ ಸ್ಥಳದಲ್ಲಿ ಡ್ರೋನ್ ಹಾರಿಸುವಂತಿಲ್ಲ ಎಂದು ಜಿಲ್ಲಾಡಳಿತ ಘೋಷಿಸಿದೆ.

17ನೇ ಶತಮಾನದ ಮೊಘಲ್ ದೊರೆ ಔರಂಗಜೇಬ್ ಇವತ್ತಿಗೆ ಅಪ್ರಸ್ತುತ. ಯಾವುದೇ ಹಿಂಸಾಚಾರವು ಸಮಾಜದ ಆರೋಗ್ಯಕ್ಕೆ ಒಳ್ಳೆಯದಲ್ಲ

ಸುನೀಲ್ ಅಂಬೇಕರ್ ಆರ್‌ಎಸ್‌ಎಸ್ ನಾಯಕ

ಅಪರೂಪದ ದಾಖಲೆಗಳ ನಿರೀಕ್ಷೆ • ವಿರಾಟ್, ರೋಹಿತ್, ಧೋನಿ ಮಿಂಚುವ ನಿರೀಕ್ಷೆ

ಟಿ20 ಲೀಗ್‌ಗಳ 'ಡ್ಯಾಡಿ' ಐಪಿಎಲ್: ಉತ್ತಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಪ್ಪತ್ತು ಓವರ್‌ಗಳಲ್ಲಿ ಮುನ್ನೂರಕ್ಕೂ ಹೆಚ್ಚು ರನ್‌ಗಳ ಮೊತ್ತ..ಒಂದು ಸಾವಿರಕ್ಕೂ ಹೆಚ್ಚು ಸಿಕ್ಸರ್‌ಗಳು..ಡಬಲ್ ಹ್ಯಾಟ್ರಿಕ್..275 ರನ್‌ಗಳ ಮೊತ್ತದ ಯಶಸ್ವಿ ಚೇಸಿಂಗ್..

ಈ ಸಲದ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಈ ಎಲ್ಲ ಅಪರೂಪದ ದಾಖಲೆಗಳು ಆಗಬಹುದೇ?

ಹೀಗೊಂದು ಊಹೆ ಮಾಡಿದವರು ಕ್ರಿಕೆಟ್ ವೀಕ್ಷಕ ವಿವರಣೆಗಾರ ರಾಬಿನ್ ಉತ್ತಪ್ಪ. ಬುಧವಾರ ಜಿಯೋಸ್ಟಾರ್ ಆಯೋಜಿಸಿದ್ದ ಆನ್‌ಲೈನ್ ಮಾಧ್ಯಮಗೋಷ್ಠಿಯಲ್ಲಿ ಅವರು ಪ್ರಶ್ನೆಯೊಂದಕ್ಕೆ ಈ ರೀತಿ ಉತ್ತರಿಸಿದರು.

'ಟಿ20 ಕ್ರಿಕೆಟ್‌ನಲ್ಲಿ ಏನು ಬೇಕಾದರೂ ಆಗಬಹುದು. ಪ್ರತಿವರ್ಷವೂ ಹೊಸ ಹೊಸ ದಾಖಲೆಗಳಾಗುತ್ತವೆ. ಇಂತಹ ಆಸಕ್ತಿಕರ ಅಂಶಗಳಿಂದಾಗಿಯೇ ಐಪಿಎಲ್ ಇವತ್ತು ಎಲ್ಲ ಟಿ20 ಕ್ರಿಕೆಟ್ ಲೀಗ್ ಟೂರ್ನಿಗಳ ಅಪ್ಪನಾಗಿ (ಡ್ಯಾಡಿ) ಬೆಳೆದಿದೆ' ಎಂದು ರಾಬಿನ್ ಹೇಳಿದರು.

ರಾಬಿನ್ ಉತ್ತಪ್ಪ

ಕೊಡಗಿನ ರಾಬಿನ್ ಅವರು 2007ರ ಚೊಚ್ಚಲ ಟಿ20 ವಿಶ್ವಕಪ್ ವಿಜೇತ ಭಾರತ ತಂಡದಲ್ಲಿ ಆಡಿದ್ದರು. 2008ರಲ್ಲಿ ಆರಂಭವಾದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿಯೂ ಆಡಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಸೇರಿದಂತೆ ಬೇರೆ ಬೇರೆ ತಂಡಗಳನ್ನು ಪ್ರತಿನಿಧಿಸಿದ್ದರು.

ಆರ್‌ಸಿಬಿ ತಂಡದ ಕುರಿತು ಮಾತನಾಡಿದ ಅವರು, 'ಈ ಬಾರಿ ಉತ್ತಮ ಆಟಗಾರರು ಸ್ಥಾನ ಪಡೆದಿದ್ದಾರೆ. ಸಮತೋಲನವೂ ಇದೆ. ಬಲಿಷ್ಠ ಬ್ಯಾಟಿಂಗ್ ಪಡೆ ಇದೆ. ಟಿ20 ಮಾದರಿಯಲ್ಲಿ ಡೆತ್ ಓವರ್‌ಗಳು ಮುಖ್ಯ. ಈ ಹಿಂದೆ ಕೆಲವು ಪಂದ್ಯಗಳಲ್ಲಿ ಆರ್‌ಸಿಬಿ ಈ ಹಂತದಲ್ಲಿ ಸಮಸ್ಯೆ ಎದುರಿಸಿತ್ತು. ಆದರೆ ಈ ಬಾರಿ ಅನುಭವಿ ವೇಗಿಗಳನ್ನು ಸೇರ್ಪಡೆ ಮಾಡಿಕೊಂಡಿದೆ. ಸ್ಪಿನ್ ವಿಭಾಗವೂ ಚೆನ್ನಾಗಿದೆ. ಕೃಣಾಲ್ ಪಾಂಡ್ಯ ಇರುವುದು ಹೆಚ್ಚಿನ ಬಲ ಬಂದಂತಾಗಿದೆ' ಎಂದರು.

'ಚೆನ್ನೈ ಸೂಪರ್ ಕಿಂಗ್ಸ್ ತಂಡದ ಮಹೇಂದ್ರಸಿಂಗ್ ಧೋನಿ ಅವರು 7 ಅಥವಾ 8ನೇ ಕ್ರಮಾಂಕದಲ್ಲಿ ಆಡಬಹುದು. ಹೋದ ವರ್ಷದಂತೆಯೇ ಕ್ರಿಕೆಟ್‌ನಲ್ಲಿ ಅವರು ಇನಿಂಗ್ಸ್‌ನಲ್ಲಿ 12 ರಿಂದ 20 ಎಸೆತಗಳು ಬಾಕಿಯಿದ್ದಾಗ ಕ್ರೀಸ್‌ಗೆ ಬಂದು ಸಂಚಲನ ಮೂಡಿಸುವ ಸಾಧ್ಯತೆಗಳು ಹೆಚ್ಚಿವೆ. 43 ವರ್ಷ ವಯಸ್ಸಿನಲ್ಲಿಯೂ ಧೋನಿ ಕ್ರಿಕೆಟ್ ಆಟವನ್ನು ಅಪಾರವಾಗಿ ಪ್ರೀತಿಸುತ್ತಾರೆ. ಅದೇ ಅವರಿಗೆ ಶಕ್ತಿ. ಆದ್ದರಿಂದ ಅವರು ಈಗಲೂ ಆಡುವ ಸಾಮರ್ಥ್ಯ ಹೊಂದಿದ್ದಾರೆ' ಎಂದರು. ಸ್ಟಾರ್ ಬ್ಯಾಟರ್‌ಗಳಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ಉತ್ತಮ ಲಯದಲ್ಲಿದ್ದಾರೆ. ಅವರು ಬೌಲರ್‌ಗಳಿಗೆ ಕಠಿಣ ಸವಾಲು ಒಡ್ಡುವ ಸಮರ್ಥರು' ಎಂದು ಹೇಳಿದರು.

ಅಭ್ಯಾಸ ನಡೆಸಿದ ಚೆನ್ನೈ ತಂಡದ ಮಾಜಿ ನಾಯಕ ಧೋನಿ

ಚಕ್ರವರ್ತಿಯೊಂದಿಗೆ ಜೊತೆಯಾಟಕ್ಕೆ ನಾರಾಯಣ್ ಸಿದ್ಧ

ಕೋಲ್ಕತ್ತ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಮಿಂಚಿದ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರೊಂದಿಗೆ ಈ ಬಾರಿಯೂ ಬೌಲಿಂಗ್ ಜೊತೆಯಾಟ ನಿರ್ವಹಿಸುವುದಾಗಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆಲ್‌ರೌಂಡರ್ ಸುನಿಲ್ ನಾರಾಯಣ್ ಹೇಳಿದ್ದಾರೆ.

'ಅವರೊಂದಿಗೆ ಬೌಲಿಂಗ್ ಮಾಡುವುದು ಯಾವಾಗಲೂ ಫಲಪ್ರದವಾಗಿದೆ. ಒಂದು ಬದಿಯಿಂದ ಅವರು ಬ್ಯಾಟರ್‌ಗಳ ಮೇಲೆ ಒತ್ತಡವನ್ನು ನಿರಂತರವಾಗಿ ಹಾಕುತ್ತಾರೆ. ಅದರ ಲಾಭ ಇನ್ನೊಂದು ಬದಿಯಿಂದ ಬೌಲಿಂಗ್ ಮಾಡುವವರಿಗೆ ದಕ್ಕುವ ಸಾಧ್ಯತೆ ಹೆಚ್ಚು. ಭಾರತದ ಪಿಚ್‌ಗಳಲ್ಲಿ ಸ್ಪಿನ್ನರ್‌ಗಳು ಎರಡೂ ಬದಿಗಳಿಂದ ಯಶಸ್ವಿಯಾಗುವುದು ಹೆಚ್ಚು' ಎಂದು 'ಪೆರಿಮ್ಯಾಚ್' ಕಾರ್ಯಕ್ರಮದಲ್ಲಿ ಮಾಧ್ಯಮದವರಿಗೆ ಹೇಳಿದರು.

ಈಚೆಗೆ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಚಕ್ರವರ್ತಿ ಅವರು 3 ಪಂದ್ಯಗಳಿಂದ 9 ವಿಕೆಟ್ ಗಳಿಸಿದ್ದರು. ವರುಣ್ ಅವರನ್ನು ಕೆಕೆಆರ್ ತಂಡವು ಈ ವರ್ಷ ರಿಟೇನ್ ಮಾಡಿಕೊಂಡಿತ್ತು. ಹೋದ ವರ್ಷ ಕೋಲ್ಕತ್ತ ತಂಡವು ಪ್ರಶಸ್ತಿ ಜಯಿಸುವಲ್ಲಿ ವರುಣ್ ಬೌಲಿಂಗ್ ಮತ್ತು ನಾರಾಯಣ್ ಅವರು ಅಗ್ರಕ್ರಮಾಂಕದಲ್ಲಿ ಮಾಡಿದ ಅಬ್ಬರದ ಬ್ಯಾಟಿಂಗ್ ಕಾರಣವಾಗಿತ್ತು.

'ಕೆಕೆಆರ್ ನನಗೆ ಕುಟುಂಬವಿದ್ದಂತೆ. ಮತ್ತೆ ಐಪಿಎಲ್ ಆಡಲು ಮರಳಿ ಬಂದಿರುವುದು ನನಗೆ ಅಪಾರ ಸಂತಸ ತಂದಿದೆ. ಐಪಿಎಲ್‌ನಲ್ಲಿ ಆಡುವುದು ಸುಲಭವಲ್ಲ. ಇಲ್ಲಿ ಪೈಪೋಟಿಯು ಬಹಳ ಕಠಿಣವಾಗಿದೆ' ಎಂದು ವೆಸ್ಟ್ ಇಂಡೀಸ್ ಆಟಗಾರ ಸುನಿಲ್ ಹೇಳಿದರು.

ಏ.6ರ ಪಂದ್ಯದ ದಿನಾಂಕ ಬದಲಾವಣೆ ಸಾಧ್ಯತೆ

ಈಡನ್ ಗಾರ್ಡನ್‌ನಲ್ಲಿ ಏ.6ರಂದು ಆಯೋಜಿಸಲಾಗಿರುವ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಲಖನೌ ಸೂಪರ್ ಜೈಂಟ್ಸ್ ತಂಡಗಳ ನಡುವಣ ಪಂದ್ಯದ ದಿನಾಂಕವನ್ನು ಭದ್ರತಾ ಕಾರಣಕ್ಕಾಗಿ ಬದಲಾವಣೆ ಮಾಡುವ ಸಾಧ್ಯತೆ ಇದೆ.

ನಗರದಲ್ಲಿ ಆ ದಿನ ರಾಮನವಮಿ ಆಚರಿಸಲಾಗುತ್ತದೆ. ಆಗ ಬಂಗಾಳದಲ್ಲಿ ಸುಮಾರು 20 ಸಾವಿರಕ್ಕೂ ಹೆಚ್ಚು ಮೆರವಣಿಗೆಗಳು ನಡೆಯುತ್ತವೆ. ಆದ್ದರಿಂದ ಈ ಸಂದರ್ಭದಲ್ಲಿ ಪೊಲೀಸ್ ಇಲಾಖೆಯು ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ತನ್ನ ಸಂಪೂರ್ಣ ಸಿಬ್ಬಂದಿಯನ್ನು ನಿಯೋಜಿಸುತ್ತದೆ. ಆದ್ದರಿಂದ ಪಂದ್ಯಕ್ಕೆ ಭದ್ರತೆ ನೀಡಲು ಕಷ್ಟದಾಯಕ ಎಂದು ಪೊಲೀಸರು ತಿಳಿಸಿದ್ದಾರೆ.

'ಪೊಲೀಸರು ಪಂದ್ಯಕ್ಕೆ ಭದ್ರತೆ ನೀಡಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ. ಈ ವಿಷಯವನ್ನು ನಾವು ಬಿಸಿಸಿಐಗೆ ಹೇಳಿದ್ದೇವೆ. ಅವರು ನಿರ್ಧಾರ ಕೈಗೊಳ್ಳುವರು' ಎಂದು ಬಂಗಾಳ ಕ್ರಿಕೆಟ್ ಸಂಸ್ಥೆ (ಸಿಎಬಿ) ಅಧ್ಯಕ್ಷ ಸ್ನೇಹಾಶಿಶ್ ಗಂಗೂಲಿ ಹೇಳಿದ್ದಾರೆ.

ಪಥಿರಾಣ ಯಾರ್ಕರ್.. ಮಹಿ ಹೆಲಿಕಾಪ್ಟರ್

ಚೆನ್ನೈ: ಚೆನ್ನೈ ಸೂಪರ್ ಕಿಂಗ್ಸ್ ತಂಡದ ಮಹೇಂದ್ರಸಿಂಗ್ ಧೋನಿ ಅವರ ಬ್ಯಾಟಿಂಗ್ ಬಗ್ಗೆ ಹೇಳುವಾಗ ಹೆಲಿಕಾಪ್ಟರ್ ಹೊಡೆತ ನೆನಪಾಗಲೇಬೇಕಲ್ಲವೇ?

ಧೋನಿ ಈಗಲೂ ಈ ಕ್ಲಿಷ್ಟಕರ ಹೊಡೆತವನ್ನು ಲೀಲಾಜಾಲವಾಗಿ ಪ್ರಯೋಗಿಸಬಲ್ಲರು. ಬುಧವಾರ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದ ಧೋನಿ ವೇಗಿ ಮಥಿಷ ಪಥಿರಾಣ ಹಾಕಿದ ಯಾರ್ಕರ್ ಎಸೆತವನ್ನು ಹೆಲಿಕಾಪ್ಟರ್ ಹೊಡೆತದ ಮೂಲಕ ನೇರ ಸಿಕ್ಸರ್‌ಗೆತ್ತಿದರು. ಚುರುಕಾಗಿ ವಿಕೆಟ್‌ಕೀಪಿಂಗ್ ಅಭ್ಯಾಸವನ್ನೂ ಮಾಡಿದ ಧೋನಿ ಗಮನ ಸೆಳೆದರು. ಸಿಎಸ್‌ಕೆ ತಂಡವು ತನ್ನ ಸಾಮಾಜಿಕ ಜಾಲತಾಣಗಳಲ್ಲಿ ಧೋನಿ ಆಟದ ವಿಡಿಯೊ ಹಾಕಿದೆ.

ಇಡೀ ವರ್ಷ ಕ್ರಿಕೆಟ್‌ನಿಂದ ದೂರ ಉಳಿಯುವ ಧೋನಿ ಐಪಿಎಲ್ ನಲ್ಲಿ ಮಾತ್ರ ಆಡುತ್ತಾರೆ. ಈ ಸಲದ ಐಪಿಎಲ್ ಅವರಿಗೆ ಕೊನೆಯ ಟೂರ್ನಿಯಾಗಲಿದೆ ಎಂದು ಹೇಳಲಾಗುತ್ತಿದೆ.

ಮುಂಬೈ ತಂಡದ ಮೊದಲ ಪಂದ್ಯಕ್ಕೆ ಸೂರ್ಯ ನಾಯಕ


ಹಾರ್ದಿಕ್ ಪಾಂಡ್ಯ

ಮುಂಬೈ (ಪಿಟಿಐ): ಹಾರ್ದಿಕ್ ಪಾಂಡ್ಯ ಅವರು ಒಂದು ಪಂದ್ಯದ ಅಮಾನತಿಗೆ ಒಳಗಾಗಿರುವುದರಿಂದ ಇದೇ ಭಾನುವಾರ ನಡೆಯಲಿರುವ ಚೆನ್ನೈ ಸೂಪರ್ ಕಿಂಗ್ಸ್ ಎದುರಿನ ಪಂದ್ಯದಲ್ಲಿ ಆಡಲಿರುವ ಮುಂಬೈ ಇಂಡಿಯನ್ಸ್ ತಂಡವನ್ನು ಬ್ಯಾಟರ್ ಸೂರ್ಯಕುಮಾರ್ ಯಾದವ್ ಮುನ್ನಡೆಸುವರು.

ಹೋದ ವರ್ಷದ ಟೂರ್ನಿಯ ಪಂದ್ಯದಲ್ಲಿ ತಂಡವು ನಿಗದಿತ ವೇಳೆಯೊಳಗೆ ಓವರ್‌ಗಳನ್ನು ಪೂರೈಸದ ನಿಯಮವನ್ನು ಮೂರು ಬಾರಿ ಉಲ್ಲಂಘಿಸಿತ್ತು. ಅದರಿಂದಾಗಿ ನಾಯಕ ಹಾರ್ದಿಕ್ ಅವರಿಗೆ ಒಂದು ಪಂದ್ಯದ ಅಮಾನತು ವಿಧಿಸಲಾಗಿತ್ತು. ಆದರೆ ತಂಡವು ಲೀಗ್ ಹಂತದಲ್ಲಿಯೇ ಹೊರಬಿದ್ದಿತ್ತು. ನಂತರದ ಪಂದ್ಯಗಳಲ್ಲಿ ತಂಡವು ಆಡಿರಲಿಲ್ಲ. ಆದ್ದರಿಂದ ಆ ಶಿಕ್ಷೆಯನ್ನು ಈಗ ಜಾರಿ ಮಾಡಲಾಗಿದೆ ಎಂದು ತಂಡದ ಮೂಲಗಳು ತಿಳಿಸಿವೆ.

'ನಾನು ಭಾರತ ಟಿ20 ತಂಡದಲ್ಲಿ ಇಲ್ಲದಿರುವಾಗ ಸೂರ್ಯ ಅವರೇ ನಾಯಕತ್ವ ವಹಿಸುತ್ತಾರೆ. ಅವರನ್ನು ಈಗ ನಾಯಕರನ್ನಾಗಿ ಮಾಡಿರುವುದು ಸೂಕ್ತವಾಗಿದೆ' ಎಂದು ಹಾರ್ದಿಕ್ ಹೇಳಿದ್ದಾರೆ.

ಸುದ್ದಿಯಲ್ಲಿರುವ ಎ ಐ ಅಸಿಸ್ಟೆಂಟ್ !

ಎಂಜಲು ಬಳಕೆ ನಿಷೇಧ ತೆರವು; ನಾಯಕರ ಅಂಗಳಕ್ಕೆ ಚೆಂಡು!

ನವದೆಹಲಿ (ಪಿಟಿಐ): ಚೆಂಡಿನ ಹೊಳಪು ಹೆಚ್ಚಿಸಲು ಎಂಜಲು ಬಳಕೆ ಮಾಡುವುದನ್ನು ಮತ್ತೆ ಜಾರಿಗೆ ತರಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಚಿಂತನೆ ನಡೆಸಿದೆ. ಚೆಂಡಿಗೆ ಎಂಜಲು ಹಾಕಿ ಉಜ್ಜುವುದನ್ನು ಕೋವಿಡ್ ಸಂದರ್ಭದಲ್ಲಿ ನಿಷೇಧಿಸಲಾಗಿತ್ತು.

ಇದೇ 22ರಿಂದ ಆರಂಭವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಈ ನಿಷೇಧವನ್ನು ತೆರವುಗೊಳಿಸುವ ಸಾಧ್ಯತೆ ಇದೆ. ಗುರುವಾರ ಮುಂಬೈನಲ್ಲಿ ನಡೆಯಲಿರುವ ಐಪಿಎಲ್ ತಂಡಗಳ ನಾಯಕರ ಸಭೆಯಲ್ಲಿ ಈ ಪ್ರಸ್ತಾವವನ್ನು ಇಡಲು ಬಿಸಿಸಿಐ ಸಿದ್ಧವಾಗಿದೆ.

2022ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಕೋವಿಡ್ ತಡೆ ಮಾರ್ಗಸೂಚಿಯನ್ನು ಜಾರಿ ಮಾಡಿತ್ತು. ಆ ಸಂದರ್ಭದಲ್ಲಿ ಚೆಂಡಿಗೆ ಎಂಜಲು ಹಚ್ಚುವುದನ್ನುನಿಷೇಧಿಸಿತ್ತು. ನಿಯಮ ಉಲ್ಲಂಘಿಸಿದ ಆಟಗಾರನನ್ನು ವಜಾಗೊಳಿಸುವ ಶಿಕ್ಷೆಯನ್ನೂ ಪ್ರಕಟಿಸಿತ್ತು.

ಒಂದೊಮ್ಮೆ ಐಪಿಎಲ್‌ನಲ್ಲಿ ಚೆಂಡಿಗೆ ಎಂಜಲು ಬಳಕೆ ಮಾಡುವುದು ಮತ್ತೆ ಆರಂಭವಾದರೆ, ಐಸಿಸಿಯು ಕೂಡ ಅಂತರರಾಷ್ಟ್ರೀಯ ಮಟ್ಟದಲ್ಲಿ ನಿಷೇಧ ತೆರವುಗೊಳಿಸುವ ಕುರಿತು ಮರುಪರಿಶೀಲನೆ ನಡೆಸಬಹುದು. ಈಚೆಗೆ ನಡೆದ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಂದರ್ಭದಲ್ಲಿ ಭಾರತ ತಂಡದ ವೇಗಿ ಮೊಹಮ್ಮದ್ ಶಮಿ ಅವರು ಎಂಜಲು ಬಳಕೆ ನಿಷೇಧ ತೆಗೆಯಬೇಕು ಎಂದು ಒತ್ತಾಯಿಸಿದ್ದರು.

ಮೊಹಮ್ಮದ್ ಶಮಿ

ಟೆಸ್ಟ್ ಕ್ರಿಕೆಟ್‌ನಲ್ಲಿ ಬಳಸಲಾಗುವ ಕೆಂಪು ಚೆಂಡಿನ ಹೊಳಪು ನಿರ್ವಹಿಸಲು ಎಂಜಲು ಬಳಕೆ ಮುಖ್ಯವಾಗಿದೆ. ಅದರಿಂದ ವೇಗಿಗಳಿಗೆ ರಿವರ್ಸ್ ಸ್ವಿಂಗ್ ಪ್ರಯೋಗವು ಸುಲಭವಾಗುತ್ತದೆ. ಆದರೆ ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಬಳಸಲಾಗುವ ಬಿಳಿ ಚೆಂಡಿಗೆ ಎಂಜಲು ಬಳಕೆಯಿಂದ ಹೆಚ್ಚು ವ್ಯತ್ಯಾಸವಾಗುವುದಿಲ್ಲ. 'ರೆಡ್ ಬಾಲ್ ಕ್ರಿಕೆಟ್‌ನಲ್ಲಿ ಎಂಜಲು ಬಳಕೆಯಿಂದ ಬೌಲರ್‌ಗಳಿಗೆ ಹೆಚ್ಚು ಅನುಕೂಲವಾಗುತ್ತದೆ ಎಂಬ ಅರಿವು ನಮಗಿದೆ. ಆದರೆ ಐಪಿಎಲ್‌ನಲ್ಲಿ ಈ ನಿಷೇಧವನ್ನು ತೆರವುಗೊಳಿಸುವುದರಿಂದ ಸಾಧಕ, ಬಾಧಕಗಳ ಅರಿವಾಗಲಿದೆ. ಇದು ಹೊಸ ಹೆಜ್ಜೆ ಕೂಡ ಆಗಲಿದೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಖೇಲೊ ಇಂಡಿಯಾ ಪ್ಯಾರಾ ಕ್ರೀಡೆ ಇಂದಿನಿಂದ

ನವದೆಹಲಿ (ಪಿಟಿಐ): ಖೇಲೊ ಇಂಡಿಯಾ ಪ್ಯಾರಾ ಕ್ರೀಡೆಗಳ (ಕೆಐಪಿಜಿ) ಎರಡನೇ ಆವೃತ್ತಿಯಲ್ಲಿ ಪಾಲ್ಗೊಳ್ಳಲು ಬಂದಿರುವ 1300ಕ್ಕೂ ಅಧಿಕ ಕ್ರೀಡಾಪಟುಗಳನ್ನು ದೇಶದ ಖ್ಯಾತ ಪ್ಯಾರಾಲಿಂಪಿಯನ್ನರಾದ ಸುಮಿತ್ ಅಂಟಿಲ್ ಮತ್ತು ದೇವೇಂದ್ರ ಜಜಾರಿಯಾ ಅವರು ಬುಧವಾರ ಸ್ವಾಗತಿಸಿ ಶುಭ ಹಾರೈಸಿದರು. ತಮ್ಮ ಕನಸುಗಳನ್ನು ಸಾಕಾರಗೊಳಿಸಲು ಇಂಥ ಕ್ರೀಡಾಕೂಟದ ಪ್ರಯೋಜನ ಪಡೆಯಬೇಕೆಂದು ಸಲಹೆ ನೀಡಿದರು.

ಈ ಕ್ರೀಡೆಗಳು ಗುರುವಾರ ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣ, ಇಂದಿರಾ ಗಾಂಧಿ ಕ್ರೀಡಾಂಗಣ ಮತ್ತು ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ಆರಂಭವಾಗಲಿವೆ.

ಡೋಪಿಂಗ್ ತಡೆ ಜಾಗೃತಿ ಪಠ್ಯ ಅವಶ್ಯಕ: ಮಾಂಡವೀಯ

ನವದೆಹಲಿ (ಪಿಟಿಐ): ಉದ್ದೀಪನ ಮದ್ದು ಬಳಕೆಯ ದುಷ್ಪರಿಣಾಮಗಳು ಕುರಿತು ಜಾಗೃತಿಯ ಪಾಠವನ್ನು ಶಾಲಾ ಶಿಕ್ಷಣದ ಪಠ್ಯದಲ್ಲಿ ಅಳವಡಿಸಬೇಕು ಎಂದು ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಹೇಳಿದರು.

ಬುಧವಾರ ನಡೆದ ಎನ್‌ಡಿಟಿಎಲ್ ವಾರ್ಷಿಕ ಸಮ್ಮೇಳನದಲ್ಲಿ 'ಉದ್ದೀಪನ ಮದ್ದು ತಡೆ ವಿಜ್ಞಾನ; ನಾವೀನ್ಯತೆ ಹಾಗೂ ಸವಾಲುಗಳು' ಕುರಿತು ಅವರು ಮಾತನಾಡಿದರು. 'ಗ್ರಾಮಾಂತರ ಪ್ರದೇಶದ ಕ್ರೀಡಾಪಟುಗಳಲ್ಲಿ ಉದ್ದೀಪನ ಮದ್ದು ಬಳಕೆಯಿಂದಾಗುವ ಅನಾಹುತಗಳ ಕುರಿತು ಜಾಗೃತಿ ಅವಶ್ಯಕವಾಗಿದೆ ಎಂದರು.

'ಲಂಡನ್‌ನ ವಿಶ್ವಕಪ್ ಕಬಡ್ಡಿ ಅನಧಿಕೃತ'

ನವದೆಹಲಿ (ಪಿಟಿಐ): 'ಲಂಡನ್‌ನಲ್ಲಿ ನಡೆಯುತ್ತಿರುವ ವಿಶ್ವಕಪ್ ಕಬಡ್ಡಿ ಟೂರ್ನಿ 'ಅನಧಿಕೃತ' ಎಂದು ಘೋಷಿಸಿರುವ ಅಂತರರಾಷ್ಟ್ರೀಯ ಕಬಡ್ಡಿ ಫೆಡರೇಷನ್ (ಐಕೆಎಫ್), ಆ ಟೂರ್ನಿಯಲ್ಲಿ ಭಾಗವಹಿಸಿರುವ ಭಾರತ ತಂಡದ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಖಿಲ ಭಾರತ ಕಬಡ್ಡಿ ಫೆಡರೇಷನ್‌ಗೆ ಸೂಚಿಸಿದೆ.

ವೆಸ್ಟ್ ಮಿಡ್‌ಲ್ಯಾಂಡ್ಸ್‌ನಲ್ಲಿ ಮಾರ್ಚ್ 17 ರಿಂದ 23ರವರೆಗೆ ಈ ವಿಶ್ವಕಪ್ 2025 ನಡೆಯುತ್ತಿದೆ. 'ವಿಶ್ವ ಕಬಡ್ಡಿ ಫೆಡರೇಷನ್' ವತಿಯಿಂದ ನಡೆಯುತ್ತಿರುವ ಈ ವಿಶ್ವಕಪ್ ಅನ್ನು ಇಂಗ್ಲೆಂಡ್ ಕಬಡ್ಡಿ ಸಂಸ್ಥೆ ಮತ್ತು ಬ್ರಿಟಿಷ್ ಕಬಡ್ಡಿ ಲೀಗ್ (ಬಿಕೆಎಲ್) ಆಯೋಜಿಸುತ್ತಿವೆ. ವಿಶ್ವ ಕಬಡ್ಡಿ ಫೆಡ ರೇಷನ್, ಅಂತರರಾಷ್ಟ್ರೀಯ ಕಬಡ್ಡಿ ಚಟುವಟಿಕೆ ನಿರ್ವಹಿಸುತ್ತಿರುವ ಐಕೆಎಫ್‌ಗೆ ಪರ್ಯಾಯ ಸಂಸ್ಥೆಯಾಗಿದೆ.

ಮಾನ್ಯತೆ ಪಡೆಯದ ವಿಶ್ವ ಕಬಡ್ಡಿ ಫೆಡರೇಷನ್, 'ಕಬಡ್ಡಿ ವಿಶ್ವ ಕಪ್ 2025' ಹೆಸರಿನಲ್ಲಿ ಟೂರ್ನಿ ನಡೆಸುತ್ತಿದೆ. ಅಂತರರಾಷ್ಟ್ರೀಯ ಕಬಡ್ಡಿ ಫೆಡರೇಷನ್ ಮಾತ್ರ ಅಧಿಕೃತ ಅಂತರರಾಷ್ಟ್ರೀಯ ಸಂಸ್ಥೆ ಯಾಗಿದೆ' ಎಂದು ಐಕೆಎಫ್ ತಿಳಿಸಿದೆ.

ಟಿ20 ರ್‍ಯಾಂಕಿಂಗ್: ಆಲ್‌ರೌಂಡರ್ ಹಾರ್ದಿಕ್‌ಗೆ ಅಗ್ರಸ್ಥಾನ

ಎರಡನೇ ಸ್ಥಾನದಲ್ಲೇ ಅಭಿಷೇಕ್

ದುಬೈ (ಪಿಟಿಐ): ಬೀಸು ಹೊಡೆತಗಳ ಆಟಗಾರ ಅಭಿಷೇಕ್ ಶರ್ಮಾ ಮತ್ತು ಸ್ಪಿನ್ನರ್ ವರುಣ್ ಚಕ್ರವರ್ತಿ ಅವರು ಬುಧವಾರ ಪ್ರಕಟವಾದ ಐಸಿಸಿ ಟಿ20 ರ್‍ಯಾಂಕಿಂಗ್‌ನಲ್ಲಿ ಕ್ರಮವಾಗಿ ಬ್ಯಾಟರ್‌ಗಳ ಮತ್ತು ಬೌಲರ್‌ಗಳ ವಿಭಾಗದಲ್ಲಿ ಜೀವನ ಶ್ರೇಷ್ಠ ಎರಡನೇ ಕ್ರಮಾಂಕ ಕಾಪಾಡಿಕೊಂಡಿದ್ದಾರೆ.

ಬೀಸಾಟದ ಆಟಗಾರ ತಿಲಕ್ ವರ್ಮಾ ಮತ್ತು ಭಾರತ ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನದಲ್ಲಿದ್ದಾರೆ.

ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ 856 ಪಾಯಿಂಟ್‌ಗಳೊಡನೆ ಮೊದಲ ಸ್ಥಾನದಲ್ಲಿದ್ದರೆ, ಇಂಗ್ಲೆಂಡ್‌ನ ಫಿಲ್ ಸಾಲ್ಟ್ (815) ಮೂರನೇ ಸ್ಥಾನದಲ್ಲಿದ್ದಾರೆ. ಅಭಿಷೇಕ್ ವರ್ಮಾ 829 ಮತ್ತು ತಿಲಕ್ ವರ್ಮಾ 804 ಹಾಗೂ ಸೂರ್ಯಕುಮಾರ್ 739 ಪಾಯಿಂಟ್ಸ್ ಹೊಂದಿದ್ದಾರೆ.

ವರುಣ್ ಚಕ್ರವರ್ತಿ


ಅಭಿಷೇಕ್ ಶರ್ಮಾ

ಹಾರ್ದಿಕ್ ಪಾಂಡ್ಯ ಅವರು 252 ಪಾಯಿಂಟ್‌ಗಳೊಡನೆ ಆಲ್‌ರೌಂಡರ್‌ಗಳ ವಿಭಾಗದಲ್ಲಿ ಮುಂಚೂಣಿಯಲ್ಲಿ ಇದ್ದಾರೆ. ನೇಪಾಳದ ದೀಪೇಂದ್ರ ಸಿಂಗ್ ಐರೀ (233) ಎರಡನೇ ಮತ್ತು ಆಸ್ಟ್ರೇಲಿಯಾದ ಮಾರ್ಕಸ್ ಸ್ಟೊಯಿನಿಸ್ (210) ಮೂರನೇ ಸ್ಥಾನದಲ್ಲಿದ್ದಾರೆ.

ಬೌಲರ್‌ಗಳ ಯಾದಿಯಲ್ಲಿ ವೆಸ್ಟ್ ಇಂಡೀಸ್‌ನ ಅಖೀಲ್ ಹುಸೇನ್ (707) ಅಗ್ರಸ್ಥಾನದಲ್ಲಿದ್ದಾರೆ. ಚಕ್ರವರ್ತಿ (706) ಕೇವಲ ಒಂದು ಪಾಯಿಂಟ್ ಹಿಂದೆಯಿದ್ದಾರೆ.

ಇಂಗ್ಲೆಂಡ್‌ನ ಲೆಗ್ ಸ್ಪಿನ್ನರ್ ಅದಿಲ್ ರಶೀದ್ (705), ಶ್ರೀಲಂಕಾದ ವನಿಂದು ಹಸರಂಗ (700) ಮತ್ತು ಆಸ್ಟ್ರೇಲಿಯಾದ ಆ್ಯಡಂ ಜಂಪಾ (694) ನತರ ಮೂರರಿಂದ ಐದರವರೆಗಿನ ಸ್ಥಾನಗಳಲ್ಲಿ ಇದ್ದಾರೆ. ಗೂಗ್ಲಿ ಬೌಲರ್ ರವಿ ಬಿಷ್ಣೋಯಿ (674) ಆರನೇ ಮತ್ತು ಎಡಗೈ ವೇಗಿ ಅರ್ಷದೀಪ್ ಸಿಂಗ್ (653) ಒಂಬತ್ತನೇ ಸ್ಥಾನದಲ್ಲಿದ್ದಾರೆ.

ಚಾಹಲ್ ವಿಚ್ಛೇದನ ಅರ್ಜಿ: ಕಾಯುವಿಕೆಗೆ ವಿನಾಯಿತಿ

ಮುಂಬೈ (ಪಿಟಿಐ): ಕ್ರಿಕೆಟಿಗ ಯಜುವೇಂದ್ರ ಚಾಹಲ್ ಮತ್ತು ಧನಶ್ರೀ ವರ್ಮಾ ಅವರು ಸಲ್ಲಿಸಿರುವ ವಿಚ್ಛೇದನ ಅರ್ಜಿಗೆ ಸಂಬಂಧಿಸಿ ಆರು ತಿಂಗಳ ಕಡ್ಡಾಯ ಕಾಯುವಿಕೆ (ಕೂಲಿಂಗ್ ಆಫ್) ಅವಧಿಗೆ ಬಾಂಬೆ ಹೈಕೋರ್ಟ್ ಬುಧವಾರ ವಿನಾಯಿತಿ ಮಾಡಿದೆ. ಗುರುವಾರದ ಒಳಗೆ ಅವರ ವಿಚ್ಛೇ ದನ ಅರ್ಜಿ ಇತ್ಯರ್ಥಗೊಳಿಸುವಂತೆಯೂ ಕುಟುಂಬ ನ್ಯಾಯಾಲಯಕ್ಕೆ ನಿರ್ದೇಶನ ನೀಡಿದೆ.

ಇದೇ ಶನಿವಾರ ಆರಂಭವಾಗುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ (ಐಪಿಎಲ್)ನಲ್ಲಿ ಪಾಲ್ಗೊಳ್ಳಲಿರುವ ಕಾರಣ ಚಾಹಲ್ ಅವರು ಲಭ್ಯರಿರುವುದಿಲ್ಲ ಎಂದು ನ್ಯಾಯಮೂರ್ತಿ ಮಾಧವ ಜಮಾದಾರ್ ಅವರಿದ್ದ ಏಕಸದಸ್ಯ ಪೀಠವು ತಿಳಿಸಿತು.

ಯಜುವೇಂದ್ರ ಚಾಹಲ್

ಈ ವರ್ಷದ ಫೆಬ್ರುವರಿ 5ರಂದು ಚಾಹಲ್ ಮತ್ತು ಧನಶ್ರೀ ಅವರು ಪರಸ್ಪರ ಸಮ್ಮತಿಯ ವಿಚ್ಛೇದನ ಕೋರಿ ಕುಟುಂಬ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಆದರೆ ಫೆ. 20ರಂದು ಕಾಯುವಿಕೆಯ ಅವಧಿಗೆ ವಿನಾಯಿತಿ ನೀಡಲು ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಇವರಿಬ್ಬರು ಹೈಕೋರ್ಟ್ ಮೊರೆ ಹೋಗಿದ್ದರು.

ಕರ್ನಾಟಕ ತಂಡಗಳಿಗೆ ಭರ್ಜರಿ ಗೆಲುವು

ಬೆಂಗಳೂರು: ಕರ್ನಾಟಕದ ಪುರುಷರ ಮತ್ತು ಮಹಿಳಾ ತಂಡಗಳು, ಗುವಾಹಟಿಯಲ್ಲಿ ನಡೆಯುತ್ತಿರುವ 23 ವರ್ಷದೊಳಗಿನವರ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಭರ್ಜರಿ ಗೆಲುವು ದಾಖಲಿಸಿದವು.

ಸರುಸಜಾಯಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪುರುಷರ 'ಎಚ್' ಗುಂಪಿನ ಪಂದ್ಯದಲ್ಲಿ ಕರ್ನಾಟಕ ತಂಡ 77–17 ಅಂಕಗಳಿಂದ ಅರುಣಾಚಲ ಪ್ರದೇಶ ವಿರುದ್ಧ ಗೆಲುವು ಪಡೆಯಿತು. ಮಹಿಳೆಯರ ವಿಭಾಗದ 'ಎಫ್' ಗುಂಪಿನ ವಿಭಾಗದಲ್ಲಿ ಕರ್ನಾಟಕ ತಂಡ 68–20 ಅಂಕಗಳಿಂದ ಆಂಧ್ರ ಪ್ರದೇಶ ತಂಡವನ್ನು ಸದೆಬಡಿಯಿತು.

ಬಾಕ್ಸಿಂಗ್ ಫೆಡರೇಷನ್‌ನಲ್ಲಿ ಮುಂದುವರಿದ 'ಗುದ್ದಾಟ'

ನವದೆಹಲಿ (ಪಿಟಿಐ): ಒಲಿಂಪಿಕ್ ಪದಕ ವಿಜೇತೆ ಲವ್ಲಿನಾ ಬೋರ್ಗಹೇನ್ ಸೇರಿದಂತೆ ಅಸ್ಸಾಮ್‌ನ ಬಾಕ್ಸರ್‌ಗಳು ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಭಾಗಹಿಸದಂತೆ, ಅಮಾನತಾಗಿರುವ ಭಾರತ ಬಾಕ್ಸಿಂಗ್ ಫೆಡರೇಷನ್‌ನ ಮಹಾ ಪ್ರಧಾನ ಕಾರ್ಯದರ್ಶಿ ಹೇಮಂತ ಕಲಿತಾ ತಡೆಯುತ್ತಿದ್ದರು ಎಂದು ಫೆಡರೇಷನ್‌ನ ಅಧ್ಯಕ್ಷ ಅಜಯ್ ಸಿಂಗ್ ಆರೋಪಿಸಿದ್ದಾರೆ. ಆದರೆ ಈ ಆರೋಪವನ್ನು ಹೇಮಂತ ನಿರಾಕರಿಸಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ 69 ಕೆ.ಜಿ ವಿಭಾಗದಲ್ಲಿ ಕಂಚಿನ ಪದಕ ಜಯಿಸಿದ್ದ ಲವ್ಲಿನಾ ಅವರು ಗುರುವಾರ ಆರಂಭವಾಗುವ ದೇಶದ ಈ ಪ್ರಮುಖ ಕೂಟದಲ್ಲಿ ಭಾಗವಹಿಸಲು ಉತ್ಸುಕರಾಗಿದ್ದರು. ಆದರೆ ಅವರಿಗೆ ಹಿಂದೆಸರಿಯುವಂತೆ ಕಲಿತಾ ಸೂಚಿಸಿದರು ಎಂದು ಅಜಯ್ ಸಿಂಗ್ ಅವರು ಬುಧವಾರ 'ತುರ್ತು ಪತ್ರಿಕಾ ಗೋಷ್ಠಿ'ಯಲ್ಲಿ ತಿಳಿಸಿದರು.

ಹೇಮಂತ ಕಲಿತಾ ಅವರು ಅಸ್ಸಾಂ ಬಾಕ್ಸಿಂಗ್ ಸಂಸ್ಥೆಯಲ್ಲಿ ಕಾರ್ಯದರ್ಶಿ ಆಗಿದ್ದಾರೆ.

ಫೆಡರೇಷನ್‌ನಲ್ಲಿ ಹಣಕಾಸಿನ ಅವ್ಯವಹಾರಕ್ಕೆ ಸಂಬಂಧಿಸಿ ತನಿಖೆ ನಡೆಸಿದ್ದ ದೆಹಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸುಧೀರ್ ಕುಮಾರ್ ಜೈನ್ ಅವರು ಮಂಗಳವಾರ ನೀಡಿದ ವರದಿಯ ಆಧಾರದಲ್ಲಿ ಹೇಮಂತ ಅವರನ್ನು ಮಂಗಳವಾರ ಅಮಾನತು ಮಾಡಲಾಗಿತ್ತು.

'ಮಹಿಳಾ ರಾಷ್ಟ್ರೀಯ ಕೂಟದಲ್ಲಿ ಭಾಗವಹಿಸದಂತೆ ಅಸ್ಸಾಂನ ಸಂಸ್ಥೆ ಮಹಿಳೆಯರನ್ನು ನಿರುತ್ತೇಜಿಸುತ್ತಿದೆ' ಎಂದು ಸಿಂಗ್ ದೂರಿದರು.

ನಿರಾಕರಿಸಿದ ಕಲಿತಾ: ಆದರೆ, 'ಈ ಆರೋಪಗಳು ಆಧಾರರಹಿತ' ಎಂದಿರುವ ಕಲಿತಾ, ಸಮಸ್ಯೆ ಇದ್ದುದು ಈ ಕೂಟದ ದಿನಾಂಕ ನಿಗದಿಯ ಬಗ್ಗೆ ಎಂದರು.

'ನನ್ನ ಹೆಸರು ಕೆಡಿಸಲು ಇಂಥ ಆರೋಪ ಮಾಡಲಾಗುತ್ತಿದೆ. ಅಂಥದ್ದೇನನ್ನೂ ನಾನು ಮಾಡಿಲ್ಲ. ಈ ಟೂರ್ನಿಯ ದಿನಾಂಕದ ಬಗ್ಗೆ ರಾಜ್ಯ ಘಟಕಗಳಿಗೆ ಸಮಾಧಾನ ಇರಲಿಲ್ಲ. ಬಿಎಫ್‌ಐಗೆ ಹಲವು ರಾಜ್ಯ ಘಟಕಗಳು ಈ ಬಗ್ಗೆ ಪತ್ರವನ್ನೂ ಬರೆದಿದ್ದವು' ಎಂದು ಅವರು ಪಿಟಿಐಗೆ ತಿಳಿಸಿದರು.

ಪುನರಾಗಮನದ ಪಂದ್ಯದಲ್ಲೇ ಸುನೀಲ್ ಚೆಟ್ರಿ ಗೋಲು

ಮಾಲ್ಡೀವ್ಸ್ ವಿರುದ್ಧ ಭಾರತ ತಂಡಕ್ಕೆ 3–0 ಜಯ

ಶಿಲ್ಲಾಂಗ್ (ಪಿಟಿಐ): ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ಪುನರಾಗಮನ ಮಾಡಿದ ಮೊದಲ ಪಂದ್ಯದಲ್ಲೇ ಸುನೀಲ್ ಚೆಟ್ರಿ ಗೋಲು ಹೊಡೆದರು. ಈ ಮೋಡಿಗಾರನ ಉತ್ತಮ ಆಟದ ನೆರವಿನಿಂದ ಭಾರತ ತಂಡ, ಬುಧವಾರ ನಡೆದ ಸೌಹಾರ್ದ ಪಂದ್ಯದಲ್ಲಿ ಮಾಲ್ಡೀವ್ಸ್ ತಂಡದ ಮೇಲೆ 3-0 ಗೋಲುಗಳ ಜಯ ಪಡೆಯಿತು.

ಆ ಮೂಲಕ ನವೆಂಬರ್ 2023ರಲ್ಲಿ ಆರಂಭವಾದ 12 ಪಂದ್ಯಗಳ ಗೆಲುವಿನ ಬರವನ್ನು ಕೊನೆಗೂ ನೀಗಿಸಿಕೊಂಡಿತು.

ಇದು ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆದ ಮೊದಲ ಅಂತರರಾಷ್ಟ್ರೀಯ ಪಂದ್ಯ ಎನಿಸಿತು. ರಾಹುಲ್ ಭೆಕೆ ಅವರು 35ನೇ ನಿಮಿಷ ಭಾರತ ತಂಡಕ್ಕೆ ಮುನ್ನಡೆ ಒದಗಿಸಿದರು. 66ನೇ ನಿಮಿಷ ಲಿಸ್ಟನ್ ಕೊಲಾಕೊ ಅವರು ಮುನ್ನಡೆಯನ್ನು ಹೆಚ್ಚಿಸಿದರು.

ಕಳೆದ ವರ್ಷದ ಮೇ ತಿಂಗಳಲ್ಲಿ ನಿವೃತ್ತಿ ಘೋಷಿಸಿದ್ದ 40 ವರ್ಷ ವಯಸ್ಸಿನ ಚೆಟ್ರಿ, ಪಂದ್ಯದ 77ನೇ ನಿಮಿಷ ಆಕರ್ಷಕ ಹೆಡ್ಡರ್ ಮೂಲಕ ಗೋಲು ಗಳಿಸಿ ರಾಷ್ಟ್ರೀಯ ತಂಡಕ್ಕೆ ತಮ್ಮ ಪುನರಾಗಮನವನ್ನು ಸ್ಮರಣೀಯವನ್ನಾಗಿಸಿಕೊಂಡರು. ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ಅವರು ಗಳಿಸಿದ 95ನೇ ಗೋಲು.

ಸುನೀಲ್ ಚೆಟ್ರಿ

47ನೇ ನಿಮಿಷ ಚೆಟ್ರಿ ಗೋಲು ಯತ್ನವನ್ನು ಮಾಲ್ದೀವ್ಸ್ ಗೋಲ್ ಕೀಪರ್ ತಡೆದಿದ್ದರು. 82 ನಿಮಿಷ ಅವರು ಮೈದಾನದಿಂದ ಹೊರನಡೆದರು.

ಇದು 16 ತಿಂಗಳಲ್ಲಿ ಭಾರತ ಗಳಿಸಿದ ಮೊದಲ ಜಯ. ಮನೊಲೊ ಮಾರ್ಕ್ವೆಝ್ ಅವರು ತಂಡದ ತರಬೇತುದಾರನಾದ ನಂತರ ಗಳಿಸಿದ ಮೊದಲ ಗೆಲುವು ಕೂಡ. ಇದಕ್ಕೆ ಮೊದಲು 2023ರ ನವೆಂಬರ್ 16ರಂದು ಕುವೈತ್ ವಿರುದ್ಧ 2026ರ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯದಲ್ಲಿ ಭಾರತ (1-0) ಗೆಲುವು ದಾಖಲಿಸಿತ್ತು.

ಮನೊಲೊ ಅವರ ತರಬೇತಿಯಡಿ ಆಡಿದ ನಾಲ್ಕು ಪಂದ್ಯಗಳಲ್ಲಿ ಭಾರತ ಒಂದು ಸೋತು, ಮೂರರಲ್ಲಿ ಡ್ರಾ ಮಾಡಿಕೊಂಡಿತ್ತು.

ಎಎಫ್‌ಸಿ ಏಷ್ಯನ್ ಕಪ್ ಕ್ವಾಲಿಫೈರ್‌ಗೆ ಮೊದಲು ಪೂರ್ವಸಿದ್ಧತೆಯ ಭಾಗವಾಗಿ ಭಾರತ ಈ ಪಂದ್ಯ ಆಡಿತ್ತು. ಏಷ್ಯನ್ ಕಪ್ ಕ್ವಾಲಿಫೈರ್‌ನ ಮೊದಲ ಪಂದ್ಯ ಇದೇ ಕ್ರೀಡಾಂಗಣದಲ್ಲಿ ಇದೇ 25ರಂದು ನಡೆಯಲಿದೆ.

ಚೆಟ್ರಿ ಈ ತಿಂಗಳ ಆರಂಭದಲ್ಲಿ ಅಂತರರಾಷ್ಟ್ರೀಯ ಫುಟ್‌ಬಾಲ್ ನಿವೃತ್ತಿ ತೊರೆದು ರಾಷ್ಟ್ರೀಯ ತಂಡಕ್ಕೆ ಮರಳಿದ್ದರು.

ವಿಶ್ವ ಕ್ರಮಾಂಕದಲ್ಲಿ ಭಾರತ 126ನೇ ಸ್ಥಾನದಲ್ಲಿದೆ. ಮಾಲ್ಡೀವ್ಸ್ 36 ಸ್ಥಾನಗಳಷ್ಟು ಕೆಳಗೆ, ಅಂದರೆ 162ನೇ ಸ್ಥಾನದಲ್ಲಿದೆ.

ಫುಟ್‌ಬಾಲ್: ಆದಾಯ ತೆರಿಗೆ ತಂಡಕ್ಕೆ ಜಯ

ಬೆಂಗಳೂರು: ಆದಾಯ ತೆರಿಗೆ ಎಫ್‌ಸಿ ತಂಡ 'ಎ' ಡಿವಿಷನ್ ಲೀಗ್ ಪಂದ್ಯದಲ್ಲಿ ಬುಧವಾರ 3–1 ಗೋಲುಗಳಿಂದ ಆರ್‌ಡಬ್ಲ್ಯು ಎಫ್‌ಸಿ ತಂಡವನ್ನು ಸೋಲಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆದಾಯ ತೆರಿಗೆ ಎಫ್‌ಸಿ ತಂಡದ ಪಾಂಡ್ಯನ್ ಎಂ. (32ನೇ, 60ನೇ ನಿ.) ಮತ್ತು ಯೋಹಾನನ್ ಥಾಮಸ್ ಜಾಕೊಬ್ (39ನೇ ನಿ.) ಗೋಲು ಗಳಿಸಿದರು.

ಆರ್‌ಡಬ್ಲ್ಯುಎಫ್ ತಂಡದ ರಾಜೇಶ್ ಎಸ್. 70ನೇ ನಿಮಿಷ ಗೋಲು ಬಾರಿಸಿದರು. ಇನ್ನೊಂದು ಪಂದ್ಯದಲ್ಲಿ ಬಿಟಿಎಂ ಎಫ್‌ಸಿ ತಂಡ 3–1 ಗೋಲುಗಳಿಂದ ಗಜಾನನ ಎಫ್‌ಸಿ ತಂಡದ ವಿರುದ್ಧ ಗೆಲುವು ಸಾಧಿಸಿತು. ಬಿಟಿಎಂ ತಂಡದ ನಕ್ಷತ್ರ ಜೈನ್ (36ನೇ ನಿ., 52ನೇ ನಿ., 60ನೇ ನಿ.) ಗೋಲು ಬಾರಿಸಿ ಹ್ಯಾಟ್ರಿಕ್ ಸಾಧಿಸಿದರು. ಗಜಾನನ ತಂಡದ ಗೋಪಿನಾಥ್ ಜಿ. (25ನೇ ನಿ.) ಗೋಲು ಗಳಿಸಿದರು.

ಯುವ ಬ್ಯಾಸ್ಕೆಟ್‌ಬಾಲ್: ಸೆಮಿಫೈನಲ್‌ಗೆ ಪಿಪಿಸಿ

ಬೆಂಗಳೂರು: ತೀವ್ರ ಹೋರಾಟದ ಪಂದ್ಯದಲ್ಲಿ ಪಿಪಿಸಿ ತಂಡ ರಾಜ್ಯ ಯುವ ಬ್ಯಾಸ್ಕೆಟ್ ಬಾಲ್ ಚಾಂಪಿಯನ್‌ಷಿಪ್ ಬಾಲಕಿಯರ ವಿಭಾಗದ ಪಂದ್ಯದಲ್ಲಿ ಬುಧವಾರ ಬೆಂಗಳೂರು ವ್ಯಾನ್‌ಗಾರ್ಡ್ಸ್ ತಂಡವನ್ನು 57–56ರಲ್ಲಿ ಒಂದು ಪಾಯಿಂಟ್‌ನಿಂದ ಸೋಲಿಸಿ ಸೆಮಿಫೈನಲ್ ಪ್ರವೇಶಿಸಿತು.

ಬಸವನಗುಡಿಯ ಎಂಎನ್‌ಕೆ ಪಾರ್ಕ್ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆಯುತ್ತಿರುವ ಈ ಚಾಂಪಿಯನ್ ಷಿಪ್‌ನ ಇತರ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಮೈಸೂರು 'ಎ' ತಂಡ 60–45 ರಿಂದ ಎಂಎನ್‌ಕೆ ರಾವ್ ತಂಡವನ್ನು, ಡಿವೈಇಎಸ್ ವಿದ್ಯಾನಗರ ತಂಡ 35–30ರಿಂದ ವಿವೇಕ್ಸ್ ತಂಡವನ್ನು, ಎಂಸಿಎಚ್‌ಎಸ್ 31–30 ರಿಂದ ಭಾರತ್ ಎಸ್‌ಯು ತಂಡವನ್ನು ಮಣಿಸಿದವು.ಬಾಲಕರ ವಿಭಾಗದಲ್ಲಿ ಎಚ್‌ಬಿಆರ್ ಬಿ.ಸಿ. ತಂಡ 54–27 ರಿಂದ ಮೈಸೂರು ಎ ತಂಡವನ್ನು, ಎಂಎನ್‌ಕೆ ರಾವ್ ತಂಡ 49–44ರಿಂದ ವಿಮಾನಪುರ ತಂಡ ವನ್ನು, ಪಿಪಿಸಿ ತಂಡ 49–41 ರಿಂದ ಯಲಹಂಕ ನ್ಯೂಟೌನ್ ತಂಡವನ್ನು, ಬೀಗಲ್ಸ್ 46–36 ರಿಂದ ಎಂಸಿಎಚ್‌ಎಸ್ ತಂಡವನ್ನು ಸೋಲಿಸಿ ಸೆಮಿಫೈನಲ್ ತಲುಪಿದವು.

ಆರ್‌ಸಿಬಿ ಟಿಕೆಟ್ ಮಾರಾಟ ಆರಂಭ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏಪ್ರಿಲ್ 2ರಂದು ನಡೆಯಲಿರುವ ಐಪಿಎಲ್ ಪಂದ್ಯದ ಟಿಕೆಟ್ ಮಾರಾಟವನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಬುಧವಾರ ಆರಂಭಿಸಿದೆ. ಬೆಳಿಗ್ಗೆ 11 ಗಂಟೆಗೆ ಆರ್‌ಸಿಬಿಯ ವೆಬ್‌ಸೈಟ್‌ನಲ್ಲಿ ಮಾರಾಟ ಆರಂಭಿಸಲಾಯಿತು. ₹ 2300 ರಿಂದ ₹42000 ವರೆಗಿನ ವಿವಿಧ ಮೌಲ್ಯದ ಟಿಕೆಟ್‌ಗಳ ಮಾರಾಟ ಆರಂಭವಾಯಿತು.